"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೇಳನೆಯ ಅಧಿವೇಶನ

**19ನೇ ಸೆಪ್ಟೆಂಬರ್ 2022**

**ಸೋಮವಾರ**

## ವಿಷಯಾನುಕ್ರಮಣಿಕೆ {INDEX}


**01. ಪ್ರಕಟಣೆ**

**02. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**700 + ಶಾಲಾ ಪಠ್ಯ ಪುಸ್ತಕಗಳಲ್ಲಿ ಭಗವದ್ಗೀತೆ ಹಾಗೂ ಸ್ಥಳೀಯ ರಾಜರುಗಳ**
**617 – ಇತಿಹಾಸ ಬೋಧಿಸುವ ಬಗ್ಗೆ**

- ಶ್ರೀ ಪ್ರಾಣೇಶ್ ಎಂ.ಕೆ.
- ಎನ್.ರವಿಕುಮಾರ್
- ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**634 – ಕರ್ನಾಟಕ ಜಾನಪದ ಪರಿಷತ್ತು ಬಗ್ಗೆ**

- ಶ್ರೀ ಎಂ.ಎಲ್.ಅನಿಲ್ ಕುಮಾರ್
- ಶ್ರೀ ವಿ.ಸುನೀಲ್ ಕುಮಾರ್ (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)
- ಶ್ರೀ ಗೋವಿಂದ ಎಂ.ಕಾರಜೋಳ(ಜಲ ಸಂಪನ್ಮೂಲ ಸಚಿವರು)

**737+ 606 – ಪ್ಲಾಸ್ಟಿಕ್ ನಿಷೇಧದ ಬಗ್ಗೆ**

- ಶ್ರೀ ಮುನಿರಾಜು ಗೌಡ ಪಿ.ಎಂ.
- ಶ್ರೀ ಪ್ರಕಾಶ್ ರಾಥೋಡ್

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ)
-

**757 – ಕೆ.ಪಿ.ಟಿ.ಸಿ.ಎಲ್. ಮತ್ತು ವಿವಿಧ ಹೆಸ್ಕಾಂಗಳ ಸಾಲದ ಬಗ್ಗೆ.**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ವಿ.ಸುನೀಲ್ ಕುಮಾರ್ (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**764 – ಬೆಳಗಾವಿ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ವಿದ್ಯುತ್ ವ್ಯವಸ್ಥೆ ಇಲ್ಲದಿರುವ ಬಗ್ಗೆ.**

- ಶ್ರೀ ಶಾಂತರಾಮ್ ಬುಡ್ನ ಸಿದ್ಧಿ
- ಶ್ರೀ ಶ್ರೀ ವಿ.ಸುನೀಲ್ ಕುಮಾರ್ (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**708 – ಪವನ ವಿದ್ಯುತ್ ಉತ್ಪಾದನೆಗೆ ಉತ್ತೇಜನ ನೀಡಲು ವೀಲಿಂಗ್ ಮತ್ತು ಬ್ಯಾಂಕಿಂಗ್ ಸೌಲಭ್ಯ ವಿಸ್ತರಿಸುವ ಬಗ್ಗೆ.**

- ಶ್ರೀ ಬಿ.ಎಂ.ಫಾರೂಖ್
- ಶ್ರೀ ವಿ.ಸುನೀಲ್ ಕುಮಾರ್ (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**727 – ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಮ್ಮ ಕ್ಲಿನಿಕ್ ತೆರೆಯುವ ಬಗ್ಗೆ.**

- ಶ್ರೀ ಸಿ.ಎನ್.ಮಂಜೇಗೌಡ
- ಡಾ: ಕೆ.ಸುಧಾಕರ್ (ಆಗೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**715 – ಆಸ್ಪತ್ರೆಗಳಲ್ಲಿನ ದುರವಸ್ಥೆ ಬಗ್ಗೆ.**

- ಶ್ರೀ ಕೆ.ಅಬ್ದುಲ್ ಜಬ್ಬರ್
- ಡಾ: ಕೆ.ಸುಧಾಕರ್ (ಆಗೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**755 – ಚಿತ್ರಕಲಾ ಮತ್ತು ದೈಹಿಕ ಶಿಕ್ಷಕರ ನೇಮಕಾತಿ ಕೊರತೆ ಬಗ್ಗೆ.**

- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**759 – ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಬೋಧಕ–ಬೋಧಕೇತರ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಬಗ್ಗೆ.**

- ಶ್ರೀ ಆಯನೂರು ಮಂಜುನಾಥ್
- ಡಾ: ಕೆ.ಸುಧಾಕರ್ (ಆಗೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**671 – ರಾಮನಗರ ಆರ್ಚಕರಹಳ್ಳಿಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಕಾಮಗಾರಿಯ ಬಗ್ಗೆ.**

- ಶ್ರೀ ಅ. ದೇವೇಗೌಡ
- ಡಾ: ಕೆ.ಸುಧಾಕರ್ (ಆಗೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**716 + 740 + 741 – ಅನುದಾನಿತ ಶಾಲಾ ಕಾಲೇಜುಗಳಲ್ಲಿ ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಬಗ್ಗೆ.**

- ಶ್ರೀ ಎಸ್.ವ್ಹಿ. ಸಂಕನೂರ
- ಶ್ರೀ ಪುಟ್ಟಣ್ಣ
- ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೦3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ ಅಡಿಕೆ ಎಲೆ ಹಳದಿ ರೋಗವು ವ್ಯಾಪಕವಾಗಿ ಕರಡುತ್ತಿದ್ದು, ಸದರಿ ರೋಗದ ಶಾಶ್ವತ ನಿಯಂತ್ರಣಕ್ಕೆ ಪರಿಹಾರ ಕಂಡು ಹಿಡಿಯುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಪರವಾಗಿ)

**ಆ) ಕರ್ನಾಟಕ ಜಾನಪದ ಪರಿಷತ್‌ಗೆ ವಾರ್ಷಿಕ ಅನುದಾನವನ್ನು ಕಡಿತಗೊಳಿಸಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**ಇ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಡಿಯಲ್ಲಿ ಬರುವ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**ಈ) ಹುಬ್ಬಳ್ಳಿ ತಾರಿಹಾಳ ಕೈಗಾರಿಕಾ ಪ್ರದೇಶದಲ್ಲಿ ಸ್ವಾರ್ಕರ್ ಕ್ಯಾಂಡಲ್ ಕಾರ್ಖಾನೆಯಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ಗಾಯಾಳು ಹಾಗೂ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡದಿರುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಪರವಾಗಿ)

**ಉ) ಆನೆ ದಾಳಿಯಿಂದ ಮೃತಪಟ್ಟ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ನೀಡುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**೦4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.**

**ಅ) ತುಮಕೂರು ಜಿಲ್ಲೆಯಲ್ಲಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ವಸತಿ ನಿಲಯಗಳಲ್ಲಿ ಪ್ರವೇಶಾತಿಗೆ ತೊಂದರೆಯಾಗುತ್ತಿರುವ ಬಗ್ಗೆ.**

– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಆ) ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಧನ್ನೂರಾ (ಎಚ್) ಗ್ರಾಮದ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸ್ಮಶಾನ ಭೂಮಿ ಇಲ್ಲದಿರುವ ಬಗ್ಗೆ.**

– ಶ್ರೀ ಅರವಿಂದ ಕುಮಾರ್ ಅರಳಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಇ) ಬೆಂಗಳೂರು ಮಹಾನಗರದಲ್ಲಿ ವಾಹನಗಳ ಟೋಯಿಂಗ್ ಪದ್ಧತಿ ಜಾರಿಯಿಂದ ಆಗುತ್ತಿರುವ ಅನಾನುಕೂಲಗಳ ಬಗ್ಗೆ.**

- ಮುನಿರಾಜುಗೌಡ ಪಿ.ಎಂ.
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
-

**ಈ) ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ 2021-22 ಹಾಗೂ 2022-23ನೇ ಸಾಲಿನ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಗೌರವ ಧನ ಬಿಡುಗಡೆಯಾಗದ ಬಗ್ಗೆ.**

- ಶ್ರೀ ಎಸ್.ವ್ಹಿ. ಸಂಕನೂರ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಉ) ರಾಜ್ಯದಲ್ಲಿರುವ ಬಡ ಕೂಲಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಈ ಹಿಂದೆ ಜಾರಿಯಿದ್ದ ಒಂದು ಬಾರಿ ಬಯೋಮೆಟ್ರಿಕ್ ವ್ಯವಸ್ಥೆ ಕಲ್ಪಿಸಿ ಕೊಡುವ ಬಗ್ಗೆ.**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಊ) "ನಮ್ಮ ಕ್ಲಿನಿಕ್" ಯೋಜನೆಗೆ ನೇಮಿಸಲಾದ ವೈದ್ಯರುಗಳ ಕನಿಷ್ಠ ವೇತನವನ್ನು ನಿಗದಿಪಡಿಸುವ ಬಗ್ಗೆ.**

- ಶ್ರೀ ಸಲೀಂ ಅಹ್ಮದ್
- ಡಾ: ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**ಋ) ಸಹಾಯಕ ತೋಟಗಾರಿಕೆ ಅಧಿಕಾರಿಗಳ ಹೆಚ್ಚುವರಿ ಪಟ್ಟಿಯಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ ನಾಲ್ಕು ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿರುವ ಬಗ್ಗೆ.**

- ಶ್ರೀ ಚಿದಾನಂದ ಎಂ.ಗೌಡ
- ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)

**ಎ) ಗ್ರಾಮ ಪಂಚಾಯಿತಿ ಅಧ್ಯಕ್ಷ – ಉಪಾಧ್ಯಕ್ಷ ಹಾಗೂ ಸದಸ್ಯರ ಗೌರವ ಧನ ಹೆಚ್ಚು ಮಾಡುವ ಬಗ್ಗೆ.**

- ಶ್ರೀ ಮಂಜುನಾಥ್ ಭಂಡಾರಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**೦೫. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆ**

**ಊ) ಅಂತರರಾಷ್ಟ್ರೀಯ, ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಕ್ರೀಡಾಪಟುಗಳು ಮಾದಕ ದ್ರವ್ಯಗಳಂತಹ ಉದ್ದೀಪನ ಮದ್ದು ಸೇವಿಸಿರುವ ಪ್ರಕರಣಗಳ ಬಗ್ಗೆ –**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಪರವಾಗಿ)

**೦೬. ವರದಿಯನ್ನೊಪ್ಪಿಸುವುದು**

**೦೭. ಕಾರ್ಯದರ್ಶಿಯವರ ವರದಿ**

**೦೮. ನಿಯಮ ೫೯ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ: ರಾಜ್ಯದಲ್ಲಿ ಪಿ.ಎಸ್.ಐ. ನೇಮಕಾತಿಯಲ್ಲಿ ಆಗಿರುವಂತಹ ಹಗರಣದ ಬಗ್ಗೆ.**

– ಶ್ರೀ ಕೆ.ಎ. ತಿಪ್ಪೇಸ್ವಾಮಿ
– ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)
– ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

**೦೯. ಶಾಸನ ರಚನೆ**

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**ಅ) ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2022**

– ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯಹಾರಗಳು ಮತ್ತು ಶಾಸನ ರಚನೆ ಸಚಿವರು)
– ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು)
– ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಸವದಿ ಲಕ್ಷ್ಮಣ
– ಶ್ರೀ ಭೋಜೇಗೌಡ
– ಶ್ರೀ ಟಿ.ಎ.ಶರವಣ
– ಡಾ: ತೇಜಸ್ವಿನಿಗೌಡ
– ಶ್ರೀ ಎಸ್.ಕೇಶವ ಪ್ರಸಾದ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2022**

- ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು(ಕಂದಾಯ ಸಚಿವರ ಪರವಾಗಿ)
- ಶ್ರೀ ಬಿ.ಕೆ ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು)
- ಶ್ರೀ ಎಸ್.ಎಲ್.ಭೋಜೇಗೌಡ
- ಡಾ: ತೇಜಸ್ವಿನಿಗೌಡ
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಎಂ.ಎಲ್.ಅನಿಲ್ ಕುಮಾರ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**10. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ**

**ವಿಷಯ: ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹ ಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿ ಹೋಗಿದ್ದು, ಕೆರೆ ಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಬಗ್ಗೆ.**

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಹೆಚ್.ಎಸ್.ಗೋಪಿನಾಥ್
- ಶ್ರೀ ಎಂ.ನಾಗರಾಜು
- ಶ್ರೀ ಕೆ.ಗೋಪಾಲಯ್ಯ(ಅಬಕಾರಿ ಸಚಿವರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಕೆ.ಎಸ್.ನವೀನ್

– – –

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(892) 19-09-2022 (11.10) ಕೆಜಿ-ಕೆಎಸ್

# ಕರ್ನಾಟಕ ವಿಧಾನ ಪರಿಷತ್ತು

**ಸೋಮವಾರ, 19ನೇ ಸೆಪ್ಟೆಂಬರ್ 2022**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ**

**ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 17 ನಿಮಿಷಗಳಿಗೆ ಸಮಾವೇಶಗೊಂಡಿತು**

**ಸಭಾಪತಿ (ಶ್ರೀ ರಘುನಾಥ್ ರಾವ್ ಮಲ್ಕಾಪೂರೆ) ಅವರು**

**ಪೀಠದಲ್ಲಿ ಉಪಸ್ಥಿತರಾದರು**

.

## ೦1. ಪ್ರಕಟಣೆ

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:-

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ 16.09.2022 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2002
2. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2022.

## ೦2. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ (700 + 617)**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಪ್ರಾಣೇಶ್ ಎಂ.ಕೆ.:-** ಮಾನ್ಯ ಸಭಾಪತಿಯವರೇ, ಶಾಲಾ ಪಠ್ಯ ಪುಸ್ತಕದಲ್ಲಿ "ಭಗವದ್ಗೀತೆ" ಯನ್ನು ಬೋಧಿಸುವ ಕುರಿತು ನಾನು ಈ ಹಿಂದೆ ಪ್ರಸ್ತಾಪ ಮಾಡಿದ್ದೆ. ಆ ಪ್ರಸ್ತಾವನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಶಾಲಾ ಪಠ್ಯ ಪುಸ್ತಕಗಳಲ್ಲಿ "ಭಗವದ್ಗೀತೆ" ಯನ್ನು ಬೋಧಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ ಈ ಕುರಿತು ಸರ್ಕಾರ ಈವರೆಗೂ ಕೈಗೊಂಡ ಕ್ರಮಗಳೇನು ಎಂಬುದಾಗಿ ಪ್ರಶ್ನೆಯನ್ನು ಕೇಳಿದ್ದೆ. ಇದಕ್ಕೆ ಮಾನ್ಯ ಸಚಿವರು ಪ್ರಸ್ತುತ ಶಾಲಾ ಪಠ್ಯ ಪುಸ್ತಕಗಳಲ್ಲಿ ಭಗವದ್ಗೀತೆಯನ್ನು ಪ್ರತ್ಯೇಕವಾಗಿ ಬೋಧಿಸುವ ವಿಚಾರ ಸರ್ಕಾರದ ಮುಂದೆ ಇರುವುದಿಲ್ಲವೆಂದು ಉತ್ತರವನ್ನು ನೀಡಿದ್ದಾರೆ. ಮಾನ್ಯ ಸಚಿವರು ಏಕೆ ಈ ರೀತಿ ಹೇಳಿದ್ದಾರೆಂದು ಗೊತ್ತಾಗುತ್ತಿಲ್ಲ. ಬಹುಶಃ ನಾನು ಈ ಹಿಂದೆ ಈ ಪ್ರಶ್ನೆಯನ್ನು ಸದನದಲ್ಲಿ ಪ್ರಸ್ತಾಪ ಮಾಡಿದಾಗ, ಮಾನ್ಯ ಸಚಿವರು "ಪಠ್ಯದಲ್ಲಿ ಭಗವದ್ಗೀತೆಯನ್ನು ಬೋಧಿಸುವ ಕುರಿತು ಒಂದು ಸಮಿತಿಯನ್ನು ರಚನೆ ಮಾಡುತ್ತೇವೆಂದು" ಹೇಳಿದ್ದರು. ತದನಂತರ, ತಜ್ಞರ ಒಂದು ಸಮಿತಿಯನ್ನು ರಚನೆ ಮಾಡುತ್ತೇವೆಂಬ ಮಾತನ್ನು ಹೇಳಿದ್ದರು. ಮತ್ತೆ ಭಗವದ್ಗೀತೆ ಪಠ್ಯ ಪರಿಶೀಲನೆಗೆ ಒಂದು ಸಮಿತಿಯನ್ನು ಮಾಡಿರುತ್ತೇನೆಂಬ ಮಾತನ್ನು ಹೇಳಿದ್ದರು. ಆದರೆ, ಮಾನ್ಯ ಸಚಿವರು ಸರ್ಕಾರದ ಮುಂದೆ ಈ ಪ್ರಸ್ತಾವನೆ ಇಲ್ಲವೆಂಬ ಮಾತನ್ನು ಹೇಳುತ್ತಿದ್ದಾರೆ.

**(ಮುಂದು.,)**

**(893) 19-09-2022 (11.20) ಎಂವಿ-ಜಿಆರ್**

**ಶ್ರೀ ಎಂ.ಕೆ.ಪ್ರಾಣೇಶ್ (ಮುಂದು):-**

ಭಗವದ್ಗೀತೆ ಪರಿಶೀಲನೆಗೆ ಒಂದು ಸಮಿತಿ ಮಾಡುತ್ತೇವೆಂದು ತಿಳಿಸಿದ್ದರು. ಆದರೆ, ಇವತ್ತು ಉತ್ತರವನ್ನು ನೋಡಿದರೆ, ಸರ್ಕಾರದ ಮುಂದೆ ಈ ಪ್ರಸ್ತಾವನೆ ಇಲ್ಲ ಎನ್ನುವಂತಹ ಮಾತನ್ನು ಹೇಳುತ್ತಿದ್ದಾರೆ.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಪ್ರಸಕ್ತ ಸಾಲಿನ ಪಠ್ಯಪುಸ್ತಕದಲ್ಲಿ ಇಲ್ಲವೆನ್ನುವಂತಹ ಉತ್ತರವನ್ನು ನೀಡಿದ್ದೇವೆ. ಸಮಾಜದ ನೈತಿಕತೆಯನ್ನು ಮೇಲೆ ಎತ್ತಬೇಕೆಂದು ನೈತಿಕ ಶಿಕ್ಷಣವನ್ನು ಜಾರಿಗೆ ತರಬೇಕೆಂದು ಎಲ್ಲರ ಆಸೆ ಮತ್ತು ಅವಶ್ಯಕತೆ ಏನಿದೆ, ನೈತಿಕ ಶಿಕ್ಷಣದಲ್ಲಿ ಭಗವದ್ಗೀತೆಯನ್ನು ಹೇಳಿಕೊಡಬೇಕು ಎನ್ನುವಂತಹ ವಿಚಾರವಿದೆ ಎನ್ನುವಂತಹ ಉತ್ತರವನ್ನು ಸಹ ನೀಡಿದ್ದೆ. ಅದಕ್ಕೋಸ್ಕರ ಸದ್ಯದಲ್ಲಿಯೇ ನೈತಿಕ ಶಿಕ್ಷಣದಲ್ಲಿ ಏನೇನು ವಿಚಾರಗಳು ಇರಬೇಕು ಎನ್ನುವುದಕ್ಕೋಸ್ಕರ ಸಮಿತಿಯನ್ನು ಮಾಡಿ, ಆ ಸಮಿತಿಯವರು ಕೊಡುವಂತಹ ಶಿಫಾರಸುಗಳ ಆಧಾರದ ಮೇಲೆ ಮುಂದಿನ ವರ್ಷದಿಂದ ತರಬೇಕು. ನಾವು ಈ ವರ್ಷದ ಡಿಸೆಂಬರ್ ತಿಂಗಳಿನಲ್ಲಿ ನೈತಿಕ ಶಿಕ್ಷಣವನ್ನು ತರಬೇಕೆಂದು ಇದ್ದೆವು. ಖಂಡಿತವಾಗಿ ನೈತಿಕ ಶಿಕ್ಷಣದ ಭಾಗವಾಗಿ ಭಗವದ್ಗೀತೆಯನ್ನು ಸಹ ತರುತ್ತೇವೆ ಎನ್ನುವಂತಹ ಮಾತನ್ನು ಮತ್ತೊಮ್ಮೆ ಮಾನ್ಯ ಸದಸ್ಯರಿಗೆ ಸ್ಪಷ್ಟೀಕರಿಸುತ್ತೇನೆ.

**ಶ್ರೀ ಪ್ರಾಣೇಶ್ ಎಂ.ಕೆ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ರೀತಿ ಹೇಳಿದ್ದಾರೆ ಸರಿ. ಆದರೆ, ಭಗವದ್ಗೀತೆಯನ್ನು ಪಠ್ಯ ಪುಸ್ತಕದಲ್ಲಿ ಸೇರಿಸುವಂಥದ್ದಕ್ಕೆ ಮಾನ್ಯ ಸಚಿವರಿಗೆ ಏನಾದರೂ ಮುಜುಗರ ಇದೆಯೇ? ಅದನ್ನು ಪಠ್ಯಪುಸ್ತಕದಲ್ಲಿ ಸೇರಿಸುತ್ತೇವೆಂದು ಅವರು ಹೇಳಿದಂತಹ ಮಾತು. ನನ್ನ ಪ್ರಶ್ನೆ ಏನೆಂದರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಯಾರ ವಿರೋಧವೂ ಸಹ ಇರುವುದಿಲ್ಲ. ಭಗವದ್ಗೀತೆಯ ವಿಚಾರಗಳನ್ನು ಪಠ್ಯ ಪುಸ್ತಕದಲ್ಲಿ ತಂದರೆ, ಹುಟ್ಟುವ ಮಕ್ಕಳಿಂದ ಹಿಡಿದು ಎಲ್ಲರಿಗೂ ಕೂಡ ಜ್ಞಾನವನ್ನು ಮೂಡಿಸುವಂತಹ ವ್ಯವಸ್ಥೆಯಾಗುತ್ತದೆ. ಮಾನ್ಯ ಶಿಕ್ಷಣ ಸಚಿವರು ಇದರ ಬಗ್ಗೆ ಆಸ್ತಕಿ ಇದ್ದಂತಹವರು ಆದರೆ ಅವರು ಇದ್ದಕ್ಕಿದ್ದಂತೆ ಈ ಪ್ರಸ್ತಾವನೆ ನಮ್ಮ ಮುಂದೆ ಇಲ್ಲ ಎನ್ನುವುದು ನನಗೆ ಏಕೋ ಒಂದು ರೀತಿಯ ಅನುಮಾನ ಮೂಡುತ್ತದೆ.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಿಗೆ ಸ್ಪಷ್ಟತೆ ನೀಡಿದ್ದೇನೆ. ಅಂದರೆ, ಅದು ಪ್ರಸಕ್ತ ಸಾಲಿನಲ್ಲಿ ಇಲ್ಲ. ಆದರೆ ಮುಂದಿನ ದಿನಗಳಲ್ಲಿ ಖಂಡಿತವಾಗಿ ತರುತ್ತೇವೆ.

**ಶ್ರೀ ಪ್ರಾಣೇಶ್ ಎಂ.ಕೆ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸ್ಪಷ್ಟತೆ ನೀಡಿದ್ದಾರೆ. ಆದರೆ, ಅದು ನನಗೆ ಸಮಂಜಸವಾಗಿ ಕಾಣುತ್ತಿಲ್ಲ. ನಾನು ಈಗ ಕೇಳುತ್ತಿರುವ ಪ್ರಶ್ನೆಯನ್ನು ಇದರಲ್ಲಿ ಕೇಳಿಲ್ಲ ಆದುದರಿಂದ ಅದರ ಮುಂದುವರೆದ ಭಾಗವಾಗಿ, ಪಠ್ಯ ಪುಸ್ತಕದಲ್ಲಿ ಬಾಬಾ ಬುಡನಗಿರಿಯ

ಬದಲು, ಇನಾಂ ದತ್ತಾತ್ತೇಯ ಪೀಠ ಎನ್ನುವುದನ್ನು ಕೂಡ ಸೇರಿಸಬೇಕು. ನಾನು ಹಿಂದೆ ಈ ವಿಷಯವನ್ನು ಮಾನ್ಯ ಸಚಿವರ ಮುಂದೆ ಪ್ರಸ್ತಾಪ ಮಾಡಿದ್ದೆ. ನಾವು ಬಾಬಾ ಬುಡನಗಿರಿಯ ಇತಿಹಾಸವನ್ನು ನೋಡಿದಾಗ, ಇನಾಂ ದತ್ತಾತ್ರೇಯ ಪೀಠವನ್ನು ಕೂಡ ಪಠ್ಯಪುಸ್ತಕದಲ್ಲಿ ಸೇರಿಸಬೇಕು ಎನ್ನುವಂತಹ ಆಗ್ರಹವನ್ನು ಸಹ ಮಾಡಿದ್ದೆ. ಹಾಗಾಗಿ ದಯಮಾಡಿ, ಭವಿಷ್ಯದ ಮುಂದಿನ ಪೀಳಿಗೆಗಳಿಗೆ ಏನು ವ್ಯವಸ್ಥೆ ಇತ್ತು ಎನ್ನುವುದನ್ನು ನಮ್ಮ ಮಕ್ಕಳಿಗೆ ತಿಳಿಸುವಂತಹ ಒಂದು ಪ್ರಯತ್ನ ಮಾಡುವಂತಹ ಜವಾಬ್ದಾರಿ ಮಾನ್ಯ ಶಿಕ್ಷಣ ಸಚಿವರಿಗೆ ಇದೆ. ಮಾನ್ಯ ಶಿಕ್ಷಣ ಸಚಿವರಿಗೆ ಅದರ ಸಂಪೂರ್ಣ ಅರಿವು ಸಹ ಇದೆ. ದಯವಿಟ್ಟು ಮಾನ್ಯ ಸಚಿವರು ಇದಕ್ಕೆ ಉತ್ತರ ನೀಡಬೇಕು. ಹಾಗಾಗಿ ಇದನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಶಿಕ್ಷಣ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವುದನ್ನು ಖಂಡಿತವಾಗಿ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇತಿಹಾಸದಲ್ಲಿ ಏನು ತಪ್ಪುಗಳು ಇದ್ದವು, ಅದನ್ನು ಸರಿಪಡಿಸುವಂತಹ ಪ್ರಯತ್ನಗಳನ್ನು ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನು ಏನೇನು ತಪ್ಪುಗಳಿವೆ ಅದನ್ನು ಸರಿಪಡಿಸುವಂತಹ ಪ್ರಯತ್ನ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 634**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ನನಗೆ ಇದಕ್ಕೆ ಸಂಬಂಧಪಟ್ಟಂತೆ ಸ್ವಲ್ಪ ಗೊಂದಲಗಳಿವೆ. ಅದರ ಬಗ್ಗೆ ಕೆಲವು ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಕರ್ನಾಟಕ ಜಾನಪದ ಪರಿಷತ್ತು ಮಾನ್ಯ ಹೆಚ್.ಎಲ್.ನಾಗೇಗೌಡರ ಸಾರಥ್ಯದಲ್ಲಿ ಸುಮಾರು 43 ವರ್ಷಗಳ ಹಿಂದೆ ಪ್ರಾರಂಭವಾಗಿದೆ. ಜಾನಪದ ಲೋಕ ಮಾನ್ಯ ಹೆಚ್.ಎಲ್.ನಾಗೇಗೌಡರ ಕನಸಿನ ಕೂಸು ಅದನ್ನು 1994ರಲ್ಲಿ ಪ್ರಾರಂಭ ಮಾಡಿದ್ದಾರೆ. ಈ ಜಾನಪದ ಪರಿಷತ್ತಿನ ಕೆಲಸವೇನೆಂದರೆ, ನಮ್ಮ ನಾಡಿನ ಸಂಸ್ಕೃತಿ, ಕಲೆ, ಸಾಹಿತ್ಯ, ಜನಪದ ಮತ್ತು ಹಳ್ಳಿಗಾಡಿನ ಸೊಗಡು ಇವುಗಳ ಬಗ್ಗೆ, ಇವತ್ತಿನ ಪೀಳಿಗೆಯವರಿಗೆ ತಿಳಿಸಿ ಅದನ್ನು ಮನವರಿಕೆ ಮಾಡುವಂಥದ್ದು. ಇದನ್ನು ಬಹಳ ದೂರದೃಷ್ಟಿಯಿಂದ ಪ್ರಾರಂಭ ಮಾಡಿದಂತಹ ಸಂಸ್ಥೆ. ಆ ಸಂಸ್ಥೆಗೆ ಸುಮಾರು ಹನ್ನೊಂದು ಹುದ್ದೆಗಳು ಮಂಜೂರಾಗುತ್ತವೆ. ಈಗ ಬೇರೆ ಬೇರೆ ಕಾರಣಗಳಿಂದ ಕೆಲವರು ನಿವೃತ್ತಿಯಾಗಿದ್ದಾರೆ ಮತ್ತೆ ಕೆಲವರು ಮರಣ ಹೊಂದಿದ್ದಾರೆ. ಇದರಿಂದ ಸುಮಾರು ಒಂಭತ್ತು ಹುದ್ದೆಗಳು ಖಾಲಿಯಾಗಿ ಈಗ ಕೇವಲ ಎರಡು ಹುದ್ದೆಗಳಿವೆ. ಈಗ ಇರುವಂತಹ ಎರಡು ಹುದ್ದೆಗಳು ಯಾವುವು ಎಂದರೆ, ಒಂದು ಟೈಪಿಸ್ಟ್ ಹುದ್ದೆ ಮತ್ತೊಂದು ಅಟೆಂಡರ್ ಹುದ್ದೆ. ಈಗ ಆ ಟೈಪಿಸ್ಟ್ ಮತ್ತು ಅಟೆಂಡರ್ ಅನ್ನು ಇಟ್ಟುಕೊಂಡು ಯಾವ ರೀತಿಯಲ್ಲಿ ಜಾನಪದ ಲೋಕವನ್ನು ನಡೆಸುವುದಕ್ಕೆ ಆಗುತ್ತದೆ.

**ಶ್ರೀ ವಿ.ಸುನೀಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ಸದಸ್ಯರು, ಜಾನಪದ ಪರಿಷತ್ತನ್ನು ಇನ್ನಷ್ಟು ಶ್ರೀಮಂತಗೊಳಿಸಬೇಕು ಎನ್ನುವಂತಹ ಹಿನ್ನೆಲೆಯಲ್ಲಿ ಈ ಪೂರಕ ಪ್ರಶ್ನೆಯನ್ನು ಕೇಳಿದ್ದಾರೆ. ಜಾನಪದ ಪರಿಷತ್ತು ನಮ್ಮ ರಾಜ್ಯದ ಒಂದು ಅತ್ಯಂತ ಹೆಮ್ಮೆಯ ಸಂಸ್ಥೆಯಾಗಿದೆ. ಪ್ರವಾಸೋದ್ಯಮದ ದೃಷ್ಟಿಯಿಂದ ನಮ್ಮ ಕರ್ನಾಟಕದ ಹತ್ತಾರು ಜಾನಪದ ಸಂಗತಿಗಳನ್ನು ತಿಳಿಸುವಂತಹ ಒಂದು ಒಳ್ಳೆಯ ಕೇಂದ್ರ, ಇದು ಕಳೆದ ಕೆಲವು ವರ್ಷಗಳ ಹಿಂದೆ ಆರಂಭವಾಗಿದೆ. ಅಲ್ಲಿಗೆ ಬಹಳ ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಿದ್ದಾರೆ. ಬೆಂಗಳೂರಿನಿಂದ ಮೈಸೂರಿಗೆ ಹೋಗುವಂತಹ ಸಂದರ್ಭದಲ್ಲಿ ಒಂದು ಆಕರ್ಷಣೀಯ ಸ್ಥಳವಾಗಿದೆ. ಈಗ ಮಾನ್ಯ ಸದಸ್ಯರು ಹೇಳುತ್ತಿರುವುದೇನೆಂದರೆ, ಅಲ್ಲಿರುವಂತಹ ನೇಮಕಾತಿ ಪ್ರಕ್ರಿಯೆಯಲ್ಲಿ ಅವರಿಗೆ ಸಂಬಳವಾಗಿಲ್ಲ. ಅದಕ್ಕೆ ಸರ್ಕಾರದ ಕಡೆಯಿಂದ ಅನುದಾನವನ್ನು ಒದಗಿಸಿ ಎನ್ನುವಂತಹ ಮಾತನ್ನು

ಹೇಳಿದ್ದಾರೆ. ಸರ್ಕಾರ ಈ ಹಿಂದೆ ಹನ್ನೊಂದು ಹುದ್ದೆಗಳಿಗೆ ಮಂಜೂರಾತಿಯನ್ನು ನೀಡಿತ್ತು. ಆ ಹುದ್ದೆಗಳಲ್ಲಿ ಈಗಾಗಲೇ ಒಂಬತ್ತು ಜನರು ನಿವೃತ್ತರಾಗಿದ್ದಾರೆ. ಈಗ ಅಲ್ಲಿ ಇಬ್ಬರು ನೌಕರರು ಮಾತ್ರ ಅಲ್ಲಿದ್ದಾರೆ. ನಾವು ಈಗಾಗಲೇ ಜಾನಪದ ಪರಿಷತ್ತಿಗೆ ಪತ್ರವನ್ನು ಬರೆದಿದ್ದೇವೆ. ಅಂದರೆ, ಖಾಲಿ ಇರುವಂತಹ ಹುದ್ದೆಗಳ ವಿವರಗಳನ್ನು ಒದಗಿಸಿದರೆ, ಬಾಕಿ ಇದ್ದಂತಹ ಒಂಬತ್ತು ಹುದ್ದೆಗಳನ್ನು ನೇಮಕಾತಿ ಮಾಡಿಕೊಂಡು, ಅವರಿಗೆ ಸಂಬಳ ನೀಡುವುದಕ್ಕೆ ಸರ್ಕಾರದ ಕಡೆಯಿಂದ ಸಿದ್ಧತೆಯನ್ನು ಮಾಡಿಕೊಂಡಿದ್ದೇವೆ. ಈಗಾಗಲೇ ವಾರ್ಷಿಕವಾಗಿ ಒಂದು ಕೋಟಿ ರೂಪಾಯಿಗಳ ಅನುದಾನವನ್ನು ನೀಡುತ್ತಿದ್ದೇವೆ. ಈ ವರ್ಷ ಕೊಟ್ಟಿರುವಂತಹ ಒಂದು ಕೋಟಿ ರೂಪಾಯಿಗಳ ಅನುದಾನದಲ್ಲಿ ಈಗಾಗಲೇ ಮೊದಲನೆ ಮತ್ತು ಎರಡನೆ ಕಂತುಗಳ ರೂಪದಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಬಾಕಿ ಇರುವಂತಹ ಹಣವನ್ನು ತಕ್ಷಣ ಬಿಡುಗಡೆ ಮಾಡುವಂತಹ ಪ್ರಕ್ರಿಯೆಯನ್ನು ಮಾಡುತ್ತೇವೆ. ಆದರೆ, ಇದಕ್ಕೆ ಒಂದು ಸಮಸ್ಯೆ ಏನೆಂದರೆ, ಅವರು ಹೊರಗುತ್ತಿಗೆ ಆಧಾರದ ಮೇಲೆ ಸುಮಾರು ಮೂವತ್ತು ಜನರನ್ನು ನೇಮಕ ಮಾಡಿದ್ದಾರೆ. ಆ ಹೊರಗುತ್ತಿಗೆಯ ನೇಮಕಾತಿಯನ್ನು ಮಾಡಿಕೊಳ್ಳಬೇಕಾದರೆ, ಅವರು ಯಾವುದೇ ರೀತಿಯ ಮಾನದಂಡಗಳನ್ನು ಅನುಸರಿಸಿಲ್ಲ ಮತ್ತು ಸರ್ಕಾರದ ಪೂರ್ವಾನುಮತಿಯನ್ನು ಸಹ ತೆಗೆದುಕೊಂಡಿಲ್ಲ. ಈ ಹಿನ್ನೆಲೆಯಲ್ಲಿ ಅದನ್ನು ಏನು ಮಾಡಬೇಕೆಂದು ಈ ತಿಂಗಳ ಐದನೇ ತಾರೀಖಿಗೆ ಅವರಿಗೆ ಪತ್ರವನ್ನು ಬರೆದಿದ್ದೇವೆ. ಅವರಿಂದ ಉತ್ತರ ಬಂದ ತಕ್ಷಣ ಆರ್ಥಿಕ ಇಲಾಖೆಯವರ ಜೊತೆ ಮಾತುಕತೆ ನಡೆಸಿ, ಉಳಿದಂತಹ ಹುದ್ದೆಗಳನ್ನು ಸೃಜನೆ ಮಾಡಿಕೊಳ್ಳುವುದು ಹೇಗೆ? ಮತ್ತು ಈಗ ಇರುವಂತಹವರನ್ನು ಹೇಗೆ ಮುಂದುವರೆಸಬೇಕು ಎಂಬುದನ್ನು ಕುರಿತಂತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಒಟ್ಟಾರೆ ಜಾನಪದ ಪರಿಷತ್ತಿನ ಚಟುವಟಿಕೆಗಳು ಸುಲಲಿತವಾಗಿ ನಡೆಯುವುದಕ್ಕೆ ನಮ್ಮ ಇಲಾಖೆಯ ವತಿಯಿಂದ ಏನೇನು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಅದೆಲ್ಲವನ್ನೂ ಕೂಡ ಮಾಡುತ್ತೇವೆ. ಹಾಗೆ ಮಾನ್ಯ ಸದಸ್ಯರ ಸಹಕಾರವನ್ನು ಸಹ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಮಾನ್ಯ ಗೋವಿಂದ ಎಂ. ಕಾರಜೋಳರವರು ಈ ಹಿಂದೆ ಉಪ ಮುಖ್ಯಮಂತ್ರಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ನಿರ್ವಹಿಸಿದ್ದಾರೆ. ಆದುದರಿಂದ ಅವರು ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಬೆಳಕು ಚೆಲ್ಲುತ್ತಾರೆ.

**ಶ್ರೀ ಗೋವಿಂದ ಎಂ. ಕಾರಜೋಳ (ಜಲಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿ ಬಹಳ ವರ್ಷಗಳ

ಕಾಲ ಕೆಲಸ ಮಾಡಿದ್ದೇನೆ. ಅದಕ್ಕಾಗಿ ನಾನು ಮಧ್ಯ ಪ್ರವೇಶಿಸುತ್ತಿದ್ದೇನೆ. ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿದ್ದಾಗ ಜಾನಪದ ವಿಶ್ವವಿದ್ಯಾಲಯ ನನ್ನ ಕಾಲದಲ್ಲಿಯೇ ಪ್ರಾರಂಭವಾಯಿತು. ಅದು ಕರ್ನಾಟಕದ ಮಧ್ಯ ಭಾಗದಲ್ಲಿ ಇರಬೇಕೆಂದು ಅದನ್ನು ಹಾವೇರಿ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದರು. ಈಗ ಕೆಲವರ ತಲೆಯಲ್ಲಿ ಏನಾಗುತ್ತದೆಂದರೆ, ವಿಶ್ವವಿದ್ಯಾಲಯ ಎಂದ ಕೂಡಲೇ ಅದನ್ನು ಉನ್ನತ ಶಿಕ್ಷಣ ಇಲಾಖೆಗೆ ವರ್ಗಾಯಿಸಿಬಿಡುತ್ತಾರೆ. ಆ ವಿಶ್ವವಿದ್ಯಾಲಯ ನನ್ನ ಕಾಲದಲ್ಲಿ ನನ್ನಿಂದ ಪ್ರಾರಂಭವಾಯಿತು. ಆದರೆ, ಆದೇಶವಾಗುವಾಗ ಅದನ್ನು ಉನ್ನತ ಶಿಕ್ಷಣ ಇಲಾಖೆಯವರೇ ನೋಡಲಿ ಎಂದರು. ಇದರಿಂದ ಇವತ್ತಿನ ದಿವಸ ಅದರ ಎಲ್ಲಾ ಕಾರ್ಯಚಟುವಟಿಕೆಗಳು ಕುಂಠಿತಗೊಂಡಿವೆ. ಅದೇ ರೀತಿ ಈ ಜಾನಪದ ಕಲಾವಿದರು, ಕವಿಗಳು ಮತ್ತು ಸಾಹಿತಿಗಳು ಏನು ಇದ್ದಾರೆ, ಅವರೆಲ್ಲರೂ ಸಹ ಕೆಳವರ್ಗದಿಂದ ಬಂದಂತಹವರು. ಕೆಳವರ್ಗದವರ ಬದುಕೇ ಈ ಜಾನಪದ ಕಲೆ. ಈಗ ನನ್ನ ಬಲಭಾಗದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರಿದ್ದಾರೆ. ಅದೇ ರೀತಿ ಎಡ ಭಾಗದಲ್ಲಿ ಉನ್ನತ ಶಿಕ್ಷಣ ಸಚಿವರು ಇದ್ದಾರೆ. ಅದಕ್ಕೆ ನನ್ನ ಮನವಿ ಏನೆಂದರೆ, ಈ ಇಬ್ಬರು ಕುಳಿತುಕೊಂಡು ಮಾತನಾಡಿ, ಆ ಜಾನಪದ ವಿಶ್ವವಿದ್ಯಾಲಯವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವರ್ಗಾಯಿಸಲಿ. ಆಗ ಅದರ ಕಾರ್ಯಚಟುವಟಿಕೆಗಳು ನಡೆಯುತ್ತವೆ. ಆದರೆ, ಇವತ್ತು ಅಲ್ಲಿ ಏನೂ ಇಲ್ಲ. ವಿಶ್ವವಿದ್ಯಾಲಯಕ್ಕೆ ಜಾಗ ಮತ್ತು ಹಣ ಕೊಡಲಾಗಿ, ಅಲ್ಲಿ ಕಟ್ಟಡ ಕಟ್ಟಿದ್ದಾರೆ. ಅದು ಅಲ್ಲಿಗೆ ಮುಗಿದು ಹೋಗಿದೆ. ಈಗ ಅದು ವ್ಯವಸ್ಥಿತವಾಗಿ ನಿಂತು ಹೋಗಿದೆ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಈಗ ನಾನು ಅವರನ್ನು ನೇಮಕ ಮಾಡಿ ಮತ್ತೆ ಇವರನ್ನು ನೇಮಕ ಮಾಡಿ ಎಂದು ಹೇಳುವುದಿಲ್ಲ. ಅಲ್ಲಿಗೆ ನೇಮಕ ಮಾಡುವಾಗ ಜಾನಪದ ಕಲೆಯಲ್ಲಿ ಯಾರು ಅರ್ಹರಿರುತ್ತಾರೆ ಅಂತಹವರನ್ನೇ ನೇಮಕ ಮಾಡಬೇಕು. ಇವತ್ತು ಮಾನ್ಯ ಸದಸ್ಯರು ಇದರ ಬಗೆ ಪ್ರಶ್ನೆ ಎತ್ತಿದ್ದಾರೆ. ನಾನು ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿದ್ದಾಗ ಎರಡು–ಮೂರು ಬಾರಿ ಅಲ್ಲಿಗೆ ಭೇಟಿ ನೀಡಿದ್ದೇನೆ. ಆದುದರಿಂದ ಅಲ್ಲಿ ಕಾರ್ಯಚಟುವಟಿಕೆಗಳು ನಡೆಯಬೇಕು ಎನ್ನುವುದಕ್ಕೆ ಸರ್ಕಾರ ಅದನ್ನು ಉದಾರವಾದಿಯಾಗಿ ಮಾಡಿಕೊಡಬೇಕು.

**ಶ್ರೀ ಎಂ.ಎಲ್.ಅನಿಲ್ ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸಚಿವರಾದ ಶ್ರೀ ಗೋವಿಂದ ಎಂ. ಕಾರಜೋಳರವರಿಗೆ ಧನ್ಯವಾದಗಳು.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಏನಾದರೂ ನೇರವಾದ ಪ್ರಶ್ನೆಗಳು ಇದ್ದರೆ ಕೇಳಿ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ನೀಡುತ್ತಾರೆ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಈಗ ಏನು 30 ಜನ ನೌಕರರನ್ನು ತೆಗೆದುಕೊಂಡಿದ್ದಾರೆ, ಅದಕ್ಕೆ ಸರ್ಕಾರದ ಸುತ್ತೋಲೆ ಮತ್ತು ಕಾನೂನು ರೀತಿಯಲ್ಲಿ ಇಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇವತ್ತು ಜಾನಪದ ಲೋಕದ ಆಡಳಿತಾಧಿಕಾರಿ ಖಾಯಂ ನೌಕರರಲ್ಲ. ಅಲ್ಲಿ ಸುಮಾರು ವರ್ಷಗಳಿಂದ ಆಡಳಿತಾಧಿಕಾರಿ ಹುದ್ದೆ ಖಾಲಿ ಇದೆ. ಈಗ ಏನು ಹಂಗಾಮಿ ನೌಕರರನ್ನು ತೆಗೆದುಕೊಂಡಿದ್ದಾರೆ, ಅವರೇ ಅದನ್ನು ನಿರ್ವಹಿಸುತ್ತಿದ್ದಾರೆ. ಈಗಾಗಲೇ ಮೈಸೂರಿನ ರಂಗಾಯಣದಲ್ಲಿ ಮತ್ತು Integrated Arts Society ಗಳಲ್ಲಿ ಅವರನ್ನು ಖಾಯಂ ಮಾಡಿದ್ದಾರೆ.

**ಶ್ರೀ ವಿ.ಸುನೀಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಜಾನಪದ ಪರಿಷತ್ತಿನಲ್ಲಿ ಮಂಜೂರಾದ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಬೇಕಾದಂತಹ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಈಗ ಅವರು ಏನು ಹೊರಗುತ್ತಿಗೆಯಲ್ಲಿ ನೇಮಕ ಮಾಡಿದ್ದಾರೆ, ಅದಕ್ಕೆ ಸಂಬಂಧಪಟ್ಟಂತೆ ಆರ್ಥಿಕ ಇಲಾಖೆಯವರ ಜೊತೆ ಚರ್ಚೆ ಮಾಡಿ, ಮುಂದಿನ ಕ್ರಮವನ್ನು ಕೈಗೊಳ್ಳುತ್ತೇವೆ.

**(ಮುಂದು)**

(894) 19.09.2022 11.30 LL-GR

**ಪ್ರಶ್ನೆ ಸಂಖ್ಯೆ: 737 + 606**

**(ಉತ್ತರವನ್ನು ಲಗತ್ತಿಸಲಾಗದೆ)**

**ಶ್ರೀ ಮುನಿರಾಜುಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಪ್ರತಿ ದಿವಸ ಉತ್ಪಾದನೆಯಾಗುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯದ ಪ್ರಮಾಣ ಎಷ್ಟು ಎಂದು ಪ್ರಶ್ನೆ ಕೇಳಿದ್ದು, ಅದಕ್ಕೆ ಆಘಾತವಾಗುವಂತಹ ವರದಿಯನ್ನು ಮಾನ್ಯ ಸಚಿವರು ನೀಡಿರುತ್ತಾರೆ. ಅದರಂತೆ, ಪ್ರತಿದಿನ ಸುಮಾರು ೮೩೦.೩೬ ಟನ್‌ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ ಎಂಬ ಮಾತನ್ನು ಹೇಳಿರುತ್ತಾರೆ. ಬೆಂಗಳೂರು ನಗರ ಪ್ರದೇಶ ಒಂದರಲ್ಲಿಯೇ ಪ್ರತಿ ದಿನ ಸುಮಾರು 317.42 ಟನ್‌ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆಯಾಗುತ್ತಿರುತ್ತದೆ. ಅದಾದ ನಂತರ, ನನ್ನ ಪ್ರಶ್ನೆ ಇರುವುದೇನೆಂದರೆ, ಒಂದು ದಿನಕ್ಕೆ ಇಷ್ಟು ದೊಡ್ಡ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆಯಾಗುವುದನ್ನು ನೋಡಿದರೆ, ಒಂದು ವರ್ಷಕ್ಕೆ ಎಷ್ಟು ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆಯಾಗುತ್ತದೆ? ಸುಮಾರು ೮೩೦ ಟನ್ ಪ್ಲಾಸ್ಟಿಕ್ ತ್ಯಾಜ್ಯವನ್ನು ಒಂದು ಟ್ರಕ್‌ನಲ್ಲಿ ಹಾಕಬೇಕಾದರೆ, ಅದರ density ಜಾಸ್ತಿ ಇರುವುದರಿಂದ ಅದನ್ನು ಲಾರಿ/ಟ್ರಕ್‌ಗಳ ಮುಖಾಂತರ ಸಾಗಾಣೆ ಮಾಡಬೇಕು. ಅದರಂತೆ, ಸುಮಾರು ೮೩೦ ಲಾರಿ/ಟ್ರಕ್‌ಗಳಲ್ಲಿ ಸದರಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಾಗಾಣೆ ಮಾಡಬೇಕಾಗಿರುತ್ತದೆ.

ಇಷ್ಟೊಂದು ದೊಡ್ಡ ಮಟ್ಟದ ಪ್ಲಾಸ್ಟಿಕ್ ತ್ಯಾಜ್ಯವನ್ನು ಉತ್ಪಾದನೆ ಮಾಡುತ್ತಿರುವವರ ವಿರುದ್ಧ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎಂದು ಮಾನ್ಯ ಸಚಿವರಿಗೆ ಪ್ರಶ್ನೆ ಕೇಳಿದ್ದು, ಅದಕ್ಕೆ, "ಕಳೆದ ವರ್ಷ ಕೇವಲ 2 ಜಿಲ್ಲೆಗಳಲ್ಲಿ ಮಾತ್ರ ಅಂದರೆ, ಮಾನ್ಯ ಸಚಿವರ ಉಸ್ತುವಾರಿ ಜಿಲ್ಲೆಯಾದ ಬಳ್ಳಾರಿ ಜಿಲ್ಲೆಯಲ್ಲಿ 12 ಪ್ರಕರಣಗಳು ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ೦9 ಪ್ರಕರಣಗಳಲ್ಲಿ ಮಾತ್ರ ದೂರನ್ನು ದಾಖಲಿಸಿರುತ್ತಾರೆ. ಅದನ್ನು ಹೊರತುಪಡಿಸಿ, ಇಡೀ ರಾಜ್ಯದಲ್ಲಿ ಒಂದೇ ಒಂದು ಪ್ರಕರಣವನ್ನು ಸಹ ದಾಖಲಿಸಿರುವುದಿಲ್ಲ. ಅಂದರೆ, ಅಲ್ಲಿ ಆಗುತ್ತಿರುವಂತಹ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆಯ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಇಲಾಖೆಯ ಅಧಿಕಾರಿಗಳು ಪರೀಕ್ಷೆ ಮಾಡಿರುವಂಥದ್ದು ಅಥವಾ

ಸುಮಾರು ೯,೦೦೦ಕ್ಕೂ ಹೆಚ್ಚು ರೈಡ್ ಮಾಡಿರುತ್ತಾರೆ. ಆದರೆ, **"ಹೋದ ಪುಟ್ಟ ಬಂದ ಪುಟ್ಟ"** ಎನ್ನುವಂತಹ ರೀತಿಯಲ್ಲಿ ರೈಡ್‌ಗಳನ್ನು ಮಾಡುತ್ತಿದ್ದಾರೆಯೇ ಅಥವಾ ಅಂತಹವರ ವಿರುದ್ಧ ಯಾವುದಾದರೂ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆಯೇ ಅಥವಾ ಅಲ್ಲಿ ಏನು ನಡೆಯುತ್ತಿದೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಬೇಕು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಮಾನ್ಯ ಸದಸ್ಯರ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ತಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಮುನಿರಾಜುಗೌಡ ಪಿ.ಎಂ.:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಇನ್ನು ಮುಗಿದಿರುವುದಿಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ, ಇಬ್ಬರು ಸದಸ್ಯರು ಪ್ರಶ್ನೆ ಕೇಳಿರುವುದರಿಂದ, ಕೆಲವು ಸಮಸ್ಯೆಗಳ ಬಗ್ಗೆ ನಾನು ಸಹ ಹೇಳುತ್ತೇನೆ. ಅದಕ್ಕೆ ಮಾನ್ಯ ಸಚಿವರು ಒಟ್ಟಿಗೆ ಉತ್ತರ ಕೊಡಲಿ.

**ಸಭಾಪತಿಯವರು:–** ಆಯಿತು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಶ್ರೀ ಮುನಿರಾಜುಗೌಡ ಪಿ.ಎಂ.:–** ಮಾನ್ಯ ಸಭಾಪತಿಯವರೇ, ನಾನು ಇನ್ನೊಂದು ಪ್ರಶ್ನೆ ಕೇಳುವುದಿದೆ. ನಾನು ಐದನೆ ಪ್ರಶ್ನೆ ಕೇಳಿದ್ದೆನು.

**ಸಭಾಪತಿಯವರು:–** ನಾನು ಅದಕ್ಕಾಗಿಯೇ ಮೊದಲು ಮಾನ್ಯ ಮುನಿರಾಜುಗೌಡರವರು ಪ್ರಶ್ನೆ ಕೇಳಲಿ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ, ತಾವು(ಮಾನ್ಯ ಪ್ರಕಾಶ್ ಕೆ.

ರಾಥೋಡ್‌ರವರು) ಏನಾದರೂ ಉಪಪ್ರಶ್ನೆ ಕೇಳುವುದಿದ್ದರೆ ಅದನ್ನು ಕೇಳಬಹುದು. ಅದಕ್ಕೆ, ತಮಗೆ ಅವಕಾಶ ಕೊಡುತ್ತೇನೆ ಎಂದು ಹೇಳಿರುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾವಿಬ್ಬರೂ ಒಂದೇ ಬಾರಿಗೆ ನಮ್ಮ ಪ್ರಶ್ನೆಯನ್ನು ಕೇಳಿ ಮುಗಿಸುತ್ತೇವೆ. ಇದು ಬಹಳ ಮಹತ್ವದ ವಿಷಯವಾಗಿರುತ್ತದೆ.

**ಶ್ರೀ ಮುನಿರಾಜುಗೌಡ ಪಿ.ಎಂ.:–** ಮಾನ್ಯ ಸಭಾಪತಿಯವರೇ, ಆ ನಂತರ ಸಮಯದ ಅಭಾವ ಇದೆಯೆಂದು ನಮಗೆ ತಾವು ಅವಕಾಶ ನೀಡುವುದಿಲ್ಲ.

**ಸಭಾಪತಿಯವರು:–** ಆಯಿತು, ಈಗ ಯಾರಾದರೂ ಒಬ್ಬರು ತಮ್ಮ ಪ್ರಶ್ನೆಯನ್ನು ಮುಂದುವರೆಸಿ.

**ಶ್ರೀ ಮುನಿರಾಜುಗೌಡ ಪಿ.ಎಂ.:–** ಮಾನ್ಯ ಸಭಾಪತಿಯವರೇ, ನಾನು ನನ್ನ ಐದನೆ ಪ್ರಶ್ನೆಯಲ್ಲಿ ಹಾಲು, ಮೊಸರು, ಮಜ್ಜಿಗೆ, ಅಡುಗೆ ಎಣ್ಣೆ, ಶಾಂಪು ಬಾಟಲ್ ಮುಂತಾದ ಪ್ಲಾಸ್ಟಿಕ್ ಬಾಟಲ್‌ಗಳ ಮೇಲೆ ಕನಿಷ್ಠ ರೂ.5 ರಿಂದ 10 ರಷ್ಟು ಹೆಚ್ಚು ಹಣವನ್ನು ತೆಗೆದುಕೊಂಡು ಉಪಯೋಗಿಸಿದ ಪ್ಯಾಕೆಟ್ ಅಥವಾ ಬಾಟಲ್ ಅನ್ನು ಅಂಗಡಿಗಳಿಗೆ ವಾಪಸ್ಸು ಕೊಡುವ ಮುಖಾಂತರವಾಗಿ ಅದನ್ನು ವಾಪಸ್ಸು ಪಡೆಯುವಂತಹ ಪರಿಣಾಮಕಾರಿಯಾದ ನಿಯಮವನ್ನು ಜಾರಿಗೆ ತರುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ ಎಂದು ಕೇಳಿದ್ದೆನು. ಅದಕ್ಕೆ, "ಆ ರೀತಿಯ ಪ್ರಸ್ತಾವ ಸರ್ಕಾರದ ಮುಂದೆ ಇರುವುದಿಲ್ಲ" ಎಂದು ಉತ್ತರ ನೀಡಿರುತ್ತಾರೆ.

ಇವೊತ್ತಿನ ದಿವಸ ಬೆಂಗಳೂರು–ತುಮಕೂರು ರಸ್ತೆಯಲ್ಲಿರುವ "ಹಿಮಾಲಯ ಡ್ರಗ್ ಕಂಪನಿ"ಯಲ್ಲಿ ಸದರಿ ಕಂಪನಿಗೆ ಸಂಬಂಧಿಸಿದ ಯಾವುದೇ ವಸ್ತುಗಳನ್ನು ತೆಗೆದುಕೊಂಡರೆ, ಅದರಲ್ಲಿ ಮರುಬಳಕೆಯಾಗುವಂತಹ ಪ್ಲಾಸ್ಟಿಕ್ ವಸ್ತುಗಳಿದ್ದರೆ, ಅದಕ್ಕೆ ಶೇಕಡ 5 ರಷ್ಟು ಹಣವನ್ನು ಹಿಂತಿರುಗಿಸುವಂತಹ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿರುತ್ತಾರೆ. ಈ ರೀತಿಯ ಕೆಲಸವನ್ನು ಒಂದು

ಕಂಪನಿಯವರು ಮಾಡುತ್ತಾರೆ ಎನ್ನುವುದಾದರೆ, ಇತರೆ ಕಂಪನಿಗಳಲ್ಲಿ ಇದನ್ನು ಮಾಡಲು ಏಕೆ ಸಾಧ್ಯವಿಲ್ಲ?

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ನನ್ನ ಪ್ರಶ್ನೆಯನ್ನು ಕೇಳಿರುವುದಿಲ್ಲ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ಮೊದಲು ಮಾನ್ಯ ಸಚಿವರು ಇದುವರೆವಿಗೂ ಕೇಳಿದಂತಹ ಪ್ರಶ್ನೆಗಳಿಗೆ ಉತ್ತರ ನೀಡಲಿ. ಇಲ್ಲವಾದರೆ ಅವರಿಗೆ ಉತ್ತರ ಕೊಡುವುದಕ್ಕೆ ಗೊಂದಲವಾಗುತ್ತದೆ. ಆಗ ಅವರು ತಮ್ಮ ಪ್ರಶ್ನೆಯನ್ನು ಹಾಗೂ ಮಾನ್ಯ ಮುನಿರಾಜುಗೌಡರವರ ಪ್ರಶ್ನೆಯನ್ನು ಮರೆತುಬಿಡುತ್ತಾರೆ. ತಾವು ಪ್ರಶ್ನೆ ಕೇಳುವುದಕ್ಕೆ ನಾನು ತಮಗೆ ನಂತರ ಅವಕಾಶ ನೀಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)(ಜೀವಿ ಶಾಸ್ತ್ರ ಮತ್ತು ಪರಿಸರ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, "ವಾರ್ಷಿಕವಾಗಿ ಪ್ಲಾಸ್ಟಿಕ್ ತ್ಯಾಜ್ಯ ಎಷ್ಟು ಉತ್ಪಾದನೆಯಾಗುತ್ತದೆ" ಎಂದು ಮಾನ್ಯ ಸದಸ್ಯರು ಕೇಳಿದ್ದು, ಅದಕ್ಕೆ ನಾವು ಸುಮಾರು ೮೩೦ ಟನ್‌ಗಳು ಎಂದು ಉತ್ತರ ಕೊಟ್ಟಿದ್ದೇವೆ. ಜೊತೆಗೆ, ಆ ತ್ಯಾಜ್ಯವನ್ನು ಯಾವ ರೀತಿ ವಿಲೇವಾರಿ ಮಾಡಿದ್ದೇವೆಂಬ ಬಗ್ಗೆ ಪೂರಕ ಟಿಪ್ಪಣಿಯಲ್ಲಿ ಉತ್ತರ ಒದಗಿಸಲಾಗಿರುತ್ತದೆ. ಇನ್ನು ಉಳಿದಿರುವಂಥದ್ದು, "ಎಷ್ಟು ದಂಡ ವಿಧಿಸಿದ್ದೇವೆ ಮತ್ತು ಎಷ್ಟು ಪ್ರಕರಣಗಳನ್ನು ದಾಖಲು ಮಾಡಿದ್ದೇವೆ" ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದು, ಅದಕ್ಕೆ, "ರೂ.4.೩೩ ಕೋಟಿಗಳಷ್ಟು ದಂಡ ವಸೂಲು ಮಾಡಿದ್ದು, ಪ್ರಕರಣಗಳನ್ನು ದಾಖಲು ಮಾಡಲಾಗಿದೆ" ಎಂದು ಉತ್ತರವನ್ನು ಸಹ ಕೊಡಲಾಗಿದೆ. ಈ ಮಧ್ಯೆ ಮಾನ್ಯ ಸದಸ್ಯರು ಹಲವಾರು ವಿಚಾರಗಳನ್ನು ಉಲ್ಲೇಖ ಮಾಡಿದ್ದಾರೆ. ಜೊತೆಗೆ, "ಪ್ಲಾಸ್ಟಿಕ್ ನಿಷೇದ ಕಾಯಿದೆಯನ್ನು ಯಾವಾಗ ಜಾರಿಗೆ ತರಲಾಯಿತು" ಎಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ, "೨೦16ರಲ್ಲಿ ಕಾಯಿದೆ ಜಾರಿಗೆ ತಂದಿದ್ದೇವೆ" ಎಂದು ಹೇಳಿರುತ್ತೇವೆ. ಅದರ ಜೊತೆಗೆ, ಕೇಂದ್ರ ಸರ್ಕಾರ ಕೂಡ ಅದೇ ಕಾಯಿದೆಯನ್ನು ಇಡೀ ರಾಷ್ಟ್ರಾದ್ಯಂತ ಜಾರಿಗೆ ತರುತ್ತಿದೆ ಎನ್ನುವುದನ್ನು ಉಲ್ಲೇಖ ಮಾಡಲಾಗಿದೆ.

ಅದರಂತೆ, ಸುಮಾರು ೧೦೦ ಮೈಕ್ರಾನ್‌ಗಿಂತ ಕಡಿಮೆ ದಪ್ಪದ ಪ್ಲಾಸ್ಟಿಕ್ ಅಥವಾ ಪಿ.ವಿ.ಸಿ., ಬ್ಯಾನರ್‌ಗಳು ಅಥವಾ ಪ್ಲಾಸ್ಟಿಕ್ ಸ್ಟಿಕ್ಕರ್‌ಗಳ ಬಳಕೆಯನ್ನು ನಿಷೇಧಿಸಿರುವ ವಿಷಯ ಸಹ ಈ ಕಾಯಿದೆಯಲ್ಲಿದೆ ಎನ್ನುವಂತಹ ಅಂಶಗಳನ್ನು ಸಹ ಹೇಳಲಾಗಿರುತ್ತದೆ. ಪ್ಲಾಸ್ಟಿಕ್ ನಿಷೇಧ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದಕ್ಕೆ ಬೇಕಾದಂತಹ ಬೀದಿ ನಾಟಕಗಳನ್ನು ಮತ್ತು ಯಾವ ರೀತಿ ಕಟೌಟ್ ಹಾಕಬೇಕು ಮತ್ತು ಯಾವುದನ್ನು ನಿಷೇಧ ಮಾಡಬೇಕು, ಅದೆಲ್ಲವನ್ನೂ ಉಲ್ಲೇಖ ಮಾಡುವಂತಹ ಮಾಹಿತಿಯನ್ನು ಕೊಡಲಾಗಿರುತ್ತದೆ.

ಆದರೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುವುದೇನೆಂದರೆ, ಹಾಲು, ಮೊಸರು, ಮಜ್ಜಿಗೆ, ಅಡುಗೆ ಎಣ್ಣೆ, ಶಾಂಪು ಖಾಲಿ ಬಾಟಲ್‌ಗಳನ್ನು ಹಿಂದಕ್ಕೆ ಪಡೆದು ಶೇಕಡ ೫ ರಷ್ಟು ಹಣವನ್ನು ಯಾವ ಸಂಸ್ಥೆಯಿಂದ ತೆಗೆದುಕೊಂಡಿದ್ದೇವೆ, ಅವರಿಂದ ವಾಪಸ್ಸು ಪಡೆಯುವಂತಹ ವ್ಯವಸ್ಥೆಗಳನ್ನು ಜಾರಿಗೆ ತಂದರೆ, ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಈ ಸಲಹೆಯನ್ನು ನಾವು ಇದುವರೆವಿಗೆ ಪರಿಗಣಿಸಿರುವುದಿಲ್ಲ. ಆ ಸಲಹೆಯನ್ನು ಏನು ಮಾಡಬೇಕೆಂಬ ಬಗ್ಗೆ ನಾವು ಆಲೋಚನೆ ಮಾಡುತ್ತೇವೆ ಎನ್ನುವ ಮಾಹಿತಿಯನ್ನು ನೀಡುತ್ತೇನೆ.

**ಶ್ರೀ ಮುನಿರಾಜುಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಪ್ಲಾಸ್ಟಿಕ್ ನಿಷೇಧಕ್ಕೆ ಸಂಬಂಧಿಸಿದಂತೆ, ಸರ್ಕಾರದಿಂದ ಕೇವಲ ಅಂಗಡಿಗಳ ಮೇಲೆ ಮಾತ್ರ ರೈಡ್ ಮಾಡಿರುತ್ತಾರೆ. ಆದರೆ, ಎಲ್ಲಿ ಉತ್ಪಾದಕ ಘಟಕಗಳು ಇರುತ್ತವೆ, ಅಲ್ಲಿ ರೈಡ್ ಮಾಡಿದರೆ ಅದನ್ನು ನಿಲ್ಲಿಸುವಂತಹ ಕೆಲಸ ಆಗುತ್ತದೆ. ಜೊತೆಗೆ, ಯಾರಿಗೆ ಮೊದಲನೆ, ಎರಡನೆ, ಮತ್ತು ಮೂರನೆ ಬಾರಿಗೆ ಫೈನ್ ಹಾಕಿದ್ದಾರೆ,...

**ಸಭಾಪತಿಯವರು:-** ಮಾನ್ಯ ಸಚಿವರೇ, ಪ್ಲಾಸ್ಟಿಕ್ ಉತ್ಪಾದನೆ ಮಾಡುವಂತಹ ಕಂಪನಿಗಳ ಮೇಲೆ ರೈಡ್ ಮಾಡಬೇಕು ಬದಲಾಗಿ, retail ವ್ಯಾಪಾರ ಮಾಡುವಂತಹ ಅಂಗಡಿ-ಮುಂಗಟ್ಟುಗಳ ಮೇಲೆ ರೈಡ್ ಮಾಡಬಾರದೆಂದು ಅವರು ಹೇಳುತ್ತಿದ್ದಾರೆ. ಅದು ಸರಿಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಪ್ಲಾಸ್ಟಿಕ್ ಉತ್ಪಾದನೆ ಮಾಡುವುದಾಗಲಿ ಅಥವಾ ನಿಷೇಧದ ಪ್ಲಾಸ್ಟಿಕ್ ಅನ್ನು ಮಾರಾಟ ಮಾಡುವಂತಹದ್ದಕ್ಕೆ ಮೊದಲ ಬಾರಿಗೆ ರೂ.5 ಸಾವಿರ; ಎರಡನೆ ಬಾರಿಗೆ ರೂ.10 ಸಾವಿರ ಮತ್ತು ಮೂರನೆ ಬಾರಿಗೆ ರೂ.20 ಸಾವಿರ ರೂಪಾಯಿ ದಂಡವನ್ನು ಹಾಕಿರುತ್ತೇವೆ. ಇದರ ಜೊತೆಗೆ, ಉತ್ಪಾದನೆಯಾಗಿರುವಂತಹ ಪ್ಲಾಸ್ಟಿಕ್ ತ್ಯಾಜ್ಯಗಳ ಮಾಹಿತಿಯನ್ನು ಮತ್ತು ದಂಡ ವಸೂಲು ಮಾಡಿರುವ ಮಾಹಿತಿಗಳನ್ನು ಸಹ ಕೊಟ್ಟಿರುತ್ತೇವೆ.

**ಶ್ರೀ ಮುನಿರಾಜುಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ಆದರೆ, ನಾಲ್ಕನೇ ಬಾರಿಗೆ ರೈಡ್ ಮಾಡಿದಂತಹ ಸಂದರ್ಭದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತಾರೆ? ಎರಡನೆ ಬಾರಿಗೆ ರೈಡ್ ಮಾಡಿದಾಗ ಉತ್ಪಾದನೆ ಮಾಡುವಂತಹ ಕಂಪನಿಗಳನ್ನು ದಯಮಾಡಿ, ಮುಚ್ಚಿಸುವಂತಹ ಕೆಲಸ ಮಾಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ತಮ್ಮ ಪ್ರಶ್ನೆಯನ್ನು ಕೇಳಲಿ. ನಾನು ಇಬ್ಬರಿಗೂ ಒಟ್ಟಿಗೆ ಉತ್ತರ ನೀಡುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಮ್ಮ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 737 + 606 ಗೆ ಸರ್ಕಾರ ಉತ್ತರ ಕೊಟ್ಟಿರುವುದರಲ್ಲಿ, ಮೊದಲು ಏನು ಹೇಳುತ್ತಾರೆಂದರೆ, "ರಾಜ್ಯದಲ್ಲಿ ವಾರ್ಷಿಕವಾಗಿ ಉತ್ಪಾದನೆಯಾಗುವ ಪ್ಲಾಸ್ಟಿಕ್ ತ್ಯಾಜ್ಯ ಪ್ರಮಾಣ ಎಷ್ಟು ಎಂದಾಗ, ಪ್ರತಿ ದಿನ ಸುಮಾರು 830 ಟನ್" ಎಂದು ಹೇಳುತ್ತಾರೆ. ಆದರೆ, ನನ್ನ ಹತ್ತಿರ ಮಾಹಿತಿ ಇದೆ. ಅದರ ಪ್ರಕಾರ, ರಾಜ್ಯದಲ್ಲಿ ವಾಸ್ತವ ಸ್ಥಿತಿ ಏನು ಇದೆಯೆಂದರೆ, ಪ್ರತಿದಿನ ಸುಮಾರು 3 ಲಕ್ಷ ಟನ್ ಪ್ಲಾಸ್ಟಿಕ್ ಉಪಯೋಗ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಈ ವಿಷಯದಲ್ಲಿ ಸರ್ಕಾರದ ಬಳಿ ಇರುವ ಮಾಹಿತಿಯನ್ನು ಅವರು ಕೊಟ್ಟಿರುತ್ತಾರೆ. ಆದರೆ, ಈ ಬಗ್ಗೆ ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಪ್ರತಿದಿನ ಸುಮಾರು 3 ಲಕ್ಷ ಟನ್ ಪ್ಲಾಸ್ಟಿಕ್ ಬಳಕೆಯಾಗುತ್ತಿದೆ. ಈ ಬಗ್ಗೆ ಇದುವರೆವಿಗೂ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎಂಬ ಪ್ರಶ್ನೆಗೆ, "ಈ ಕಾಯಿದೆ ದಿನಾಂಕ:12.08.2021ರಂದು ಜಾರಿಗೆ

ಬಂದಿರುತ್ತದೆ" ಎಂದು ಉತ್ತರ ನೀಡಿರುತ್ತಾರೆ. ಪ್ಲಾಸ್ಟಿಕ್ ಬಳಕೆಯ ನಿಷೇಧ ಮಾಡುವ ಉದ್ದೇಶ ಏನಿದೆ, ಇದರಿಂದ ಆರೋಗ್ಯಕ್ಕೆ ಎಷ್ಟು ಹಾನಿಕಾರಕವಾಗಿದೆ...

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಏತಕ್ಕೆ ಪ್ಲಾಸ್ಟಿಕ್ ನಿಷೇಧ ಮಾಡಿದ್ದಾರೆ ಮತ್ತು ಇದಕ್ಕಾಗಿ ಕಟ್ಟುನಿಟ್ಟಿನ ಕಾಯಿದೆ ಜಾರಿಗೆ ತಂದಿದ್ದಾರೆ ಮತ್ತು ಪ್ಲಾಸ್ಟಿಕ್ ಬಳಕೆಯಿಂದ ಆರೋಗ್ಯಕ್ಕೆ ಆಗುವಂತಹ ಪರಿಣಾಮಗಳು ಅಂದರೆ, ಅದು ಕ್ಯಾನ್ಸರ್ ಆಗಬಹುದು, ಕಣ್ಣಿನ ರೋಗ ಆಗಬಹುದು. ಈ ರೀತಿ ಹಲವಾರು ಸಮಸ್ಯೆಗಳು ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ.

**ಸಭಾಪತಿಯವರು:–** ತಮ್ಮ ಪ್ರಶ್ನೆ ಏನು?

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಸರ್ಕಾರ ಇನ್ನೂ ಜಾಗ್ರತೆ ವಹಿಸುವಂತಹ ಕ್ರಮಗಳನ್ನು ಕಡಿಮೆ ಮಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಈ ವಿಷಯದಲ್ಲಿ ಸರ್ಕಾರ ಜಾಗ್ರತೆ ವಹಿಸುವಂತಹ ಕ್ರಮಗಳೇನು ಎಂದು ಕೇಳುತ್ತಿದ್ದಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ಸದನದಲ್ಲಿಯೂ ಸಹ ಪ್ಲಾಸ್ಟಿಕ್ ಬಾಟಲ್ ಇರುವ ಸ್ಯಾನಿಟೈಸರ್ ಕೊಡುತ್ತಿದ್ದೀರಿ. ನಾವು ಉಪಯೋಗ ಮಾಡುತ್ತಿರುವಂತಹ ಪೆನ್‌ಗಳು, ಇವೆಲ್ಲವೂ ಸಹ ಪ್ಲಾಸ್ಟಿಕ್ ವಸ್ತುಗಳಾಗಿವೆ. ಇವುಗಳಿಗೆ ಯಾವ ಪರ್ಯಾಯ ವ್ಯವಸ್ಥೆ ಮಾಡಲಾಗುತ್ತಿದೆ? ಈ ಸದನದಲ್ಲಿಯೇ ಈ ರೀತಿ...

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಉತ್ತರ ನೀಡಿ.

**ಡಾ: ತೇಜಸ್ವಿನಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ,...

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ನನ್ನ ಪ್ರಶ್ನೆಯನ್ನು ಮುಗಿಸಿರುವುದಿಲ್ಲ. ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ತೇಜಸ್ವಿನಿಗೌಡ ರವರೇ, ಈ ಪ್ರಶ್ನೆಗೆ ಸಂಬಂಧಿಸಿದಂತೆ ಈಗಾಗಲೇ ಇಬ್ಬರು ಸದಸ್ಯರು ಮಾತನಾಡುತ್ತಿದ್ದಾರೆ. ಮೂರನೆಯವರು ಮಾತನಾಡುವುದಕ್ಕೆ ಅವಕಾಶವಿರುವುದಿಲ್ಲ. ಹಾಗಾಗಿ, ತಾವು ದಯಮಾಡಿ ಕುಳಿತುಕೊಳ್ಳಿ. ಈಗ ಮಾನ್ಯ ಸಚಿವರು ಉತ್ತರ ನೀಡಲಿ.

**ಡಾ: ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳು ಅಂದರೆ, ಒಂದೇ ಬಾರಿ ಉಪಯೋಗ ಮಾಡಿ ಬಿಸಾಡುವಂತಹ ವಸ್ತುಗಳನ್ನು ನಿಷೇಧ ಮಾಡಲಾಗಿರುತ್ತದೆ. ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದೆಂದು ಹೇಳುತ್ತಿದ್ದೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಇನ್ನು ಪ್ರಶ್ನೆ ಕೇಳುವುದಿದೆ.

**ಸಭಾಪತಿಯವರು:–** ತಾವು ಇನ್ನು ಬಹಳಷ್ಟು ಪ್ರಶ್ನೆ ಕೇಳುವುದು ಇರುತ್ತದೆ. ಆದರೆ, ಇದು ಪ್ರಶ್ನೋತ್ತರ ವೇಳೆ. ಹಾಗಾಗಿ, ದಯಮಾಡಿ ಕುಳಿತುಕೊಳ್ಳಿ. ಈಗ ಮಾನ್ಯ ಸಚಿವರು ಉತ್ತರ ನೀಡಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಹೌದು. ನಾನು ಇನ್ನು ಒಂದು ಪ್ರಶ್ನೆಯನ್ನು ಸಹ ಕೇಳಿರುವುದಿಲ್ಲ.

**ಸಭಾಪತಿಯವರು:–** ಇಲ್ಲ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುನಿರಾಜು ಗೌಡರವರು ಕೇಳಿದಂತಹ ಪ್ರಶ್ನೆಗೆ ನಾನು ಸಾಕಷ್ಟು ಉತ್ತರ ನೀಡಿರುತ್ತೇನೆ. ಆದರೆ, ಮಾನ್ಯ ಪ್ರಕಾಶ್ ಕೆ.

ರಾಥೋಡ್‌ರವರು ಪ್ರಶ್ನೆ ಕೇಳುವಾಗ, "ಪ್ರತಿ ದಿನ ಸುಮಾರು ೮೩೦ ಟನ್ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆಯಾಗುತ್ತದೆ ಎಂದು ಹೇಳುತ್ತೀರಿ. ಆದರೆ, ಪ್ರತಿದಿನ ರಾಜ್ಯದಲ್ಲಿ ಸುಮಾರು ೩ ಲಕ್ಷ ಟನ್ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ" ಎಂದು ಹೇಳಿರುತ್ತಾರೆ. ನಾವು ನಮ್ಮ ಇಲಾಖೆಯಿಂದ ತರಿಸಿದಂತಹ ಅಂಕಿ-ಸಂಖ್ಯೆಗಳ ಮಾಹಿತಿ ಆಧಾರದಲ್ಲಿ ಉತ್ತರ ನೀಡಿರುತ್ತೇವೆ. ಆದರೆ, ಮಾನ್ಯ ಸದಸ್ಯರು ೩ ಲಕ್ಷ ಟನ್ ಪ್ಲಾಸ್ಟಿಕ್ ತ್ಯಾಜ್ಯ ಎಂದು ಹೇಳಿರುವುದನ್ನು ಊಹಿಸಲಿಕ್ಕೆ ಸಹ ಸಾಧ್ಯವಿಲ್ಲದಿರುವಷ್ಟು ದೊಡ್ಡ ಪ್ರಮಾಣದ ತ್ಯಾಜ್ಯ ಆಗಿರುತ್ತದೆ. ಹಾಗಾಗಿ, ಅದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಮಾನ್ಯ ಮುನಿರಾಜುಗೌಡರವರು, "ಪ್ಲಾಸ್ಟಿಕ್ ಉತ್ಪಾದನೆ ಮಾಡುವವರಿಗೆ ಮತ್ತು ಮಾರಾಟ ಮಾಡುವವರಿಗೆ ಒಂದು, ಎರಡು ಮತ್ತು ಮೂರನೆ ಬಾರಿಗೆ ತಾವು ರೂ.5, 10 ಮತ್ತು 20 ಸಾವಿರಗಳ ದಂಡ ವಸೂಲು ಮಾಡುತ್ತೀರೆಂದು ಹೇಳಿರುತ್ತೀರಿ. ನಾಲ್ಕನೆ ಬಾರಿಗೆ ದಂಡ ಹಾಕುವ ಬದಲಾಗಿ ಅಂತಹ ಅಂಗಡಿ ಅಥವಾ ಸಂಸ್ಥೆಗಳನ್ನು ಮುಚ್ಚುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು" ಎಂದು ಹೇಳಿರುತ್ತಾರೆ. ಈ ಎರಡೂ ಸಲಹೆಗಳನ್ನು ನಾವು ಪರಿಶೀಲನೆ ಮಾಡುತ್ತೇವೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀಮತಿ ಭಾರತಿ ಶೆಟ್ಟಿಯವರದ್ದು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಇದುವರೆವಿಗೂ ಒಂದು ಉಪ ಪ್ರಶ್ನೆಯನ್ನು ಸಹ ಕೇಳಿರುವುದಿಲ್ಲ.

**ಸಭಾಪತಿಯವರು:-** ತಮ್ಮ ಒಂದು ಪ್ರಶ್ನೆಗೆ ಸುಮಾರು 20 ನಿಮಿಷ ಸಮಯ ಆಗಿರುತ್ತದೆ. ಇನ್ನು ಎಷ್ಟು ಸಮಯ ಬೇಕು?

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಒಂದು ಉಪ ಪ್ರಶ್ನೆಯನ್ನು ಸಹ ಕೇಳಿರುವುದಿಲ್ಲ.

**ಸಭಾಪತಿಯವರು:–** ತಾವು ಸಾರಾಂಶ ಹೇಳಿರುತ್ತೀರಿ. ಮಾನ್ಯ ಸಚಿವರು ಸಹ ಸಾರಾಂಶ ಹೇಳಿರುತ್ತಾರೆ. ತಾವು ನೇರವಾಗಿ ಪ್ರಶ್ನೆ ಕೇಳಿದ್ದರೆ, ಮಾನ್ಯ ಸಚಿವರು ಸಹ ನೇರವಾಗಿ ಉತ್ತರ ನೀಡುತ್ತಿದ್ದರು. ಆಯಿತು, ಈಗಲಾದರೂ ತಾವು ತಮ್ಮ ಪ್ರಶ್ನೆಯನ್ನು ನೇರವಾಗಿ ಕೇಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮೊಟ್ಟಮೊದಲನೆಯದಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗಿದ್ದು ಒಂದು ನಮ್ಮ ಸದನದಲ್ಲಿ...

**ಸಭಾಪತಿಯವರು:–** ತಮ್ಮ ಪ್ರಶ್ನೆ ಏನು?

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೆಂದರೆ, ಪ್ಲಾಸ್ಟಿಕ್ ನಿಷೇಧವನ್ನು ಈ ಸದನದಿಂದ ಶುರು ಮಾಡಬೇಕು ಮತ್ತು ಸರ್ಕಾರ ಪ್ಲಾಸ್ಟಿಕ್ ನಿಷೇಧ ಮಾಡಿರುವುದನ್ನು ಪ್ರತಿ ಮನೆಯಿಂದ ಪ್ರಾರಂಭ ಮಾಡಬೇಕು. ಪ್ರತಿ ಮನೆಯ ಅಡುಗೆ ಮನೆಯಿಂದ ಈ ಕೆಲಸ ಪ್ರಾರಂಭ ಮಾಡಿದರೆ ಮಾತ್ರ ಇದು ಒಂದು ಹಂತಕ್ಕೆ ಬರುತ್ತದೆ. ಜೊತೆಗೆ, ಪ್ಲಾಸ್ಟಿಕ್ ಬಳಕೆಯಿಂದ ಹಾನಿಗೊಳಗಾದವರಿಗೆ ಸರ್ಕಾರ ಯಾವುದಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ? ಅದಕ್ಕೆ ಏನಾದರೂ ಮಾರ್ಗಸೂಚಿಗಳು ಇವೆಯೇ? ಈ ಬಗ್ಗೆ ಸರ್ಕಾರ ಉತ್ತರ ನೀಡಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ಮತ್ತು ಮಾನ್ಯ ಮುನಿರಾಜುಗೌಡರವರು ಸೇರಿದಂತೆ, ಈ ಸದನದಲ್ಲಿರುವ ಒಟ್ಟು ಚರ್ಚೆ ಏನೆಂದರೆ, ಪ್ಲಾಸ್ಟಿಕ್ ಬಳಕೆಯ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎನ್ನುವಂಥದ್ದು. ಪ್ರಸ್ತುತ ಇರುವಂತಹ ನಿಯಮಗಳ ವ್ಯಾಪ್ತಿಯೊಳಗೆ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಆದೇಶ ಕೊಟ್ಟು ಪ್ಲಾಸ್ಟಿಕ್ ನಿಷೇಧದ ಬಗ್ಗೆ ಮತ್ತು ಮಾರಾಟ ಮಾಡುವುದನ್ನು ಕಡಿಮೆ ಮಾಡುವ ಬಗ್ಗೆ ನಾವು ಸರಿಯಾದಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಮತ್ತು ಬಿಗಿಯಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. **(ಮುಂದು...)**

**(895) 19.09.2022 11.40 ವೈಎಲ್-ಎಂಡಿ**

**ಪ್ರಶ್ನೆ ಸಂಖ್ಯೆ 757**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವಂಥ ಉತ್ತರವನ್ನು ಓದಿದಾಗ ಉದ್ಭವಿಸುವಂತಹ ಪ್ರಮುಖ ಅಂಶವೇನೆಂದರೆ, ನಾನು ಮಾನ್ಯ ಸಚಿವರಿಗೆ ಸಾಲಗಳ ವಿವರದ ಕುರಿತು ಮಾಹಿತಿಯನ್ನು ಕೇಳಿದ್ದು, ಅವರು ನೀಡಿರುವಂಥ ಉತ್ತರದಲ್ಲಿ ಸಾಲದ ಮೊತ್ತವನ್ನು ಓದಿದಾಗ ಬಹಳ ಆಶ್ಚರ್ಯವಾಗಿತ್ತು. ಮೊದಲನೆಯದಾಗಿ, ಸಾಲದ ಪ್ರಮಾಣ ಯಾವ ವರ್ಷಕ್ಕೆ ಕೊನೆಗೊಳ್ಳಬಹುದೆಂದು ಕೇಳಿರುವಂಥ ಪ್ರಶ್ನೆಗೆ "ಸುಮಾರು 2037, 2040ನೇ ಸಾಲಿಗೆ ಕೊನೆಗೊಳ್ಳಬಹುದು" ಎನ್ನುವಂಥ ಉಲ್ಲೇಖವನ್ನು ನೀಡಿದ್ದಾರೆ. ಹಾಗೆಯೇ "ಶೇಕಡಾ 60 ರಷ್ಟು ವಿದ್ಯುತ್ ನೀರಾವರಿ ಪಂಪ್ ಸೆಟ್‌ಗಳಿಗೆ ನೀಡಲಾಗಿದೆ" ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆ ಉತ್ತರವನ್ನು ನೋಡಿದಾಗ ಇಲಾಖೆಯ ಕ್ಷಮತೆಯ ಮಟ್ಟ ಯಾವ ರೀತಿ ಇದೆ ಎಂಬುದನ್ನು ತೋರಿಸುತ್ತದೆ. ಶೇಕಡಾ 60 ರಷ್ಟು ವಿದ್ಯುತ್ ಅನ್ನು ನೀರಾವರಿ ಪಂಪಸೆಟ್‌ಗಳಿಗೆ ಯಾವ ಆಧಾರದ ಮೇಲೆ ಮಾಡಲಾಗಿದೆ? ಅದರ ತಾಂತ್ರಿಕ ವಿವರಣೆಯನ್ನು ನೀಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಎರಡನೆಯದಾಗಿ, ಇಂಟರ್‌ನೇಟ್ ಕೇಬಲ್ ಮತ್ತು ವಿದ್ಯುತ್‌ಗೂ ಏನು ಸಂಬಂಧ? ಬೆಸ್ಕಾಂ ಕೆಲಸವೇನೆಂದರೆ, ಮನೆಗಳಿಗೆ ವಿದ್ಯುತ್ ಪೂರೈಕೆ ಮಾಡುವುದು. ಆದರೆ, ಸರ್ಕಾರದವರು underground ನಲ್ಲಿ internet cable ಅಳವಡಿಸಿದ್ದು, ಅದು ಯಾವ ಅವಧಿಯಲ್ಲಿ ಆಗಿರುವಂಥದ್ದು ಹಾಗೂ ಅದಕ್ಕೆ ತಗಲುವ ಒಟ್ಟು ವೆಚ್ಚ ಎಷ್ಟು? ಹಾಗೂ ಇಂತಹ ತಾಂತ್ರಿಕ ನೀತಿಯ ಲೋಪಕ್ಕೆ ಕಾರಣಗಳೇನು? ಹಾಗೆಯೇ PPA (Power Purchase Agreement) ದೀರ್ಘಾವಧಿ ಒಪ್ಪಂದದಿಂದ ವಿವಿಧ ಎಸ್ಕಾಂಗಳ ಮೇಲೆ ಬೀರುವಂಥ ಪರಿಣಾಮವನ್ನು ಹೇಗೆ ಸರಿಪಡಿಸಲಾಗುತ್ತದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ವಿ.ಸುನೀಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯಿಂದ ಕೆ.ಪಿ.ಟಿ.ಸಿ.ಎಲ್. ಮತ್ತು ಎಸ್ಕಾಂ ಕಂಪನಿಗಳು ಪ್ರಾರಂಭವಾದ ನಂತರ ಒಟ್ಟು ರಾಜ್ಯದ ವಿದ್ಯುತ್ ಅಭಿವೃದ್ಧಿ ಚಟುವಟಿಕೆಗಳು ನಡೆಯಬೇಕೆನ್ನುವ ಕಾರಣದಿಂದಾಗಿ ಆರಂಭದಿಂದ ಸಾಲವನ್ನು ಮಾಡಲಾಗುತ್ತಿದ್ದು, ಅಭಿವೃದ್ಧಿ ಚಟುವಟಿಕೆಗಳನ್ನು ಒಟ್ಟಿಗೆ ಮುಂದುವರೆಸುವಂಥ ಪ್ರಯತ್ನ ನಿರಂತರವಾಗಿ ಮಾಡಲಾಗುತ್ತಿದೆ. ಹಾಗಾಗಿ ಇದರಲ್ಲಿ ಈ ವರ್ಷ ಸಾಲ ಮಾಡಲಾಗಿದೆ, ಕಳೆದ ವರ್ಷ ಸಾಲ ಮಾಡಲಾಗಿದೆ ಎನ್ನುವಂಥ ಪ್ರಶ್ನೆ ಉದ್ಭವಿಸುವುದಿಲ್ಲ. ಆರಂಭದಿಂದ ಸಹ ಈ ಸಾಲದ ಪಟ್ಟಿಯನ್ನು ಮಾಡಲಾಗುತ್ತಿದ್ದು, ಕರ್ನಾಟಕದಲ್ಲಿ ವಿದ್ಯುತ್ ಅನ್ನು ಸುಧಾರಿಸುವಂಥ ಪ್ರಯತ್ನ ಕಾಲಕಾಲಕ್ಕೂ ಬೇರೆ ಬೇರೆ ಹಂತಗಳಲ್ಲಿ ಮಾಡಿಕೊಂಡು ಬಂದಿರುವಂಥದಾಗಿದೆ. ಮಾನ್ಯ ಸದಸ್ಯರು ಒಟ್ಟು ಎಷ್ಟು ಸಾಲಗಳಿವೆ ಎನ್ನುವುದನ್ನು ಉಲ್ಲೇಖ ಮಾಡಿದ್ದು, KPTCL (Karnataka Power Transmission Corporation Limited) and ESCOM's (Electricity Supply Companies) ಎರಡೂ ಸೇರಿ ಆಗಸ್ಟ್ 2022ರ ಅಂತ್ಯಕ್ಕೆ ರೂ.38,973 ಕೋಟಿಗಳಷ್ಟು ಸಾಲ ಮಾಡಲಾಗಿದೆ. ಯಾವ ಹಂತಗಳಲ್ಲಿ ಸಾಲಗಳನ್ನು ಮಾಡಲಾಗಿದೆ ಮತ್ತು ಯಾವಾಗ ಆ ಸಾಲ ಕೊನೆಗೊಳ್ಳುತ್ತದೆ ಎನ್ನುವುದನ್ನು ನೀಡಿರುವಂಥ ಉತ್ತರದಲ್ಲಿ ಪಟ್ಟಿ ಮಾಡಿ ತಿಳಿಸಲಾಗಿದೆ. ಒಟ್ಟಾರೆಯಾಗಿ ಇಂಧನ ಇಲಾಖೆಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಅಭಿಮಾನ ಪಡುವಂಥ ಸಂಗತಿಯೇನೆಂದರೆ, ಐ.ಪಿ. ಸೆಟ್‌ಗಳಿಗೆ ಉಚಿತವಾಗಿ ಸುಮಾರು 38 ಲಕ್ಷ ರೈತರಿಗೆ 7 ಗಂಟೆಗಳ ಕಾಲ ಇಂಧನ ಒದಗಿಸುತ್ತಿರುವ ಪರಿಣಾಮ ನಮ್ಮ ಬೇಡಿಕೆಗಳೇನಿವೆ, ಆ ಬೇಡಿಕೆಗಳಿಗೆ ತಕ್ಕಂತೆ ವಿದ್ಯುತ್ ಸರಬರಾಜನ್ನು ಐ.ಪಿ. ಸೆಟ್‌ಗೆ ಒದಗಿಸುವಂಥ ಪ್ರಯತ್ನ ಮಾಡಲಾಗುತ್ತಿದೆ. ಸರ್ಕಾರದ ಅಂದಾಜಿನ ಪ್ರಕಾರ ಸುಮಾರು 13 ಸಾವಿರ ಕೋಟಿಗಳನ್ನು ಕೇವಲ ಐ.ಪಿ. ಸೆಟ್‌ಗಾಗಿ ಸಬ್ಸಿಡಿಯನ್ನು ನೀಡಲಾಗುತ್ತಿದೆ ಮತ್ತು ಸುಮಾರು ರೂ.600, ರೂ.700 ಕೋಟಿ ಅನುದಾನವನ್ನು ಭಾಗ್ಯಜ್ಯೋತಿ ಹಾಗೂ ಇನ್ನಿತರೆಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ. ಇಂಧನ ಇಲಾಖೆಯಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ರೈತರಿಗೆ ಸಬ್ಸಿಡಿಯನ್ನು ನೀಡುವುದರ ಮುಖಾಂತರ ಇದರ ಕಾರ್ಯಕ್ಷಮತೆ ಹೆಚ್ಚಿಸುವ ಹಾಗೂ ಪ್ರತಿ ವರ್ಷ ಸುಧಾರಿಸುವಂಥ ಪ್ರಯತ್ನ ನಡೆಯುತ್ತಿದೆ. ತಮಗೂ ಸಹ ತಿಳಿದಿರುವಂತೆ ಐ.ಪಿ. ಸೆಟ್ ಸಂಖ್ಯೆ

ಪ್ರತಿ ವರ್ಷ ಹೆಚ್ಚಾಗುತ್ತಲೇ ಇದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಎರಡು ವರ್ಷಗಳ ಬಳಿಕ ಸುಮಾರು ಆರು ಲಕ್ಷದ ಮೂವತ್ತು ಸಾವಿರಕ್ಕೂ ಅಧಿಕ ರೈತರ ಪಂಪ್ ಸೆಟ್‌ಗಳಿಗೆ ಐ.ಪಿ.ಸೆಟ್ ಅಳವಡಿಸಿ, ಅವರಿಗೂ ಸಹ ವಿದ್ಯುತ್ ಒದಗಿಸುವಂಥ ಪ್ರಯತ್ನ ಮಾಡುತ್ತಿದ್ದೇವೆ. ಆ ಹಿನ್ನಲೆಯಲ್ಲಿ ಶೇಕಡಾ ೬೦ ರಷ್ಟು ವಿದ್ಯುತ್ ನೀರಾವರಿ ಪಂಪ್ ಸೆಟ್‌ಗಳಿಗೆ ಒದಗಿಸಲಾಗುತ್ತಿದೆ ಎನ್ನುವುದನ್ನು ಉಲ್ಲೇಖ ಮಾಡುತ್ತಿದ್ದೇನೆ.

ಮಾನ್ಯ ಸದಸ್ಯರು underground ನಲ್ಲಿ internet cable ಅಳವಡಿಸಿರುವ ಕುರಿತು ಕೇಳಿರುವಂಥ ಉಪ ಪ್ರಶ್ನೆಗೆ ಸಂಬಂಧಿಸಿದಂತೆ, ಬೆಂಗಳೂರು ಮಹಾನಗರದಲ್ಲಿ ವಿದ್ಯುತ್ ಅವಘಡಗಳು ಮತ್ತು ಎಲ್.ಎನ್.ಟಿ. ನಷ್ಟ ಕಡಿಮೆ ಮಾಡಬೇಕೆನ್ನುವ ಹಿನ್ನೆಲೆಯಲ್ಲಿ ಅಂದಿನ ಸರ್ಕಾರ ಯು.ಜಿ. ಕೇಬಲ್ ಅಳವಡಿಸುವಂಥ ಕಾರ್ಯ ಮಾಡಲು ಸುಮಾರು ರೂ.೫.೦೦ ಸಾವಿರ ಕೋಟಿಗಳನ್ನು ಈ ಯೋಜನೆಗೆ ಸಿದ್ಧಪಡಿಸಿಕೊಂಡು ಮಾಡಿತ್ತು. ಅಂದಿನ ಸರ್ಕಾರವು ಬೋರ್ಡ್‌ನಲ್ಲಿ ತೆಗೆದುಕೊಂಡ ತೀರ್ಮಾನವೇನೆಂದರೆ, ಯು.ಜಿ.ಕೇಬಲ್ ಜೊತೆಗೆ ಇನ್ನೊಂದು ಕೇಬಲ್ ಅಳವಡಿಸುವಂತೆ ಮಾಡಿದರೆ ನಮ್ಮ ಕಂಪನಿಗೆ ಆದಾಯ ಬರುತ್ತದೆ ಎಂಬ ಹಿನ್ನೆಲೆಯಲ್ಲಿ ಅಂದಿನ ಸರ್ಕಾರ ಯೋಚನೆಯನ್ನು ಮಾಡಿದ್ದು, ಇನ್ನು ಕಾಮಗಾರಿ ಪೂರ್ಣಗೊಂಡಿಲ್ಲ. ಆ ಕಾಮಗಾರಿ ಪೂರ್ಣಗೊಂಡ ನಂತರ ಎಷ್ಟು ನಷ್ಟವಾಗಿದೆ ಹಾಗೂ ಅದರಿಂದ ಆದಾಯ ಎಷ್ಟು ಬರುತ್ತಿದೆ ಎನ್ನುವಂಥ ವಿಚಾರ ಗೊತ್ತಾಗುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇಂಟರ್‌ನೇಟ್ ಒದಗಿಸುವಂಥ ಕೆಲಸ ಇಂಧನ ಇಲಾಖೆಗೆ ಸಂಬಂಧಿಸಿರುವುದಿಲ್ಲ. ಇಂಧನ ಇಲಾಖೆಯ ಕೆಲಸ ಕೇವಲ ವಿದ್ಯುತ್ ಪೂರೈಕೆ ಮಾಡುವಂಥದಾಗಿದ್ದು, ಇಂಧನ ಇಲಾಖೆ ವತಿಯಿಂದ ಕೇಬಲ್ ಅಳವಡಿಸುವಂಥ ಕೆಲಸ ಮಾಡಿದರೆ ಹೇಗೆ? ನಾನು ಮಾನ್ಯ ಸಚಿವರ ಕ್ಷಮತೆ ಬಗ್ಗೆ ಮಾತನಾಡುವುದಿಲ್ಲ. ಏಕೆಂದರೆ, ಅವರು ಇಂಧನ ಇಲಾಖೆ ಸಚಿವರಾಗಿ ಬಂದ ಮೇಲೆ ಒಳ್ಳೆಯ ಕೆಲಸವನ್ನು ಮಾಡಿರುವುದು ನಮಗೆ ತಿಳಿದಿದೆ ಹಾಗೂ ಮಾಧ್ಯಮಗಳ ಮೂಲಕ ಜನಜಾಗೃತಿ ಮೂಡಿಸುವಂಥ ಕೆಲಸವನ್ನು ಸಹ ಮಾಡಿದ್ದಾರೆ. ಆದರೆ, ಇವತ್ತಿನ ದಿವಸ auditing ನಲ್ಲಿ ಸಹ ವಿಫಲವಾಗಿದೆ. ಇದರಲ್ಲಿ ಕೆ.ಇ.ಆರ್.ಸಿ.ಎಲ್. ಜವಾಬ್ದಾರಿ ಏನು

ಎಂಬುದು ಗೊತ್ತಾಗುತ್ತಿಲ್ಲ. ಭಾರತ ಸರ್ಕಾರವು ಇದಕ್ಕಾಗಿಯೇ ಸ್ವತಂತ್ರವಾದಂಥ ಅಧಿಕಾರವನ್ನು ನೀಡಿದ್ದು, ಇಲಾಖೆಗೆ ಸಾಲ ಮಾಡುವ ಕ್ಷಮತೆ ಏನಿದೆ ಎಂದು ಹೇಳಬಯಸುತ್ತೇನೆ. ನಮ್ಮ ಹತ್ತಿರ ಎಷ್ಟು ಆಸ್ತಿ ಇದೆ ಎಂಬುದನ್ನು ನೋಡಿಕೊಂಡು ಸಾಲ ಮಾಡಬೇಕು ಅಲ್ಲವೇ? ಸಾಲ ಮಾಡುವಂಥ ಒಂದು ಕ್ಷಮತೆ ಇರಬೇಕಲ್ಲವೇ? ಆ ಕ್ಷಮತೆ ಏನೆಂಬುದನ್ನು ಉಪ ಪ್ರಶ್ನೆಯ ಮೂಲಕ ಕೇಳಬಯಸುತ್ತೇನೆ. ಹಾಗೆಯೇ ನಾನು ವಿನಂತಿ ಮಾಡುವುದೇನೆಂದರೆ, ಒಟ್ಟಾರೆಯಾಗಿ ಇಲಾಖೆಯಲ್ಲಿ ತಾಂತ್ರಿಕ ಮತ್ತು ಆರ್ಥಿಕ ಶಿಸ್ತು ಕುರಿತು ಅಧ್ಯಯನ ಮಾಡಿ, ಸೂಕ್ತ ಶಿಫಾರಸು ಮಾಡಲು ಸ್ವತಂತ್ರ ತಜ್ಞರ ಸಮಿತಿಯನ್ನು ರಚಿಸುವ ಕುರಿತು ಸರ್ಕಾರದಲ್ಲಿ ಏನಾದರೂ ಅಭಿಪ್ರಾಯ ಇದೆಯೇ?

**ಶ್ರೀ ವಿ.ಸುನೀಲ್ ಕುಮಾರ್:-** ಮಾನ್ಯ ಸಭಾಪತಿಯವರೇ,...

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಸಚಿವರೆ ಒಂದು ನಿಮಿಷ. ಮಾನ್ಯ ಕೆ.ಗೋವಿಂದರಾಜುರವರು ಅದರ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲಬಯಸುತ್ತಾರೆ.

**ಡಾ॥ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಬೆಂಗಳೂರಿನಲ್ಲಿ ಮಳೆ ಬಂದಾಗ ಬೆಸ್ಕಾಂ ಕಂಪನಿಯವರು ಏನು ಕೆಲಸ ಮಾಡಿದ್ದಾರೆ ಎಂಬುದರ ಕುರಿತು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ಅಂಡರ್ ಗ್ರೌಂಡ್ ಕೇಬಲ್ ಮಾಡುವಾಗ ಅದರ ವೈಯರ್‌ಗಳನ್ನು ಮೋರಿಗೆ ಬಿಟ್ಟಿದ್ದಾರೆ ವಿನಃ ಭೂಮಿಯ ಒಳಗೆ ಹಾಕುವಂಥ ಕೆಲಸ ಮಾಡಿಲ್ಲ. ಈ ವಿಚಾರವನ್ನು ನಾನು ಕೇವಲ ಒಂದು ರಸ್ತೆಗೆ ಸೀಮಿತವಾಗಿ ಹೇಳುತ್ತಿಲ್ಲ. ಸುಮಾರು 20 ರಸ್ತೆಗಳಲ್ಲಿ ಇದೇ ರೀತಿ ಮಾಡಿದ್ದಾರೆ. ಇದರ ಬಗ್ಗೆ ನಾನು ಈಗಾಗಲೇ ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೂ ತಂದಿದ್ದೇನೆ ಹಾಗೂ ಬಿ.ಬಿ.ಎಂ.ಪಿ. ಆಯುಕ್ತರನ್ನು ಕರೆದುಕೊಂಡು ಹೋಗಿ ತೋರಿಸುವಂಥ ಕೆಲಸ ಮಾಡಿದ್ದೇನೆ. ಅವರು ಸಹ ಕರೆ ಮಾಡಿ ಹೇಳಿದ್ದಾರೆ. ಈ ಸಂಬಂಧ ಇಲಾಖೆ ಮೂಲಕ ಆದೇಶ ಹೊರಡಿಸಿ, ಸರಿಪಡಿಸುವಂಥ ಕೆಲಸ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ವಿ.ಸುನೀಲ್ ಕುಮಾರ್:–** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಯು.ಜಿ. ಕೇಬಲ್ ಅಳವಡಿಕೆಯನ್ನು ತೆಗೆದುಕೊಂಡಿರುವಂಥ ತೀರ್ಮಾನವಾಗಿದೆ.

**ಡಾ॥ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ನಾನು ಸರ್ಕಾರ ತೆಗೆದುಕೊಂಡಿರುವ ತೀರ್ಮಾನದ ಬಗ್ಗೆ ಹೇಳುತ್ತಿಲ್ಲ. ಈಗ ಆಗಿರುವಂಥ ಕೆಲಸದ ಬಗ್ಗೆ ಹೇಳಿದ್ದು.

**ಶ್ರೀ ವಿ.ಸುನೀಲ್ ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಮಾತು ತಪ್ಪು ಎಂದು ನಾನು ಹೇಳುತ್ತಿಲ್ಲ. ಅವರು ಏತಕ್ಕೆ ಸುಮ್ಮನೆ ಮೈ ಮೇಲೆ ಎಳೆದುಕೊಳ್ಳುತ್ತಿದ್ದಾರೆ? ನಾನು ನನ್ನ ಕಾಲದಲ್ಲಿ ಆ ಕೆಲಸವಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಿದ್ದೇನೆ ಅಷ್ಟೆ. ಕಂಪನಿಗೆ ಆಗುವಂಥ ನಷ್ಟವನ್ನು ಕಡಿಮೆ ಮಾಡಬೇಕೆಂಬ ದೃಷ್ಟಿಯಿಂದ ಯು.ಜಿ. ಕೇಬಲ್ ಅಳವಡಿಕೆ ಕಾರ್ಯ ಆಗಿರುವಂಥದ್ದಾಗಿದೆ. ಕಾಮಗಾರಿ ಪೂರ್ಣಗೊಂಡ ನಂತರ ಎಷ್ಟು ನಷ್ಟವಾಗಿದೆ ಎನ್ನುವುದನ್ನು ಮುಂದಿನ ದಿನಗಳಲ್ಲಿ ಉತ್ತರ ನೀಡಬಯಸುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಯು.ಜಿ.ಕೇಬಲ್ ಅಳವಡಿಕೆ ಸಂದರ್ಭದಲ್ಲಿ ಕೇಬಲ್ ವೈಯರ್‌ಗಳನ್ನು ಭೂಮಿಯ ಒಳಗೆ ಸೇರಿಸದೇ, ಮೋರಿ ಒಳಗೆ ಬಿಟ್ಟಿರುವುದರಿಂದ ತೊಂದರೆಯಾಗಿದೆ ಎನ್ನುವಂಥ ವಿಚಾರವೇನಿದೆ, ಅದಕ್ಕೆ ಸಂಬಂಧಿಸಿದಂತೆ ಖಂಡಿತವಾಗಿ ತಕ್ಷಣ ಅಧಿಕಾರಿಗಳಿಗೆ ತಿಳಿಸಿ ಸರಿಪಡಿಸುವಂಥ ಕೆಲಸ ಮಾಡುತ್ತೇನೆ. ಹಾಗೆಯೇ ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿರವರು ಪಿ.ಪಿ.ಎ. ಗೆ ಸಂಬಂಧಿಸಿದಂತೆ ಉಲ್ಲೇಖ ಮಾಡಿದ್ದು, ಪಿ.ಪಿ.ಎ. ಸೇರಿದಂತೆ ಇಲ್ಲಿಯವರೆಗೂ ವಿದ್ಯುತ್ ಖರೀದಿಗೆ ಪ್ರತಿ ವರ್ಷ ರೂ.೩೩ ಸಾವಿರ ಕೋಟಿ ವೆಚ್ಚ ಮಾಡುತ್ತಿದ್ದೇವೆ. ಅಂದಿನಿಂದ ಇಂದಿನವರೆಗೂ ಪಿ.ಪಿ.ಎ. ಅನ್ನು ವಿವಿಧ ಹಂತಗಳಲ್ಲಿ ಆಯಾಯ ಕಾಲಾನುಸಾರಕ್ಕೆ ಬಂದಂತಹ ಬೇಡಿಕೆಗೆ ಅನುಗುಣವಾಗಿ ಮಾಡಿಕೊಳ್ಳಲಾಗಿದೆ. ಅಂದಿನ ದಿನಗಳಲ್ಲಿ ಪಿ.ಪಿ.ಎ. ಅಗತ್ಯ ಇತ್ತೇ? ಎಷ್ಟರ ಮಟ್ಟಿಗೆ ಚರ್ಚೆ ಮಾಡಬೇಕೆನ್ನುವುದು ಸಾರ್ವಜನಿಕರಿಗೆ ಸಂಬಂಧಿಸಿದ್ದಾಗಿದೆ. ಏಕೆಂದರೆ, ಕೆಲವು ಕಡೆಗಳಲ್ಲಿ ೮ ರೂಪಾಯಿ, 10 ರೂಪಾಯಿ, 11 ರೂಪಾಯಿ ಇದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ನಷ್ಟವಾಗಿದೆ ಎಂಬುದನ್ನು ಮುಂದೆ ಮತ್ತೇ ಪ್ರಶ್ನೆ

ಬಂದಾಗ ಉತ್ತರ ನೀಡಲು ನಾನು ಸಿದ್ಧನಾಗಿದ್ದೇನೆ. ಆದರೆ, ರಾಜ್ಯ ಸರ್ಕಾರದಿಂದ ಪ್ರತಿ ವರ್ಷ ಒಟ್ಟು ರೂ.೩೩ ಸಾವಿರ ಕೋಟಿಗಳನ್ನು ಖರ್ಚು ಮಾಡಿ, ವಿದ್ಯುತ್ ಖರೀದಿ ಮಾಡಲಾಗುತ್ತಿದೆ. ಉಳಿದಂತೆ ಸಾಲದ ಪ್ರಮಾಣ ಮತ್ತು ಎಷ್ಟು ಸಾಲ ತೆಗೆದುಕೊಳ್ಳಬೇಕೆನ್ನುವುದರ ಕುರಿತು ನಾವು ತೀರ್ಮಾನ ತೆಗೆದುಕೊಳ್ಳುವುದಿಲ್ಲ. ನಾವು ಕೆ.ಇ.ಆರ್.ಸಿ.ಎಲ್. ಮುಂದೆ ಹೋದಂತಹ ಸಂದರ್ಭದಲ್ಲಿ ಅವರು ನಮ್ಮ ಆದಾಯ ಎಷ್ಟಿದೆ, ಎಷ್ಟನ್ನು ಅಭಿವೃದ್ಧಿ ಮಾಡಬೇಕೆನ್ನುವುದನ್ನು ನಿಗದಿ ಮಾಡುತ್ತದೆ. ಅದರ ಆಧಾರದ ಮೇಲೆ ಉಳಿದ ಚಟುವಟಿಕೆಗಳನ್ನು ಮುಂದುವರೆಸಲಾಗುವುದು.

**ಪ್ರಶ್ನೆ ಸಂಖ್ಯೆ ೪೦**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಸದನದಲ್ಲಿ ಗೈರು ಹಾಜರಾಗಿದ್ದರು)**

**ಪ್ರಶ್ನೆ ಸಂಖ್ಯೆ 764**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ:–** ಮಾನ್ಯ ಸಭಾಪತಿಯವರೇ, ಬೆಳಗಾವಿ ಜಿಲ್ಲೆ ಬೆಳಗಾವಿ ತಾಲ್ಲೂಕಿನ ಬೆಳವಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ "ಧಾಮನೆ" ದನಗರವಾಡಿ ಹಾಗೂ ಖಾನಾಪೂರ ತಾಲ್ಲೂಕಿನ ನಾಗರಗಾಳಿ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೊರೆಕೊಪ್ಪ ಮತ್ತು "ನೆರಸ" ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ "ಸಾವಿಚಹಾಳ" ಈ ಮೂರು ವಾಡಾಗಳಿಗೆ ವಿದ್ಯುತ್ ಸಂಪರ್ಕ ಇಲ್ಲದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಸಹ ಇದೇ ಪ್ರಶ್ನೆಯನ್ನು ಕೇಳಿದಾಗ ಅಲ್ಲಿಗೆ ವಿದ್ಯುತ್ ಸರಬರಾಜು ಮಾಡುವಂಥ ಭರವಸೆಯನ್ನು ಮಾನ್ಯ ಸಚಿವರು ನೀಡಿದ್ದರು. ಆದರೆ, ಈಗ ಈ ವಾರ್ಡ್‌ಗಳು ಮೂಲ ಗ್ರಾಮಗಳ ವಿಸ್ತರಿತ ಪ್ರದೇಶವಾಗಿದ್ದು, ಅಲ್ಲಿ ವಾಸಿಸುತ್ತಿರುವ ಕುಟುಂಬಗಳು ಸ್ವಂತ ಮಾಲೀಕತ್ವದ ಜಮೀನಿನಲ್ಲಿರದೆ ಅರಣ್ಯ ಇಲಾಖೆಯ ಪ್ರದೇಶಗಳಲ್ಲಿ ಮತ್ತು ದಟ್ಟವಾದ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿರುವುದರಿಂದ ಕೆ.ಇ.ಆರ್.ಸಿ. ನಿಯಮಾವಳಿಗಳ ಪ್ರಕಾರ ವಿದ್ಯುತ್ ಸಂಪರ್ಕ ಕಲ್ಪಿಸಲು ಅನಾನುಕೂಲವಾಗುತ್ತದೆ ಎನ್ನುವಂಥ ಉತ್ತರವನ್ನು ನೀಡಿದ್ದಾರೆ. ಬೆಳಗಾವಿ ಜಿಲ್ಲೆಯ ಮೂರ್ನಾಲ್ಕು ಗೌಳಿ ಜನಾಂಗದ ವಾಡಾಗಳಲ್ಲಿನ ಜನರ ಕಸುಬು ದನಗಳನ್ನು ಸಾಕುವಂಥದ್ದಾಗಿರುವುದರಿಂದ ಅವರು ಕಾಡಿನ ಅಂಚಿನಲ್ಲಿ ವಾಸಿಸುತ್ತಾರೆ. ಹಾಗಾಗಿ ಅವರ ಮನೆಗಳು ಸಹ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿರುತ್ತವೆ. ಅಷ್ಟೇ ಅಲ್ಲದೇ ನಾನು "ಧಾಮನೆ" ಎನ್ನುವಂಥ ಊರಿಗೆ ಭೇಟಿ ನೀಡಿದ್ದು, ಈಗಾಗಲೇ ಅಲ್ಲಿ ರಸ್ತೆ ಸಹ ನಿರ್ಮಾಣವಾಗಿದೆ. ಅಲ್ಲಿರುವ ಗುಡಿಸಲಿಗೆ ಮನೆ ನಂಬರ್, ರೇಷನ್ ಕಾರ್ಡ್ ಹಾಗೂ ಅರ್ಧ ಕಿಲೋ ಮೀಟರ್ ದೂರದಲ್ಲಿರುವಂಥ ಊರಿನಲ್ಲಿ ವಿದ್ಯುತ್ ಸಂಪರ್ಕ ಸಹ ಇದೆ. ಹಾಗಾಗಿ ಮಾನ್ಯ ಸಚಿವರು ಕಾರಣ ನೀಡುವುದರ ಬದಲು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಈ ಮೂರ್ನಾಲ್ಕು ವಾರ್ಡ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಿಲ್ಲವೆಂದರೆ, ಅಲ್ಲಿನ ಜನರಿಗೆ ಬಹಳ ತೊಂದರೆಯಾಗುತ್ತದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ವಿ.ಸುನೀಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ಸಮುದಾಯವು ಎದುರಿಸುತ್ತಿರುವಂಥ ಸಮಸ್ಯೆ ಕುರಿತು ಸದನದ ಗಮನಕ್ಕೆ ತಂದಿದ್ದಾರೆ. ಅದರಲ್ಲಿ "ಧಾಮನೆ" ಎನ್ನುವಂಥ ಗ್ರಾಮವು ಕರ್ನಾಟಕ ರಾಜ್ಯದ ಗಡಿ ಭಾಗದಲ್ಲಿರುವಂಥ ಪ್ರದೇಶವಾಗಿದೆ.

**(ಮುಂದು)**

**(896) 19.09.2022/11.50/ಎಸ್‌ಕೆ-ಎಂಡಿ**

**ಶ್ರೀ ವಿ. ಸುನೀಲ್ ಕುಮಾರ್ (ಮುಂದು):-**

ಆ ಗ್ರಾಮಕ್ಕೆ ಹೋಗಬೇಕಾದರೆ ಮಹಾರಾಷ್ಟ್ರಕ್ಕೆ ಹೋಗಿ, ಅಲ್ಲಿಂದ ಆ ಪ್ರದೇಶಕ್ಕೆ ಹೋಗಬೇಕಾಗುತ್ತದೆ. ಅಲ್ಲಿ ಇಪ್ಪತ್ತೊಂದು ಮನೆಗಳಿವೆ. ಆ ಇಪ್ಪತ್ತೊಂದು ಮನೆಗಳಿಗೆ ವಿದ್ಯುತ್ ಕಲ್ಪಿಸಿಕೊಡುವುದರ ಬಗ್ಗೆ ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡಿದಾಗ, ಆ ಇಪ್ಪತ್ತೊಂದು ಮನೆಗಳಿಗೆ ಎರಡೂವರೆ ಕಿಲೋ ಮೀಟರ್‌ನವರೆಗೂ ಹೊಸ ಕೇಬಲ್‌ನ್ನು ಎಳೆದು ವಿದ್ಯುತ್ ಸಂಪರ್ಕ ಕಲ್ಪಿಸಿ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಅಧಿಕಾರಿಗಳು ಹೇಳಿದ್ದಾರೆ. ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವುದಕ್ಕೆ ರೂ.40 ಲಕ್ಷಗಳು ವೆಚ್ಚವಾಗಬಹುದು ಎಂದು ಮೇಲ್ನೋಟಕ್ಕೆ ಅಂದಾಜು ವೆಚ್ಚವನ್ನು ಮಾಡಿದ್ದೇವೆ. ಅದಕ್ಕೆ ಬೇಕಾದಂತಹ ಎಲ್ಲಾ ಕ್ರಮಗಳನ್ನು ತಕ್ಷಣ ತೆಗೆದುಕೊಂಡು, ಆ ಗ್ರಾಮಕ್ಕೆ ವಿದ್ಯುತ್ ಸಂಪರ್ಕವನ್ನು ಒದಗಿಸುತ್ತೇವೆ. "ನೆರಸ ಮತ್ತು ಸಾವಿಚಹಾಳ" ಎಂಬ ಎರಡು ಗ್ರಾಮಗಳು ಅರಣ್ಯ ಪ್ರದೇಶದಲ್ಲಿರುವಂತಹ ಗ್ರಾಮಗಳು. ಆ ಗ್ರಾಮಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಲು ಅರಣ್ಯ ಇಲಾಖೆಯವರ ಅನುಮತಿ ಬೇಕು. ಆ ಗ್ರಾಮಗಳಿಗೆ ಏತಕ್ಕಾಗಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡುವುದಕ್ಕಾಗಲಿಲ್ಲವೆಂದರೆ, ಆ ಗ್ರಾಮಗಳು ಅರಣ್ಯ ಪ್ರದೇಶದಲ್ಲಿರುವುದರಿಂದ ವಿದ್ಯುತ್ ಲೈನ್‌ಗಳನ್ನು ಹಾದು ಹೋಗುವುದಕ್ಕೆ ಅರಣ್ಯ ಇಲಾಖೆಯವರು ಆಕ್ಷೇಪಣೆಯನ್ನು ಸಲ್ಲಿಸಿದ್ದರಿಂದ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವುದಕ್ಕೆ ಸಾಧ್ಯವಾಗಿರಲಿಲ್ಲ. ಆ ಭಾಗಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿ ಕೊಡಲೇ ಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಗ್ರಾಮವು ಜನ ವಸತಿ ಪ್ರದೇಶಗಳಿಂದ ಕೂಡಿದ್ದು, ಅವರಿಗೆ ರೇಷನ್ ಕಾರ್ಡ್ ಇನ್ನಿತರ ಸೌಲಭ್ಯಗಳು ಇದ್ದುದರಿಂದ, ವಿದ್ಯುತ್

ಸಂಪರ್ಕವನ್ನು ಎಲ್ಲಾ ಮನೆಗಳಿಗೆ ಕೊಡಬೇಕೆನ್ನುವ ಕಾರಣಕ್ಕೋಸ್ಕರ ನಾವು "ಬೆಳಕು ಯೋಜನೆ"ಯನ್ನು ಜಾರಿಗೆ ತಂದಿದ್ದು, ಆ ಗ್ರಾಮಗಳು ಅರಣ್ಯ ಪ್ರದೇಶದಲ್ಲಿದ್ದುದರಿಂದ ವಿದ್ಯುತ್ ಲೈನ್‌ಗಳು ಹಾದು ಹೋಗುವುದಕ್ಕೆ ಕಷ್ಟ ಸಾಧ್ಯವಾಗಿತ್ತು. ಆ ಎರಡು ಗ್ರಾಮಗಳಿಗೆ ಸೋಲಾರ್ ಅಳವಡಿಸಿ ಕೊಟ್ಟು, ಎಲ್ಲಾ ಮನೆಗಳಿಗೆ ವಿದ್ಯುತ್ ಕೊಡುವಂತಹ ಪ್ರಯತ್ನವನ್ನು ನಮ್ಮ ಇಲಾಖೆ ಮುಂದಿನ ದಿನಗಳಲ್ಲಿ ಮಾಡುತ್ತದೆ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ನಮಗೆಲ್ಲರಿಗೂ ಗೊತ್ತಿರುವಂತೆ, ಸಾಮಾನ್ಯವಾಗಿ ಮಲೆನಾಡು ಜಿಲ್ಲೆಗಳಲ್ಲಿ ಈ ರೀತಿಯ ಅನೇಕ ಗ್ರಾಮಗಳಿವೆ. ಇಂತಹ ಅನೇಕ ಗ್ರಾಮಗಳಿಗೆ ಈಗಾಗಲೇ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಟ್ಟಿದ್ದೀರಿ. ಉದಾಹರಣೆಗೆ ಹೇಳುವುದಾದರೆ, ಉತ್ತರ ಕನ್ನಡ, ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳು ಇರಬಹುದು. ಇವೆರಡು ಗ್ರಾಮಗಳಿಗೆ ಸೋಲಾರ್ ಅಳವಡಿಸಿದರೆ, ಇವರ ಬೇಡಿಕೆ ಪರಿಪೂರ್ಣವಾಗುವುದಿಲ್ಲ. ದಯವಿಟ್ಟು, ಈಗಾಗಲೇ ನಾನು ಹೇಳಿರುವಂತೆ ಇದು ವಿಶೇಷ ಪ್ರಕರಣ ಎಂದು ಪರಿಗಣಿಸಿ, ವಿದ್ಯುತ್ ತಂತಿ ಹಾಕಿ, ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ವಿ ಸುನೀಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ಕಡೆಯಿಂದ ಯಾವುದೇ ರೀತಿಯ ಸಮಸ್ಯೆಯಿಲ್ಲ. ನಾನು ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಮಾನ್ಯ ಸದಸ್ಯರನ್ನು ಕರೆದು ಚರ್ಚೆ ಮಾಡಿ, ಅದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 708**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಿರ್ದಿಷ್ಟವಾಗಿ ಮೂರು ಜಿಲ್ಲೆಗಳು ಅಂದರೆ ಜಾಸ್ತಿ potential ಇರುವ ಜಾಗವೆಂದರೆ, ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ. ಈ ಮೇಲ್ಕಂಡ ಕಾಮಗಾರಿಗಳು ಪೂರ್ಣಗೊಂಡ ನಂತರ ಚಿತ್ರದುರ್ಗ ದಾವಣಗೆರೆ ಮತ್ತು ತುಮಕೂರು ಜಿಲ್ಲೆಯಲ್ಲಿ ನವೀಕೃತ ಇಂಧನ ಮೂಲಕ ಉತ್ಪಾದನೆಯನ್ನು evacuation facility ಇನ್ನಷ್ಟು ಉತ್ತಮಗೊಳ್ಳಲಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದು ಯಾವಾಗ ಆಗುತ್ತದೆ ಎಂಬುದು ಗೊತ್ತಿಲ್ಲ ಎಂಬುದೊಂದು. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮುಖ್ಯವಾದ ವಿಚಾರವನ್ನು ಹೇಳಬೇಕೆಂದರೆ, renewable energy source ನಲ್ಲಿ ಚಿತ್ರದುರ್ಗ ಡಿವಿಷನ್‌ಲ್ಲಿ ಸುಮಾರು 4,000 ಮೆಗಾವ್ಯಾಟ್ wind energy ಗೆ potential ಇದೆ. ದಾವಣಗೆರೆ ಡಿವಿಷನ್‌ಲ್ಲಿ 1,500 ಮೆಗಾವ್ಯಾಟ್ wind energy ಗೆ potential ಇದೆ. ಅದೇ ರೀತಿ ತುಮಕೂರು ಡಿವಿಷನ್‌ಲ್ಲಿ 1,500 ಮೆಗಾವ್ಯಾಟ್ wind energy ಗೆ potential ಇದೆ. ಕೃಷ್ಣಗಿರಿಯಲ್ಲಿ 2,000 ಮೆಗಾವ್ಯಾಟ್ ಇದೆ. ಬಸವನ ಬಾಗೇವಾಡಿ ಮತ್ತು ಅಥಣಿಯಲ್ಲಿ 2 gigawatt ಗೆ ಇದೆ. ಇದರ ಜೊತೆಗೆ ಗದಗ್, ಕೊಪ್ಪಳ, ಲಿಂಗಸೂರು ಏರಿಯಾದಲ್ಲಿ ಸುಮಾರು 10 gigawatt ಗೆ ಅಂದರೆ 10,000 ಮೆಗಾವ್ಯಾಟ್‌ವರೆಗೆ potential ಇದೆ. ಇಲ್ಲಿ ಸಮಸ್ಯೆ ಏನೆಂದರೆ, ಚಿತ್ರದುರ್ಗದ ಬಗ್ಗೆ ಒಂದು ಉದಾಹರಣೆಯನ್ನು ಕೊಟ್ಟಿದ್ದೀರಿ. ಚಿತ್ರದುರ್ಗದಲ್ಲಿ existing 220 KV station transformer almost 80 percent ಪೂರ್ತಿ ಲೋಡ್ ಆಗಿದೆ. 220 KV station ನಲ್ಲಿ ಯಾವುದೇ connectivity ಸಾಧ್ಯವಿಲ್ಲ. ನಾನೇ ಕೆಲವು ಕಡೆ ಇಂಧನ ಇಲಾಖೆಯಲ್ಲಿ ಅಪ್ಲೈ ಮಾಡಿದಾಗ, evacuation ಇಲ್ಲ. ಎಲ್ಲಾ ಕಡೆ network ಇಲ್ಲ ಎನ್ನುತ್ತಾರೆ. So, there is no possibility of any evacuation in that 220 KV level ಎಂಬುದೊಂದು. ಇನ್ನೊಂದು ಚಿತ್ರದುರ್ಗ ದಿಂದ ಹಿರಿಯೂರು thermal loading capacity full ಆಗಿದೆ. It is also found that, loading of 400 KV Hiruyuru to

Nelamangala cannot take more load due to unwanted contingency. Litigation, ಈ ತರಹ ಸಮಸ್ಯೆಯಿರುವಾಗ, ಅದಕ್ಕೊಂದು ಪರಿಹಾರವೇನು? ಚಿತ್ರದುರ್ಗದಲ್ಲಿ 4,000 ಮೆಗಾವ್ಯಾಟ್ ಇರಬೇಕಾದರೆ, network ಸ್ವಲ್ಪ ಹೆಚ್ಚು ಮಾಡಬೇಕು. ಇದು ಯಾವಾಗ ಆಗುತ್ತದೆ? ಇಷ್ಟೊಂದು ನಮ್ಮಲ್ಲಿ potential ಇರುವಾಗ ...

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಮಾತನಾಡಿ.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದಂತಹ ವಿಷಯವಾಗಿರುವುದರಿಂದ ನನಗೆ ಮಾತನಾಡಲು ಸ್ವಲ್ಪ ಸಮಯಾವಕಾಶ ಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಇದು ಪ್ರಶ್ನೋತ್ತರ ವೇಳೆಯಾಗಿದೆ. ತಾವು ಸಂಕ್ಷಿಪ್ತವಾಗಿ ಪ್ರಶ್ನೆ ಕೇಳಿ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ತಾವು ಪ್ರಶ್ನೆ ಕೇಳುವುದಕ್ಕೆ ಇಷ್ಟೊಂದು ವಿಳಂಬ ಮಾಡಿದರೆ, ಮಾನ್ಯ ಸಚಿವರು ಉತ್ತರ ಯಾವಾಗ ಕೊಡಬೇಕು? ಇನ್ನುಳಿದ ಮಾನ್ಯ ಸದಸ್ಯರು ಪ್ರಶ್ನೆಯ ಕೇಳುವುದು ಇದೆ.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, I am not drawing any other issues. ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರ ಬೇಕಾಗಿದೆ. ಹಾಗಾಗಿ ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ. I am asking this question in the interest of the state.

**Mr. CHAIRMAN:–** Ok, ok.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಸ್ವಲ್ಪ ಸಮಯಾವಕಾಶ ಕೊಡಿ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಸ್ವಲ್ಪ ಸಮಯ ಎಂದರೆ, ಎಷ್ಟು ಸಮಯ ಬೇಕು?

**ಶ್ರೀ ಬಿ.ಎಂ. ಫಾರೂಖ್:-** ಸ್ವಲ್ಪ ಅಂದರೆ...

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಪ್ರಶ್ನೆ ಕೇಳಿ ಎಂದು ಹೇಳುತ್ತಿದ್ದೇನೆ ಹೊರತು ಬೇರೇನೂ ಹೇಳಿಲ್ಲ.

**ಶ್ರೀ ಬಿ.ಎಂ. ಫಾರೂಖ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೆಂದರೆ, ಈ 220 ಕೆ.ವಿ. ಸ್ಟೇಷನ್‌ನಲ್ಲಿ ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ಶೇಕಡ 80 ರಷ್ಟು ಲೋಡ್ ಆದ ಲೆಕ್ಕದಲ್ಲಿ, ಅಲ್ಲಿ 60 KV or 220 KV station ಮಾಡಿದರೆ, ಏನು ಪ್ರಯೋಜನವಿಲ್ಲ. ಕೇಂದ್ರ ಸರ್ಕಾರದಿಂದ 'Green Corridor Station' ಗಳು ಬಂದಿದೆ. Thirunalveli to Salem, Salem to Madhugiri, Madhugiri to Kudligi or Narendra (New) ಎಂದು ಹೇಳಿ ಬಸವಕಲ್ಯಾಣ ವಿಜಾಪುರದಲ್ಲಿ ಬಂದಿದೆ. ಮಧುಗಿರಿ ಯಲ್ಲಿ Narendra (New) ರೆಡಿಯಾದ ತಕ್ಷಣ 400 KV station ಅನ್ನು 765 KV ಗೆ upgrade ಮಾಡಿ. ಈ ಹಿಂದೆ 220 KV level ನವರೆಗೂ ಮಾಡುತ್ತಿದ್ದೀರಿ. ಆಮೇಲೆ 400 KV level ಗೆ ಬಂದಿದೆ. ಈಗ 765 KV level ಕೂಡ ಬರಬಹುದು. CTU (Central Transmission Utility) ನಿಂದ ಮಾತಾಡಿಕೊಂಡು, ಏನಾದರೂ understanding ಮಾಡಿಕೊಂಡು ಮಾಡಿ. ಆಗ ಏನಾಗುತ್ತದೆ ಎಂದರೆ, ಸ್ಟೇಷನ್‌ಗಳನ್ನು ಎಲ್ಲೆಲ್ಲಿ ಮಾಡಿದರೂ ಕೂಡ ಪ್ರಯೋಜನವಾಗುವುದಿಲ್ಲ. Network ನಿಂದ ಜಾಸ್ತಿ transmission line ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. Wind potential ಅವಶ್ಯಕತೆ ಎಲ್ಲಿದೆಯೋ, ಅಲ್ಲಿ ಮಾಡಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಮಾತನಾಡಿ.

**ಶ್ರೀ ಬಿ.ಎಂ. ಫಾರೂಖ್:-** ಮಾನ್ಯ ಸಭಾಪತಿಯವರೇ, ಇನ್ನು ಎರಡ್ಮೂರು ವಿಷಯಗಳಿವೆ.

**ಶ್ರೀ ವಿ. ಸುನೀಲ್ ಕುಮಾರ್:-** ಮಾನ್ಯ ಸದಸ್ಯರೇ, ಅದರ ಬಗ್ಗೆ ಆನಂತರ ಮಾತಾಡೋಣ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಮ್ಮ ಪ್ರಶ್ನೆಯನ್ನೇ ಮುಗಿಸಿಲ್ಲವೆಂದರೆ, ಮಾನ್ಯ ಸಚಿವರು ಉತ್ತರವನ್ನು ಯಾವಾಗ ಕೊಡಬೇಕು? ದಯವಿಟ್ಟು, ಮಾನ್ಯ ವಿರೋಧ ಪಕ್ಷದ ನಾಯಕರೇ, ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಡಬೇಕು.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, ನಾನು ಕೆಲವೊಂದು ಪ್ರಶ್ನೆಯನ್ನು ಕೇಳಿಯೇ ಇಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಮ್ಮ ಪ್ರಶ್ನೆ ಕೇಳಿ ಎಂದು ನಾನು ತಮಗೆ ಹೇಳುತ್ತಿದ್ದೇನೆ.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ನಾನು ಕೇಳುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಲಿ.

**ಸಭಾಪತಿಯವರು:–** ಇದು ಪ್ರಶ್ನೋತ್ತರ ವೇಳೆ.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡುವಿರಾ?

**ಸಭಾಪತಿಯವರು:–** ಮಾನ್ಯ ಸದಸ್ಯರೇ, ದಯವಿಟ್ಟು, ತಾವು ಒಂದು ನೋಟಿಸ್ ಕೊಡಿ. I will convert it. ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳುತ್ತೇನೆ. ದಯವಿಟ್ಟು, ತಾವು ನೋಟಿಸ್ ಕೊಡಿ.

**ಶ್ರೀ ವಿ. ಸುನೀಲ್ ಕುಮಾರ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚರ್ಚೆ ಮಾಡುವ ವಿಷಯವಿಲ್ಲ. ಈಗಲೇ ಉತ್ತರವನ್ನು ಕೊಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಉತ್ತರ ಕೊಡಿ. ಇದನ್ನೇ ನಾನು ಮಾನ್ಯ ಸದಸ್ಯರಿಗೆ ಹೇಳಿದ್ದು. ಮಾನ್ಯ ಬಿ.ಎಂ. ಫಾರೂಖ್‌ರವರೇ, ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಬಿ.ಎಂ. ಫಾರೂಖ್:-** ಮಾನ್ಯ ಸಭಾಪತಿಯವರೇ, Half an hour before ನನಗೆ ಉತ್ತರ ಸಿಕ್ಕಿದ್ದು.

**ಸಭಾಪತಿಯವರು:-** ತಾವು ಕೇಳಿ.

**ಶ್ರೀ ವಿ. ಸುನೀಲ್ ಕುಮಾರ್:-** ಜಾಗ ಬಿಟ್ಟು ಕೊಟ್ಟರೆ, ಎಲ್ಲವೂ ಸರಿಯಾಗುತ್ತದೆ, ತಾವು ಒಂದು ನಿಮಿಷ ಕುಳಿತುಕೊಳ್ಳಿ.

**ಸಭಾಪತಿಯವರು:-** ದಯವಿಟ್ಟು, ಮಾನ್ಯ ಬಿ.ಎಂ. ಫಾರೂಖ್‌ರವರೇ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ತಾವು ಇದರ ಬಗ್ಗೆ ಇನ್ನೂ ಚರ್ಚೆ ಮಾಡಬೇಕೆಂದರೆ, ತಾವು ಒಂದು ನೋಟಿಸ್ ಕೊಡಿ.

**ಶ್ರೀ ವಿ. ಸುನೀಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಚಿತ್ರದುರ್ಗ, ದಾವಣಗೆರೆ ಮತ್ತು ತುಮಕೂರಿನಲ್ಲಿ ಈ ನಾಲ್ಕು ಕಡೆಗಳಲ್ಲಿ ಹೊಸ 400 KV and 220 KV sub-station ಗಳನ್ನು ಪೂರ್ಣಗೊಳಿಸುವಂತಹ ಕಾರ್ಯವನ್ನು ಈಗಾಗಲೇ ಮುಗಿಸಿದ್ದೇವೆ. ಹಿರೇಮಲ್ಲನಹಳ್ಳಿಯಲ್ಲಿ 400 ಕೆ.ವಿ. ವಿದ್ಯುತ್ ಉಪಕೇಂದ್ರ, ಹೊಸದುರ್ಗದಲ್ಲಿ 220 ಕೆ.ವಿ. ವಿದ್ಯುತ್ ಉಪಕೇಂದ್ರ, 220 ಕೆ.ವಿ. ಚಿತ್ರದುರ್ಗ ಹಾಗೂ ಹಿರಿಯೂರು ನಡುವೆ ಎರಡನೇ ವಿದ್ಯುತ್ ಪ್ರಸರಣ ಮಾರ್ಗ. *PGCIL (Power Grid Corporation of India Limited)* ಹಿರಿಯೂರನಲ್ಲಿ 400 KV station ಇನ್ನು ಆರು ಕಡೆಗಳಲ್ಲಿ ಹೊಸ ಪ್ರಕ್ರಿಯೆಗಳನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಅಲ್ಲಿ ಸ್ವಲ್ಪ power line ಎಳೆದು tower ಹಾಕುವುದಕ್ಕೆ ರೈತರ ಪ್ರತಿರೋಧಗಳು ಬರುತ್ತಿದೆ. ಆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಮತ್ತು ಜನಪ್ರತಿನಿಧಿಗಳ ಜೊತೆ ರೈತರ ಪ್ರತಿರೋಧವನ್ನು ಚರ್ಚೆ ಮಾಡಿದ್ದು, ಜನಪ್ರತಿನಿಧಿಗಳು ರೈತರ ಮುಖಾಂತರ ಮಾತಾಡಿಕೊಂಡ ನಂತರ ಉಳಿದಂತಹ ಕೇಬಲ್‌ಗಳನ್ನು ಎಳೆಯಬೇಕು ಎನ್ನುವಂತಹ ಪ್ರಯತ್ನಗಳನ್ನು ಮಾಡುತ್ತಿದೆ. ಹಿರೇಮಲ್ಲನಹಳ್ಳಿಯಲ್ಲಿರುವಂತಹ ಪರಿಸ್ಥಿತಿ ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತಿದೆ. ತಾವೇ ಸ್ವಲ್ಪ ಜಾಗವನ್ನು ಕೊಟ್ಟುಬಿಟ್ಟರೆ, ಆ ಕಾಮಗಾರಿಗಳನ್ನು ಪೂರ್ಣಗೊಳಿಸುತ್ತೇವೆ. ಆಗ ಸಾಕಷ್ಟು ಸಮಸ್ಯೆಗಳು ಬಗೆಹರಿಯುತ್ತದೆ. ಇನ್ನು ಉಳಿದಂತೆ ಲೋಡ್ ಜಾಸ್ತಿಯಾಗಿದೆ. ಅಲ್ಲಿ

ಸಾಕಾಗುತ್ತಿಲ್ಲ ಎಂದು ಮಾನ್ಯ ಸದಸ್ಯರು ಸದನದ ಗಮನಕ್ಕೆ ತಂದಿದ್ದಾರೆ. ನಾನು ಮಾನ್ಯ ಸದಸ್ಯರು ಮತ್ತು ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ. ಉಳಿದಂತಹ ಪ್ರಕ್ರಿಯೆಗಳು ಕರ್ನಾಟಕಕ್ಕೆ ಏನೇನು ಒಳ್ಳೆಯದು ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ, ಖಂಡಿತವಾಗಿಯೂ ಒಟ್ಟಿಗೆ ಸೇರಿ ಮಾಡೋಣ.

**ಸಭಾಪತಿಯವರು:–** ಮಾನ್ಯ ಸಿ.ಎನ್. ಮಂಜೇಗೌಡರೇ, ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ವಿವರವಾಗಿ ಮಾತನಾಡುವದಕ್ಕೆ ಹೋಗುವುದಿಲ್ಲ. ಇದನ್ನು ಚರ್ಚೆಗೆ ...

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಒಂದು ನೋಟಿಸ್ ಕೊಡಿ.

**ಶ್ರೀ ಬಿ.ಎಂ. ಫಾರೂಖ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. Wheeling and banking ಸೌಲಭ್ಯದ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಆ wheeling and banking ಸೌಲಭ್ಯವನ್ನು 2022 ರವರೆಗೆ ವಿಸ್ತರಿಸಲಾಗಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇದರ ನಂತರ ಪರಿಸ್ಥಿತಿ ಏನಾಗಬೇಕು? KERC (Karnataka Electricity Regulatory Commission) ಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿ ಅವರ ಜೊತೆ ಮಾತನಾಡಿಕೊಂಡು, wheeling and banking ಸೌಲಭ್ಯವನ್ನಾದರೂ ಕೊಡಬೇಕಲ್ಲ. Based on the stay, you are continuing.

**ಶ್ರೀ ವಿ. ಸುನೀಲ್ ಕುಮಾರ್:–** ಮಾನ್ಯ ಸಭಾಪತಿಯವರೇ, ವೀಲಿಂಗ್ ಮತ್ತು ಬ್ಯಾಂಕಿಂಗ್ ಸೌಲಭ್ಯಕ್ಕೆ ಸಂಬಂಧಪಟ್ಟಂತೆ ದಿನಾಂಕ 31.10.2022 ರ ತನಕ ನಾವು ಅನುಮತಿಯನ್ನು ಕೊಟ್ಟಿದ್ದೇವೆ. ಅದನ್ನು ಮುಂದುವರೆಸಬೇಕೋ ಅಥವಾ ಬೇಡವೋ ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, KERC ಗೆ ಪ್ರಸ್ತಾವನೆಯನ್ನು ಕೊಡುತ್ತೇವೆ. ಒಟ್ಟು ರಾಜ್ಯದ ಹಿತದೃಷ್ಟಿಯಿಂದ ಏನೇನು ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೋ, ನಾನು ಖಂಡಿತವಾಗಿಯೂ ಒಳ್ಳೆಯ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ 727**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎನ್. ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಜ್ಯ ಸರ್ಕಾರವು ರಾಜ್ಯಾದ್ಯಂತ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ "ನಮ್ಮ ಕ್ಲಿನಿಕ್" ಎಂಬ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಲಾಗುತ್ತಿದೆ. ಇದಕ್ಕಾಗಿ 15ನೇ ಹಣಕಾಸಿನ ಯೋಜನೆಯಡಿಯಲ್ಲಿ 155.77 ಕೋಟಿ. ರೂ.ಗಳ ವೆಚ್ಚದಲ್ಲಿ 438 ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುತ್ತಿದೆ. ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಇರುವುದೇನೆಂದರೆ, ಈಗಾಗಲೇ ರಾಜ್ಯಾದ್ಯಂತ ಸ್ಥಳೀಯ ಮತ್ತು ನಗರ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರ ಸಭೆ ಮತ್ತು ನಗರ ಪಾಲಿಕೆಯ ಪ್ರತಿ ವಾರ್ಡ್‌ಗೆ ಒಂದೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಕಳೆದ ಸುಮಾರು 40-50 ವರ್ಷಗಳಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇವೆ ಸಲ್ಲಿಸುತ್ತಾ ಬರುತ್ತಿದೆ.

(ಮುಂದು)

**(897) 19-09-2022, 12.00, ಟಿಸಿಹೆಚ್-ಎಕೆ**

**ಶ್ರೀ ಸಿ.ಎನ್.ಮಂಜೇಗೌಡ (ಮುಂದು)**:-

ಇವುಗಳಿಗೆ ಸರಿಯಾಗಿ ವೈದ್ಯರು ಇಲ್ಲ, ನರ್ಸ್‌ಗಳು ಇಲ್ಲ, ಸಿಬ್ಬಂದಿಗಳಿಲ್ಲ, ಲ್ಯಾಬ್‌ಗಳಿಲ್ಲ ಮತ್ತು ಇನ್ನಿತರೆ ಯಾವುದೇ ವೈದ್ಯಕೀಯ ಸೌಲಭ್ಯಗಳಿಲ್ಲ. ಈಗ ಸರ್ಕಾರ 'ನಮ್ಮ ಕ್ಲಿನಿಕ್' ಗಳನ್ನು ಮಾಡತಕ್ಕಂಥದ್ದು ಎಷ್ಟು ಸರಿ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತಿದ್ದೇನೆ.

**ಡಾ.ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ 'ನಮ್ಮ ಕ್ಲಿನಿಕ್'ಗಳನ್ನು ನಗರ ಪ್ರದೇಶಗಳಲ್ಲಿನ ಕೊಳೆಗೇರಿ ಮತ್ತು ಕೊಳೆಗೇರಿ ಸ್ವರೂಪ ಇರತಕ್ಕಂಥ ಪ್ರದೇಶಗಳಲ್ಲಿ ಹಾಗೂ ದುರ್ಬಲ ವರ್ಗದ ಜನಸಂಖ್ಯೆ ಎಲ್ಲಿದೆಯೋ ಆ ಪ್ರದೇಶಗಳಲ್ಲಿ ಸ್ಥಾಪನೆ ಮಾಡಬೇಕೆಂಬ ಉದ್ದೇಶ

ಹೊಂದಿದ್ದೇವೆ. ಇದು ನಗರ ಪ್ರದೇಶಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಚಿಕಿತ್ಸಾ ವ್ಯವಸ್ಥೆಗಳು ಮತ್ತು ಸೇವೆಗಳು ಇಲ್ಲಿಯವರೆಗೂ ಕೂಡ ಇರಲಿಲ್ಲ. ಮಾನ್ಯ ಸದಸ್ಯರು ಹೇಳಿರುವಂಥದ್ದು, ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನು ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಸ್ಥಾಪಿಸಲಾಗಿದೆ. ಈಗ 107 ಮಾತ್ರ ಕಡಿಮೆ ಇದೆ. ಆ 107 ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನೂ ಕೂಡ ಈ ಬಾರಿ ತೆಗೆದುಕೊಳ್ಳಬೇಕೆಂದು ನಮ್ಮ ಸರ್ಕಾರ ಉದ್ದೇಶ ಹೊಂದಿದೆ. ಆದರೆ ನಗರ ಪ್ರದೇಶಗಳಲ್ಲಿ ಸುಮಾರು 438 'ನಮ್ಮ ಕ್ಲಿನಿಕ್'ಗಳನ್ನು ನಾವು ಸ್ಥಾಪನೆ ಮಾಡುತ್ತಿದ್ದೇವೆ. ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲೇ ಸುಮಾರು 243 ನಮ್ಮ ಕ್ಲಿನಿಕ್‌ಗಳು ಹಾಗೂ ಇತರೆ ಜಿಲ್ಲೆಗಳಲ್ಲಿ 195 ನಮ್ಮ ಕ್ಲಿನಿಕ್‌ಗಳನ್ನು ಸ್ಥಾಪನೆ ಮಾಡುತ್ತಿದ್ದೇವೆ. ಇದು ನಿಜವಾಗಿಯೂ ಕೂಡ ಬಡ ಜನರಿಗೆ ಬಹಳಷ್ಟು ಉಪಯೋಗವಾಗುವಂಥ ವಿನೂತನವಾದ ಕಾರ್ಯಕ್ರಮವಾಗಿದೆ. ಅದರಲ್ಲೂ ಕೂಡ ಇವತ್ತಿನ ದಿವಸ ಕೊಳೆಗೇರಿ ಮತ್ತು ಕೊಳೆಗೇರಿ ಸ್ವರೂಪ ಇರತಕ್ಕಂಥ ಪ್ರದೇಶಗಳಲ್ಲಿ ಇದನ್ನು ಸ್ಥಾಪನೆ ಮಾಡುವುದರಿಂದ, ಅವರು ಬಹಳಷ್ಟು ಆರೋಗ್ಯ ಸಮಸ್ಯೆಗಳಿಗೆ; ಹೋಗಿ ತೋರಿಸಿಕೊಳ್ಳುವುದಕ್ಕೆ ಉಪಯುಕ್ತವಾಗುತ್ತದೆ. 'ನಮ್ಮ ಕ್ಲಿನಿಕ್'ಗಳಲ್ಲಿ ಸುಮಾರು 12 ಸೇವೆಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. ಅದರಲ್ಲಿ ಗರ್ಭಿಣಿ ಆರೈಕೆ ಹಾಗೂ ಬಾಣಂತಿ ಸೇವೆಗಳು ಇರುತ್ತವೆ. ನವಜಾತ ಶಿಶು ಆರೈಕೆ ಮತ್ತು ಚುಚ್ಚುಮದ್ದು ಸೇವೆಗಳಿರುತ್ತದೆ. ಮಕ್ಕಳ ಹಾಗೂ ಹದಿಯರೆಯದವರ ಸಮಸ್ಯೆಗಳಿಗೆ ಸಂಬಂಧಪಟ್ಟಿರತಕ್ಕಂಥ ಸೇವೆಗಳು ಇರುತ್ತವೆ. ಕುಟುಂಬ ಕಲ್ಯಾಣ ಯೋಜನೆಗಳ ಅನುಷ್ಠಾನ ಹೀಗೆ ಒಟ್ಟು 12 ವಿವಿಧ ರೀತಿಯಲ್ಲಿ ಸಮಗ್ರ ಆರೋಗ್ಯ ಸೇವೆಗಳು ಈ ಕ್ಲಿನಿಕ್‌ಗಳಲ್ಲಿ ಇರುತ್ತದೆ. ಇದರಲ್ಲಿ ಒಬ್ಬರು ವೈದ್ಯಾಧಿಕಾರಿ, ಒಬ್ಬರು ಶುಶ್ರೂಷಕರು, ಒಬ್ಬರು ಪ್ರಯೋಗಶಾಲಾ ತಂತ್ರಜ್ಞರು/ಕಿರಿಯ ದರ್ಜೆ ಸಹಾಯಕರು ಮತ್ತು ಒಬ್ಬರು ಗ್ರೂಪ್-ಡಿ ಇವರೆಲ್ಲರ ನೇಮಕಾತಿ ಕೂಡ ಆಗುತ್ತದೆ. ಅಕ್ಟೋಬರ್ ಅಂತ್ಯದೊಳಗೆ 438 'ನಮ್ಮ ಕ್ಲಿನಿಕ್' ಗಳು ಕೂಡ ನಮ್ಮ ರಾಜ್ಯದಲ್ಲಿ ವಿದ್ಯುಕ್ತವಾಗಿ ಚಾಲನೆಯಾಗುತ್ತದೆ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಇರತಕ್ಕಂಥ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರ್ಸ್ ಮತ್ತು ನರ್ಸ್‌ಗಳಿಲ್ಲ. ಸರ್ಕಾರ ಪುನಃ 438 ನಮ್ಮ ಕ್ಲಿನಿಕ್‌ಗಳನ್ನು

ಸ್ಥಾಪನೆ ಮಾಡುತ್ತಿದೆ. ಕಳೆದ ನಾಲ್ಕೂವರೆ ವರ್ಷಗಳಿಂದ ಇಲ್ಲದಂತಹ ಕಾಳಜಿ ಈಗ ದಿಢೀರನೇ ಮಾಡುತ್ತಿದ್ದಾರೆ. ಈಗ ಸರ್ಕಾರ ಏನು ಡಾಕ್ಟರ್‌ಗಳನ್ನು ನೇಮಕ ಮಾಡುತ್ತಾರೆ, ಅದಕ್ಕೆ ಡಾಕ್ಟರ್‌ಗಳೇ ಸಿಗುತ್ತಿಲ್ಲ. ಗ್ರಾಮ ಪಂಚಾಯಿತಿಗಳು ಮತ್ತು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 10,000-12,000 ಜನಸಂಖ್ಯೆಗೆ ಅನುಗುಣವಾಗಿ ಈಗಾಗಲೇ ಮಾಡಿರತಕ್ಕಂಥ ಆಸ್ಪತ್ರೆಗಳಲ್ಲಿ ಡಾಕ್ಟರ್ಸ್‌ಗಳು ಇಲ್ಲ. ಮತ್ತೆ ಈಗ ನಮ್ಮ ಕ್ಲಿನಿಕ್ ಗಳನ್ನು ತೆರೆದರೆ ಡಾಕ್ಟರ್ಸ್‌ಗಳಿಗೆ ಏನು ಮಾಡುತ್ತಾರೆ?

**ಡಾ.ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಬಹುಶಃ ಕಳೆದ ಎರಡು ವರ್ಷಗಳಲ್ಲಿ ಇಲಾಖೆಯಲ್ಲಿ ಆದಂತಹ ಅಭಿವೃದ್ಧಿ ಕೆಲಸ-ಕಾರ್ಯಗಳ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಅಂದುಕೊಂಡಿದ್ದೇನೆ. ಕಳೆದ ಒಂದೂವರೆ ವರ್ಷಗಳಲ್ಲಿ ನಾವು ಹೊಸದಾಗಿ 2,000 ವೈದ್ಯರುಗಳ ನೇಮಕಾತಿ ಮಾಡಿದ್ದೇವೆ. ಕೆಲವೇ ಕೆಲವು ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆ ಇರುವುದು ಬಿಟ್ಟರೆ, ಇವತ್ತಿನ ದಿವಸ ಸಂಪೂರ್ಣವಾಗಿ ವೈದ್ಯರುಗಳನ್ನು ತುಂಬುವಂಥ ಕೆಲಸ ಈ ರಾಜ್ಯದಲ್ಲಿ ಮಾಡಲಾಗಿದೆ. ಬೇಕಾದರೆ ಮಾನ್ಯ ಸದಸ್ಯರು ಯಾವ ಜಿಲ್ಲೆಗಳಲ್ಲಿ ವೈದ್ಯರುಗಳು ಇಲ್ಲವೆಂದು ಹೇಳಿದರೆ ನಾನು ಅದಕ್ಕೆ ಉತ್ತರ ಕೊಡಬಲ್ಲೆ. ಅದೇ ರೀತಿ ಇವತ್ತಿನ ದಿವಸ compulsory rural service ಮಾಡಬೇಕೆಂದು ಸುಮಾರು 4,000 ವೈದ್ಯರನ್ನು ಕೂಡ ನೇಮಕ ಮಾಡಿ, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಗೆ ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಸಭಾಪತಿಯವರೇ, ನಮ್ಮ ಕ್ಲಿನಿಕ್‌ಗಳಲ್ಲಿ ಸರ್ಕಾರಿ ಡಾಕ್ಟರ್ಸ್ ಇರುವುದಿಲ್ಲ. ಇವರು ಕಾಂಟ್ರಾಕ್ಟ್ ಮೇರೆಗೆ ಕೆಲಸ ಮಾಡತಕ್ಕಂಥ ಡಾಕ್ಟರ್ಸ್. ಒಂದು ವರ್ಷಕ್ಕೆ ಅಗ್ರಿಮೆಂಟ್ ಮಾಡಿಕೊಂಡು ಅವರನ್ನು ತೆಗೆದುಕೊಳ್ಳತಕ್ಕಂಥದ್ದು ಆಗುತ್ತದೆ.

**ಸಭಾಪತಿಯವರು:-** ಮಾನ್ಯ ಅಬ್ದುಲ್ ಜಬ್ಬಾರ್‌ರವರೇ, ತಾವು ತಮ್ಮ ಪ್ರಶ್ನೆ ಕೇಳಿ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಸಿ.ಎನ್. ಮಂಜೇಗೌಡ ರವರೇ, ತಾವು ಪ್ರಶ್ನೆ ಕೇಳಿದ್ದು ಸಾಕು. ಈಗ ಮಾನ್ಯ ಅಬ್ದುಲ್ ಜಬ್ಬಾರ್‌ರವರೇ, ತಾವು ತಮ್ಮ ಪ್ರಶ್ನೆ ಕೇಳಿ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹುಶಃ ಕಳೆದ ಎರಡು ವರ್ಷಗಳಲ್ಲಿ ನಮ್ಮ ಇಲಾಖೆಯಲ್ಲಿ ಆದಂತಹ ಅಭಿವೃದ್ಧಿ ಕೆಲಸ-ಕಾರ್ಯಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲವೆಂದು ಹೇಳಿದರು.

**ಸಭಾಪತಿಯವರು:-** ಮಾನ್ಯ ಸಿ.ಎನ್. ಮಂಜೇಗೌಡ ರವರೇ, ಮಾನ್ಯ ಸಚಿವರು ಸಂಕ್ಷಿಪ್ತವಾಗಿ ಉತ್ತರ ಕೊಟ್ಟಿದ್ದಾರೆ. ನಾವು ಇನ್ನೂ 7ನೇ ಪೇಜ್‌ನಲ್ಲೇ ಇದ್ದೇವೆ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ನೋಡಿದ್ದೇನೆ. ಕಳೆದ ಎರಡು ವರ್ಷಗಳ ಕೋವಿಡ್-19 ಅವಧಿಯಲ್ಲಿ ಸರ್ಕಾರಕ್ಕೆ ಆದಂತಹ ನಷ್ಟ ಎಷ್ಟೆಂದು ನನಗೆ ಗೊತ್ತಿದೆ. ಅದಕ್ಕಾಗಿ ನಾನು ಏನು ಹೇಳುತ್ತಿದ್ದೇನೆಂದರೆ, ಇವತ್ತಿನ ದಿವಸ ಒಟ್ಟಾರೆ ರೂ.155.77 ಕೋಟಿಗಳ ವೆಚ್ಚದಲ್ಲಿ 'ನಮ್ಮ ಕ್ಲಿನಿಕ್'ಗಳನ್ನು ಪ್ರಾರಂಭ ಮಾಡುವಂಥ ಕಾರ್ಯಗಳನ್ನು ಮಾಡುತ್ತಿದ್ದೀರಿ; ಅದನ್ನು ದಯವಿಟ್ಟು ಸ್ಟಾಪ್ ಮಾಡಿ.

**ಪ್ರಶ್ನೆ ಸಂಖ್ಯೆ.715**

**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ.ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂತ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಆದರೆ ನಾನು ಸದಸ್ಯನಾಗಿದ್ದಾಗ ಎರಡ್ಮೂರು ಬಾರಿ same question ನ್ನು ಕೇಳಿದ್ದೆನು. ಅದಕ್ಕೆ same ಉತ್ತರ ಬಂದಿದೆ. ಆದರೆ ಕೆಲಸ ಮಾತ್ರ ಏನೂ ಆಗುತ್ತಿಲ್ಲ. ಇತ್ತೀಚೆಗೆ ನಾನು ಒಂದು ಕೆರೆಬಿಳಚಿ ಎಂಬ ಹಳ್ಳಿಗೆ ಹೋಗಿದ್ದೆನು. ಅದು ಸುಮಾರು 10,000 ಜನಸಂಖ್ಯೆ ಹೊಂದಿರತಕ್ಕಂಥ ಹಳ್ಳಿ. ಅಲ್ಲಿ ಆಸ್ಪತ್ರೆ ನಿರ್ಮಾಣ ಮಾಡಿದ್ದಾರೆ. ಆದರೆ ಅಲ್ಲಿ ರಾತ್ರಿ ಸಯಮದಲ್ಲಿ ಡಾಕ್ಟರ್ಸ್‌ಗಳು ಉಳಿದುಕೊಳ್ಳುವುದಕ್ಕೆ ಜಾಗ ಇಲ್ಲ. ತುರ್ತು ಸಂದರ್ಭಗಳಲ್ಲಿ ರಾತ್ರಿ ಸಮಯದಲ್ಲಿ ಡಾಕ್ಟರ್ಸ್‌ಗಳು ಇಲ್ಲವೆಂದರೆ ಹೇಗೆ? ಮಾನ್ಯ ಸಚಿವರೇ, ಆ ಆಸ್ಪತ್ರೆಯಲ್ಲಿ ಡಾಕ್ಟರ್ಸ್‌ಗಳು ಮತ್ತು ನರ್ಸ್‌ಗಳು ರಾತ್ರಿ ವೇಳೆಯಲ್ಲಿ ಉಳಿದುಕೊಳ್ಳಲು ಜಾಗ ಮಾಡದಿದ್ದರೆ, emergency ಬಂದರೆ, heart attack ಅಥವಾ ಒಬ್ಬ ಮಹಿಳೆಯ ಹೆರಿಗೆಗಾಗಿ ಬಂದರೆ ಅವರ ಪರಿಸ್ಥಿತಿ ಏನಾಗುತ್ತದೆ? ಇದು ಒಂದೇ ಅಲ್ಲ. ಮತ್ತೆ ಅಲ್ಲಿ ಇದ್ದಂತಹ ಆಂಬುಲೆನ್ಸ್ ವ್ಯಾನ್‌ನ್ನು ಕೂಡ ನೋಡಿದೆನು. ಅದು ಕೆಟ್ಟು ಸುಮಾರು ಒಂದು ವರ್ಷವಾಗಿದೆ, ಅದನ್ನು ಯಾರೂ ರಿಪೇರಿ ಮಾಡಿಸುತ್ತಿಲ್ಲವೆಂದು ಹೇಳಿದರು. ಈ ಒಂದು ಆಸ್ಪತ್ರೆಯಲ್ಲೇ ಅಲ್ಲದೇ ಸಾಕಷ್ಟು ಹಳ್ಳಿಗಳಲ್ಲಿ ಇದೇ ರೀತಿ ಪರಿಸ್ಥಿತಿಗಳಿವೆ. ಎರಡನೆಯದಾಗಿ, ಇತ್ತೀಚೆಗೆ ಮಾನ್ಯ ಸಚಿವರು ಸರಿಯಾಗಿ ಬೇಯಿಸದ ಆಹಾರ ಪೂರೈಕೆ ಕುರಿತ ಯಾವುದೇ ದೂರುಗಳು ಸ್ವೀಕೃತಗೊಂಡಿರುವುದಿಲ್ಲವೆಂದು ಹೇಳಿದ್ದಾರೆ. ಸೆಪ್ಟೆಂಬರ್ 7ನೇ ತಾರೀಖಿನಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ, 'ಬೆಂಗಳೂರಿನ ಮಿಂಟೋ ಆಸ್ಪತ್ರೆಯಲ್ಲಿ ಸರಿಯಾಗಿ ಬೇಯಿಸದ ಆಹಾರ ಪೂರೈಕೆ' ಎಂದು ವರದಿಯಾಗಿದೆ. ಇದನ್ನು ಬೇರೆ ಯಾರೂ ಕೇಸ್ ಹಾಕಿಲ್ಲ, ಲೋಕಾಯುಕ್ತದವರೇ ಕೇಸ್ ದಾಖಲಿಸಿಕೊಂಡಿರುವುದು. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸುಮಾರು 2,000 ಸಿಬ್ಬಂದಿಗಳನ್ನು ನೇಮಕ ಮಾಡಿದ್ದೇವೆಂದು ಹೇಳಿದ್ದಾರೆ. ಮತ್ತೆ ಅದೇ ಸೆಪ್ಟೆಂಬರ್ 7ನೇ ತಾರೀಖಿನ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ 'ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ಇದೆ' ಎಂದು ವರದಿಯಾಗಿದೆ. ಅದಕ್ಕಾಗಿ ಇದೆಲ್ಲಾ ಸಮಸ್ಯೆಗಳಿವೆ. ಮಾನ್ಯ

ಸಚಿವರಿಗೆ ನನ್ನ ಕಳಕಳಿ ಏನೆಂದರೆ, ಜಿಲ್ಲಾ ಆಸ್ಪತ್ರೆಗಳು ಎಷ್ಟಿವೆಯೋ ಅಷ್ಟರಲ್ಲೂ ಕೂಡ ಏನೇನು ಸಮಸ್ಯೆಗಳಿವೆಯೋ ಅದಕ್ಕೆ ಗಮನಕೊಡಬೇಕು. ದಯವಿಟ್ಟು ಜಿಲ್ಲಾ ಆಸ್ಪತ್ರೆಗಳಲ್ಲೂ ಕೂಡ ಎಲ್ಲಾ ವ್ಯವಸ್ಥೆ ಮಾಡಿ. ಇದು ಆರೋಗ್ಯಕ್ಕೆ ಸಂಬಂಧಪಟ್ಟ ವಿಚಾರ. ಏಕೆಂದರೆ ನೀವು ಮತ್ತು ನಾವು ಒಂದು ಬಾರಿ ಹೋಗುವುದೇ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಇದು ನಿಮ್ಮ ತಪ್ಪು ಎಂದು ಹೇಳುತ್ತಿಲ್ಲ. ಆ ಆಸ್ಪತ್ರೆಗಳಲ್ಲಿ ಇರತಕ್ಕಂಥ ಕೊರತೆಗಳ ಬಗ್ಗೆ ಹೇಳುತ್ತಿದ್ದೇನೆ. ಸರ್ಕಾರ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಮಷಿನ್, ಸ್ಕ್ಯಾನಿಂಗ್ ಮಷಿನ್‌ಗಳನ್ನು ಅಳವಡಿಸಿರುತ್ತೀರಿ; ಇದೆಲ್ಲಾ ಇರುತ್ತದೆ. ಅಲ್ಲಿನ ಅಕ್ಕಪಕ್ಕದ ನರ್ಸಿಂಗ್ ಹೋಂ ನವರು ಆ ಆಸ್ಪತ್ರೆಯ ಸಿಬ್ಬಂದಿಗಳಿಗೆ ದುಡ್ಡು ಕೊಡುವುದರಿಂದ, ಆ ಸಿಬ್ಬಂದಿಯವರು ನರ್ಸಿಂಗ್ ಹೋಂಗಳಲ್ಲಿನ ಮಷಿನ್‌ಗಳಿಗೆ ಕಳುಹಿಸುತ್ತಿದ್ದಾರೆ. ನಮ್ಮ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಇಲ್ಲ, ನೀವು ಹೊರಗಡೆ ಹೋಗಿ ಸ್ಕ್ಯಾನಿಂಗ್ ಮಾಡಿಸಿಕೊಂಡು ಬನ್ನಿ ಎಂದು ಹೇಳುತ್ತಾರೆ. ಆ ಡಯಾಲಿಸೀಸ್ ಮಷಿನ್ ಚೆನ್ನಾಗಿದ್ದರೂ ಕೂಡ, ಡಯಾಲಿಸೀಸ್ ಮಷಿನ್ ನಮ್ಮ ಹತ್ತಿರ ಇಲ್ಲ ಹೊರಗಡೆ ಮಾಡಿಸಿಕೊಳ್ಳಿ ಎಂದು ಹೇಳುತ್ತಾರೆ. ಇದೆಲ್ಲಾ common. ಇದರ ಜೊತೆಗೆ ನಾನು ಹೇಳುವುದೇನೆಂದರೆ, ಜಿಲ್ಲಾ ಆಸ್ಪತ್ರೆಗಳಿಗೆ ಎಲ್ಲಾ ಕಡೆಗಳಿಂದ ಜನ ಬರುತ್ತಾರೆ. ಅದಕ್ಕಾಗಿ ಮಾನ್ಯ ಸಚಿವರು ೩೦ ಜಿಲ್ಲಾ ಆಸ್ಪತ್ರೆಗಳನ್ನು ಶೇ.೧೦೦ perfect ಮಾಡಿ. ಆಗ ಜನ ನರ್ಸಿಂಗ್ ಹೋಂಗಳಿಗೆ ಹೋಗುವುದು ಕಡಿಮೆಯಾಗುತ್ತದೆ. ಕೆಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಬಹಳ ಸುಲಿಗೆ ನಡೆಯುತ್ತಿದೆ. ಪಾಪ, ಆ ಡಾಕ್ಟರ್ಸ್‌ಗಳ ತಪ್ಪಲ್ಲ. ಅವರು ಕೋಟ್ಯಾಂತರ ರೂಪಾಯಿಗಳು ದುಡ್ಡು ಕೊಟ್ಟು ಸೇರಿಕೊಂಡಿರುತ್ತಾರೆ. ಆದರೆ ಜನರಿಂದ ಸುಲಿಗೆ ಮಾಡುವುದೇ ಕೆಲಸವಾಗಿದೆ. ಮಾನ್ಯ ಸಚಿವರೇ, ಮುಖ್ಯವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಚೀಟಿ ಬರೆದುಕೊಡುವುದನ್ನು ತಪ್ಪಿಸಬೇಕು. ಏಕೆಂದರೆ ಸರ್ಕಾರ ಆ ಆಸ್ಪತ್ರೆಗಳಿಗೆ ಔಷಧ ಖರೀದಿ ಮಾಡಲು ಸಾವಿರಾರು ಕೋಟಿಗಳನ್ನು ಕೊಡುತ್ತಿದೆ. ಆದರೆ ಅವೆಲ್ಲಾ ಗೋಡಾನ್‌ನಲ್ಲೇ ಬಿದ್ದಿರುತ್ತವೆ. ಅವರು ಹೊರಗಡೆ ಔಷಧಿ ಖರೀದಿಸಲು ಚೀಟಿ ಬರೆದು ಕೊಡುತ್ತಾರೆ. ಏಕೆಂದರೆ ಬಡ ರೋಗಿಗಳಿಗೆ ಬೇಕಾಗಿರುವ ಔಷಧವನ್ನು ಹೊರಗಡೆ ಹೋಗಿ ತೆಗೆದುಕೊಳ್ಳಬೇಕಿದೆ. ಈ ರೀತಿಯ ಅನಾಹುತಗಳು ತಮ್ಮ ಗಮನಕ್ಕೂ ಕೂಡ ಬಂದಿರುತ್ತದೆ. ಇದನ್ನು ಸರಿಪಡಿಸುವುದು ಒಂದು

ಪುಣ್ಯದ ಕೆಲಸ. ಇದು ಸರ್ಕಾರಕ್ಕೆ ಮತ್ತು ಜನಕ್ಕೆ ಮೆಚ್ಚಿಸುವ ಕೆಲಸವಲ್ಲ. ಪುಣ್ಯದ ಕೆಲಸದಲ್ಲಿ ತಾವು ದಯವಿಟ್ಟು ಭಾಗಿಯಾಗಬೇಕು.

**ಡಾ.ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ಸದಸ್ಯರ ಬದ್ಧತೆಯನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತಿನ ದಿವಸ ಜಿಲ್ಲಾ ಆಸ್ಪತ್ರೆಗಳಲ್ಲಿರುವುದು ನಮಗೂ ಗೊತ್ತಿದೆ. ಹಾಗೆಯೇ ಇವತ್ತು tertiary services, ಮೂರನೆಯ ಹಂತದ ಆರೋಗ್ಯ ಸೇವೆಗಳು ಸಿಗುವಂತಹ ಒಂದು ಸಂಸ್ಥೆಯಾಗಿದೆ. ಇವತ್ತಿನ ದಿವಸ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಜಿಲ್ಲಾ ಆಸ್ಪತ್ರೆಗಳಿವೆ. ಅದೇ ರೀತಿ ತಾಲ್ಲೂಕು ಆಸ್ಪತ್ರೆಗಳು ಕೂಡ ಇವೆ. ಇವತ್ತಿನ ದಿವಸ ಹೊಸದಾಗಿ ರಚನೆಯಾಗಿರತಕ್ಕಂಥ ತಾಲ್ಲೂಕುಗಳಲ್ಲೂ ಕೂಡ ಹೊಸದಾಗಿ ತಾಲ್ಲೂಕು ಆಸ್ಪತ್ರೆ ಆಗಬೇಕಾಗಿದೆ. ಈ ವರ್ಷ ನಾವು 100 ಪಿ.ಹೆಚ್.ಸಿ.ಗಳನ್ನು ಸಿ.ಹೆಚ್.ಸಿ ಕೇಂದ್ರಗಳಾಗಿ ಅಭಿವೃದ್ಧಿ ಮಾಡುತ್ತಿದ್ದೇವೆ. ಹಾಗಾಗಿ, ಇವತ್ತಿನ ದಿವಸ expert doctors ಏನಿದ್ದಾರೆ, ಅವರನ್ನೂ ಕೂಡ ಈಗಾಗಲೇ ಹೇಳಿದಂತೆ, compulsory medical service doctors ರೀತಿಯಲ್ಲಿ ನಮ್ಮಲ್ಲಿ ಇರತಕ್ಕಂಥ ಎಲ್ಲಾ ಪಿ.ಹೆಚ್.ಸಿ.ಗಳನ್ನೂ ಕೂಡ 24X7 ಮಾಡುವುದಕ್ಕೆ ನಾವು ಈಗ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕಾಗಿ ಸುಮಾರು 4,000 ವೈದ್ಯರು, ಸುಮಾರು 3,000 ಎಂ.ಬಿ.ಬಿ.ಎಸ್ ವೈದ್ಯರು ಮತ್ತು ಸುಮಾರು 1,000ಕ್ಕೂ ಹೆಚ್ಚಿಗೆ specialists ನ್ನು ಕೂಡ ನಾವು ಇದಕ್ಕೆ ನೇಮಕಾತಿಯನ್ನು ಮಾಡಿಕೊಂಡಿದ್ದೇವೆ. ಮಾನ್ಯ ಸದಸ್ಯರು ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ ಬಗ್ಗೆ ಹೇಳಿದ್ದಾರೆ. ಇದು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಬರುತ್ತದೆ. ಇಲ್ಲಿಯೂ ಕೂಡ ಏನಾದರೂ ನ್ಯೂನತೆಗಳಿದ್ದರೆ ಖಂಡಿತವಾಗಿಯೂ ಕೂಡ ನಾನು ಮತ್ತೆ ಅಲ್ಲಿಗೆ ಭೇಟಿ ನೀಡಿ ಆದಷ್ಟು ಶೀಘ್ರದಲ್ಲಿ ಅದೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ದೂರುಗಳ ಬಗ್ಗೆ redressal systemನ್ನು ಕೂಡ ಮಾಡಿದ್ದೇವೆ.

**(ಮುಂದು...)**

**(898)19.9.2022/12.10/ಎಂ.ಎಂ-ಎ.ಕೆ**

**ಡಾ: ಕೆ. ಸುಧಾಕರ್ (ಮುಂದು):-**

ಈ redressal system ನಲ್ಲಿ ರಾಜ್ಯದಲ್ಲಿ ಯಾವುದೇ ಆಸ್ಪತ್ರೆಯಲ್ಲಿ ಯಾರೇ ದೂರು ಕೊಟ್ಟರೂ ಅದನ್ನು ಕಾಲಮಿತಿಯೊಳಗೆ ಮುಗಿಸಲು ಗರಿಷ್ಟ 15 ದಿನಗಳ ಸಮಯ ಕೊಟ್ಟಿದ್ದೇವೆ. ಆ 15 ದಿನಗಳ ಒಳಗಡೆಯೇ ಆಗಬೇಕು. ಉದಾಹರಣೆಗೆ ನಮಗೆ ದಿನಾಂಕ as of 17-9-2022ರಲ್ಲಿ 895 ಕಂಪ್ಲೇಂಟ್ಸ್ ಬಂದಿದೆ. 895 ಕಂಪ್ಲೇಂಟ್‌ಗಳಲ್ಲಿ ಈಗಾಗಲೇ 686 ಕಂಪ್ಲೇಂಟ್‌ಗಳನ್ನು ಕ್ಲಿಯರ್ ಮಾಡಿದ್ದೇವೆ. ಟೈಂಲೈನ್ಸ್ ಎಲ್ಲಾ ಕೂಡ 180 within timelines ಮಾಡಿದ್ದಾರೆ. ಟೈಂಲೈನ್ಸ್ ಮೀರಿ 29 ಕಂಪ್ಲೇಂಟ್ ಮಾಡಿದ್ದೇವೆ. ಅಂದರೆ ಶೇ.3ರಷ್ಟು ಮಾತ್ರ ಟೈಂಲೈನ್ಸ್ ಮೀರಿದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನೀವು ಚಾಟಿ ಬೀಸಬೇಕು. Rigorous ಆಗಿ ಮಾಡಬೇಕು. ಇದು ಬಹಳ ಪ್ರಮುಖವಾದ ಪ್ರಶ್ನೆಯಾಗಿದೆ. ಇದರಲ್ಲಿ ಎಂತಹ ವಿಚಾರವನ್ನು ಹೇಳಿದ್ದಾರೆ ಎಂದರೆ . . . .

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಮಾನ್ಯ ಸದಸ್ಯರು ಎಷ್ಟು ವಿವರವಾಗಿ ಪ್ರಶ್ನೆ ಕೇಳಿದ್ದಾರೋ ಮಾನ್ಯ ಸಚಿವರು ಅಷ್ಟೇ ವಿವರವಾದ ಉತ್ತರವನ್ನು ಕೊಡುತ್ತಿದ್ದಾರೆ.

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಡಯಾಲಿಸಿಸ್ ಸೇವೆಯನ್ನು ಬಲಪಡಿಸಿ; ಪ್ರತಿ ಮಾಹೆಗೆ 30,000 ಡಯಾಲಿಸಿಸ್ ಸೈಕಲ್‌ಗಳು ಮಾತ್ರ ಇತ್ತು. ನಮ್ಮ ಮುಖ್ಯಮಂತ್ರಿಗಳು ಬಂದ ಮೇಲೆ ಈ ಆಯವ್ಯಯದಲ್ಲಿ ಡಬಲ್ ಮಾಡಿದ್ದಾರೆ. ನಮಗೆ ಗೊತ್ತಿದೆ, ಇವತ್ತಿನ ಡಯಾಲಿಸಿಸ್ ದಿನೇ ದಿನೇ ಹೆಚ್ಚಾಗುತ್ತಿದೆ ಎನ್ನುವ ಅರಿವು ನಮ್ಮ ಸರ್ಕಾರಕ್ಕೆ ಇರುವುದರಿಂದ 30,000 ಇದ್ದಂತಹ ಡಯಾಲಿಸಿಸ್ ಸೈಕಲ್‌ಗಳನ್ನು ಹೆಚ್ಚಳ ಮಾಡಿ 60,000 ಡಯಾಲಿಸಿಸ್ ಸೈಕಲ್‌ಗಳನ್ನು ಮಾಡಿದ್ದೇವೆ. ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಕೂಡ ಡಯಾಲಿಸಿಸ್ ಮಷಿನ್ಸ್ ಇರುತ್ತದೆ. ಅದೇ ರೀತಿ ಸ್ಕ್ಯಾನಿಂಗ್ ಸೌಲಭ್ಯ ಇದೆ. ಪಿ.ಹೆಚ್.ಸಿ., ಹಂತದಿಂದಲೇ 56 ವಿವಿಧ

ರೀತಿಯ ಡಯಾಗ್ನೋಸಿಸ್ ಆಗುವುದಕ್ಕೆ ಎಲ್ಲಾ ಸಲಕರಣೆಗಳನ್ನು ಕಳುಹಿಸಿಕೊಟ್ಟಿದ್ದೇವೆ. Reagents ಉಚಿತವಾಗಿದೆ. ಅನೇಕ ಸಮಸ್ಯೆಗಳಿರಬಹುದು. ಆದರೆ ಕಳೆದ ಎರಡು ವರ್ಷದಲ್ಲಿ ಆರೋಗ್ಯ ವ್ಯವಸ್ಥೆಗಳು sub-centre ಹಿಡಿದು tertiary ಆಸ್ಪತ್ರೆಯವರೆಗೂ ಗುಣಾತ್ಮಕವಾದಂತಹ ಬದಲಾವಣೆಗಳಾಗಿದೆ, ಸುಧಾರಣೆಯಾಗಿದೆ. ಇದನ್ನು ತಾವು ಕೂಡ ಒಪ್ಪುತ್ತೀರಿ ಎಂದು ತಿಳಿದುಕೊಂಡಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರಿಗೆ ಧನ್ಯವಾದಗಳು. ಈಗ ಶ್ರೀಮತಿ ಹೇಮಲತಾ ನಾಯಕ್ ಅವರ ಪ್ರಶ್ನೆ.

**ಶ್ರೀ ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸಚಿವರು ವಿವರವಾಗಿ ಹೇಳಿದ್ದಾರಲ್ಲವೇ?

**ಶ್ರೀ ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ನನ್ನದೊಂದು ಉಪ ಪ್ರಶ್ನೆ ಇದೆ ಅದನ್ನು ಕೇಳುತ್ತೇನೆ. ಮಾನ್ಯ ಸಚಿವರೇ, ನಾನು ಕೇಳುವುದು ಇಷ್ಟೇ. ನೀವು ಮಾಡಿರುವುದನ್ನು ಇಲ್ಲವೆಂದು ಹೇಳುವುದಿಲ್ಲ. ಆದರೆ ಅಲ್ಲಿ ಸಿಬ್ಬಂದಿ ಇರುವುದಕ್ಕೆ ಜಾಗ ಬೇಕಲ್ಲವೇ? ಎಂ.ಬಿ.ಬಿ.ಎಸ್., ಎಂ.ಡಿ., ಮಾಡಿರುವ ಡಾಕ್ಟರ್ ಎಂದರೆ ಅವರು ಇರುವುದಕ್ಕೆ ಒಂದು ರೂಮ್ ಅಥವಾ ಮನೆ ಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ಸಚಿವರೂ ಡಾಕ್ಟರ್ ಆಗಿದ್ದಾರೆ.

**ಶ್ರೀ ಅಬ್ದುಲ್ ಜಬ್ಬರ್:-** ಆ ಸವಲತ್ತುಗಳು ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಹಳ್ಳಿಗಳಲ್ಲಿಲ್ಲ. ಇದು ಮೊದಲನೆಯದು. ಎರಡನೆಯದಾಗಿ ಹಿಂದಿನ ಸರ್ಕಾರ ಇದ್ದಾಗ ಜಿಲ್ಲಾವಾರು ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮಾಡುತ್ತೇವೆ ಎಂದು ಹೇಳಿದ್ದರು. ಬಹಳ ಕಡೆ ಕೆಲಸಗಳು ಪ್ರಾರಂಭವಾಗಿದ್ದು ನನಗೆ ಗೊತ್ತಿದೆ. ಅದನ್ನು ದಾವಣಗೆರೆಗೂ ಒಂದು ಕೊಟ್ಟಿದ್ದಾರೆ. ಅದು ಯಾವ ಸ್ಥಿತಿಯಲ್ಲಿದೆ, ಎಲ್ಲಿ ಮಾಡಿದ್ದಾರೆ? ಎಲ್ಲಾ ಜಿಲ್ಲಾವಾರು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸರ್ಕಾರದಿಂದ ಮಾಡುತ್ತಿದ್ದಾರೋ ಇಲ್ಲವೋ ಎಂಬುದನ್ನು ತಿಳಿಸಿ.

**ಡಾ: ಕೆ. ಸುಧಾಕರ್:–** ಮಾನ್ಯ ಸಭಾಪತಿಯವರೇ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಈಗಾಗಲೇ ನಾವು ಕೆಲವು ಜಿಲ್ಲೆಗಳಲ್ಲಿ ಉದ್ಘಾಟನೆ ಮಾಡಿದ್ದೇವೆ. ಇನ್ನು ಕೆಲವು ಈಗ ವಿವಿಧ ಹಂತದ ಕಾಮಗಾರಿಗಳಲ್ಲಿದೆ. ಇನ್ನೂ ಕೂಡ ಎಲ್ಲಾ ಜಿಲ್ಲೆಗಳಲ್ಲಿ ಮಾಡುವುದಕ್ಕಾಗಿಲ್ಲ. ತಮಗೆ ಗೊತ್ತಿದೆ, ಅನುದಾನದ ಸ್ಥಿತಿಯನ್ನು ನೋಡಿಕೊಂಡು ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ದಾವಣಗೆರೆಯಲ್ಲಿ ಒಂದು ಹೊಸ ವೈದ್ಯಕೀಯ ಕಾಲೇಜನ್ನು ಮಾಡುವ ಪ್ರಸ್ತಾವನೆ ನಮ್ಮ ಸರ್ಕಾರದಲ್ಲಿದೆ. ಅಲ್ಲಿ ಕೂಡ super specialization ಇರುವ ಆಸ್ಪತ್ರೆಯನ್ನು ನಿರ್ಮಾಣ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

**ಪ್ರಶ್ನೆ ಸಂಖ್ಯೆ: 755**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದೈಹಿಕ ಮತ್ತು ಚಿತ್ರಕಲಾ ಶಿಕ್ಷಕರ ಒಟ್ಟು ಸಂಖ್ಯೆಯನ್ನು ಜಿಲ್ಲಾವಾರು ನೀಡುವುದು.

**ಸಭಾಪತಿಯವರು:-** ಮಾನ್ಯ ಹೇಮಲತಾ ನಾಯಕ್‌ರವರೇ, ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ನಂತರ ಉಪಪ್ರಶ್ನೆ ಇದ್ದರೆ ಕೇಳಿ. ಇಲ್ಲದಿದ್ದರೆ ತಾವು ಸಮಾಧಾನವಾಗಿ ಇರಿ.

**ಶ್ರೀ ಬಿ.ಸಿ. ನಾಗೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದೇವೆ. ಅವರು ಹೇಳಿದ ಹಾಗೆ ಆ ಹುದ್ದೆಗಳು ಖಾಲಿ ಇದೆ. ಆ ಎಲ್ಲಾ ಹುದ್ದೆಗಳು ಎಷ್ಟು ಖಾಲಿ ಇದೆಯೋ ಅಷ್ಟಕ್ಕೆ ಅನುಮತಿ ಕೊಡಬೇಕೆಂದು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ. ಆರ್ಥಿಕ ಇಲಾಖೆಯಿಂದ ಬಂದ ತಕ್ಷಣವೇ ಆ ಹುದ್ದೆಗಳನ್ನು ಪೂರ್ಣಗೊಳಿಸುವ ಪ್ರಯತ್ನ ಮಾಡುತ್ತೇವೆ. ಸದ್ಯಕ್ಕೆ 200 ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರಿಗೆ ಅನುಮತಿ ಕೊಟ್ಟಿದೆ. ಅದನ್ನು ನೇರ ನೇಮಕಾತಿ ಮೂಲಕ ತೆಗೆದುಕೊಳ್ಳುತ್ತೇವೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಹೈದರಾಬಾದ್-ಕರ್ನಾಟಕ ಎಂದರೆ ಮೊದಲನೆಯದಾಗಿ ಬರುವುದು ಶಿಕ್ಷಕರ ಕೊರತೆ ಮತ್ತು ಶಿಕ್ಷಣದಲ್ಲಿ ಬಹಳ ಹಿಂದುಳಿದಿರುವಂತಹ ಪ್ರದೇಶಗಳು. ನಾನು ಮಾಹಿತಿ ಕೇಳಿದಂತೆ ಜಿಲ್ಲಾವಾರು ಅನುದಾನರಹಿತ ಮತ್ತು ಸರ್ಕಾರಿ ಶಾಲೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ನನ್ನ ನೋವೇನೆಂದರೆ, ಕಳೆದ 14 ವರ್ಷಗಳಿಂದ ಸುಮಾರು 2000ನೇ ಇಸವಿಯಿಂದ ಹಿಡಿದು ಇಲ್ಲಿಯವರೆಗೂ ಚಿತ್ರಕಲಾ ಶಿಕ್ಷಕರನ್ನು ನೇಮಕಾತಿ ಮಾಡಿರುವುದಿಲ್ಲ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ರಾಜ್ಯ ನೀತಿ ಖಚಿತವಾಗಿ ರೂಪುಗೊಂಡಿಲ್ಲ. ರಾಜ್ಯದಲ್ಲಿ ಸುಮಾರು 2000 ಚಿತ್ರಕಲಾ ಶಿಕ್ಷಕರ ಹುದ್ದೆ ಖಾಲಿ ಇದೆ. ಹಾಗೂ ಅನುದಾನಿತ

ಶಾಲೆಗಳಿಗೆ ನೇಮಕ ಮಾಡಿಕೊಳ್ಳಬೇಕಾದಂತಹ ಶಿಕ್ಷಕರ ಸಂಖ್ಯೆ ಕೂಡ ಎಷ್ಟೋ ಅನುದಾನಿತ ಶಾಲೆಗಳಲ್ಲಿ ವಿಭಾಗಾವಾರು ಬಂದ್ ಮಾಡಿದ್ದಾರೆ. ಇಲ್ಲಿಯವರೆಗೂ ಏತಕ್ಕೆ ಹೈದರಾಬಾದ್-ಕರ್ನಾಟಕ ಭಾಗವಲ್ಲದೇ ಕರ್ನಾಟಕದಲ್ಲಿರುವಂತಹ ಚಿತ್ರಕಲಾ ಶಿಕ್ಷಕರು ಮತ್ತು ದೈಹಿಕ ಶಿಕ್ಷಕರ ನೇಮಕಾತಿಯೇ ಆಗಿಲ್ಲ? ಅಲ್ಲದೇ ಮೊನ್ನೆ ತಾನೇ ಮಾನ್ಯ ಸಚಿವರು ಮುಂದಿನ ಬಾರಿ ನಾವು ದೈಹಿಕ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ನನ್ನ ನೋವೇನೆಂದರೆ, ಹೈದರಾಬಾದ್- ಕರ್ನಾಟಕ ಭಾಗದಲ್ಲಿ ಹಲವಾರು ಶಾಲೆಗಳಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇರುವುದರಿಂದ ಮುಂದೆ ಬರುವ ಅವಕಾಶಗಳಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡುತ್ತಾರೆ? ಹಲವಾರು ಜನರ ವಯಸ್ಸುಗಳು ಮೀರಿದೆ. ಅದರ ಬಗ್ಗೆ ನನಗೆ ನೋವಿದೆ. ಮತ್ತು ನೆರೆಯ ರಾಜ್ಯಗಳಾದ ಗೋವಾ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಲ್ಲಿ ಪ್ರತಿವರ್ಷ ನೇಮಕಾತಿ ನಡೆಯುತ್ತಿದೆ. ನಮ್ಮಲ್ಲಿ ಚಿತ್ರಕಲಾ ಡಿಪ್ಲೊಮೋ ಹಾಗೂ ಪದವೀಧರ ಶಿಕ್ಷಕರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಹೀಗಿದ್ದರೂ ನೇಮಕಾತಿ ಏತಕ್ಕೆ ನಡೆಯುತ್ತಿಲ್ಲ ಎನ್ನುವುದರ ಬಗ್ಗೆ ಸ್ಪಷ್ಟನೆ ಬೇಕಾಗಿದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ತಮ್ಮ ಅವಶ್ಯಕತೆ ಬಹಳ ಇದೆ. ತಾವು ಹೇಳಬೇಕು ಇಲ್ಲದಿದ್ದರೆ ಇದು ಆಗುವುದಿಲ್ಲ. ಮಾನ್ಯ ಸಚಿವರಾದ ನಾರಾಯಣಗೌಡರು ನಮ್ಮ ರಾಜ್ಯದಿಂದ 100 ಜನರನ್ನು ಒಲಂಪಿಕ್‌ಗೆ ಕಳುಹಿಸಿಕೊಡುತ್ತೇವೆ ಎಂದು ಹೇಳಿದರು. ದೈಹಿಕ ಶಿಕ್ಷಕರೇ ಇಲ್ಲ.

**ಡಾ: ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಶಿಕ್ಷಕರಿಲ್ಲದಿರುವುದಕ್ಕೆ ಇದರ ಬಗ್ಗೆ ಒಂದರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯಮಾಡಿ ತಾವು ಸರ್ಕಾರಕ್ಕೆ ಹೇಳಬೇಕು.

**ಶ್ರೀಮತಿ ಭಾರತಿ ಶೆಟ್ಟಿ:-** ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕೆಂದು ಚರ್ಚೆಯಾಗಿದೆ, ಇನ್ನೂ ಆಗಿಲ್ಲ.

**ಶ್ರೀ ಬಿ.ಸಿ. ನಾಗೇಶ್:-** ಮಾನ್ಯ ಸಭಾಪತಿಯವರೇ, ಅನೇಕ ವರ್ಷಗಳಿಂದ 14-15 ವರ್ಷಗಳಿಂದ ನೇಮಕಾತಿ ಆಗದಿರುವ ಕಾರಣಕ್ಕೋಸ್ಕರ ಇಷ್ಟು ಕೊರತೆ ಬಂದಿದೆ. ಆದ್ದರಿಂದ 200 ಜನರನ್ನು ತೆಗೆದುಕೊಳ್ಳುತ್ತೇವೆ ಮತ್ತು 100 ಬೇರೆ ಬೇರೆ ಚಿತ್ರಕಲಾ ಮತ್ತು ಇತರ ಶಿಕ್ಷಕರನ್ನೂ ಈ ಸಲ ತೆಗೆದುಕೊಳ್ಳುತ್ತಿದ್ದೇವೆ. ಆರ್ಥಿಕ ಇಲಾಖೆಯಿಂದ ಸಹಮತಿ ಬಂದ ತಕ್ಷಣ ಮುಂದಿನ ಸಲ ಪೂರ್ಣವಾಗಿ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಮಧು ಜಿ. ಮಾದೇಗೌಡರೇ . . .

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರಾದ ಹೇಮಲತಾ ನಾಯಕ್‌ರವರು ಮೊದಲ ಸಲ ಮಾತನಾಡುತ್ತಿದ್ದಾರೆ ಅವರಿಗೆ ಅವಕಾಶ ಕೊಡಿ.

**ಸಭಾಪತಿಯವರು:-** ನೀವೇ ನಿಮ್ಮ ಪಾಡಿಗೆ ಎಲ್ಲರೂ ನಿರ್ಣಯ ತೆಗೆದುಕೊಂಡರೆ ನಾನೇನು ಮಾಡಲಿ? ಮಾನ್ಯ ಸದಸ್ಯರು ಕೇಳಿದರು ಅವರಿಗೆ ಅವಕಾಶ ಕೊಟ್ಟಿದ್ದೇವೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಕಲಂ 371ಜೆ ಪ್ರಕಾರ ಹೈದರಾಬಾದ್ ಕರ್ನಾಟಕ ಭಾಗದಲ್ಲಿ;

**ಶ್ರೀ ಎಸ್. ರುದ್ರೇಗೌಡ:-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಾನ್ಯ ಸದಸ್ಯರಾದ ಹೇಮಲತಾ ನಾಯಕ್‌ರವರ ಮೊದಲನೇ ಪ್ರಶ್ನೆ ಇದು.

**ಶ್ರೀಮತಿ ಹೇಮಲತಾ ನಾಯಕ್:-** ಚಿತ್ರಕಲಾ, ದೈಹಿಕ ಶಿಕ್ಷಕರು ಮತ್ತು ಸಂಗೀತ ಶಿಕ್ಷಕರ ಯಾವ ಹುದ್ದೆಗಳನ್ನೂ ತುಂಬಿಲ್ಲ. ನನ್ನ ನೋವೇನೆಂದರೆ, ಮುಂಬರುವ ದಿನಗಳಲ್ಲಿ ಇಲ್ಲಿಗೆ ಬಹಳಷ್ಟು ಶಿಕ್ಷಕರನ್ನು ನೇಮಕ ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಸಿ. ನಾಗೇಶ್:-** ಮಾನ್ಯ ಸಭಾಪತಿಯವರೇ, ಅದನ್ನು ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 719**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಮಧು ಜಿ. ಮಾದೇಗೌಡರ ಪ್ರಶ್ನೆ ಸಂಖ್ಯೆ: 719 ಸಹಕಾರ ಇಲಾಖೆಗೆ ವರ್ಗಾವಣೆಯಾಗಿದೆ. ನಿಮಗೆ ಉತ್ತರವನ್ನು ನಾಳೆ ಕೊಡಿಸುತ್ತೇನೆ.

**ಶ್ರೀ ಮಧು ಜಿ. ಮಾದೇಗೌಡ:–** ಮಾನ್ಯ ಸಭಾಪತಿಯವರೇ, ಆರೋಗ್ಯ ಸಚಿವರಲ್ಲಿ ನನ್ನದೊಂದು ಪ್ರಶ್ನೆ ಇದೆ. ಅವತ್ತು ಆರೋಗ್ಯ ಸಚಿವರು ಬೇಕು.

**ಸಭಾಪತಿಯವರು:–** ಆಗಲಿ ನಾಳೆಯೇ ಉತ್ತರ ಕೊಡಿಸುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 759**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಇರುವುದು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳೇನಿವೆ ಅಲ್ಲಿ ಎನ್.ಪಿ.ಎಸ್., ಮತ್ತು ಓ.ಪಿ.ಎಸ್ ಅನ್ನು ಜಾರಿ ಮಾಡುವುದಕ್ಕೆ ಇದೆಯೇ?

**(ಮುಂದು)**

**(899) 19-09-2022 KH-VK 12-20**

**ಶ್ರೀ ಆಯನೂರು ಮಂಜುನಾಥ್ (ಮುಂದು):-**

ಇವತ್ತಿನವರೆಗೂ ಅಲ್ಲಿ ಜಾರಿ ಮಾಡಲಿಲ್ಲ. 2006ರ ನಂತರ ಬಂದವರಿಗೆ ಎನ್.ಪಿ.ಎಸ್., ಇಲ್ಲ, ಓ.ಪಿ.ಎಸ್., ಇಲ್ಲ. ಈ ಸ್ವಾಯತ್ತ ಸಂಸ್ಥೆಗಳು 2006-07ನೇ ಸಾಲಿನಲ್ಲಿ ಪ್ರಾರಂಭವಾಗಿವೆ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. 2006ರ ನಂತರ ಸೇರಿದಂತಹವರು ಸುಮಾರು 13-14 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿ ಖಾಲಿ ಕೈಯಲ್ಲಿ ಹೊರಗಡೆ ಹೋಗುತ್ತಿದ್ದಾರೆ. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಅವರ ಯಾವುದೇ ಅಂಶದಾಯಿ ಕೊಡುಗೆಯನ್ನು ಕಟಾಯಿಸಿಲ್ಲ ಎಂದು ಹೇಳಿದ್ದಾರೆ. ಏಕೆ ಕಟಾಯಿಸಿಲ್ಲ ಎನ್ನುವಂತಹದ್ದು ಪ್ರಶ್ನೆ. ಸ್ವಾಯತ್ತ ಸಂಸ್ಥೆಗಳು ತಾವೇ ಸಂಪನ್ಮೂಲಗಳನ್ನು ಒದಗಿಸಿಕೊಳ್ಳಬೇಕೆಂಬ ನಿರ್ಣಯವಾಗಿದೆ ಎಂದು ಹೇಳಿದ್ದಾರೆ. ಆ ಆಡಳಿತ ಮಂಡಳಿ ಏನಿರುತ್ತದೆ, Governing Council, ಅದರ ಛೇರ್‌ಮನ್ ಆಗಿ by virtue of position ನಮ್ಮ ವೈದ್ಯಕೀಯ ಶಿಕ್ಷಣ ಸಚಿವರು ಇರುತ್ತಾರೆ. ಮಾನ್ಯ ಸಚಿವರೇ, ತಾವೇ ಅಲ್ಲಿದ್ದೀರಿ. ಸಂಪನ್ಮೂಲಗಳನ್ನು ಏಕೆ ಒದಗಿಸಿಕೊಡಲಿಲ್ಲ. ತಾವು ಸಚಿವರಾಗಿ ಅಲ್ಲದೆ ಇದ್ದರೂ ಕೂಡ ಅದರ ಛೇರ್‌ಮನ್‌ರಾಗಿ ಮಾಡಬಹುದಾಗಿತ್ತಲ್ಲವೇ? Governing Council ಅವರು ಏಕೆ ಮಾಡಲಿಲ್ಲ? ಇವತ್ತು ಅವರು ಬೀದಿ ಪಾಲಾಗುತ್ತಿದ್ದಾರೆ. ಇವರ ಸಮಸ್ಯೆಗಳಿಗೆ ಸರ್ಕಾರ ಮತ್ತು Governing Council ನಿಂದಾದ ತಪ್ಪಿನಿಂದ ಅವರು ಖಾಲಿ ಕೈಯಲ್ಲಿ ಹೊರಗಡೆ ಹೋಗುತ್ತಿದ್ದಾರೆ. ಅವರು ತಮ್ಮ

ನಿವೃತ್ತಿ ಜೀವನವನ್ನು ಹೇಗೆ ಕಳೆಯಬೇಕು? ಅವರ ರಕ್ಷಣೆಗೆ Governing Council ರಾದರೂ ಬರಬೇಕು. ವೈದ್ಯಕೀಯ ಇಲಾಖೆಯಾದರೂ ಬರಬೇಕೆಂಬ ಮಾತನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ದಿನಾಂಕ:01-04-2006 ರಲ್ಲಿ ಅಂದಿನ ಸರ್ಕಾರ ಬೋಧಕ ಆಸ್ಪತ್ರೆಗಳಲ್ಲಿರುವಂತಹ ಬೋಧಕೇತರ ಮತ್ತು ಬೋಧಕ ವೃಂದದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಹಾಗೆಯೇ ಕೆಲವು ಸ್ವಾಯತ್ತ ಇಲಾಖೆಗಳು, ಕೆಲವು ಬೋರ್ಡ್ ಅಂಡ್ ಕಾರ್ಪೋರೇಷನ್‌ಗಳು, ಇವೆಲ್ಲವೂ ಕೂಡ ಆಯಾಯ ಸಂಸ್ಥೆಯವರೇ ಭರಿಸಬೇಕೆಂದು ಅವತ್ತಿನ ದಿನ ತೀರ್ಮಾನವಾಗಿತ್ತು. ಅಂದಿನಿಂದ ದಿನಾಂಕ:01-04-2006ರ ನಂತರ ಖಾಯಂ ಆಗಿ ಯಾರು ನೇಮಕಗೊಂಡಿದ್ದಾರೆ, ಅವರಿಗೆಲ್ಲಾ ಇದು ಅನ್ವಯವಾಯಿತು. 2020 ರವರೆಗೂ ಕೂಡ ಆಗಿತ್ತು. ನಮ್ಮ ಸರ್ಕಾರ ಬಂದ ಮೇಲೆ ನಾವು ಮತ್ತೆ 2020ನೇ ಸಾಲಿನಲ್ಲಿ ಆದೇಶ ಮಾಡಿದ್ದೇವೆ. ಸ್ವಾಯತ್ತ ಇರುವಂತಹ ಸಂಸ್ಥೆಗಳಲ್ಲಿ ಕೂಡ ಖಾಯಂ ಇರುವಂತಹ ಅಧಿಕಾರಿಗಳ ಬೇಸಿಕ್ ಪೇ ಏನಿದೆ, ಅದರಲ್ಲಿ matching grants ಶೇಕಡಾ 10 ರಷ್ಟು ಕೊಡುಗೆಯನ್ನು ಕೊಡಬೇಕು. ಇನ್ನು ಶೇಕಡಾ 10 ರಷ್ಟು ಕೊಡುಗೆಯನ್ನು ಸರ್ಕಾರ ಕೊಡಬೇಕೆಂಬ ಬಗ್ಗೆ ಆರ್ಥಿಕ ಇಲಾಖೆಯ ಜೊತೆ ಹಲವು ಸುತ್ತಿನ ಮಾತುಕತೆಯನ್ನು ಮಾಡಿದ್ದೇವೆ. ಇದಕ್ಕೆ ಆದೇಶ ಕೂಡ ಹೊರಡಿಸಿದ್ದೇವೆ. ಈಗಾಗಲೇ ನಾವು 3-4 ಸ್ವಾಯತ್ತ ಸಂಸ್ಥೆಗಳಲ್ಲಿ 2015ನೇ ಸಾಲಿನಿಂದ ಕೆಲವರು ಪ್ರಾರಂಭ ಮಾಡಿದ್ದಾರೆ. ಕೆಲವರು 2016-17ನೇ ಸಾಲಿನಿಂದ ಪ್ರಾರಂಭ ಮಾಡಿದ್ದಾರೆ. ನಾವು ಕೂಡ ಎಲ್ಲಾ ಸ್ವಾಯತ್ತ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಾರಂಭ ಮಾಡುತ್ತೇವೆ. ಇನ್ನು ಕೂಡ ಅನೇಕ Corporations, Boards ಗಳಲ್ಲಿ ಆಗಿಲ್ಲ. ಆರ್ಥಿಕ ಇಲಾಖೆಯವರು ಶೇಕಡಾ 10 ರಷ್ಟು matching grants ಕೊಟ್ಟಾಗ ಎಲ್ಲಾ ಇಲಾಖೆಗಳ ಅಧಿಕಾರಿಗಳು ಇದನ್ನು ಸರ್ಕಾರಿ ಇಲಾಖೆ ಎಂದು ಪರಿಗಣಿಸಿಲ್ಲ. ಸ್ವಾಯತ್ತ ಸಂಸ್ಥೆಗಳು ಎಂದು ವೈದ್ಯಕೀಯ ಕಾಲೇಜುಗಳನ್ನು ತಾವೇ bear ಮಾಡಬೇಕೆಂದು ಹೇಳಿದ್ದರು. ನಾವು ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಆ ಸ್ವಾಯತ್ತ ಸಂಸ್ಥೆಗಳಲ್ಲಿ ಅವಕಾಶ ಇಲ್ಲ. ಹಾಗಾಗಿ, ಇದನ್ನು ಆರ್ಥಿಕ ಇಲಾಖೆಗೆ ಹೇಳಿದ್ದೇವೆ. ಈಗಾಗಲೇ ಆದೇಶ ಕೂಡ ಮಾಡಿದ್ದೇವೆ. ತಾವು 2015ನೇ

ಸಾಲಿನದನ್ನು ನೋಡಬಹುದು. ಮಾನ್ಯ ಸದಸ್ಯರು 2006 ರಿಂದ 2020ರ ಮಧ್ಯದಲ್ಲಿರುವಂತಹವರಿಗೆ ಯಾವ ರೀತಿ ನಿರ್ಣಯವನ್ನು ಕೊಡಿಸುತ್ತಾರೆ ಎಂದು ಕೇಳಿದ್ದಾರೆ. ಇದರ ಬಗ್ಗೆ ಆರ್ಥಿಕ ಇಲಾಖೆಯವರ ಹತ್ತಿರ ಸಮಾಲೋಚನೆಯನ್ನು ಮಾಡಿ ಅಲ್ಲಿ ಇದ್ದಂತಹ ಜನರಿಗೆ ಯಾವ ರೀತಿ ನ್ಯಾಯ ಒದಗಿಸಲು ಸಾಧ್ಯವಿದೆಯೋ, ಅದರ ಸಾಧಕ-ಬಾಧಕಗಳನ್ನು ಪರಿಶೀಲಿಸಿ ಕ್ರಮ ವಹಿಸುತ್ತೇವೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾಮೂಲಿ ಉತ್ತರಕ್ಕಿಂತ ಸರ್ಕಾರ ಆ ಒಂದು ಸಮಯದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿತ್ತು ಅಥವಾ ಆ ಸಂಸ್ಥೆಗಳು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿತ್ತು. ಸಂಸ್ಥೆಗಳು ಮಾಡಿರುವ ತಪ್ಪಿನಿಂದಾಗಿ ಒಬ್ಬ ನೌಕರ ತನ್ನ ಇಳಿ ವಯಸ್ಸಿನಲ್ಲಿ ಖಾಲಿ ಕೈಯಲ್ಲಿ ಮನೆಗೆ ಹೋದರೆ, ಅವನ ಅನಾರೋಗ್ಯ, ಮಕ್ಕಳ ಭವಿಷ್ಯ, ತನ್ನ ಭವಿಷ್ಯ ಬೀದಿ ಪಾಲಾಗುತ್ತದೆ. ಆ ಕಾರಣದಿಂದ ಮಾನ್ಯ ಸಚಿವರು ಅವರಿಗೆ ನ್ಯಾಯವನ್ನು ಒದಗಿಸುತ್ತೇವೆ ಎನ್ನುವ ಖಚಿತ ಭರವಸೆಯನ್ನು ಕೊಟ್ಟರೆ ಆ ಇಳಿ ವಯಸ್ಸಿನ ಜೀವಗಳು ಇವತ್ತಾದರೂ ನೆಮ್ಮದಿಯಿಂದ ನಿದ್ದೆ ಮಾಡುತ್ತಾರೆ. ಆ ದೃಷ್ಟಿಯಿಂದ ಮಾನ್ಯ ಸಚಿವರು ಖಚಿತವಾದ ಭರವಸೆಯನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, huge financial implication ಇರುವುದರಿಂದ, . . .

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಒಬ್ಬ ನೌಕರರದ್ದು ಎಂದು ಹೇಳುತ್ತಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಸ್ವಾಯತ್ತ ಸಂಸ್ಥೆಯಲ್ಲಿ ಕೆಲಸ ಮಾಡುವವರು ಲಕ್ಷಗಟ್ಟಲೆ ಏನು ಇಲ್ಲ. ಸ್ವಾಯತ್ತ ಸಂಸ್ಥೆಗಳು ಎಷ್ಟು ಇವೆ, ಅಲ್ಲಿನ ನೌಕರರ ಒಟ್ಟು ಸಂಖ್ಯೆ ಎಷ್ಟಿವೆ, it is in some thousands. ಆ ದೃಷ್ಟಿಯಿಂದ . . .

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಇದು ಒಂದೇ ಇಲಾಖೆಗೆ ಸೀಮಿತ ಅಲ್ಲ. ಅನೇಕ ಇಲಾಖೆಗಳಲ್ಲಿನ ಸ್ವಾಯತ್ತ ಸಂಸ್ಥೆಗಳಿಗೆ ಇದೇ ಅನ್ವಯವಾಗಿದೆ. ವೈದ್ಯಕೀಯ ಶಿಕ್ಷಣ ಇಲಾಖೆಗೆ ಸೀಮಿತವಾಗಿ ಮಾತನಾಡುವಂತಹ ಸಂದರ್ಭದಲ್ಲಿ ಖಂಡಿತವಾಗಿ ಇವತ್ತು financial implication ಇರುವುದರಿಂದ, ಖಂಡಿತವಾಗಿಯೂ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಆರ್ಥಿಕ ಇಲಾಖೆಯವರ ಜೊತೆ ಚರ್ಚೆ ಮಾಡಿ ಆದಷ್ಟು ಸಕಾರಾತ್ಮಕವಾದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಕೊನೆಗೆ ಒಂದು ವಾಕ್ಯ. ನಾನು ಕೇಳಿರುವಂತಹ ಪ್ರಶ್ನೆ ಬೇರೆ ಇಲಾಖೆಗೆ ಸಂಬಂಧಪಟ್ಟಿದ್ದರೆ, ನಾನು ಮಾನ್ಯ ಮುಖ್ಯಮಂತ್ರಿಯವರನ್ನೇ ಕೇಳುತ್ತಿದ್ದೆ. ಇದು ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿರುವ ಪ್ರಶ್ನೆಯಾಗಿರುವುದರಿಂದ, ನಾನು ಮಾನ್ಯ ಸಚಿವರನ್ನೇ ಕೇಳುತ್ತಿದ್ದೇನೆ. ಮಾನ್ಯ ಸಚಿವರು ಕೊಡಲಿ. ಬೇರೆಯವರದ್ದು ಏನು ಆಗುತ್ತದೆ ಎಂದು ನೋಡಲಿ. ಎಲ್ಲಾ ಇಲಾಖೆಯವರನ್ನು ಎಫ್.ಡಿ., ಯವರೇ ಆಳ್ವಿಕೆ ಮಾಡಿಬಿಟ್ಟರೆ ನಮ್ಮ ಸಚಿವರಿಗೆ ಏನು ಕೆಲಸ? ಎಲ್ಲದಕ್ಕೂ ಎಫ್.ಡಿ.,ಯವರನ್ನೇ ತೋರಿಸಿಬಿಟ್ಟರೆ, ಅವರನ್ನೇ ಮಂತ್ರಿಗಳನ್ನಾಗಿ ಒಳಗೆ ಇವರ ಪಕ್ಕದಲ್ಲಿ ಕೂರಿಸಿಬಿಟ್ಟರೆ ಉತ್ತರ ಕೇಳುವುದಕ್ಕೆ ಸುಲಭವಾಗುತ್ತದೆ.

**ಪ್ರಶ್ನೆ ಸಂಖ್ಯೆ: 671**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ವಿವರವಾಗಿ ಕೊಟ್ಟಿದ್ದಾರೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಸುಮಾರು 15 ವರ್ಷಗಳಿಂದ ಪ್ರಾರಂಭ ಮಾಡುತ್ತೇವೆ ಎಂದು ಹೇಳುತ್ತಲೇ ಇದ್ದಾರೆ. ಇದನ್ನು ಯಾವಾಗ ಪ್ರಾರಂಭ ಮಾಡಲಾಗುತ್ತದೆ ಎಂದು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಇದನ್ನು ಕೂಡ ಸುಮಾರು 15-16 ವರ್ಷಗಳ ಒಂದು ಚರಿತ್ರೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ರಾಮನಗರದ ಅರ್ಚಕರಹಳ್ಳಿಯಲ್ಲಿ ಪ್ರಾರಂಭ ಮಾಡಬೇಕೆಂದು ಆವತ್ತಿನ ಸರ್ಕಾರ 2007ನೇ ಸಾಲಿನಲ್ಲಿ ಸುಮಾರು 216 ಎಕರೆ 24 ಗುಂಟೆ ಜಮೀನನ್ನು ಕೆಐಎಡಿಬಿ ಮೂಲಕ ಕೊಟ್ಟಿದ್ದಾರೆ. ಇದರಲ್ಲಿ 71 ಎಕರೆ 15 ಗುಂಟೆ ಜಮೀನನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ಕೊಟ್ಟಿದ್ದರು ಹಾಗೂ ಉಳಿದ 145 ಎಕರೆ 9 ಗುಂಟೆ ಜಮೀನನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಹಸ್ತಾಂತರ ಮಾಡಬೇಕೆಂದು ಹೇಳಿದ್ದರು. ತದನಂತರ ಕೆಲವು ಖಾಸಗಿ ವ್ಯಕ್ತಿಗಳು ಜಮೀನಿನ ವಿಚಾರದಲ್ಲಿ ವ್ಯಾಜ್ಯ ಮಾಡಿಕೊಂಡು ವಿವಿಧ ಕೋರ್ಟುಗಳಲ್ಲಿ ಪ್ರಕರಣ ದಾಖಲಾಗಿತ್ತು. ಆ ಕಾರಣಕ್ಕೆ 2007ನೇ ಸಾಲಿನಲ್ಲಿ ಟೆಂಡರ್ ಆಗಿದ್ದರೂ ಕೂಡ 2015 ರವರೆಗೂ ಅದೇ ಟೆಂಡರ್ ಅನ್ನು ಮಾಡಬೇಕೆಂದು ವಿವಿಧ ಇಲಾಖೆಗಳು, ವಿವಿಧ ಸರ್ಕಾರಗಳು ಬಂದಂತಹ ಸಂದರ್ಭದಲ್ಲಿ ವಿಚಾರ ಮಾಡಿದ್ದರು. ಆದರೆ, ಅದು practical ಆಗಿ ಆಗುವುದಿಲ್ಲ ಎಂದು ಗೊತ್ತಾದ ಮೇಲೆ 2015 ರಲ್ಲಿ ಅದನ್ನು ರದ್ದು ಮಾಡಿ, ಈಗ ನಮ್ಮ ಸರ್ಕಾರ ಬಂದ ಮೇಲೆ ಈ ವರ್ಷದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆ ಎಂದು 600 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಾಮನಗರದ ಅರ್ಚಕರಹಳ್ಳಿಯ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುತ್ತೇವೆ ಎಂದು

ಹೇಳಿದ್ದಾರೆ. ಇದಕ್ಕೆ ಪೂರಕವಾಗಿ ನಮ್ಮ ವಿಶ್ವವಿದ್ಯಾನಿಲಯದವರು ಕಳೆದ ತಿಂಗಳು ನಡೆದಂತಹ ಸಿಂಡಿಕೇಟ್ ಸಭೆಯಲ್ಲಿ ಕೂಡ ೬೦೦ ಕೋಟಿ ರೂಪಾಯಿಗಳನ್ನು ಈ ವಿಶ್ವವಿದ್ಯಾನಿಲಯದ ಹಣದಲ್ಲಿಯೇ ನಿರ್ಮಾಣ ಮಾಡುತ್ತೇವೆ ಎಂದು ಅನುಮೋದನೆ ಕೊಟ್ಟು, ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಈಗ ಬರುವಂತಹ ಕ್ಯಾಬಿನೇಟ್ ಮುಂದೆ ಈ ವಿಷಯವನ್ನಿಟ್ಟು ಚರ್ಚೆ ಮಾಡಿ, ಅನುಮೋದನೆಯನ್ನು ತೆಗೆದುಕೊಂಡು ಟೆಂಡರ್ ಕರೆದು ಸುಮಾರು ೨ ರಿಂದ ೩ ತಿಂಗಳೊಳಗೆ ರಾಮನಗರದ ಅರ್ಚಕರಹಳ್ಳಿಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವುದಕ್ಕೆ ನಮ್ಮ ಸರ್ಕಾರ ಬದ್ಧವಿದೆ.

**ಶ್ರೀ ಅ. ದೇವೇಗೌಡ:–** ಮಾನ್ಯ ಸಚಿವರೇ ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: ೭೦೫**

**ಸಭಾಪತಿಯವರು:–** ಮಾನ್ಯ ಎಂ.ನಾಗರಾಜುರವರು ಸದನದಲ್ಲಿ ಹಾಜರಿರುವುದಿಲ್ಲ.

**ಪ್ರಶ್ನೆ ಸಂಖ್ಯೆ: 716+740+741**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವಂತಹ ಖಾಸಗಿ ಅನುದಾನಿತ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ ಮತ್ತು ನಿಧನ ಹೊಂದಿರುವಂತಹ ಹುದ್ದೆಗಳನ್ನು ತುಂಬುವುದಕ್ಕೆ ಅನುಮತಿ ಕೇಳಿ ನಾನು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ಬಹುಶಃ ಈ ಪ್ರಶ್ನೆ ಇದೇ ಮೊದಲ ಬಾರಿ ಕೇಳಿರುವುದೇನೂ ಅಲ್ಲ. ಹಿಂದಿನ ಅಧಿವೇಶನದಲ್ಲಿ ಹಲವಾರು ಬಾರಿ ಈ ಪ್ರಶ್ನೆಯನ್ನು ಕೇಳಿದ್ದೇವೆ. ಯಾವಾಗ ಪ್ರಶ್ನೆ ಕೇಳಿದರೂ ಸರ್ಕಾರದಲ್ಲಿ ಒಂದೇ ಉತ್ತರ. ಈಗ ತಾನೇ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್ ರವರು ಹೇಳಿದಂತೆ "ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಪಡೆದುಕೊಂಡು ಅನುಮತಿ ಕೊಡುತ್ತೇವೆ ಎನ್ನುವುದು ಸರ್ಕಾರದ standard answer ಆಗಿಬಿಟ್ಟಿದೆ". ಆದರೆ, ದಯವಿಟ್ಟು ನಾನು ಕಳಕಳಯಿಂದ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಹುದ್ದೆ ತುಂಬಬೇಕೆಂದು ಕೇಳುತ್ತೇವೆಯಲ್ಲವೇ, ಹೊಸ ಹುದ್ದೆ ಎಲ್ಲಿಯವು? ಅವುಗಳು ಒಂದು ಬಾರಿ ಆರ್ಥಿಕ ಇಲಾಖೆಯಿಂದ ಅನುಮತಿ ಕೊಟ್ಟಂತಹ ಹುದ್ದೆಗಳು. ಇವು ಮಂಜೂರಾತಿ ಹುದ್ದೆಗಳು. ಹಾಗಾಗಿ ಈ ಮಂಜೂರಾತಿ ಹುದ್ದೆಗಳಿಗೆ ಪುನಃ ಪುನಃ ಆರ್ಥಿಕ ಇಲಾಖೆಯ ಅನುಮತಿಯನ್ನು ಏಕೆ ಕೇಳಬೇಕು? ಇದು ಅವಶ್ಯಕತೆ ಇದೆಯೇ ಎನ್ನುವುದು ನನ್ನ ಮೊದಲನೆಯ ಪ್ರಶ್ನೆ.

**(ಮುಂದು)**

**(900)19-09-2022(12-30)bsd-vk**

**ಶ್ರೀ ಎಸ್.ವ್ಹಿ. ಸಂಕನೂರ (ಮುಂದು)**

ಇನ್ನು ಎರಡನೆಯದಾಗಿ ನಮ್ಮ ರಾಜ್ಯದ ಪ್ರಾಥಮಿಕ, ಪ್ರೌಢ ಅಥವಾ ಪದವಿ ಪೂರ್ವ ಇರಬಹುದು, ಈ ಮೂರು ಹಂತಗಳಲ್ಲಿ ಬಹುತೇಕ ಅಂದರೆ 33% ವಿದ್ಯಾರ್ಥಿಗಳು Government ಶಾಲೆಗಳಲ್ಲಿ ಓದುತ್ತಾರೆ. ಉಳಿದ 77% ಖಾಸಗಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಆದರೆ ಸರ್ಕಾರದ ಗುರಿ ಮತ್ತು

ಧ್ಯೇಯದಂತೆ ಘೋಷಣೆಯಂತೆ ಗುಣಮಟ್ಟದ ಶಿಕ್ಷಣ ಕೊಡಬೇಕು ಎನ್ನುವುದಾಗಿದೆ. 2016 ರಿಂದ ಮಾರ್ಚ್ 2022 ರವರೆಗೆ ನಿಧನ ಹೊಂದಿದ ಮತ್ತು ನಿವೃತ್ತಿಯಾದ ಹುದ್ದೆಗಳ ಸಂಖ್ಯೆ 9,258 ಹುದ್ದೆಗಳು ಎಂದು ಉತ್ತರದಲ್ಲಿ ಮಾಹಿತಿ ಕೊಟ್ಟಿದ್ದಾರೆ. ಇದೇರೀತಿ 2015ಕ್ಕಿಂತ ಪೂರ್ವದಲ್ಲಿ ಸುಮಾರು 4,041 ಹುದ್ದೆಗಳು ಇದ್ದು, ಇದರಲ್ಲಿಯೂ ಸುಮಾರು 1,867 ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಅಂದರೆ ನಮ್ಮ ರಾಜ್ಯದ ಖಾಸಗಿ ಶಾಲೆಗಳಲ್ಲಿ ಒಟ್ಟು 11,125 ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಗುಣಮಟ್ಟದ ಶಿಕ್ಷಣವನ್ನು ಕೊಡಲು ಹೇಗೆ ಸಾಧ್ಯ? ಈ ಉತ್ತರವನ್ನು ಮಾನ್ಯ ಸಚಿವರು ತಿಳಿಸಬೇಕು. ನನ್ನ ಇನ್ನೊಂದು ಉಪಪ್ರಶ್ನೆಯನ್ನು ನಂತರ ಕೇಳುತ್ತೇನೆ.

**ಶ್ರೀ ಬಿ.ಸಿ. ನಾಗೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ ಇದು ಬಹಳ ಗಂಭೀರವಾದ ವಿಷಯವಾಗಿದ್ದು, 2015ರ ವರೆಗೆ ಇರುವ vacancy ಗಳನ್ನು ಪೂರ್ಣ ಮಾಡುವುದಕ್ಕೆ ಪ್ರಸ್ತಾವನೆಗಳನ್ನು Aided ಶಾಲೆಗಳಿಂದ ಕೇಳಿದ್ದೆವು. ಆದರೆ ಇವತ್ತಿನವರೆಗೂ 455 ಹುದ್ದೆಗಳಿಗೆ ಪ್ರಸ್ತಾವನೆಗಳು ಬಂದಿಲ್ಲ. ಇದು 2015 ಹಿಂದಿನ ಅವಧಿಗೆ ಸಂಬಂಧಪಟ್ಟಿದ್ದಾಗಿದೆ. 171 ಪ್ರಸ್ತಾವನೆಗಳು ಬಂದಿದ್ದು, ಅವುಗಳು ನಮ್ಮ ಹಂತದಲ್ಲಿ ನಿಂತಿದ್ದು, ಇವುಗಳನ್ನು ಬೇಗ ಪೂರ್ಣ ಮಾಡುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇವುಗಳಲ್ಲಿ ಒಂದಷ್ಟು documents ಗಳು ಸರಿಯಿಲ್ಲ, ಅದಕ್ಕೆ ಮಾಹಿತಿ ಕೇಳಿದ್ದೇವೆ, ಇವುಗಳನ್ನು ಸರಿ ಮಾಡುವ ಕೆಲಸ ಮಾಡುತ್ತಿದ್ದೇವೆ. ಹುದ್ದೆ ಭರ್ತಿ ಮಾಡಿಕೊಳ್ಳಲು ಪ್ರಸ್ತಾವನೆ ಕಳುಹಿಸಿ ಎಂದು ಹೇಳಿದ್ದರೂ 455 ಪ್ರಸ್ತಾವನೆಗಳು ಇವತ್ತಿನವರೆಗೂ ಬಂದಿಲ್ಲ. 2016ರಲ್ಲಿ ನಾವು Finance Department ಜೊತೆ ಮಾತನಾಡಿದಾಗ " 2015ಕ್ಕೂ ಹಿಂದಿನ post ಗಳನ್ನು fill-up ಮಾಡಿಕೊಂಡಿಲ್ಲ, ಮುಂದಿನ ಪ್ರಸ್ತಾವನೆ ಕಳುಹಿಸುತ್ತೀರಾ" ಎಂದು ಹೇಳಿದರು. ಮಾನ್ಯ ಸದಸ್ಯರು ಹೇಳಿದಂತೆ ಇದು ಗಂಭೀರವಾದ ವಿಚಾರವಾಗಿದ್ದು, ಗುಣಮಟ್ಟದ ಶಿಕ್ಷಣವನ್ನು ಕೊಡಲು ನಾವು ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ. ಇದಾದ ನಂತರ ನಮ್ಮ Act ನ ಪ್ರಕಾರ ಶಿಕ್ಷಕರನ್ನು ಹೇಗೆ ನೇಮಕಾತಿ ಮಾಡಿಕೊಳ್ಳಬೇಕು ಎಂಬುದಕ್ಕೂ ಮಾನ್ಯ ಮಾಜಿ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿ, ಅದನ್ನೂ relax ಮಾಡಿದ್ದೇವೆ. ಅದರಲ್ಲಿ ಒಂದು ಜಿಲ್ಲಾ paper ನಲ್ಲಿ ಎಲ್ಲಿ ಬೇಕಾದರೂ ಜಾಹಿರಾತು ಕೊಡಬಹುದು, ರಾಜ್ಯದ paper ನಲ್ಲಿಯೂ ಎಲ್ಲಿ

ಬೇಕಾದರೂ ಜಾಹಿರಾತು ಹಾಕಬಹುದು ಎಂದು ಎಲ್ಲಾ ಅನುಕೂಲ ಮಾಡಿದ್ದರೂ, 455 ಪ್ರಸ್ತಾವನೆಗಳು ಬಂದಿರುವುದಿಲ್ಲ. ಇವು ಬಂದ ತಕ್ಷಣ ಆರ್ಥಿಕ ಇಲಾಖೆಯವರು ಅವುಗಳನ್ನು ಮಾಡಿದ ನಂತರ ಇವುಗಳನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ. ಆದ್ದರಿಂದ ಹಳೆಯದನ್ನು ನೇಮಕಾತಿ ಮಾಡಿದ ತಕ್ಷಣವೇ ಇವುಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆ ಮಾಡುತ್ತೇವೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, 2015 ರ ಪೂರ್ವದಲ್ಲಿ 4,641 ಹುದ್ದೆಗಳಲ್ಲಿ 2,774 ಹುದ್ದೆಗಳನ್ನು ಭರ್ತಿ ಮಾಡಿಕೊಂಡಿದ್ದಾರೆ. ಈ ಇಲಾಖೆ ಹೇಗೆ ಇದೆ ಎಂದರೆ BEO, DDPI ಆಯುಕ್ತರ ಕಛೇರಿಯಲ್ಲಿ ….. ಮಾನ್ಯ ಭೋಜೇಗೌಡರೇ, ದಯವಿಟ್ಟು ಒಂದು ನಿಮಿಷ. ಕೆಲವು management ಗಳು ಹುದ್ದೆಗಳನ್ನು ತುಂಬಿಕೊಳ್ಳಲು permission ಕೊಟ್ಟರೂ ಭರ್ತಿ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ಆದರೆ ಇದು ಬಹಳ ಜ್ವಲಂತ ಸಮಸ್ಯೆ ಇದೆ. ಸರ್ಕಾರ ಅನುಮತಿ ಕೊಟ್ಟರೂ management ಹುದ್ದೆಗಳನ್ನು ಭರ್ತಿ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. BEO ಇರಬಹುದು, DDPI ಇರಬಹುದು, ಒಂದು appointment ಮಾಡಲು ಪ್ರಸ್ತಾವನೆ ಬೆಂಗಳೂರಿಗೆ ಬಂದು ಮುಟ್ಟಲು ಒಂದು ವರ್ಷ ಹಿಡಿಯುತ್ತದೆ. ಆ ವಿಚಾರ ನನಗೆ ಬೇಡ. ಈಗ ಸದ್ಯ ಖಾಲಿ ಇರುವ 9,258 ಹುದ್ದೆಗಳನ್ನು ಭರ್ತಿ ಮಾಡಲು ಯಾವಾಗ ಅನುಮತಿ ಕೊಡುತ್ತಾರೆ? ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಿಗೆ ಹಲವಾರು ಸಂಘಟನೆಗಳು ಹಾಗೂ ಆಡಳಿತ ಮಂಡಳಿಗಳು ಮನವಿಗಳನ್ನು ಕೊಟ್ಟಿದ್ದು, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಆಸಕ್ತಿ ವಹಿಸಿದ್ದಾರೆ. ಈ Finance Department ಯಾರ control ನಲ್ಲಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಇದು ಮಾನ್ಯ ಮುಖ್ಯಮಂತ್ರಿಗಳ ಜೊತೆ ಇದೆಯೇ? ನನ್ನ ಕಳಕಳಿ ಏನೆಂದರೆ, ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರ ಜೊತೆ ಸಭೆ ಮಾಡಬೇಕು. ಇಲ್ಲದಿದ್ದರೆ ಹುದ್ದೆಗಳ ಭರ್ತಿ ಆಗುವುದಿಲ್ಲ. ರಾಜ್ಯದಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇವೆ ಎಂಬ ಮಾಹಿತಿ ತರಿಸುತ್ತೇನೆ ಎಂದು ಒಂದು ಕಡೆ ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಭಾಪತಿಯವರೇ, 8 ವರ್ಷಗಳು ಕಳೆದಿವೆ, ಈ ಪ್ರಶ್ನೆ ಕೇಳಿದ ಮೇಲೆ ಮಾಹಿತಿ ಸಂಗ್ರಹ ಮಾಡಿದ್ದೇನೆಯೇ? 8 ವರ್ಷಗಳು ಕಳೆದಿವೆ. ಆದ್ದರಿಂದ ನನ್ನ ಕಳಕಳಿ ಏನೆಂದರೆ, Finance Department ಮಾನ್ಯ ಮುಖ್ಯಮಂತ್ರಿಯವರ ಅಧೀನದಲ್ಲಿ ಇರುವುದರಿಂದ ಮಾನ್ಯ

ಮುಖ್ಯಮಂತ್ರಿಯವರ ಜೊತೆ ಸಭೆ ಮಾಡಲೇಬೇಕು. ಇವರು ಪ್ರಸ್ತಾವನೆ ಕಳುಹಿಸಿದರೆ ಅವರು ಪ್ರಸ್ತಾವನೆಯನ್ನು ಅಲ್ಲೇ ಇಟ್ಟುಕೊಂಡು ಕುಳಿತುಕೊಳ್ಳುತ್ತಾರೆ. Finance Department ಆಕಾಶದಲ್ಲಿದೆಯೋ ಅಥವಾ ಸರ್ಕಾರದ ನಿಯಂತ್ರಣದಲ್ಲಿದೆಯೋ ನನಗೆ ಸಂಶಯ ಬರುತ್ತಿದೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅನೇಕ ಶಿಕ್ಷಕರು ದಯಾಮರಣ ಕೋರಿ ಅರ್ಜಿ ಕೊಟ್ಟಿದ್ದಾರೆ. ಇದು ಬಹಳ ಗಂಭೀರವಾದ ಸಮಸ್ಯೆಯಾಗಿದ್ದು, ಸುಮಾರು ೯,೬೦೦ post ಶಿಕ್ಷಕರು ಇಲ್ಲದಿರುವಾಗ how do you expect the quality education. ಗುಣಮಟ್ಟದ ಶಿಕ್ಷಣ ಕೊಡಲು ಹೇಗೆ ಸಾಧ್ಯ? ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ಉತ್ತರವನ್ನು ಕೊಟ್ಟಿದ್ದಾರೆ. 171 posts ಎಂದು ಹೇಳಿದ್ದಾರಲ್ಲವೇ? That is 171 files. ಆ files ಗಳಲ್ಲಿ ಸಾವಿರಾರು ಹುದ್ದೆಗಳು ಒಳಗೊಂಡಿರುತ್ತವೆ. ಸುಮಾರು 11 ಸಾವಿರ post ಗಳು ಖಾಲಿ ಇವೆ. ಸದನಕ್ಕೆ ತಪ್ಪು ಉತ್ತರ ಕೊಟ್ಟಿದ್ದು, ಮಾನ್ಯ ಸಭಾಪತಿಯವರೇ, ದಯವಿಟ್ಟು ಚಾಟಿ ಬೀಸಬೇಕು. ಮಾನ್ಯ ಸಭಾಪತಿಯವರು ಚಾಟಿ ಬೀಸದೇ ನಾವು ಸರ್ಕಾರವನ್ನು ಹೇಗೆ ಕೇಳುವುದು? ಹುದ್ದೆಗಳನ್ನು ಭರ್ತಿ ಮಾಡಬೇಕು. ತಾವು ದಯಮಾಡಿ ಹೇಳಬೇಕು ಹಾಗೂ ಮಾನ್ಯ ಸಚಿವರು ಯಾವಾಗ ಭರ್ತಿ ಮಾಡುತ್ತಾರೆಂದು ಹೇಳಬೇಕು.

**ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಶಾಸಕರೆಲ್ಲರ ಪರವಾಗಿ ತಮ್ಮಲ್ಲಿ ಒಂದು ವಿನಂತಿ ಇದೆ. ಅದೇನೆಂದರೆ, ನಾವು ಪ್ರಶ್ನೆಯನ್ನು ಸಂಬಂಧಪಟ್ಟ ಸಚಿವರಿಗೆ ಕೇಳಿದ್ದು, ಸಂಬಂಧಪಟ್ಟ ಸಚಿವರು ಅವರ ನಿರ್ಧಾರವನ್ನು ಸದನದಲ್ಲಿ ಹೇಳಬೇಕೇ ಹೊರತು ಯಾವುದೋ ಇಲಾಖೆ ಕಡೆ ಕೈತೋರಿಸುವ ಕ್ರಮ ಸರಿಯಲ್ಲ. ನಾವು ಆ ಇಲಾಖೆಗಳನ್ನು ಕೇಳಬೇಕೇ? ಇನ್ನು ಮುಂದೆ ಯಾವತ್ತೂ ಸಚಿವರುಗಳು ಆರ್ಥಿಕ ಇಲಾಖೆಯ ಅನುಮತಿ ಪಡೆದುಕೊಂಡು ಮಾಡುತ್ತೇವೆ ಎಂದು ಹೇಳಬಾರದು. ಮಾನ್ಯ ಸಚಿವರು ಮಾಡುವ ಕೆಲಸವನ್ನು ಮಾತ್ರ ಹೇಳಬೇಕು. ಆರ್ಥಿಕ ಇಲಾಖೆಯಿಂದ ಅನುಮತಿ ತೆಗೆದುಕೊಳ್ಳುವುದು, ಬಿಡುವುದು ಮಾನ್ಯ ಸಚಿವರ ಕೆಲಸವಾಗಿದೆ. ಆ ವಿಚಾರವನ್ನು ಸದನಕ್ಕೆ ತರಬೇಕಾಗಿಲ್ಲ. ಇನ್ನೆಂದೂ ಯಾವ ಮಾನ್ಯ ಸಚಿವರುಗಳು ಆ ರೀತಿ ಬೇಜವಾಬ್ದಾರಿ ಉತ್ತರಗಳನ್ನು ಕೊಡಬಾರದು.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಇರುವ ವಿಚಾರವನ್ನು ಹೇಳುವ ಧೈರ್ಯ ನಮ್ಮಲ್ಲಿರುವುದರಿಂದ ಇದು ಸಮರ್ಥ ಸರ್ಕಾರದ ಲಕ್ಷಣವಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ಸರ್ಕಾರ ಕೆಲವು ನಿಯಮಗಳನ್ನು ಮಾಡಿದೆ, result ಇಷ್ಟೇ ಬರಬೇಕು ಎಂದೆಲ್ಲಾ ಮಾಡಿದೆ. Mathematics and English teachers ಹತ್ತಾರು ವರ್ಷಗಳಿಲ್ಲದೇ ಶಾಲೆಗಳು ಹೇಗೆ ನಡೆಯಬೇಕು? ಬೇರೆ ಇಲಾಖೆಯ ಹುದ್ದೆಗಳಲ್ಲಿ ಏನಾದರೂ ಮಾಡಲಿ, ಆದರೆ ಶಿಕ್ಷಕರ ವಿಚಾರದಲ್ಲಿ ಈ ರೀತಿ ಮಾಡಿದರೆ ಹೇಗೆ? ಶಿಕ್ಷಕರು ಇವತ್ತು retired ಆದರೆ next day ಬೇರೆ ಶಿಕ್ಷಕ ಹಾಜರಾಗುವ ಕೆಲಸವನ್ನು ಮಾಡಬೇಕು. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ಶಿಕ್ಷಕರು ಇಲ್ಲದೇ school ಗಳು ಹೇಗೆ ನಡೆಯುತ್ತವೆ ಹಾಗೂ ಮಕ್ಕಳ ಪರಿಸ್ಥಿತಿ ಏನು? ದಯಮಾಡಿ ಸರ್ಕಾರ ಇದರ ಬಗ್ಗೆ ಗಂಭೀರವಾದ ಚಿಂತನೆ ಮಾಡಿ, immediately appointment ಗೆ ಅನುಮತಿ ಕೊಡಬೇಕು.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ, ದಯವಿಟ್ಟು CM ಜೊತೆ ಒಂದು meeting ಮಾಡಲು ತಿಳಿಸಬೇಕು. ಇಲ್ಲದಿದ್ದರೆ ಆಗುವುದಿಲ್ಲ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, …. ದಯವಿಟ್ಟು ಆರ್ಥಿಕ ಇಲಾಖೆಯ ಕಡೆ ಬೊಟ್ಟು ಮಾಡಬಾರದು. Clear ಮಾಡಬೇಕು.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, CM ರವರ ಜೊತೆ ಅಥವಾ ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಸಭೆ ಮಾಡಬೇಕು. ಏಕೆಂದರೆ ಪದವೀಧರರ ವಯೋಮಿತಿ ಮೀರುತ್ತಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಎಲ್ಲರ ಪ್ರಶ್ನೆಗಳನ್ನು ಕ್ರೋಢೀಕರಿಸಿ ಉತ್ತರ ಕೊಡಿ್

**ಶ್ರೀ ಬಿ.ಸಿ. ನಾಗೇಶ್:-** ಮಾನ್ಯ ಸಭಾಪತಿಯವರೇ, ಎಲ್ಲಾ MLC ಗಳು ಮತ್ತು CM ಜೊತೆ ಒಂದು ಸಭೆ ಮಾಡಿ, ಈ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡುತ್ತೇನೆ.

## ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ,

ದಿನಾಂಕ 19ನೇ ಸೆಪ್ಟೆಂಬರ್, 2022, ಸಮೂಹ–1 ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 121 ಪ್ರಶ್ನೆಗಳ ಪೈಕಿ 25 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ದಿನಾಂಕ 12ನೇ ಸೆಪ್ಟೆಂಬರ್ 2022, ಸಮೂಹ–1ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 15 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ 112 ಪ್ರಶ್ನೆಗಳ ಪೈಕಿ 89 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ,

121 ಪ್ರಶ್ನೆಗಳ ಪೈಕಿ ಕೇವಲ 25 ಪ್ರಶ್ನೆಗಳಿಗೆ ಉತ್ತರ ಬಂದಿದೆ. ಸರ್ಕಾರಕ್ಕೆ ತಾವು ಹೇಳಬೇಕು. ಮಾನ್ಯ ಸಭಾಪತಿಯವರೇ, not even one-fourth ಉತ್ತರಗಳು ಬಂದಿಲ್ಲ.

**ಸಭಾಪತಿಯವರು:–** ಇವತ್ತೇ ಆ ರೀತಿ ಆಗಿದೆ, ನಾನು ಸರಿಪಡಿಸುತ್ತೇನೆ, ಈ ಅಧಿವೇಶನದಲ್ಲಿ ಉತ್ತರ ಕೊಡಿಸಬೇಕು.

**Sri J.C. MADHU SWAMY:–** Sir, we take not of it. ನಾವು Officers ಗೆ written answers ಕೊಡಲೇಬೇಕು ಎಂದು ಸೂಚನೆ ಕೊಡುತ್ತೇವೆ.

**(ಮುಂದು)**

**(901) 19.09.2099 12.40 ಹೆಚ್‌ವಿ:ಬಿಎನ್‌ಎಸ್**

**೦3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆ.**

**ಅ) ವಿಷಯ:- ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ ಅಡಿಕೆ ಎಲೆ ಹಳದಿ ರೋಗವು ವ್ಯಾಪಕವಾಗಿ ಹರಡುತ್ತಿದ್ದು, ಸದರಿ ರೋಗದ ಶಾಶ್ವತ ನಿಯಂತ್ರಣಕ್ಕೆ ಪರಿಹಾರ ಕಂಡುಹಿಡಿಯುವ ಕುರಿತು.**

****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ್‌ರವರು ದಿನಾಂಕ 15/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**ಆ) ವಿಷಯ:- ಕರ್ನಾಟಕ ಜಾನಪದ ಪರಿಷತ್‌ಗೆ ವಾರ್ಷಿಕ ಅನುದಾನವನ್ನು ಕಡಿತಗೊಳಿಸಿರುವ ಬಗ್ಗೆ.**

****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಎಸ್.ರವಿಯವರು ದಿನಾಂಕ 13/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**ಇ) ವಿಷಯ:- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಡಿಯಲ್ಲಿ ಬರುವ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಕುರಿತು.**

***

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ದಿನಾಂಕ 13/09/2022ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**ಈ) ವಿಷಯ:- ಹುಬ್ಬಳ್ಳಿಯ ತಾರಿಹಾಳ ಕೈಗಾರಿಕಾ ಪ್ರದೇಶದಲ್ಲಿ ಸ್ಪಾರ್ಕಲ್ ಕ್ಯಾಂಡಲ್ ಕಾರ್ಖಾನೆಯಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ಗಾಯಾಳು ಹಾಗೂ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡದಿರುವ ಬಗ್ಗೆ**

*****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಸಲೀಂ ಅಹಮದ್‌ರವರು ದಿನಾಂಕ 14/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**ಉ) ವಿಷಯ :– ಆನೆ ದಾಳಿಯಿಂದ ಮೃತಪಟ್ಟ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ನೀಡುವ ಬಗ್ಗೆ**

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಎಂ.ಕೆ.ಪ್ರಾಣೇಶ್‌ರವರು ದಿನಾಂಕ 14/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 04. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:- ತುಮಕೂರು ಜಿಲ್ಲೆಯಲ್ಲಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ವಸತಿ ನಿಲಯಗಳಲ್ಲಿ ಪ್ರವೇಶಾತಿಗೆ ತೋಂದರೆಯಾಗುತ್ತಿರುವ ಕುರಿತು.**

***

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶನ ಹೊಂದಿದವರು):-** ಸನ್ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆ ತುಮುಕೂರು ನಗರದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳು ಉತ್ತಮ ಗುಣಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡುತ್ತಿರುವುದರಿಂದ ರಾಜ್ಯದಲ್ಲಿ ಇದು "ಶೈಕ್ಷಣಿಕ ನಗರಿ" ಎಂದು ಹೆಸರುವಾಸಿಯಾಗಿದೆ. ಹೀಗಾಗಿ ತುಮಕೂರು ಜಿಲ್ಲೆಗೆ ವಿದ್ಯಾಭ್ಯಾಸಕ್ಕಾಗಿ ಜಿಲ್ಲೆಯ ಸುತ್ತಮುತ್ತಲಿನ ಗ್ರಾಮಗಳಿಂದ ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ತುಮಕೂರು ನಗರಕ್ಕೆ ಬರುತ್ತಾರೆ. ಆದರೆ, ಈ ವಿದ್ಯಾರ್ಥಿಗಳಿಗೆ ಕೆಲವೇ ವಿದ್ಯಾರ್ಥಿನಿಲಯಗಳು ಇರುವುದರಿಂದ ಈ ಸೌಲಭ್ಯಗಳು ಸಾಕಾಗುತ್ತಿಲ್ಲ. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದರಿಂದ ಅವರಿಗೆ ಹೆಚ್ಚಿನ ವಸತಿ ನಿಲಯದ ಅವಶ್ಯಕತೆ ಬೇಕಾಗುತ್ತದೆ. ತುಮಕೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಈಗ ಇರುವ ವಸತಿ ನಿಲಯಗಳು ಸಾಕಾಗುತ್ತಿಲ್ಲ. ಉದಾಹರಣೆಗೆ ಹೇಳಬೇಕಾದರೆ, ಈ ವರ್ಷ ವಿದ್ಯಾರ್ಥಿನಿಲಯಗಳಲ್ಲಿ ಲಭ್ಯವಿರುವ ಒಟ್ಟು ಸೀಟುಗಳ ಸಂಖ್ಯೆ 1066 ಆಗಿದೆ. ಆದರೆ, 8864 ಅರ್ಜಿಗಳು ಬಂದಿರುತ್ತದೆ. ಇದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ನಗರಕ್ಕೆ ಬರುತ್ತಿರುವ ವಿಷಯ ತಿಳಿಯುತ್ತದೆ. ಈ ಬಗ್ಗೆ ಸ್ಥಳೀಯ "ಪ್ರಜಾ ಪ್ರಗತಿ" ದಿನ ಪತ್ರಿಕೆಯಲ್ಲಿ ದಿನಾಂಕ: 14.09.2022ರಂದು "ಬಿ.ಸಿ.ಎಂ.ಹಾಸ್ಟೆಲ್‌ಗಳ ಪ್ರವೇಶಾತಿಗೆ ಪರದಾಟ.....!" ಎಂಬ ತಲೆ ಬರಹದೊಂದಿಗೆ ಪ್ರಕಟವಾಗಿದೆ ಹಾಗೂ ಈ ಎಲ್ಲ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದಿರುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಇನ್ನು ಹೆಚ್ಚಿನ ವಸತಿ ನಿಲಯಗಳನ್ನು ನಿರ್ಮಿಸಿ, ವಿದ್ಯಾರ್ಥಿಗಳು ಉನ್ನತ ಗುಣಮಟ್ಟದ ಶಿಕ್ಷಣವನ್ನು ಪಡೆದು, ತಮ್ಮ ಮುಂದಿನ ಶೈಕ್ಷಣಿಕ ಜೀವನದಲ್ಲಿ ಯಶಸ್ವಿಯಾಗುವಂತೆ ಮಾಡಲು ಸರ್ಕಾರ ತುರ್ತಾಗಿ ಕ್ರಮ

ವಹಿಸಬೇಕಾಗಿದೆ. ಆದ್ದರಿಂದ ಇಂತಹ ವಿದ್ಯಾರ್ಥಿಗಳ ಕಲ್ಯಾಣಕ್ಕೆ ಸಂಬಂಧಿಸಿದ ಮಹತ್ವದ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರಾಗಿರುವ ಶ್ರೀ ಕೆ.ಎ.ತಿಪ್ಪೇಸ್ವಾಮಿಯವರು ಪ್ರಸ್ತಾಪಿಸಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ವಿವರವನ್ನು ಒದಗಿಸುತ್ತಿದ್ದೇನೆ. ಮಾನ್ಯ ಸದಸ್ಯರು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಬೇಡಿಕೆ ಸಂಖ್ಯೆ ಹೆಚ್ಚಾಗಿದೆ. ಆದರೆ, ಈಗ ಕೊಟ್ಟಿರುವ ಸಂಖ್ಯೆ ಕಡಿಮೆಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ತುಮಕೂರು ಜಿಲ್ಲೆಯಲ್ಲಿರುವ ಸುಮಾರು 51 ಮೆಟ್ರಿಕ್‌ನಂತರದ ಹಾಸ್ಟೆಲ್‌ಗಳಿಗೆ ಶೇಕಡಾ 25ರಷ್ಟು ಹೆಚ್ಚಿನ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಆ ಹಿನ್ನೆಲೆಯಲ್ಲಿ 1439 ವಿದ್ಯಾರ್ಥಿಗಳಿಗೆ ಹೆಚ್ಚುವರಿ ಪ್ರವೇಶದ ಅವಕಾಶಗಳು ಇನ್ನೊಂದು ಎರಡು ಮೂರು ದಿನಗಳಲ್ಲಿ ಲಭ್ಯವಾಗುತ್ತದೆ. ಉಳಿದ ವಿದ್ಯಾರ್ಥಿಗಳಿಗೆ ವರ್ಷಕ್ಕೆ 15 ಸಾವಿರ ರೂಪಾಯಿಗಳಂತೆ ನೀಡಲಾಗುತ್ತಿರುವ "ವಿದ್ಯಾ ಸಿರಿ" ಯೋಜನೆಯನ್ನು ಮುಂದುವರಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಹೊಸ ಹಾಸ್ಟೆಲ್‌ಗಳನ್ನು ಮಂಜೂರಾತಿ ಮಾಡುವ ಮೂಲಕ ಈ ಕೊರತೆಯನ್ನು ನೀಗಿಸುತ್ತೇವೆಂದು ಈ ಮೂಲಕ ಹೇಳುವುದಕ್ಕೆ ಬಯಸುತ್ತಿದ್ದೇನೆ.

**(ಈ ಹಂತದಲ್ಲಿ ವೈಸ್ ಛೇರ್ಮನ್ ಆದ ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಸಭಾಪೀಠವನ್ನು ಅಲಂಕರಿಸಿದರು)**

**ಆ) ವಿಷಯ:– ಬೀದರ್ ಜಿಲ್ಲೆ ಬಾಲ್ಕಿ ತಾಲ್ಲೂಕಿನ ಧನ್ನೂರಾ (ಎಚ್) ಗ್ರಾಮದ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸ್ಮಶಾನ ಭೂಮಿ ಇಲ್ಲದಿರುವ ಕುರಿತು.**

***

**ಶ್ರೀ ಅರವಿಂದ ಕುಮಾರ್ ಅರಳಿ(ವಿಧಾನಸಭೆಯಿಂದ ಚುನಾಯಿತರಾದವರು);–** ಸನ್ಮಾನ್ಯ ಸಭಾಪತಿಯವರೇ, "ಬೀದರ್ ಜಿಲ್ಲೆಯಲ್ಲಿ ಶೋಷಿತರಿಗೆ ಸ್ಮಶಾನವಿಲ್ಲದೆ ಮನೆ ಅಂಗಳದಲ್ಲೇ ಶವ ಸಂಸ್ಕಾರದ ಗತಿ; ದಲಿತರ ಸಾವಿನ ವಿಷಯದಲ್ಲೂ ಇಂತೆಂಥ ಅಮಾನವೀಯತೆ" ಈ ಕುರಿತಂತೆ "ಕನ್ನಡ ಪ್ರಭ" ದಿನಪತ್ರಿಕೆಯು ಸೆಪ್ಟೆಂಬರ್ 17ರಂದು ವಿಶೇಷ ವರದಿ ಪ್ರಕಟಿಸಿ ಬೀದರ್ ಜಿಲ್ಲೆಯಲ್ಲಿ ಶೋಷಿತ ಸಮುದಾಯ ಎದುರಿಸುತ್ತಿರುವ ದಾರುಣ ಸ್ಥಿತಿ, ಅವಮಾನ, ಮಾನವೀಯತೆ ಮರೆತ ಸರ್ಕಾರಗಳ ನಿರ್ಲಕ್ಷ್ಯತನವನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದೆ.

ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನ ಧನ್ನೂರು(ಎಚ್) ಗ್ರಾಮದಲ್ಲಿ ವಿಶೇಷವಾಗಿ ಪರಿಶಿಷ್ಟ ಜಾತಿಯವರಿಗಾಗಿ ಸ್ಮಶಾನ ಭೂಮಿ ಇಲ್ಲವೇ ಇಲ್ಲ, ಹೀಗಾಗಿ ಯಾರದ್ದಾದರೂ ಸಾವು ಸಂಭವಿಸಿದರೆ, ಗೌಪ್ಯವಾಗಿ ಅರಣ್ಯಕ್ಕೆ ತೆರಳಿ ಮಣ್ಣು ಮಾಡುವ ದುಸ್ಥಿತಿ ಇದೆ. ಕೆಲ ವರ್ಷಗಳ ಹಿಂದೆ ನಾಗಣ್ಣ ಝೂಂತೆರ್ ಎಂಬುವವರು ಮೃತಪಟ್ಟಾಗ ಸ್ಮಶಾನ ಇಲ್ಲದೆ; ಹೆಣ ಹೂಳಲು ಸ್ಥಳವಿಲ್ಲದೇ ಅನಿವಾರ್ಯವಾಗಿ ಮನೆಯ ಅಂಗಳದಲ್ಲೇ ಶವ ಸಂಸ್ಕಾರ ಮಾಡಬೇಕಾಗಿ ಬಂತು ಎಂದು ಗ್ರಾಮದ ಶೋಷಿತ ಸಮುದಾಯ ಹೇಳಿದೆ ಇದನ್ನು "ಕನ್ನಡ ಪ್ರಭ" ದಿನಪತ್ರಿಕೆ ಉಲ್ಲೇಖಿಸಿದೆ.

ಇನ್ನು ಶುಕ್ರವಾರ ಸೆಪ್ಟೆಂಬರ್ 16ರಂದು ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಧನ್ನೂರು(ಎಚ್) ಗ್ರಾಮದಲ್ಲಿ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದ ಶಿವರಾಜ್ ಇಂಗೊಳೆ ಎಂಬುವವರು ಮೃತಪಟ್ಟಿದ್ದು ಇವರ ಶವ ಸಂಸ್ಕಾರಕ್ಕೆ ಸ್ಮಶಾನ ಇಲ್ಲದೆ; ಖಾಸಗಿ ಜಮೀನು ಇಲ್ಲದೆ ಪರದಾಡಿದ ಕುಟುಂಬ ಸಂಜೆ ಅರಣ್ಯ ಪ್ರದೇಶಕ್ಕೆ ತೆರಳಿ, ಅಲ್ಲಿಯೂ ಇಲಾಖಾ ಅಧಿಕಾರಿಗಳ ಬೈಗುಳ ತಿನ್ನುವ ಆತಂಕದ ಮಧ್ಯೆಯೇ ಶವ ಸಂಸ್ಕಾರ ಮಾಡಿ ಬಂದಿದೆ. ಅನೇಕ ಬಾರಿ ಜಿಲ್ಲಾಡಳಿತದ ಗಮನಕ್ಕೆ ತಂದರೂ ಈ ದಲಿತರ ಗೋಳು ಯಾರೂ ಕೇಳುತ್ತಿಲ್ಲ. ಜಿಲ್ಲೆಯ ಹಲವು ಗ್ರಾಮಗಳಲ್ಲಿ ದಲಿತರಿಗೆ ಸ್ಮಶಾನ ಭೂಮಿ ಇಲ್ಲದೆ ಅನೇಕ ಘಟನೆಗಳು ಮರುಕಳಿಸುತ್ತಿವೆ. ಇನ್ನು ಧನೂರು(ಎಚ್)

ಗ್ರಾಮದಲ್ಲಿ ಪರಿಶಿಷ್ಟ ಸಮುದಾಯಕ್ಕೆ ಎರಡು ಎಕರೆ ಸ್ಮಶಾನ ಭೂಮಿ ಮಂಜೂರಾತಿಗೆ ಕೋರಿ ಈ ಸಮಾಜದವರು ಹಲವು ವರ್ಷಗಳಿಂದ ಮನವಿ ನೀಡಿದ್ದರು, ಅದು ಸಹಾಯಕ ಆಯುಕ್ತ ಕಛೇರಿಯಲ್ಲಿ ಕೊಳೆಯುತ್ತಿದೆ. ಆದ್ದರಿಂದ ಸರ್ಕಾರ ಕೂಡಲೇ ಈ ಗಂಭೀರ ವಿಷಯದ ಬಗ್ಗೆ ಗಮನಹರಿಸಿ ಸ್ಮಶಾನ ಭೂಮಿಯನ್ನು ಒದಗಿಸಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾಗಿರುವ ಶ್ರೀ ಅರವಿಂದ ಕುಮಾರ್ ಅರಳಿಯವರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ. ಸದರಿ ವಿಚಾರವು ಪರಿಶಿಷ್ಟ ಜಾತಿಯವರಿಗೆ ಸಂಬಂಧಪಟ್ಟಿರುವುದರಿಂದ ಬೀದರ್ ಜಿಲ್ಲೆಯ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಪ್ರತಿ ಗ್ರಾಮಕ್ಕೂ ಸ್ಮಶಾನ ಭೂಮಿಯನ್ನು ಕೊಡುವ ಬಗ್ಗೆ ಸೂಕ್ತ ಕ್ರಮ ಜರುಗಿಸಲಾಗುವುದು. ಇದಕ್ಕೆ ಉತ್ತರವನ್ನು ಮಾನ್ಯ ಕಂದಾಯ ಸಚಿವರಿಂದ ಕೊಡಿಸಲಾಗುತ್ತದೆ.

**ಇ) ವಿಷಯ:- ಬೆಂಗಳೂರು ಮಹಾನಗರದಲ್ಲಿ ವಾಹನಗಳ ಟೋಯಿಂಗ್ ಪದ್ಧತಿ ಜಾರಿಯಿಂದ ಆಗುತ್ತಿರುವ ಅನಾನುಕೂಲಗಳ ಕುರಿತು.**

***

**ಶ್ರೀ ಮುನಿರಾಜು ಗೌಡ.ಪಿ.ಎಂ(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರದಲ್ಲಿ ನಿಲುಗಡೆ ನಿರ್ಬಂಧವಿರುವ ಪ್ರದೇಶದಲ್ಲಿ ವಾಹನ ನಿಲ್ಲಿಸಿ, ನಿಯಮ ಉಲ್ಲಂಘಿಸಿದ ವಾಹನಗಳನ್ನು ಟೋಯಿಂಗ್ ಸಿಬ್ಬಂದಿಗಳು ತೆಗೆದುಕೊಂಡು ಹೋಗುವಾಗ ಎಸ್.ಓ.ಪಿ. ಉಲ್ಲಂಘಿಸಿದ ಕಾರಣ ಹಾಗೂ ಟೋಯಿಂಗ್ ಸಿಬ್ಬಂದಿ ಮತ್ತು ಪೊಲೀಸರ ಅಮಾನವೀಯ ವರ್ತನೆ, ಕಿರುಕುಳದಿಂದ ಆಕ್ರೋಶಗೊಂಡ ಸಾರ್ವಜನಿಕರು ಹಲವೆಡೆ ಟೋಯಿಂಗ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದರು. ಡೆಲವರಿ ಬಾಯ್ ಒಬ್ಬರು ಟೋಯಿಂಗ್ ವಾಹನದ ಹಿಂದೆ ಓಡಿದರೂ ವಾಹನ ನೀಡದ ಪೊಲೀಸ್ ಮತ್ತು ಟೋಯಿಂಗ್ ಸಿಬ್ಬಂದಿಯ ಅಮಾನವೀಯ ವರ್ತನೆ ಜನಾಕ್ರೋಶವನ್ನು ಇಮ್ಮಡಿಗೊಳಸಿತ್ತು. ಈ ಎಲ್ಲಾ ಘಟನೆಗಳಂದ ಎಚ್ಚೆತ್ತ ಸರ್ಕಾರ ಟೋಯಿಂಗ್ ವ್ಯವಸ್ಥೆಯನ್ನು ರದ್ದುಗೊಳಸಿತ್ತು.

ಪ್ರಸ್ತುತ ಸರ್ಕಾರ ಟೋಯಿಂಗ್ ವಾಹನ ಮಾಲೀಕರ ಒತ್ತಡಕ್ಕೆ ಮಣಿದು ಮತ್ತೆ ಟೋಯಿಂಗ್ ವ್ಯವಸ್ಥೆ ಜಾರಿ ಮಾಡಲು ಮುಂದಾಗಿರುತ್ತದೆ. ಈ ರೀತಿಯ ಜನವಿರೋಧಿ ವ್ಯವಸ್ಥೆಯನ್ನು ಜಾರಿಗೆ ತರದೇ ಮೆಟ್ರೋ ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ದುಬಾರಿಯಲ್ಲದ ಸಾರ್ವಜನಿಕ ಸ್ನೇಹಿ, ಸುಗಮ ವಾಹನ ಪಾರ್ಕಿಂಗ್ ವ್ಯವಸ್ಥೆ ಜಾರಿ ಮಾಡಬೇಕು ಹಾಗೂ ವಾಣಿಜ್ಯ ಮಳಗೆಗಳಲ್ಲಿ ಕಡ್ಡಾಯವಾಗಿ ನೆಲಮಹಡಿಯನ್ನು ಪಾರ್ಕಿಂಗ್‌ಗೆ ಮೀಸಲಡಬೇಕು. ಬಡವರು, ಮಧ್ಯಮ ವರ್ಗದವರು ಕಷ್ಟಪಟ್ಟು ಸಂಪಾದನೆ ಮಾಡಿದ ವಾಹನಗಳನ್ನು ಕಸದಂತೆ ತುಂಬಿಕೊಂಡು ಅವರಿಗೆ ನಷ್ಟವುಂಟು ಮಾಡುವುದಲ್ಲದೇ, ಅವರೊಂದಿಗೆ ಅಮಾನವೀಯವಾಗಿ ವರ್ತಿಸುತ್ತಿರುವ ಈ ಟೋಯಿಂಗ್ ಪದ್ಧತಿಯನ್ನು ಜಾರಿಗೆ ತರಬಾರದೆಂಬ ಸಾರ್ವಜನಿಕ ಮಹತ್ವದ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮುನಿರಾಜು ಗೌಡರು ಪ್ರಸ್ತಾಪಿಸಿರುವ ವಿಚಾರಕ್ಕೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಈ) ವಿಷಯ:- ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ 2021-22 ಹಾಗೂ 2022-23ನೇ ಸಾಲಿನ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಗೌರವಧನ ಬಿಡುಗಡೆಯಾಗದ ಕುರಿತು.**

***

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವವರಿಗೆ 2021-22ನೇ ಶೈಕ್ಷಣಿಕ ವರ್ಷದ ಮಾರ್ಚ್ ಮತ್ತು ಏಪ್ರಿಲ್ ಹಾಗೂ 2022-23ನೇ ಶೈಕ್ಷಣಿಕ ವರ್ಷದ ಜುಲೈ ಹಾಗೂ ಆಗಸ್ಟ್ ಒಟ್ಟು 4 ತಿಂಗಳ ಗೌರವಧನ ಬಿಡುಗಡೆಯಾಗದೇ ಸಾವಿರಾರು ಉಪನ್ಯಾಸಕರ ಕುಟುಂಬಗಳು ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ. ಪ್ರತಿವರ್ಷವೂ ಕೂಡ ಅತಿಥಿ ಉಪನ್ಯಾಸಕರಿಗೆ ಸಮಯಕ್ಕೆ ಸರಿಯಾಗಿ ಗೌರವಧನ ಬಿಡುಗಡೆ ಮಾಡುತ್ತಿಲ್ಲ. ಈ ವ್ಯವಸ್ಥೆಯಿಂದ ಅತಿಥಿ ಉಪನ್ಯಾಸಕರು ನಿರಂತರ ತೊಂದರೆಯನ್ನು ಅನುಭವಿಸುವಂತಾಗಿದೆ.

ಇತ್ತೀಚೆಗೆ ಸರ್ಕಾರ 2022-23ನೇ ಸಾಲಿನ ಜುಲೈ, ಆಗಸ್ಟ್, ಸೆಪ್ಟೆಂಬರ್ ಈ ಮೂರು ತಿಂಗಳುಗಳ ವೇತನ ಬಿಡುಗಡೆಗೊಳಿಸಿದ್ದರೂ ಕೂಡ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳು ಅದನ್ನು ಕೂಡ ಅತಿಥಿ ಉಪನ್ಯಾಸಕರುಗಳಿಗೆ ಬಿಡುಗಡೆ ಮಾಡದೇ ವಿಳಂಬ ನೀತಿಯನ್ನು ಅನುಸರಿಸುತ್ತಿದ್ದಾರೆ.

ಆದ್ದರಿಂದ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರು ಕೂಡಲೇ ಕಳೆದ ಶೈಕ್ಷಣಿಕ ವರ್ಷದ ಎರಡು ತಿಂಗಳ ಸಂಭಾವನೆ ಹಾಗೂ ಈ ಶೈಕ್ಷಣಿಕ ವರ್ಷದ ಎರಡು ತಿಂಗಳ ಸಂಭಾವನೆ ಒಟ್ಟು ನಾಲ್ಕು ತಿಂಗಳುಗಳ ಸಂಭಾವನೆಯನ್ನು ತಕ್ಷಣ ಬಿಡುಗಡೆ ಮಾಡುವಂತೆ ಕ್ರಮ ಜರುಗಿಸಲು ಒತ್ತಾಯಿಸುತ್ತಿದ್ದೇನೆ.

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರುರವರು ಪ್ರಸ್ತಾಪ ಮಾಡಿರುವ ಪ್ರಸ್ತಾವನೆಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಉ) ವಿಷಯ:- ರಾಜ್ಯದಲ್ಲಿರುವ ಬಡ ಕೂಲಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಈ ಹಿಂದೆ ಜಾರಿಯಲ್ಲಿದ್ದ ಒಂದು ಬಾರಿ ಬಯೋಮೆಟ್ರಿಕ್ ವ್ಯವಸ್ಥೆ ಕಲ್ಪಿಸಿ ಕೊಡುವ ಕುರಿತು.**

****

**ಶ್ರೀ ಯು.ಬಿ.ವೆಂಕಟೇಶ್(ನಾಮ ನಿರ್ದೇಶನ ಹೊಂದಿದವರು):-** ಸನ್ಮಾನ್ಯ ಸಭಾಪತಿಯವರೇ, "ಪಡಿತರಕ್ಕೆ ಡಬಲ್ ಟ್ರಬಲ್: ಒಮ್ಮೆ ಸಿಎಂ ಲೆಕ್ಕಕ್ಕೆ, ಇನ್ನೊಮ್ಮೆ ಪಿ.ಎಂ. ಲೆಕ್ಕಕ್ಕೆ ಬಯೋಮೆಟ್ರಿಕ್! ರಾಜ್ಯದ ನ್ಯಾಯ ಬೆಲೆ ಅಂಗಡಿಗಳ ಮುಂದೆ ಶ್ರೀಸಾಮಾನ್ಯರ ಸರದಿ ಸಾಲು" ಈ ರೀತಿಯ ತಲೆ ಬರಹದಡಿಯಲ್ಲಿ "ವಿಜಯ ಕರ್ನಾಟಕ" ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ರಾಜ್ಯದಾದ್ಯಂತ ಪಡಿತರ ಪಡೆಯಲು ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಕಾರ್ಡ್‌ದಾರರು ಎರಡು ಬಾರಿ ಬಯೋಮೆಟ್ರಿಕ್ ನೀಡುವುದನ್ನು ಸೆಪ್ಟೆಂಬರ್‌ನಿಂದ ಕಡ್ಡಾಯಗೊಳಿಸಲಾಗಿದೆ. ಇದು ರಾಜ್ಯದ ಲಕ್ಷಾಂತರ ಪಡಿತರದಾರರು ತಮ್ಮ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಸರದಿ ಸಾಲಿನಲ್ಲಿ ನಿಲ್ಲುವ ಶಿಕ್ಷೆಯನ್ನು ಅನುಭವಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯ ಅನ್ನ ಭಾಗ್ಯ ಮತ್ತು ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಗಳ ಪಡಿತರ ಆಹಾರಧಾನ್ಯಗಳನ್ನು ವಿತರಿಸುವ ಸಂದರ್ಭದಲ್ಲಿ ಈ ಎರಡು ಯೋಜನೆಗಳಿಗೆ ಪ್ರತ್ಯೇಕವಾಗಿ ಆಧಾರ್ ಬಯೋಮೆಟ್ರಿಕ್ ದೃಢೀಕರಣ ಪಡೆಯುವಂತೆ ಸೂಚಿಸಲಾಗಿದ್ದು, ಆಹಾರ ಇಲಾಖೆಯ ತಂತ್ರಾಂಶದಲ್ಲಿ ಮಾರ್ಪಾಡು ಮಾಡಿ, ಹೊಸ "ಡಬಲ್ ಬಯೋ ಮೆಟ್ರಿಕ್" ವ್ಯವಸ್ಥೆ ಜಾರಿಯಾಗುತ್ತಿದ್ದಂತೆ ಸರ್ವರ್ ಸಮಸ್ಯೆ ಎದುರಾಗಿರುವುದಾಗಿ ಆಹಾರ ಇಲಾಖೆಯ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸರ್ವರ್ ಸಮಸ್ಯೆಯಿಂದ ಈಗ ಒಮ್ಮೆ ಬಯೋಮೆಟ್ರಿಕ್ ಓ.ಕೆ ಆಗಲು 5 ನಿಮಿಷಗಳು ಬೇಕಾಗುತ್ತಿದೆ. ಎರಡೆರಡು ಬಾರಿ ಬಯೋಮೆಟ್ರಿಕ್ ಮಾಡಬೇಕಾದರೆ 15

ರಿಂದ ೩೦ ನಿಮಿಷ ಬೇಕಾಗುತ್ತದೆಂದು ಗ್ರಾಮೀಣ ಭಾಗದ ಮಹಿಳೆಯರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಇದರಿಂದಾಗಿ "ಸರ್ವರ್ ಸಮಸ್ಯೆ ಇದೆ. ಸಾಲಿನಲ್ಲಿ ನಿಲ್ಲಿ" ಎಂಬ ಪರವಾನಗಿದಾರರ ಸೂಚನೆ ಮೇರೆಗೆ ದಿನನಿತ್ಯ ಪಡಿತರ ಅಂಗಡಿಗಳ ಮುಂದೆ ನಿಲ್ಲಬೇಕಾದ ಅನಿವಾರ್ಯತೆ ಎದುರಾಗಿದ್ದು ಕೂಲಿಯಿಂದ ವಂಚಿತರಾಗುತ್ತಿದ್ದಾರೆ. ಇದು ಗ್ರಾಮೀಣ ಮಹಿಳೆಯರಿಗೆ ಶಾಪವಾಗಿ ಪರಿಣಮಿಸುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ.

ದೇಶದಾದ್ಯಂತ ಭಾರಿ ಪ್ರಚಾರವನ್ನು ಮಾಡಿ, ದೇಶಕ್ಕೆಲ್ಲ ಒಂದೇ ಮಾದರಿಯ ಕಾರ್ಡ್ ಎಂದು "ಒನ್ ನೇಷನ್, ಒನ್ ಕಾರ್ಡ್" ಜಾರಿಗೊಳಿಸಿರುವ ಕೇಂದ್ರ ಸರ್ಕಾರ, ಈಗ ರಾಜ್ಯವೇ ಬೇರೆ; ಕೇಂದ್ರವೇ ಬೇರೆ ಎಂಬ ಇಬ್ಬಗೆಯ ನೀತಿಯನ್ನು ಅನುಸರಿಸುವಂತಾಗಿರುವುದು ವಿಪರ್ಯಾಸವೇ ಸರಿ.

ಆದುದರಿಂದ, ಗ್ರಾಮೀಣ ರೈತಾಪಿ ವರ್ಗದ ಬಡ ಕೂಲಿ ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು ಈ ಹಿಂದೆ ಇದ್ದಂತಹ ಒಮ್ಮೆ ಬಯೋಮೆಟ್ರಿಕ್ ನೀಡುವ ವ್ಯವಸ್ಥೆಯನ್ನೇ ಮರು ಜಾರಿಗೊಳಿಸುವ ಮೂಲಕ ಪಡಿತರದಾರರ ಜೀವನ ನಿರ್ವಹಣೆಗೆ ಅವಕಾಶ ಕಲ್ಪಿಸಬೇಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾಗಿರುವ ಶ್ರೀ ಯು.ಬಿ.ವೆಂಕಟೇಶ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಆಹಾರ ಮತ್ತು ನಾಗರಿಕ ಸರಬರಾಜು ಖಾತೆಯನ್ನು ಹೊಂದಿರುವ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುವುದು.

**(ಮುಂದು...)**

**(902) 19.9.2022 12.50 ಪಿಕೆ:ಬಿಎನ್ಎಸ್**

**(ಈ ಹಂತದಲ್ಲಿ ಮಾನ್ಯ ಸಭಾಪತಿಗಳು ಪೀಠವನ್ನು ಅಲಂಕರಿಸಿದರು)**

**ಊ) ವಿಷಯ: "ನಮ್ಮ ಕ್ಲಿನಿಕ್" ಯೋಜನೆಗೆ ನೇಮಿಸಲಾದ ವೈದ್ಯರುಗಳ ಕನಿಷ್ಠ ವೇತನವನ್ನು ನಿಗದಿಪಡಿಸುವ ಕುರಿತು.**

**ಶ್ರೀ ಸಲೀಂ ಅಹ್ಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ರಾಜ್ಯ ಸರ್ಕಾರವು ಬಡಜನರ ಆರೋಗ್ಯ ಸುಧಾರಣೆಗೆಂದು "ನಮ್ಮ ಕ್ಲಿನಿಕ್" ಯೋಜನೆಯನ್ನು ಆರಂಭಿಸಿದ್ದು, ಇದಕ್ಕೆ ತಕ್ಕಂತೆ ವೈದ್ಯರುಗಳ ನೇಮಕಾತಿಯ ಪ್ರಕ್ರಿಯೆಗೆ ಚಾಲನೆಯನ್ನು ನೀಡಿದ್ದು, ವೈದ್ಯರಿಗೆ ಕನಿಷ್ಠ ವೇತನ ನಿಗದಿಪಡಿಸಿರುವುದರಿಂದ ವೈದ್ಯರುಗಳು ಹಿಂದೇಟು ಹಾಕುತ್ತಿರುವ ಸಂಗತಿಯನ್ನು ಸದನದಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಎಂಬಿಬಿಎಸ್ ಪದವಿಯನ್ನು ಹೊಂದಿರುವವರಿಗೆ 'ನಮ್ಮ ಕ್ಲಿನಿಕ್' ವೈದ್ಯರನ್ನಾಗಿ ನೇಮಿಸಿಕೊಳ್ಳಲು ನಿರ್ಧರಿಸಲಾಗಿದ್ದು, ಇವರಿಗೆ ನೀಡುವ ಸಂಭಾವನೆಯು ಕೇವಲ ರೂ. 36 ಸಾವಿರ ವೇತನ ನಿಗದಿಪಡಿಸಿರುವುದು ಖೇದಕರ ಸಂಗತಿಯಾಗಿದೆ. ಪ್ರಸ್ತುತ ಸರ್ಕಾರದಲ್ಲಿ ಗುತ್ತಿಗೆ ಆಧಾರದ ಮೇಲೆ ಪದವೀಧರರ ನೇಮಕವಾದರೆ, ನೀಡುವ ವೇತನವನ್ನು ಎಂಬಿಬಿಎಸ್‌ನ್ನು ವಿದ್ಯಾಭ್ಯಾಸ ಮಾಡಿದವರಿಗೆ ಈ "ನಮ್ಮ ಕ್ಲಿನಿಕ್"ನಲ್ಲಿ ನೇಮಿಸಿಕೊಳ್ಳಲು ರೂ. 36 ಸಾವಿರ ನಿಗದಿ ಮಾಡಿರುವುದು ನ್ಯಾಯಸಮ್ಮತವಾಗಿರುವುದಿಲ್ಲ. ಆದುದರಿಂದ, ಈಗಾಗಲೇ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆರಂಭಿಸಲು ಉದ್ದೇಶಿಸಿರುವ 'ನಮ್ಮ ಕ್ಲಿನಿಕ್'ಗಳ ವೈದ್ಯರು ಸೇರಿದಂತೆ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿ ಸಂದರ್ಶನ ಪ್ರಕ್ರಿಯೆ ಆರಂಭಿಸಲಾಗಿದೆ. ಆದರೆ, ರಾಜ್ಯದ ವಿವಿಧ ಕಡೆಗಳಲ್ಲಿ ಸಂದರ್ಶನಕ್ಕೆ ಎಂಬಿಬಿಎಸ್ ವೈದ್ಯರುಗಳ ಕೊರತೆ ಎದುರಾಗಿರುವ ಸನ್ನಿವೇಶ ಕಂಡುಬರುತ್ತಿದೆ.

ರಾಜ್ಯದಲ್ಲಿ ಕೋವಿಡ್-19ರ ಸಮಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಂಬಿಬಿಎಸ್ ವೈದ್ಯಾಧಿಕಾರಿಗಳಿಗೆ ಸರ್ಕಾರ ರೂ. 60

ಸಾವಿರ ವೇತನ ನೀಡಿರುತ್ತದೆ. ಎಂಬಿಬಿಎಸ್ ವೈದ್ಯರು ಇಲ್ಲದಿದ್ದಲ್ಲಿ, ಕರ್ತವ್ಯ ನಿರ್ವಹಿಸುತ್ತಿರುವ ಆಯುಷ್ ವೈದ್ಯರನ್ನು ಗ್ರಾಮೀಣದಲ್ಲಿ ರೂ. 45 ಸಾವಿರ ವೇತನ ನೀಡಲಾಗುತ್ತಿದೆ. ಆದರೆ ಹೊಸದಾಗಿ ಆರಂಭವಾಗಲಿರುವ ನಮ್ಮ ಕ್ಲಿನಿಕ್‌ಗೆ ವೇತನ ನಿಗದಿಯಿಂದ ವೈದ್ಯರುಗಳು ನಿರಾಸಕ್ತಿಯನ್ನು ಹೊಂದಿರುವುದರಿಂದ ಇವರಿಗೆ ವೇತನ ನಿಗದಿಪಡಿಸಿರುವ ಕನಿಷ್ಠ ವೇತನವನ್ನು ಕೋವಿಡ್-19ರ ಸಮಯದಲ್ಲಿ ವೈದ್ಯರುಗಳಿಗೆ ನೀಡಿದಂತೆ ರೂ. 60 ಸಾವಿಕ್ಕಿಂತ ಹೆಚ್ಚಾಗಿ ವೇತನವನ್ನು ನಿಗದಿಪಡಿಸಲು ಈ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ: ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು, "ನಮ್ಮ ಕ್ಲಿನಿಕ್"ನಲ್ಲಿ ಕೆಲಸ ಮಾಡುವಂತಹ ವೈದ್ಯರುಗಳಿಗೆ ವೇತನ ಕಡಿಮೆ ಇರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ, ಇಡೀ ದೇಶಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ಈ ಯೋಜನೆಯನ್ನು ರೂಪಿಸಿದೆ. ವೈದ್ಯರನ್ನು 1 ವರ್ಷದ ಮಟ್ಟಿಗೆ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತದೆ. ಆದರೂ ಕೂಡ ನಮ್ಮ ಸರ್ಕಾರದ ವತಿಯಿಂದ, ನಮ್ಮ ಇಲಾಖೆಯಿಂದ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ನಮ್ಮಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರಿಗೆ ಕನಿಷ್ಠ ರೂ. 60 ಸಾವಿರ ವೇತನ ಕೊಡುತ್ತಿರುವುದು ನಿಜ. ರೂ. 36 ಸಾವಿರ ಮೊತ್ತ ಕಡಿಮೆ ಆಗುತ್ತದೆ. ಈ ಮೊತ್ತದ ಪ್ರಮಾಣವನ್ನು ಹೆಚ್ಚು ಮಾಡಬೇಕೆಂದು ನಾವು ಈಗಾಗಲೇ ಮನವಿಯನ್ನು ಕಳುಹಿಸಿದ್ದೇವೆ; ಸಮಾಲೋಚನೆಯನ್ನೂ ಕೂಡ ಮಾಡುತ್ತೇವೆ. ಬಹುಶಃ ಕೇಂದ್ರ ಸರ್ಕಾರ ಒಂದು ರಾಜ್ಯದ ಮಟ್ಟಿಗೆ ವೇತನವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಇದು ಇಡೀ ದೇಶದ ಕಾರ್ಯಕ್ರಮ ಆಗಿರುವುದರಿಂದ ಬಹುಶಃ ಕೇಂದ್ರ ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ ಎಂದು ನಾನು ಭಾವಿಸುತ್ತೇನೆ.

**ಖ) ವಿಷಯ: ಸಹಾಯಕ ತೋಟಗಾರಿಕೆ ಅಧಿಕಾರಿಗಳ ಹೆಚ್ಚುವರಿ ಪಟ್ಟಿಯಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ ನಾಲ್ಕು ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿರುವ ಬಗ್ಗೆ.**

– – –

**ಶ್ರೀ ಚಿದಾನಂದ ಎಂ.ಗೌಡ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಲೋಕ ಸೇವಾ ಆಯೋಗ ದಿನಾಂಕ 19.1.2021ರಂದು ಪ್ರಕಟಿಸಿರುವ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಹೊಂದಿ ಸಹಾಯಕ ತೋಟಗಾರಿಕೆ ಅಧಿಕಾರಿ ಹುದ್ದೆಯಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ 1) ಮೇಘ ಸಿ ಆರ್.ನಂ-1003461, 2) ಉದಯ.ಟಿ.ವಿ. ಆರ್.ನಂ-1004018, 3) ಶಿವದತ್ತ ಕುಂಬಾರ ಆರ್.ನಂ- 1004564, 4) ಶೇಕ್ ಅಬ್ದುಲ್ ಅತೀಫ್ ಆರ್‌ನಂ- 1002448. ಇವರುಗಳನ್ನು ಕರ್ನಾಟಕ ಲೋಕಸೇವಾ ಆಯೋಗವವು ದಿನಾಂಕ 19.8.2022ರಲ್ಲಿ ಪ್ರಕಟಿಸಿರುವ ಸಹಾಯಕ ತೋಟಗಾರಿಕೆ ಅಧಿಕಾರಿಗಳ ಹೆಚ್ಚುವರಿ ಪಟ್ಟಿಯಲ್ಲಿ ಅದೇ ಹುದ್ದೆಗೆ ಮರು ಆಯ್ಕೆ ಮಾಡಲಾಗಿರುವುದರಿಂದ ನಂತರದ ನಾಲ್ಕು ಅಭ್ಯರ್ಥಿಗಳಗೆ ಅನ್ಯಾಯವಾಗಿದೆ. ಆದ್ದರಿಂದ ಈ ಕೂಡಲೇ ಕ್ರಮ ಕೈಗೊಂಡು ಪರಿಷ್ಕೃತ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ ಮಾನ್ಯ ತೋಟಗಾರಿಕೆ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಗಳೆ, ಕೆಪಿಎಸ್‌ಸಿ ಯಿಂದ ಮಾಹಿತಿ ತರಿಸಿಕೊಂಡು ಮಾನ್ಯ ಮುಖ್ಯಮಂತ್ರಿಗಳ ಮುಖಾಂತರ ಮಾನ್ಯ ಸದಸ್ಯರಿಗೆ ಉತ್ತರ ಕೊಡಿಸಲಾಗುತ್ತದೆ.

**ಎ) ವಿಷಯ: ಗ್ರಾಮ ಪಂಚಾಯಿತಿ ಅಧ್ಯಕ್ಷ-ಉಪಾಧ್ಯಕ್ಷ ಹಾಗೂ ಸದಸ್ಯರ ಗೌರವ ಧನ ಹೆಚ್ಚು ಮಾಡುವ ಬಗ್ಗೆ.**

- - -

**ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಗ್ರಾಮ ಪಂಚಾಯಿತಿ ಅಧ್ಯಕ್ಷ-ಉಪಾಧ್ಯಕ್ಷ ಹಾಗೂ ಸದಸ್ಯರ ಗೌರವ ಧನ ಪರಿಷ್ಕರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಕಳೆದ ವರ್ಷ ಸರ್ಕಾರ ಸದನದಲ್ಲಿ ಹೇಳಿತ್ತು. ಆದರೆ ಅನಂತರ ಈ ವಿಷಯದ ಬಗ್ಗೆ ಯಾವುದೇ ಬೆಳವಣಿಗೆ ನಡೆಯದಂತಿಲ್ಲ ಎಂಬುದರ ಬಗ್ಗೆ ದಿನಾಂಕ 18.9.2022ರ ಉದಯವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.

ಗ್ರಾಮ ಪಂಚಾಯಿತಿ ಸದಸ್ಯರ ಗೌರವ ಧನ 2017ರಲ್ಲಿ ಪರಿಷ್ಕರಣೆ ಮಾಡಲಾಗಿತ್ತು. ಆಗ ಅಧ್ಯಕ್ಷರಿಗೆ ನೀಡುತ್ತಿದ್ದ ರೂ. 1000 ಗೌರವಧನವನ್ನು ರೂ. 3000 ಗಳಿಗೂ, ಉಪಾಧ್ಯಕ್ಷರುಗಳಿಗೆ ನೀಡುತ್ತಿದ್ದ ರೂ. 600 ಗಳ ಗೌರವ ಧನವನ್ನು ರೂ. 2000 ಗಳಿಗೆಗೂ ಹಾಗೂ ಸದಸ್ಯರುಗಳಿಗೆ ನೀಡುತ್ತಿದ್ದ ರೂ. 500ಗಳ ಗೌರವಧನವನ್ನು ರೂ. 1000 ಗಳಿಗೆ ಹೆಚ್ಚಿಸಿತ್ತು. ಗೌರವಧನ ಹೆಚ್ಚು ಮಾಡುವಂತೆ ಕಳೆದ ಅಧಿವೇಶನದಲ್ಲಿ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದ 25 ಮಂದಿ ವಿಧಾನ ಪರಿಷತ್ ಸದಸ್ಯರು ಪಕ್ಷಾತೀತವಾಗಿ ಒತ್ತಾಯಿಸುತ್ತಾ ಬಂದಿದ್ದರೂ ಸರ್ಕಾರ ಈವರೆಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ.

ಭಾರತದ ಸಂವಿಧಾನದ ಆಶಯವಾದ ಸಾಮಾಜಿಕ ನ್ಯಾಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಜಾರಿತಂದ ವ್ಯವಸ್ಥೆ ಪಂಚಾಯತ್ ರಾಜ್‌ದಾಗಿರುತ್ತದೆ. ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳಿಗೆ ಹಾಗೂ ಮಹಿಳೆಯರಿಗೆ ರಾಜಕೀಯ ಅಧಿಕಾರ ನೀಡುವ ಮೂಲಕ ದೇಶದ ಅಭಿವೃದ್ಧಿಯಲ್ಲಿ ನೇರವಾಗಿ ಭಾಗವಹಿಸುವ ಸಮಾನ ಅವಕಾಶವನ್ನು ಪಂಚಾಯಿತಿಗಳ ಮೂಲಕ ನೀಡಲಾಗಿದೆ.

ಶೇಕಡ ೮೦ಕ್ಕೂ ಹೆಚ್ಚು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದವರೇ ಇರುವ ಗ್ರಾಮ ಪಂಚಾಯಿತಿ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಜನಪ್ರತಿನಿಧಿಗಳಾಗಿ ಪರಿಣಾಮಕಾರಿಯಾಗಿ ಹಾಗೂ ಪ್ರಾಮಾಣಿಕವಾಗಿ ಜನರ ಸೇವೆ ಮಾಡುವ ಜವಾಬ್ದಾರಿ ನಿರ್ವಹಿಸಬೇಕಾದರೆ, ಅವರ ಜೀವನ ನಿರ್ವಹಣೆಗೆ ಬೇಕಾದ ಆರ್ಥಿಕ ಬೆಂಬಲ ನೀಡಬೇಕಾದ್ದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ.

ಜೀವನ ವೆಚ್ಚದಲ್ಲಿ ಗಣನೀಯವಾದ ಹೆಚ್ಚಳವಾಗಿರುವ ಅಂಶವನ್ನು ಪರಿಗಣಿಸಿ ಜನರ ಸೇವೆಯ ಜವಾಬ್ದಾರಿ ಹೊತ್ತಿರುವ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಮಾಸಿಕ ಗೌರವ ಧನವನ್ನು ಕೇರಳ ರಾಜ್ಯಲ್ಲಿರುವಂತೆ ಅಧ್ಯಕ್ಷರಿಗೆ ರೂ. 13,200ಗಳು, ಉಪಾಧ್ಯಕ್ಷರಿಗೆ ರೂ. 10,600ಗಳು ಹಾಗೂ ಸದಸ್ಯರಿಗೆ ರೂ. 7000 ಗಳಿಗೆ ಹೆಚ್ಚಿಸಬೇಕೆಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ ಈ ವರ್ಷದ ಆರಂಭದಲ್ಲೇ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿರುತ್ತದೆ.

ಪ್ರಸ್ತುತ ನಡೆಯುತ್ತಿರುವ ವಿಧಾನ ಮಂಡಲದ ಅಧಿವೇಶನದಲ್ಲಿಯಾದರೂ ತಮ್ಮ ಬೇಡಿಕೆಗೆ ಸ್ಪಂದನೆ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ರಾಜ್ಯದ ಸುಮಾರು 99 ಸಾವಿರ ಗ್ರಾಮ ಪಂಚಾಯಿತಿ ಸದಸ್ಯರು ಇದ್ದಾರೆ. ಆದುದರಿಂದ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಗೌರವಧನ ಹೆಚ್ಚಿಸುವಲ್ಲಿ ಶೀಘ್ರ ಕ್ರಮ ಕೈಗೊಳ್ಳುವಂತೆ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಗಳೆ, ಈ ವಿಷಯವನ್ನು ಅರ್ಧಗಂಟೆ ಚರ್ಚೆ ಅಥವಾ ಬೇರೆ ಯಾವುದಾದರೂ ನಿಯಮದ ಅಡಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ನೋಟಿಸ್ ಕಳುಹಿಸಿ ಕೊಡಿ.

**(೯೦೩) ೧೯-೦೯-೨೦೨೨ ೧.೦೦ ಡಿಎಸ್-ಕೆಎಸ್**

**೦೫. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆ.**

**ಊ) ವಿಷಯ: ಅಂತರರಾಷ್ಟ್ರೀಯ, ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಕ್ರೀಡಾಪಟುಗಳು ದಕ ದ್ರವ್ಯಗಳಂತಹ ಉದ್ದೀಪನ ಮದ್ದು ಸೇವಿಸಿರುವ ಪ್ರಕರಣಗಳ ಬಗ್ಗೆ.**

------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಿ.ಎಸ್.ಅರುಣ್‌ರವರು ದಿನಾಂಕ:೧೬-೦೯-೨೦೨೨ ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

## ೦6. ವರದಿಯನ್ನೊಪ್ಪಿಸುವುದು

**ಶ್ರೀ ಪಿ.ಹೆಚ್.ಪೂಜಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 215 ರ ರೀತ್ಯಾ ಹಕ್ಕುಬಾಧ್ಯತಾ ಸಮಿತಿಯ 99ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ವರದಿಯನ್ನೊಪ್ಪಿಸಲಾಯಿತು.

## ೦7. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕವಿಪ:–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

1. ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2022

2. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2022

# ೦೮. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

**ವಿಷಯ: ರಾಜ್ಯದಲ್ಲಿ ಪಿಎಸ್‌ಐ ನೇಮಕಾತಿಯಲ್ಲಿ ಆಗಿರುವಂತಹ ಹಗರಣದ ಬಗ್ಗೆ.**

------

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿ ನಿಯಮ 59 ರ ಮೇರೆಗೆ ರಾಜ್ಯದಲ್ಲಿ ಪಿಎಸ್‌ಐ ನೇಮಕಾತಿಯಲ್ಲಿ ಆಗಿರುವಂತಹ ಹಗರಣದ ಬಗ್ಗೆ ನಾನು ಸದನದಲ್ಲಿ ವಿಷಯವನ್ನು ಮಂಡನೆ ಮಾಡಬಯಸುತ್ತಿದ್ದು, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ಚರ್ಚೆಗೆ ಅವಕಾಶ ಕೇಳುವಾಗ ನಿಯಮದ ಪ್ರಕಾರ ಮಾನ್ಯ ಸದಸ್ಯರು ಅವಕಾಶ ಕೋರಿ ಪ್ರಸ್ತಾವವನ್ನು ಮಂಡಿಸಬೇಕು. ಅವರು ನಿಯಮ 59 ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೇಳುತ್ತಿದ್ದಾರೆ. ಅವರು ಈ ವಿಷಯದ ಬಗ್ಗೆ ಗಮನ ಸೆಳೆಯಬೇಕು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ನಿಯಮ 59 ರಡಿಯಲ್ಲಿ ಚರ್ಚೆಗೆ ಅವಕಾಶ ಕೋರಿ ಪ್ರಸ್ತಾವವನ್ನು ಕೊಟ್ಟಿದ್ದೇನೆ. ದಯಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ವಿನಂತಿಸುತ್ತಿದ್ದೇನೆ. ಈ ಬಗ್ಗೆ ನಾನೇನಾದರೂ ವಿಚಾರಗಳನ್ನು ಮಂಡನೆ ಮಾಡಬೇಕೆಂದರೆ ನಾನು ಮಂಡನೆ ಮಾಡುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಿಯಮ 59 ರಡಿಯಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಏಕೆಂದರೆ, ನಿಯಮಗಳನ್ನು ನಾವು

ಸ್ಪಷ್ಟವಾಗಿ ರೂಪಿಸಿದ್ದೇವೆ. Adjournment motion has to be raised on a matter of recent occurrence. ನಾವೇನಾದರೂ ಪ್ರಸ್ತಾಪ ಮಾಡಬೇಕೆಂದರೆ adjudication ನಲ್ಲಿ ಇರಲೇಕೂಡದು ಎಂದು ಸ್ಪಷ್ಟವಾಗಿದೆ. Adjudication ಎಂದರೆ trial ಎಂದಲ್ಲ. Filing an FIR (First Information Report) ನಿಂದ ಹಿಡಿದು everything comes under adjudication. ಈಗ adjudication ನಲ್ಲಿದೆ. ಅಧಿಕಾರಿಗಳು ಅರೆಸ್ಟ್ ಆಗಿದ್ದಾರೆ. ಎಫ್.ಐ.ಆರ್. ಆಗಿದೆ. ಬೇರೆ ಬೇರೆ ಕೋರ್ಟ್‌ಗಳ ಮುಂದೆ ಕೇಸ್‌ಗಳಿವೆ. ಇದನ್ನೆಲ್ಲಾ ನೋಡಿದಾಗ sub–judice ಆಗುತ್ತದೆ. ಹಾಗಾಗಿ ಈ ನಿಯಮದ ಕೆಳಗಡೆ ಇದನ್ನು ಚರ್ಚೆ ಮಾಡುವುದಕ್ಕೆ ಕಾನೂನಿನ ಕೆಳಗೆ, ನಿಯಮದ ಕೆಳಗೆ ಅವಕಾಶವಿಲ್ಲ. ಈ ವಿಷಯ ಸುಮಾರು 6–7 ತಿಂಗಳ ಹಿಂದೆ ನಡೆದಿರುವಂಥದ್ದು. ತಕ್ಷಣ ನಿನ್ನೆ, ಮೊನ್ನೆ ನಡೆದು recent occurrence ನ್ನು Adjournment motion ನಲ್ಲಿ move ಮಾಡಿಲ್ಲ. ಇದರಲ್ಲಿ ಅನೇಕ issues involve ಆಗಿರುವುದರಿಂದ ಇದನ್ನು ತಾವು ತಿರಸ್ಕಾರ ಮಾಡಬೇಕು. As, this matter is already under adjudication. ಇದು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಕೋರ್ಟ್‌ನಲ್ಲಿರತಕ್ಕಂಥ ಪ್ರಕರಣಗಳ ಬಗ್ಗೆಯಾಗಲಿ ಅಥವಾ ಸಿ.ಐ.ಡಿ. (Crime Investigation Department) ಯಲ್ಲಿ ತನಿಖೆಯಾಗುತ್ತಿರುವ ಪ್ರಕರಣಗಳ ಅರ್ಹತೆ, ಮೆರಿಟ್ ಬಗ್ಗೆ ಮಾತನಾಡುವುದಿಲ್ಲ. ರಾಜ್ಯದ ಜನತೆಯಲ್ಲಿ ಆಡಳಿತ ವ್ಯವಸ್ಥೆಯ ಬಗ್ಗೆ ಅಪನಂಬಿಕೆ ಉಂಟಾಗಿದೆ. ಏನಾಗುತ್ತಿದೆ ಎಂಬುದು ಜನರಿಗೆ ಗೊತ್ತಾಗುತ್ತಿಲ್ಲ.

**Sri J.C. MADHUSWAMY :–** The relevant portion in 'Page 573' of 'Practice and Procedure of Parliament' by M.N.Kaul and S.L.Shakdher (Seventh Edition) with respect to 'Motion for Adjournment on a Matter of Urgent Public Importance' reads as follows;

*"…..A matter is not sub judice until the legal proceedings actually start, but the moment a complaint is filed or a petition is launched involving jurisdiction of any of the courts in India, the court is seized of the matter and to that extent the jurisdiction of the House to discuss the matter is barred…… "*

**Sri. B.K. HARIPRASAD(Leader of opposition):–** Hon'ble Chairman, 'Practice and Procedure of Parliament' by M.N.Kaul and S.L.Shakdher is not a rule.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ನಾನಲ್ಲ ನಿಯಮ ಮಾಡಿರುವುದು. 'Practice and Procedure of Parliament' by M.N.Kaul and S.L.Shakdher is practiced in Parliament and all State Legislatures in the Country. ಈ ರೂಲ್‌ಗಳನ್ನು ಮಾಡಿಕೊಂಡು….

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಾನೂನು ಸಚಿವರು ದಯಮಾಡಿ…..

**Sri. B.K. HARIPRASAD:–** Hon'ble Chairman, Yes, it is practiced. It is convention or practice. It is a parliamentary practice.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, Practice and Procedure of Parliament' by M.N.Kaul and S.L.Shakdher is practiced. ಈ Practice ನ್ನು ನಾವು ನಿಯಮ ಅಂದುಕೊಂಡು Practice ಮಾಡಿಕೊಂಡು ಬರುತ್ತಿರುವುದರಿಂದ, it is barred to discuss the matter which is already under adjudication.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನನ್ನ ಮನವಿ ಏನೆಂದರೆ, ನಿಯಮ 59 ರಡಿಯಲ್ಲಿ ಚರ್ಚೆ ಮಾಡಬೇಕೆಂದು ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ತಂದಿದ್ದಾರೆ. ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಏನಾದರೂ ನಿಯಮ 59 ರಡಿಯಲ್ಲಿ ವಿಷಯವನ್ನು ಚರ್ಚೆಗೆ ತರಬೇಕಾದರೆ ಇತ್ತೀಚೆಗೆ ನಡೆದಿರುವಂತಹ ಘಟನೆಗಳ ಬಗ್ಗೆ ತರಬೇಕೆಂದು ಹೇಳುತ್ತಿದ್ದಾರೆ. ಆದರೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನನಿತ್ಯ ಅರೆಸ್ಟ್ ಆಗುತ್ತಿದ್ದಾರೆ. ಮಕ್ಕಳು Freedom park ನಲ್ಲಿ ಕುಳಿತುಕೊಂಡು ಇದು ಬಗೆಹರಿಯುವವರೆಗೆ ನಾವು ಎದ್ದೇಳುವುದಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡುವುದರಲ್ಲಿ ತಪ್ಪೇನು ಇಲ್ಲ. ಕೋರ್ಟ್‌ನಲ್ಲಿರುವಂತಹ ಯಾವುದೇ ಪ್ರಕರಣಗಳನ್ನು ನಾವು ಚರ್ಚೆ ಮಾಡುವುದಿಲ್ಲ. ಮಾನ್ಯ ಸದಸ್ಯರು ಕೂಡ ಅನುಭವವಿರುವಂಥವರು ಮತ್ತು ಹಿರಿಯರು. ಕೋರ್ಟ್‌ನಲ್ಲಿರುವ ಯಾವುದಾದರು ಪ್ರಕರಣ ಬಂದರೆ sub-judice ಆಗುತ್ತದೆ ಎನ್ನುವುದು ನನಗೂ ಗೊತ್ತಿದೆ. ಈಗಾಗಲೇ ಕೆಳಮನೆಯಲ್ಲೂ ಈ ವಿಷಯ ಚರ್ಚೆಯಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಚರ್ಚೆಯಾಗಿಲ್ಲ. ಕೆಳಗಿನ ಸದನದಲ್ಲಿ ಅವರ ಕಡೆಯವರು ಈ ತಕರಾರಿಗೆ ಒಪ್ಪಿಕೊಂಡು ನಿಯಮ 69 ರ ಕೆಳಗೆ ಚರ್ಚೆಗೆ ಅವಕಾಶ ಕೊಡಿ, ನಾವು ಚರ್ಚೆಗೆ ಸಿದ್ಧರಿದ್ದೇವೆ. ನಿಲುವಳಿ ಸೂಚನೆಯಲ್ಲಿ ಚರ್ಚೆ ಬೇಡ ಎಂದು ಒಪ್ಪಿಕೊಂಡಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಯಿತು, ಈ ಸದನದಲ್ಲಿ ನಿಯಮ 68 ರಲ್ಲಿ ಚರ್ಚೆಗೆ ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಿಯಮ 59 ರಡಿಯಲ್ಲಿ ಬರುವುದಿಲ್ಲವೆಂದರೆ ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಿಯಮ 59 ರಡಿಯಲ್ಲಿ ಚರ್ಚೆಗೆ ಬರುವುದಿಲ್ಲ ಎಂಬುದು ನಮ್ಮ ವಾದ.

**(ಗೊಂದಲ)**

**ಸಭಾಪತಿಯವರು:–** ಒಬ್ಬೊಬ್ಬರಾಗಿ ಮಾತನಾಡಿದರೆ ನಾನು ಏನಾದರೂ ಹೇಳಬಹುದು, 3–4 ಜನ ಮಾತನಾಡಿದರೆ ಅದು ಕಡತಕ್ಕೂ ಹೋಗುವುದಿಲ್ಲ. ಮಾನ್ಯ ತಿಪ್ಪೇಸ್ವಾಮಿಯವರು ಸಬಲರಾಗಿದ್ದಾರೆ. ಅವರು ಮಾತನಾಡುತ್ತಾರೆ, ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರ. ಒಂದು ಕಡೆ ಮಕ್ಕಳು ಬಹಳ ಕಷ್ಟ ಬಿದ್ದು pass ಆಗಿರುವವರು ಇದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡಬಾರದು ಎಂದೇನೂ ಹೇಳುತ್ತಿಲ್ಲ. ಆದರೆ ಈ ನೋಟಿಸ್ ಕೆಳಗೆ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದಾಗಿದೆ. ನಾನು ಬೇರೆ ಏನೋ ಹೇಳುತ್ತಿದ್ದೇನೆ, ಅದನ್ನು ಮಾನ್ಯ ಸಚಿವರು ಕೇಳಬೇಕು.

**Sri J.C. MADHUSWAMY** :– Hon'ble Chairman, Hon'ble member is directly going into the material facts of the case.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನೇನು ಹೇಳುತ್ತೇನೆ ಎಂಬುದನ್ನು ಮಾನ್ಯ ಸಚಿವರು ಕೇಳಲಿ. ನಾವು ಈಗಾಗಲೇ ತಮ್ಮಲ್ಲಿ ಮನವಿ ಮಾಡಿದ್ದೇವೆ, ಇಲ್ಲದಿದ್ದರೆ ಪರ್ಯಾಯ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಚರ್ಚೆಯಾಗಲಿ. ಚರ್ಚೆ ಮಾಡುವುದಕ್ಕೋಸ್ಕರ

ಈ ಸದನ ಇರತಕ್ಕಂಥದ್ದು. ನಿಯಮ 59 ರಡಿಯಲ್ಲಿ ಚರ್ಚೆಗೆ ಅವಕಾಶವಿಲ್ಲದಿದ್ದರೆ ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡಿ ಎಂದು ನಾನು ಸಹ ಮನವಿ ಮಾಡುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಬೇರೆ ನಿಯಮದಡಿಯಲ್ಲಿ ಚರ್ಚೆಗೆ ಅವಕಾಶ ಕೊಡುವುದಿದ್ದರೆ ನಮ್ಮ ತಕರಾರು ಏನು ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾಗಿರುವಂತಹ ವಿಚಾರ. ನಾವೆಲ್ಲರೂ ಕೂಡ ಸಾರ್ವಜನಿಕ ಕ್ಷೇತ್ರದಲ್ಲಿರುವಂತಹ ಸಂದರ್ಭದಲ್ಲಿ ನಮ್ಮ ಕಾನೂನು ಸಚಿವರು ನಿಯಮ 59 ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿರುವುದನ್ನು ನಾವು ಒಪ್ಪಬೇಕಾಗುತ್ತದೆ, ನಾವು ಇಲ್ಲ ಎಂದು ಹೇಳುವುದಿಲ್ಲ. ಆದ್ದರಿಂದ ಇಂತಹ ನಿಯಮದಡಿಯಲ್ಲಿ ಚರ್ಚೆ ಮಾಡಿ ಎಂದು ಮಾನ್ಯ ಸಚಿವರು ಸಲಹೆ ಕೊಡಲಿ. ಏಕೆಂದರೆ, ಇದು ಬಹಳ ಗಂಭೀರವಾದ ವಿಚಾರವಾಗಿರುವುದರಿಂದ ನಾವು ಸಾರ್ವಜನಿಕರಿಗೆ ಉತ್ತರ ಕೊಡಬೇಕಾಗಿದೆ. ಯಾವುದೇ ಕಾರಣಕ್ಕೂ ಕೋರ್ಟ್‌ನಲ್ಲಿರುವ ವಿಚಾರಗಳನ್ನು ಇಲ್ಲಿ ನಾವು ಚರ್ಚೆ ಮಾಡುವುದಿಲ್ಲ. ಆದರೆ ಈ ವಿಷಯದಲ್ಲಿ ಚರ್ಚೆ ಮಾಡಿದ್ದೇವೆ ಎನ್ನುವುದು ಸಾರ್ವಜನಿಕವಾಗಿ ಗೊತ್ತಾಗಬೇಕು. ಅಲ್ಲಿ ನೊಂದವರು ಸಾವಿರಾರು ಜನರು ಇದ್ದಾರೆ. ಸಮಾಜಕ್ಕೆ ನಾವು ಉತ್ತರ ಕೊಡದಿದ್ದರೆ ಹೇಗೆ? ಆ ದೃಷ್ಟಿಯಿಂದ ಕಾನೂನು ಸಚಿವರು ಯಾವ ನಿಯಮದಡಿಯಲ್ಲಿ ಚರ್ಚೆ ಮಾಡಬೇಕೆಂದು suggest ಮಾಡುತ್ತಾರೆಯೋ ಆ ನಿಯಮದಡಿಯಲ್ಲೇ ತಾವು ಚರ್ಚೆಗೆ ಅವಕಾಶ ಮಾಡಿಕೊಡಿ, ತೊಂದರೆ ಇಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರವರು ವಕೀಲರು, ಬಾರ್ ಕೌನ್ಸಿಲ್‌ನಲ್ಲಿ ಪ್ರತಿನಿಧಿಯಾಗಿದ್ದವರು. ಅವರಿಗೆ ನಾನು provision of law ಹೇಳಿಕೊಡುವ ಅಗತ್ಯವಿಲ್ಲವೆಂದು ನಾನು ಭಾವಿಸಿದ್ದೇನೆ. ಕೋರ್ಟ್ ಮುಂದೆ ನಾವು ಯಾವುದೇ ಪ್ರಭಾವ ಬೀರುವಂತಹ ಚರ್ಚೆಯನ್ನು ಇಲ್ಲಿ ಮಾಡುವುದಕ್ಕಾಗುವುದಿಲ್ಲ. ಯಾವುದೇ ಸಾಕ್ಷಿಯನ್ನು ಕೋರ್ಟ್ trial ಮಾಡುವುದಕ್ಕಿಂತ ಮೊದಲೇ ನಾವು ಮಾಡುವುದಕ್ಕಾಗುವುದಿಲ್ಲ. ಈ ಪ್ರಕರಣಕ್ಕೆ

ಸಂಬಂಧಿಸಿದಂತೆ ಪ್ರತಿ ದಿವಸ arrest ಆಗುತ್ತಿರಬಹುದು. ಈ ಘಟನೆ ನಡೆದು ಈಗಾಗಲೇ ಸುಮಾರು 6-7 ತಿಂಗಳುಗಳಾಗಿವೆ. ಪರೀಕ್ಷೆಗಳನ್ನೇ ರದ್ದು ಮಾಡಿ 6-7 ತಿಂಗಳುಗಳಾಗಿವೆ. This issue is not a recent occurrence. In fact, the things are going on. ಒಂದು ಕೇಸ್ ಪ್ರಾರಂಭವಾದರೆ ಅದು proceed ಆಗುತ್ತಿರುತ್ತದೆ. ಪ್ರಶ್ನೆ sub-judice ಆಗುತ್ತದೆ, ಇದು ಗಂಭೀರ ವಿಷಯವಾಗಿದೆ. ADGP (Addl. Director General of Police) ಅಂತಹ ದೊಡ್ಡ ಅಧಿಕಾರಿಯಿಂದ ಹಿಡಿದು ಎಲ್ಲರೂ ಅರೆಸ್ಟ್ ಆಗಿಬಿಟ್ಟಿದ್ದಾರೆ. The Government has taken action in order to find a solution in this regard. The matter is seized by the Court. ಇಲ್ಲಿ ಚರ್ಚೆ ಮಾಡುವುದು ಗೌರವವಲ್ಲ. ಅಷ್ಟನ್ನು ಹೇಳಬಹುದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಪ್ರಕರಣದ ಬಗ್ಗೆ ಚರ್ಚೆಯಾದಂತಹ ಸಂದರ್ಭದಲ್ಲಿ ಈ ಸದನದಲ್ಲಿ ಮಾನ್ಯ ಗೃಹ ಸಚಿವರು "ಏನೂ ನಡೆದಿಲ್ಲ, ಇದು ಸುಳ್ಳು ಆರೋಪ" ಎಂದು ಹೇಳಿದರು. ಐ.ಪಿ.ಎಸ್. ಅಧಿಕಾರಿ ಅರೆಸ್ಟ್ ಆದ ಮೇಲೆ ಇನ್ನೂ ಏನೂ ನಡೆದಿಲ್ಲವೆಂದು ನಾವು ಕಣ್ಮುಚ್ಚಿ ಕುಳಿತುಕೊಳ್ಳುವುದು ಸರಿಯಲ್ಲ. ಆಯಿತು, ನಿಯಮ 59 ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಬೇರೆ ನಿಯಮದಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮನವಿ ಮಾಡುತ್ತೇನೆ. ಏಕೆಂದರೆ, ಇದು ಮಕ್ಕಳ ಭವಿಷ್ಯಕ್ಕೆ ಸಂಬಂಧಿಸಿದ ವಿಚಾರ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕೆಳಗಿನ ಮನೆಯಲ್ಲಿ ಹೇಳಿದ್ದೇನೆ. ಇದು ಇಲ್ಲಿಗೆ ನಿಲ್ಲುವುದಿಲ್ಲ. ಚರ್ಚೆ ಮಾಡುವುದಾದರೆ ಎರಡೂ ಕಡೆಯವರ ಹತ್ತಿರ ಬೇಕಾದಷ್ಟು ಮಾಹಿತಿ ಇರುತ್ತದೆ. ಎಲ್ಲರನ್ನು ಒಟ್ಟಿಗೆ ಸೇರಿಸಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಿ. ನಮ್ಮದೇನೂ ತಕರಾರು ಇಲ್ಲ. ಈ ಸರ್ಕಾರದ ಬಗ್ಗೆ ನಾವು ಸಹ ಹೆಮ್ಮೆ ಪಟ್ಟುಕೊಳ್ಳುತ್ತೇವೆ. ನಾವು ಕ್ರಮ ತೆಗೆದುಕೊಂಡಿದ್ದೇವೆ, ನಾವೇನು ಕಣ್ಣುಕಟ್ಟಿಕೊಂಡು ಕುಳಿತುಕೊಂಡಿಲ್ಲ. ಪೋಲೀಸ್ ಅಧಿಕಾರಿಗಳಿಂದ ಹಿಡಿದು ಯಾರ್ಯಾರಿಗೆ ಸಂಬಂಧವಿದೆ ಅವರೆಲ್ಲರ ಮೇಲೆ ಪ್ರಕರಣ ದಾಖಲು

ಮಾಡಿದ್ದೇವೆ. ಕೋರ್ಟ್‌ನಲ್ಲಿ ಪ್ರಕರಣ ನಡೆಯುತ್ತಿರುವುದರಿಂದ ಅವರ ಗಮನಕ್ಕೆ ತಂದಿದ್ದೇವೆ. ಅದರ ಮೇಲೆ ಪ್ರಭಾವ ಬೀರುವ ಚರ್ಚೆಗಳು ಇಲ್ಲಿ ಆಗಬಾರದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪ್ರಭಾವ ಬೀರತಕ್ಕಂಥದ್ದಲ್ಲ. ಜವಾಬ್ದಾರಿಯುತ ಗೃಹ ಸಚಿವರೇ ಹೇಳಿದಾಗ, ಏನು ಆ ತರಹ ನಡೆದಿಲ್ಲ ಎಂದು describe ಮಾಡಿದಾಗ ಎಲ್ಲರಿಗೂ ಸಂಶಯ ಮೂಡುತ್ತದೆ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ,…..

(ಗೊಂದಲ)

**ಸಭಾಪತಿಯವರು:-** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಹಿರಿಯ ಸದಸ್ಯರಾದ ಮಾನ್ಯ ವಿಶ್ವನಾಥ್‌ರವರು ಮಾತನಾಡಬಯಸುತ್ತಿದ್ದಾರೆ.

**(ಮುಂದು)**

**(904) 1:10 19/09/2022 ಎಸ್‌ಪಿಆರ್/ಕೆಎಸ್**

**ಶ್ರೀ ಯು.ಬಿ.ವೆಂಕಟೇಶ್(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, …

**ಸಭಾಪತಿಯವರು:-** ಶ್ರೀ ವೆಂಕಟೇಶ್‌ರವರೇ, ನಾನು ನಿಮ್ಮನ್ನು ಮಾತನಾಡಿಸಿಲ್ಲ ಹಾಗೂ ನಿಮಗೆ ಮಾತನಾಡಲು ಅನುಮತಿಯವನ್ನೂ ಸಹ ನೀಡಿಲ್ಲ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ಸರ್ಕಾರವು ಅವರನ್ನು ಹೆದರಿಸುತ್ತಿಲ್ಲ; ಹೆದರಿಸಲು ಬಳೆ ಹಾಕಿಕೊಂಡಿರಬೇಕು ಎಂದಲ್ಲ? **(ಗೊಂದಲ)** ಬಳೆ ಕುಂಕುಮ, ಹಾಕಿ ಕಳುಹಿಸಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್‌ರವರೇ ಕುಳಿತುಕೊಳ್ಳಿ.

**ಡಾ|| ತೇಜಸ್ವಿನಿ ಗೌಡ :-** ಮಾನ್ಯ ಸಭಾಪತಿಯವರೇ, ಬಳೆ ......

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರವು ಅವರನ್ನು ಹೆದರಿಸುತ್ತಿಲ್ಲ; ಹೆದರಿಸಲು ಬಳೆ ಹಾಕಿಕೊಂಡಿರಬೇಕು ಎಂದಲ್ಲ? (ಗೊಂದಲ) ಬಳೆ ಕುಂಕುಮ, (ಗೊಂದಲ) ಬಳೆ ಹಾಕಿ ಕಳುಹಿಸಿದ್ದೇವೆ.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಬಳೆ ಹಾಕಿ ಕೊಳ್ಳುವುದು ಅಪಮಾನವೇ?

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಬಳೆ ತೊಡಿಸುತ್ತೇವೆ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿ(ಆಡಳಿತ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ... **(ಗೊಂದಲ)** ನಮ್ಮ ಹತ್ತಿರವೇ ಇದೆ.

**(ಗೊಂದಲ)**

**ಸಭಾಪತಿಯವರು:–** ಶ್ರೀ ವೆಂಕಟೇಶ್‌ರವರೇ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಬಳೆಯೂ ಚೆನ್ನಾಗಿದೆ ; ಕುಂಕುಮವೂ ಚೆನ್ನಾಗಿದೆ**..........(ಗೊಂದಲ)** ನಾವು ಸ್ಟೀಲ್ ಬಳೆ ಹಾಕುತ್ತೇವೆ. Hook ನ ಬಳೆ ಹಾಕುತ್ತೇವೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಬಳೆ ಎನ್ನುವ ಶಬ್ದವನ್ನು ಕಡತದಿಂದ ತೆಗೆದು ಹಾಕಬೇಕು. **(ಗೊಂದಲ)** ಈ ರಾಜ್ಯದ ಅರ್ಧದಷ್ಟು ಮಹಿಳೆಯರು..... **(ಗೊಂದಲ)** ಇದರಿಂದ ನಮ್ಮ ಹಕ್ಕುಚ್ಯುತಿಯಾಗಿದೆ. ಬಳೆ ಹಾಕಿಕೊಳ್ಳುವುದು ಅಪರಾಧವೇ? ಇದರಿಂದ ನಮಗೆ ಅಪಮಾನವಾಗಿದೆ. ಹಾಗೆಂದರೆ, ನಾವುಗಳು ಬಳೆ ಹಾಕಿಕೊಳ್ಳಬಾರದೇ

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಸಭಾಪತಿಯವರು:–** ಶ್ರೀ ವೆಂಕಟೇಶ್‌ರವರೇ, ಕುಳಿತುಕೊಳ್ಳಿ. ಶ್ರೀಮತಿ ಭಾರತಿ ಶೆಟ್ಟಿಯವರೇ ನೀವೂ ಕುಳಿತುಕೊಳ್ಳಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಹಾಗೆಂದು ಹೇಳಿದರೆ, ನಾವುಗಳು ಬಳೆಯನ್ನು ಹಾಕಿಕೊಳ್ಳಬಾರದೇ? **(ಗೊಂದಲ)** ಇದಕ್ಕೆ ಅವಕಾಶವನ್ನು ನೀಡಬೇಕು. ನಮಗೆ

ಅಪಮಾನವಾಗಿದೆ ಹಾಗೂ ಹಕ್ಕುಚ್ಯುತಿಯಾಗಿದೆ. **(ಗೊಂದಲ)** ಹಾಗಾದರೆ ನಾವು ಬಳೆ ಹಾಕಿಕೊಳ್ಳಬಾರದೇ?

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಆ ಪದವನ್ನು ಕಡತದಿಂದ ತೆಗೆಯಬೇಕು. **(ಗೊಂದಲ)** ಬಳೆ ಹಾಕಿಕೊಳ್ಳುವುದು ಅಪರಾಧವಲ್ಲ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಬಳೆ ಹಾಕಿಕೊಳ್ಳುವುದು ಅಪರಾಧವಲ್ಲ. ಆ ಪದವನ್ನು ಕಡತದಿಂದ ತೆಗೆಯಬೇಕು.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ...

(**ಗೊಂದಲ**)

**ಸಭಾಪತಿಯವರು:–** ಶ್ರೀ ವೆಂಕಟೇಶ್‌ರವರೇ, ಮೊದಲನೆಯದಾಗಿ ನಾನು ನಿಮಗೆ ಮಾತನಾಡಲು ಅವಕಾಶವನ್ನು ನೀಡಿಲ್ಲ. ನಾನು ಯಾರಿಗೆ ಮಾತನಾಡಲು ಅವಕಾಶವನ್ನು ನೀಡಿಲ್ಲವೋ, ಅವರು ಮಾತನಾಡಿದ ಎಲ್ಲವನ್ನೂ ಕಡತದಿಂದ ತೆಗೆದು ಹಾಕಿ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಬಳೆ ....

(**ಗೊಂದಲ**)

**ಸಭಾಪತಿಯವರು:–** ಸದಸ್ಯರೇ ಕುಳಿತುಕೊಳ್ಳಿ. ನಾನು ಯಾರಿಗೆ ಮಾತನಾಡಲು ಅವಕಾಶವನ್ನು ನೀಡಿದ್ದೇನೆ, ಅವರು ಮಾತನಾಡಿದ್ದು ಮಾತ್ರವೇ ಕಡತಕ್ಕೆ ಹೋಗಬೇಕು. ಹಿರಿಯ ಸದಸ್ಯರಾದ ಶ್ರೀ ಅಡಗೂರು ಹೆಚ್.ವಿಶ್ವನಾಥ್ ರವರು ಈ ವಿಷಯದ ಬಗ್ಗೆ ಏನೋ ಹೇಳಲಿಚ್ಛಿಸಿದ್ದಾರೆ. ಹೀಗಾಗಿ ಅವರು ಮಾತನಾಡಲಿ. ಶ್ರೀ ವಿಶ್ವನಾಥ್‌ರವರೇ ಸಂಕ್ಷಿಪ್ತವಾಗಿ ಹೇಳಿ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ... ಬಹಳ ಪ್ರಸಿದ್ಧವಾದ ಮಠವೊಂದರಲ್ಲಿ

**ಸಭಾಪತಿಯವರು:–** ತಾವು ಇದೇ ವಿಷಯದ ಬಗ್ಗೆ ಮಾತ್ರವೇ ಮಾತನಾಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಪ್ರಸ್ತಾಪಿಸಿದ ವಿಷಯವು ಪೂರ್ಣಗೊಂಡಿತೇ?

**ಸಭಾಪತಿಯವರು:–** ಇನ್ನೂ ಇಲ್ಲ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಮೊದಲು ಆ ವಿಷಯವನ್ನು ಮುಗಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ ...

**ಸಭಾಪತಿಯವರು:–** ಶ್ರೀ ಭೋಜೇಗೌಡರೇ, ಕುಳಿತುಕೊಳ್ಳಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಸದನದ ಎಲ್ಲಾ ಸದಸ್ಯರುಗಳು ಮಾತನಾಡಲು ಅವಕಾಶವನ್ನು ಕೇಳಿದ್ದಾರೆ. ಈ ವಿಷಯವನ್ನು ಬೇರೆ ರೂಪದಲ್ಲಿ ಚರ್ಚಿಸಲು ನೀವು ತೀರ್ಮಾನಿಸಿದ್ದಲ್ಲಿ, ಅವಕಾಶ ನೀಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈ ಹಿಂದೆ ಇದೇ ರೀತಿಯಾದ ನಿದರ್ಶನಗಳಿವೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ – 59 ರಡಿ ಪ್ರಸ್ತಾಪಿಸಿದ ವಿಷಯವನ್ನು ನಿಯಮ 68 ಕ್ಕೆ ಪರಿವರ್ತಿಸಿ, ಚರ್ಚಿಸಲು ಪೀಠವು ಅವಕಾಶ ನೀಡಿದ್ದು ಇದೆ. ಹೀಗಾಗಿ ತಾವು ಇದನ್ನು ನಿಯಮ – 68 ಕ್ಕೆ ಪರಿವರ್ತಿಸಿ, ಚರ್ಚಿಸಲು ಅವಕಾಶ ನೀಡಬೇಕೆಂದು ಮನವಿ ಮಾಡುತ್ತೇವೆ. ನಾವು ಸಿ.ಐ.ಡಿ. ಅಥವಾ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಯಾವುದೇ ಪ್ರಕರಣದ ವಿಷಯಗಳ ಮೇರಿಟ್ ಬಗ್ಗೆ ಮಾತನಾಡುವುದಿಲ್ಲ. ಈ ಆಶ್ವಾಸನೆಯನ್ನು ನಾವು ಕೊಡುತ್ತೇವೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ – 330 ರಡಿ ಚರ್ಚಿಸಲು ನಾನು ಅವಕಾಶವನ್ನು ನೀಡುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದನ್ನು ನಿಯಮ – 68 ರಡಿ ಮಾಡಿ, ಏಕೆಂದರೆ, ಎಲ್ಲರಿಗೂ ಸಹ ಮಾತನಾಡಲು ಅವಕಾಶ ಸಿಗಬೇಕು.

**(ಗೊಂದಲ)**

**ಸಭಾಪತಿಯವರು:–** ನಿಯಮ – 330 ರಡಿ ಎಲ್ಲರಿಗೂ ಸಹ ಮಾತನಾಡಲು ಅವಕಾಶವನ್ನು ನೀಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ (ಗೊಂದಲ) ಮಾತನಾಡಲು ಅವಕಾಶವಿಲ್ಲವೆಂದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:–** ನಿಯಮ – 330 ರಡಿ ಅವಕಾಶವನ್ನು ನೀಡುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ಇದನ್ನು ನಿಯಮ – 68 ಕ್ಕೆ ಪರಿವರ್ತಿಸಿ. **(ಗೊಂದಲ)** ಎಲ್ಲರಿಗೂ ಮಾತನಾಡಲು ಅವಕಾಶ ಸಿಗಬೇಕು. ನಿಯಮ – 330 ರಡಿ ಕೇವಲ ಮೂರು ಜನಕ್ಕೆ ... **(ಗೊಂದಲ)**

**ಸಭಾಪತಿಯವರು:–** ಎಲ್ಲರಿಗೂ ಅವಕಾಶ ನೀಡುತ್ತೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಶ್ರೀ ತಿಪ್ಪೇಸ್ವಾಮಿಯವರು ನಿಯಮ – 330 ರಡಿ ಮಾತನಾಡಲಿ, ಆಮೇಲೆ ನೋಡೋಣ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಎಲ್ಲರೂ ಮಾತನಾಡಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ...

**ಸಭಾಪತಿಯವರು:–** ಈಗ ಶಾಸನ ರಚನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಸದನದ ಸ್ವತ್ತಾಗಿದೆ. ಹೀಗಾಗಿ ಎಲ್ಲರೂ ಮಾತನಾಡಬೇಕು.

(**ಗೊಂದಲ**)

**Mr. CHAIRMAN:–** I have given the ruling. ಶ್ರೀ ತಿಪ್ಪೇಸ್ವಾಮಿಯವರೇ, ನಾನು ಈಗಾಗಲೇ ರೂಲಿಂಗ್‌ನ್ನು ನೀಡಿದ್ದೇನೆ. ಒಬ್ಬೊಬ್ಬರೇ ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಿಯಮ – 330 ರಡಿ ಏಕೆ ಅವಕಾಶವನ್ನು ನೀಡುತ್ತೀರಿ?

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ....

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ....

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರು ಈಗಾಗಲೇ ರೂಲಿಂಗ್‌ನ್ನು ನೀಡಿದ್ದಾರೆ.

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ ಏಕೆಂದರೆ, ಪ್ರಸ್ತುತ ಕಾನೂನು ಸಚಿವರು ಸದನದಲ್ಲಿ ಉಪಸ್ಥಿತರಿದ್ದಾರೆ. ಕಳೆದವಾರ ನಾನು ಮತಾಂತರ ವಿಚಾರದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ, ಹೊನ್ನಾವರದಲ್ಲಿ ದೀಪಕ್ ವೈದ್ಯ ಎಂಬ ವ್ಯಕ್ತಿಯು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೆ. ಇದನ್ನು abetment to suicide ಎಂದು ಹೇಳಿ ಭಾರತೀಯ ದಂಡ ಸಂಹಿತೆಯ ಕಲಂ 306 ರಡಿ ಪ್ರಕರಣವನ್ನು ದಾಖಲಿಸಲಾಗಿರುತ್ತದೆ. ಅವರುಗಳೆಲ್ಲರ ಬಂಧನವಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸದನದಲ್ಲಿ ತಿಳಿಸಿದ್ದರು. ಈಗ ಅದು ಜಾಮೀನುರಹಿತ (non-bailable) ಅಪರಾಧವಾಗಿದೆ. ಆತನು ಬಹಳ ತಳ ಸಮುದಾಯದ ವ್ಯಕ್ತಿಯಾಗಿದ್ದು, ಅಬಕಾರಿ ಇಲಾಖೆಯಲ್ಲಿದ್ದ ಇನ್ಸ್‌ಪೆಕ್ಟರ್‌ರವರು ಆಗಿದ್ದು, ಇವರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾರೆ. ಇದು ಜಾಮೀನುರಹಿತ ಪ್ರಕರಣವಾದರೂ ಸಹ ಆರೋಪಿಗಳನ್ನು ದಸ್ತಿಗಿರಿ ಮಾಡುತ್ತಾರೆ ಅಥವಾ ಮಾಡಿರುತ್ತಾರೆ ಎಂದು ಸಚಿವರು ಹೇಳಿದ್ದರು. ಆರೋಪಿಗಳ ದಸ್ತಗಿರಿಯಾಗಿದೆ ಎನ್ನುವ ಮಾಹಿತಿಯು

ನನ್ನ ಗಮನಕ್ಕೆ ಬಂದಿದೆ. ಈಗ ಆರೋಪಿಗಳು ಆರಾಮಾಗಿ ಓಡಾಡಿಕೊಂಡು ಈಗ ನಿರೀಕ್ಷಣಾ ಜಾಮೀನನ್ನೂ ಸಹ ಪಡೆದುಕೊಂಡಿದ್ದಾರೆ. ಆದ್ದರಿಂದ ದಯಮಾಡಿ, ಸರ್ಕಾರವು ಇದನ್ನು ಗಮನದಲ್ಲಿಟ್ಟುಕೊಂಡು, ಇಂತಹ ಅಪರಾಧಿಕ ಕೃತ್ಯಗಳನ್ನು ಎಸಗಿದವರಿಗೆ ಈ ರೀತಿಯ ಜಾಮೀನುಗಳು ದೊರೆತರೆ, ಸರ್ಕಾರದ ನಿಲವು ಏನು ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲಿ ಅವರು "ಡೆತ್ ನೋಟ್" ಬಿಟ್ಟು ಸತ್ತಿದ್ದಾರೆ ಎಂದು ಹೇಳಿದಾಗ, ನಾನು ಹೇಳಿರುವುದು ನಿಜ. ಮೃತರು ತಮ್ಮ ಮೇಲೆ ಕಿರುಕುಳವಾಗಿದೆ ಎಂದು ಹೇಳಿ ಡೆತ್ ನೋಟ್‌ನ್ನು ಬರೆದು ಬಿಟ್ಟಿದ್ದರೆ, ಅದನ್ನು ಹೊರತುಪಡಿಸಿ, ಸಾಮಾನ್ಯವಾಗಿ ಭಾರತೀಯ ದಂಡ ಸಂಹಿತೆಯ ಕಲಂ ೩೦೬ ರಡಿ ಪ್ರಕರಣವನ್ನು ದಾಖಲಿಸಲಾಗುತ್ತದೆ. It is also a heinous offence. ಅದೂ ಸಹ ಜಾಮೀನುರಹಿತ ಅಪರಾಧವೆಂದು ನಾನು ಹೇಳಿರುವುದು ನಿಜ. ಅಕಸ್ಮಾತ್ತಾಗಿ ಅವರುಗಳು ಬಿಡುಗಡೆಗೊಂಡು ಓಡಾಡುತ್ತಿದ್ದರೆ, ನಾವು ಅಲ್ಲಿನವರಿಗೆ ನಿರ್ದೇಶನಗಳನ್ನು ನೀಡಿ ತಕ್ಷಣವೇ ಕ್ರಮ ಜರುಗಿಸುತ್ತೇವೆ. It is not less than a murder case. ಆದರೆ, ಇದು ಕೊಲೆ ಅಪರಾಧದಡಿ ಕಲಂಗಳು ಅನ್ವಯವಾಗುವುದಿಲ್ಲ. ಏಕೆಂದರೆ ಯಾವು ಕೊಲೆಯ ಉದ್ದೇಶವನ್ನು ಹಾಗೂ ಇನ್ನಿತರೆಗಳನ್ನು ಸಾಬೀತುಪಡಿಸುವದಕ್ಕಾಗುವುದಿಲ್ಲ. ಮೃತನು ತನಗೆ ಕಿರುಕುಳವುಂಟಾಗಿ ಸತ್ತಿದ್ದೇನೆ ಎಂದು ಹೇಳಿದರೂ ಸಹ ಇದು ಬಹಳ ಹೇಯ ಅಪರಾಧವಾಗಿರುತ್ತದೆ. ಹೀಗಾಗಿ ಮತ್ತೊಂದು ಕಲಂನಡಿ ಪ್ರಕರಣವನ್ನು ದಾಖಲಿಸಿದ್ದಾರೆ ; ಹೀಗಾಗಿ ಯಾವುದೇ ತಪ್ಪಾಗಿಲ್ಲ ಎಂದು ನಾನು ಹೇಳಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದನ್ನು ನಾನು ಅಲ್ಲಗಳೆಯುತ್ತಿಲ್ಲ; ತಪ್ಪು ಎಂದೂ ಸಹ ಹೇಳುತ್ತಿಲ್ಲ. ಆದರೆ, ಎಲ್ಲಿಯೋ ಒಂದು ಕಡೆ,

ಆರೋಪಿಗಳನ್ನು ದಸ್ತಗಿರಿ ಮಾಡಿರುತ್ತಾರೆ ಎಂದು ಸಚಿವರು ಹೇಳಿದ್ದಾರೆ, ಆದರೆ, ವಾಸ್ತವವಾಗಿ ಅವರು ದಸ್ತಗಿರಿಯಾಗಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರಿ ಅಭಿಯೋಜಕರಿಗೆ ಹಾಗೂ ಸಂಬಂಧಪಟ್ಟವರಿಗೆ ಹೇಳಿ, ಸರ್ಕಾರದ ಪರವಾಗಿ ಯಾವ ಆಕ್ಷೇಪಣೆಗಳನ್ನು ಸಲ್ಲಿಸಬೇಕೋ, ಅದನ್ನು ಸಲ್ಲಿಸಲಾಗುವುದು.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಈಗ ಶಾಸನ ರಚನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಅಭಿನಂದನಾ ಸೂಚನೆಯನ್ನು...

**ಸಭಾಪತಿಯವರು:–** ಅದಕ್ಕೆ ಅವಕಾಶವನ್ನು ನೀಡುತ್ತೇನೆ. ಆದರೆ ಈಗ ನಾನು ಶಾಸನ ರಚನೆ ಎಂದು ಪ್ರಕಟಿಸಿದ್ದೇನೆ. ಹೀಗಾಗಿ ಇದಾದ ನಂತರ ಅದನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಚಿತ್ರದುರ್ಗ ಜಿಲ್ಲೆಯ ಪ್ರಸಿದ್ಧ ಮಠವೊಂದರಲ್ಲಿ ಅಪ್ರಾಪ್ತ ಬಾಲಕಿಯ ಮೇಲೆ ಆದ ಲೈಂಗಿಕ ದೌರ್ಜನ್ಯ ಪ್ರಕರಣವು ಯಾಕೋ ಒಂದು ರೀತಿಯ ಹಳ್ಳ ಹಿಡಿಸುತ್ತಿದೆ ಎನ್ನುವ ರೀತಿಯಲ್ಲಿ ಕಾಣುತ್ತಿದೆ. ದಯಮಾಡಿ ...

**ಸಭಾಪತಿಯವರು:–** ಶ್ರೀ ವಿಶ್ವನಾಥ್‌ರವರೇ, ತಮ್ಮಲ್ಲಿ ಒಂದು ವಿನಂತಿ. ತಾವು ಹಿರಿಯ ನಾಯಕರು ಇದ್ದೀರಿ; ತಮಗೆ ತುಂಬಾ ಅನುಭವವಿದೆ. ದಯಮಾಡಿ ಈ ಬಗ್ಗೆ ನೋಟೀಸ್‌ನ್ನು ನೀಡಿ, ಅದನ್ನು ನಾನು ಪರಿಶೀಲಿಸುತ್ತೇನೆ.

## ೦೯ ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

### ಅ) ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2022

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ೨೦೨೨ನೇ ಸಾಲಿನ "ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ" ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಮಂಡಿಸಿರುವ ವಿಧೇಯಕದಲ್ಲಿ ಬಹಳ ತಿದ್ದುಪಡಿಗಳನ್ನು ಮಾಡಿಲ್ಲ. ಇದರಲ್ಲಿ ಆರೋಪಿಗಳಿಗೆ ಶಿಕ್ಷಿಸಬೇಕೆಂದು ಮತ್ತು ಹಣಕಾಸು ಸಂಸ್ಥೆಗಳನ್ನು ರಕ್ಷಿಸಬೇಕೆಂದು ಜಾಮೀನುಸಹಿತ ಅಪರಾಧ (bailable offence) ಇರುವುದನ್ನು ಜಾಮೀನುರಹಿತ (non-bailable) ಅಪರಾಧವೆಂಬುದಾಗಿ ಮಾಡಿ, ಅದನ್ನು ಸಂಜ್ಞೇಯವಾದ (cognizance) ಅಪರಾಧ ಎಂಬುದಾಗಿ ಮಾಡಲಾಗಿದೆ. ಆರ್ಥಿಕ ಅಪರಾಧಿಗಳು ಯಾರಾದರೂ ಇದ್ದರೆ, ಅದನ್ನು "ಸಂಜೇಯವಾಗಿತಕ್ಕದ್ದು ಹಾಗೂ ಜಾಮೀರಹಿತವಾಗಿರತಕ್ಕದ್ದು" ಎಂಬುದಾಗಿ ಒಂದು ತಿದ್ದುಪಡಿ ಮಾಡಲಾಗಿದೆ. ಒಂದೇ ವ್ಯಕ್ತಿ ಹಾಗೂ ಒಂದೇ ಹಣಕಾಸು ಸಂಸ್ಥೆಯ ವಿರುದ್ಧ ಅನೇಕ ಪ್ರಥಮ ವರ್ತಮಾನ ವರದಿಗಳು ದಾಖಲಾಗಿದ್ದರೆ, ಅವುಗಳೆಲ್ಲವನ್ನೂ ಒಟ್ಟುಗೂಡಿಸಿ, ತನಿಖೆಗೊಳಪಡಿಸುವ ಹಾಗೂ ಒಟ್ಟಾಗಿ ನ್ಯಾಯಾಲಯದಲ್ಲಿ ವಿಚಾರಗಣೆಗೊಳಪಡಿಸುವ ದೃಷ್ಟಿಯಿಂದ ಮಾಡಿದ್ದೇವೆ. ವಿಶೇಷ ನ್ಯಾಯಾಲಯಗಳಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿರುವಾಗ ಇದೇ

ಪ್ರಕರಣದೊಂದಿಗೆ ಅದೇ ವ್ಯಕ್ತಿಯ ವಿರುದ್ಧ Cr.P.C. (Code of Criminal Procedure) ರಡಿ ಇನ್ಯಾವುದೇ ಪ್ರಕರಣಗಳಿದ್ದರೆ, ಅವುಗಳನ್ನೂ ಸೇರಿಸಿಕೊಂಡು ನ್ಯಾಯಾಲಯದಲ್ಲಿ ವಿಚಾರಣೆ ಮಾಡಬಹುದು ಎಂಬುದಾಗಿ ವಿಧೇಯಕದಲ್ಲಿ ತಿಳಿಸಲಾಘಗಿದೆ. ಹಣಕಾಸು ಸಂಸ್ಥೆಗಳ ದೃಷ್ಟಿಯಿಂದ ಒಳ್ಳೆಯ ತಿದ್ದುಪಡಿಯನ್ನು ಜಾರಿಗೊಳಿಸಲಾಗಿದೆ. ಹೀಗಾಗಿ ಇದನ್ನು ಪರ್ಯಾಲೋಚಿಸಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ವಿಧೇಯಕವನ್ನು ಮಂಡಿಸಿದ್ದು, ಅದನ್ನು ನಾನು ಸ್ವಾಗತಿಸುತ್ತೇನೆ. ಈಗಾಗಲೇ ಹಲವಾರು ನಿದರ್ಶನಗಳಾಗಿವೆ. ಈ ಬಗ್ಗೆ ಸದನದಲ್ಲಿ ಚರ್ಚೆಗಳನ್ನೂ ಸಹ ಮಾಡಿದ್ದೇವೆ. ಅದರಲ್ಲೂ ವಿಶೇಷವಾಗಿ ಕೋ-ಆಪರೇಟಿವ್ ಬ್ಯಾಂಕ್‌ಗಳಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಬಹಳಷ್ಟು ಚರ್ಚೆಗಳನ್ನು ಮಾಡಿದ್ದೇವೆ. ನಾವು ಎಷ್ಟು ಕಾನೂನುಗಳನ್ನು ಜಾರಿಗೆ ತರುತ್ತಿದ್ದೇವೆಯೋ, ಅಷ್ಟು ಅಪರಾಧಿಕ್ಕ ಕೃತ್ಯಗಳು ಜಾಸ್ತಿಯಾಗುತ್ತಲೇ ಇವೆ. ಹಾಲಿ ಜಾರಿಯಲ್ಲಿರುವ ಕಾನೂನುಗಳಿಗೆ ಏನೂ ಕಡಿಮೆ ಇಲ್ಲ. ಕಾನೂನಿನ ಕಣ್ಣಿಗೆ ಯಾವ ರೀತಿಯಾಗಿ ಮಣ್ಣು ಎರಚಿ, ಅಪರಾಧಿಕ ಕೃತ್ಯಗಳನ್ನು ಎಸಗುತ್ತಿದ್ದಾರೆ ಎಂದರೆ, ಹಲವಾರು ಪ್ರಕರಣಗಳು ಪ್ರತಿನಿತ್ಯ ದಾಖಲಾಗುತ್ತಿವೆ.

"ಬೆಂಗಳೂರಿನಲ್ಲಿ ಮತ್ತೊಂದು ಬಹುಕೋಟಿ ಬ್ಯಾಂಕ್ ವಂಚನೆ", "ಅಮಾನತ್ ಬ್ಯಾಂಕ್ ವಂಚನೆ ಪ್ರಕರಣ", "ಗುರು ರಾಘವೇಂದ್ರ ಬ್ಯಾಂಕ್ ವಂಚನೆ ಪ್ರಕರಣ", "ಅಗ್ರಿ ಗೋಲ್ಡ್ ಪ್ರಕರಣ", ಎಂಬಿತ್ಯಾದಿಯಾದ ವರದಿಗಳು ಬಿತ್ತರಗೊಳ್ಳುತ್ತಿವೆ. ಅಗ್ರಿ ಗೋಲ್ಡ್ ಪ್ರಕರಣದಲ್ಲಿ ಉಚ್ಛ ನ್ಯಾಯಾಲಯದ ಸೂಚನೆಯ ಮೇರೆಗೆ, ಸರ್ವೋಚ್ಛ ನ್ಯಾಯಾಲಯದವರೆಗೂ ಸಹ ಪ್ರಕರಣವು ಹೋಗಿದೆ. ಇತ್ತೀಚಿನ ವರದಿಗಳನ್ನು ಗಮನಿಸಿದಾಗ, ದೇಶಕ್ಕೆ ಪ್ರತಿ ದಿನ 100 ಕೋಟಿ ರೂಪಾಯಿಗಳಷ್ಟು ಆರ್ಥಿಕ ನಷ್ಟವಾಗುತ್ತಿದೆ. ಸರ್ಕಾರವು ಯಾವುದೇ ರೀತಿಯ ಕಾನೂನನ್ನು ಜಾರಿಗೊಳಿಸಿದರೂ ಸಹ, ಅಪರಾಧಿಗಳಿಗೆ ಕಾನೂನಿನ ಭಯವಿಲ್ಲದೇ ಇರುವ ಸಂದರ್ಭದಲ್ಲಿ ಸರ್ಕಾರವು ಏನು ಮಾಡುತ್ತದೆ ಎನ್ನುವ ಅಂಶವು ಬಹಳ ಮುಖ್ಯವಾದುದು. ಬೆಂಗಳೂರು

ನಗರದಲ್ಲಿಯೇ ಸಾಕಷ್ಟು ಬ್ಯಾಂಕುಗಳು ವಂಚನೆ ಮಾಡಿವೆ. ಈ ಬಗ್ಗೆ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ಬಹಳಷ್ಟು ಪ್ರಕರಣಗಳ ಬಗ್ಗೆ ಸದನದ ಗಮನವನ್ನು ಸೆಳೆದಿದ್ದಾರೆ. ಆದರೆ ಯಾವುದೇ ಅಪರಾಧಿಗಳ ವಿರುದ್ಧ ಕ್ರಮ ಕೈಗೊಂಡಿರುವುದಿಲ್ಲ. ಸರ್ಕಾರವು ಪ್ರಸ್ತುತ ಮಂಡಿಸಿರುವ ವಿಧೇಯಕವು ಬಹಳ ಒಳ್ಳೆಯದಾಗಿದೆ. ಎಲ್ಲಾ ಪ್ರಕರಣಗಳನ್ನು ಒಟ್ಟುಗೂಡಿಸಿ, ಒಂದೇ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ, ತನಿಖೆಗೊಳಪಡಿಸುವ ಕ್ರಮವು ಶ್ಲಾಘನೀಯವಾದುದು. ಹೀಗಾಗಿ ನಾನು ಪ್ರಸ್ತುತ ವಿಧೇಯಕವನ್ನು ಸ್ವಾಗತಿಸುತ್ತೇನೆ. ಇದರ ಜೊತೆಗೆ, ಹಣ ಕಳೆದುಕೊಂಡಿರುವವರು... ಇದರ ಬಗ್ಗೆ ನಾನು ಕಳೆದ ಬಾರಿಯೂ ಸಹ ಪ್ರಸ್ತಾಪಿಸಿದ್ದೇನೆ. ಬೆಂಗಳೂರು ಮೂಲದ ವೈದ್ಯರೊಬ್ಬರು ಲಂಡನ್‌ನಲ್ಲಿದ್ದರು. ಇವರು ನಮ್ಮ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಮೇಯರ್ ರವರ ಮಗ ಆಗಿದ್ದಾರೆ. ಇವರು ಲಂಡನ್‌ನಲ್ಲಿ ಕರ್ತವ್ಯ ನಿರ್ವಹಿಸಿ ಬೆಂಗಳೂರಿಗೆ ವಾಪಸ್ಸಾದರು. ಇವರು ಲಂಡನ್‌ನಲ್ಲಿ ಸಂಪಾದಿಸಿದ ಸುಮಾರು 5 ಕೋಟಿ ರೂಪಾಯಿಗಳಷ್ಟು ಹಣವನ್ನು ಗುರುರಾಜ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದರು. ನಿವೃತ್ತಿಯ ಕಾಲದಲ್ಲಿ ಹಣದ ಅವಶ್ಯಕತೆ ಇರುತ್ತದೆ ಎನ್ನುವ ಕಾರಣಕ್ಕಾಗಿ ಅವರು ಸದರಿ ಬ್ಯಾಂಕಿನಲ್ಲಿ ಹಣ ಜಮೆ ಮಾಡಿದ್ದರು. ಆದರೆ, ಅವರು ಬೆಂಗಳೂರಿಗೆ ಮರಳಿದಾಗ, ಸದರಿ ಬ್ಯಾಂಕ್ ಮುಚ್ಚಿಹೋಗಿತ್ತು. ಇಂತಹ ಠೇವಣಿದಾರರಿಗೆ ಸರ್ಕಾರವು ಕೇವಲ 5 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಿದರೆ, ಅದು ಅವರಿಗೆ ಹೇಗೆ ಸಾಕಾಗುತ್ತದೆ? ಈ ರೀತಿಯ ಹಲವಾರು ಹಗರಣಗಳಾಗುತ್ತಿವೆ.

**(ಮುಂದು...)**

**905/19-09-2022/1-20/ ಬಿಕೆಪಿ-ಜಿಆರ್**

**ಶ್ರೀ ಬಿ.ಕೆ. ಹರಿಪ್ರಸಾದ್(ಮುಂದು)**

ಕೆಲವು ಜಾಗದಲ್ಲಿ U.P., culture ಮಾಡುತ್ತೇವೆಂದು ಹೇಳಿ, ನೀವು bulldozer ತೆಗೆದುಕೊಂಡು ಹೋಗುತ್ತೀರಿ. ಈ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಬಡವರಿಗೆ ಮೋಸ ಮಾಡಿ, ಅವರುಗಳ ಹಣವನ್ನು ತೆಗೆದುಕೊಂಡು ಐಷಾರಾಮಿ ಜೀವನ ಮಾಡುತ್ತಿದ್ದಾರೆ. ನೀವು ಅವರುಗಳು ಉಪಯೋಗಿಸುವ ಗಾಡಿಗಳನ್ನು ನೋಡಬೇಕು. ಕಾನೂನು ಸಚಿವರು ಈ ಬಗ್ಗೆ ಗಮನಿಸಬೇಕು.

ಅಂತಹ ಗಾಡಿಗಳನ್ನು ಯಾರು ತೆಗೆದುಕೊಳ್ಳಲಿಕ್ಕೂ ಆಗದಿರುವಾಗ ಕೆಲವರು ಬಹಳ ಧೈರ್ಯದಿಂದ ಗಾಡಿಗಳಲ್ಲಿ ಓಡಾಡುತ್ತಿರುತ್ತಾರೆ. ಅವರುಗಳಿಗೆ ದುಡ್ಡು ಹೊಡೆದಿದ್ದೇವೆಂದು ಹೇಳಿ ಬೇಸರವೂ ಸಹಿತ ಆಗುವುದಿಲ್ಲ. ಈ ವಿಚಾರ ಕೋರ್ಟ್‌ಗೆ ಹೋಗಿದೆ ಎಂದರೂ ಸಹ ಅವರುಗಳಿಗೆ ಬೇಸರವಾಗುವುದಿಲ್ಲ, ಅವರು ಆರಾಮವಾಗಿ ಕೋರ್ಟ್‌ಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿರುತ್ತಾರೆ. ಬ್ಯಾಂಕುಗಳೆಲ್ಲವೂ ಮುಚ್ಚಿವೆ. ಬಡವರು ಸೇರಿದಂತೆ, ಶ್ರೀಮಾನ್ ಯು.ಬಿ. ವೆಂಕಟೇಶ್‌ರವರು ದಿನಕ್ಕೊಂದು ಬಾರಿ, ವಾರಕ್ಕೊಮ್ಮೆ ಹೋಗಿ ನೋಡಿಕೊಂಡು ಬರುತ್ತಾರೆ. ಯಾರಾದರೂ ಅಲ್ಲಿ ಹೋಗಿ ಕೇಳಿದಾಗ ನಾವು ಪ್ರಕರಣವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಈ ಎಲ್ಲಾ ಪ್ರಕರಣವನ್ನು ಆದಷ್ಟು ಬೇಗ ಸಿಬಿಐ. ಗೆ ಕೊಟ್ಟುಬಿಟ್ಟು, ಆದಷ್ಟು ನಿಷ್ಪಕ್ಷಪಾತವಾಗಿ ತನಿಖೆ ಮಾಡಿ ಬಡ ಠೇವಣಿದಾರರಿಗೆ ಅವರು 100 ರೂಪಾಯಿ ಠೇವಣಿ ಇಟ್ಟಿದ್ದರೆ 5 ರೂಪಾಯಿ ಕೊಡುತ್ತೇನೆಂದರೆ ಆಗುವುದಿಲ್ಲ. ಕೊನೆಯ ಪಕ್ಷ 50% ಹಣವನ್ನಾದರೂ ವಾಪಸ್ಸು ಕೊಡುವಂತಹ ಕೆಲಸವನ್ನು ತಾವು ಮಾಡುತ್ತೀರಾ ಎಂದು ನಂಬಿಕೊಂಡು ಈ ಒಂದು ಬಿಲ್ ಅನ್ನು ತಾವು ಏನು ತಂದಿದ್ದೀರಿ, ಅದಕ್ಕೆ ನನ್ನ ಸಂಪೂರ್ಣವಾದ ಸಹಮತ ಇದೆ,

**ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಸರ್ಕಾರದಿಂದ ಏನು ಈ ಬಿಲ್ ಅನ್ನು ತೆಗೆದುಕೊಂಡು ಬಂದಿದ್ದಾರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಅದರ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ನಾನು ಒಂದೇ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. In the Explanatory Statement to the Bill, point No.(3) reads:

"(3) empower the special courts to try an offence, other than offence under this Act, with which the accused may under the Code of Criminal Procedure, 1973 be charged at the same trial."

ಅಂದರೆ trial ನಡೆಯುತ್ತಿರಬೇಕಾದರೆ, ಯಾವುದಾದರೂ ಬೇರೆ Code of Criminal Procedure ಅಡಿಯಲ್ಲಿ ಕೇಸ್ ನಡೆಯುತ್ತಿದ್ದರೆ to go ahead with the case ಸ್ಪೆಷಲ್ ಕೋರ್ಟ್‌ಗೆ ತಾವು ಅಧಿಕಾರವನ್ನು ನೀಡುತ್ತಿದ್ದೀರಿ. ಆದರೆ, originally, Code of Criminal Procedure ಅಡಿಯಲ್ಲಿ ಕೇಸು ನಡೆಯುತ್ತಿದೆ. There is a separate set of rules for the Code of Criminal Procedure. ಅದನ್ನು ಬಿಟ್ಟು ನಾವು ಇಲ್ಲಿ ಸ್ಪೆಷಲ್ ಕೋರ್ಟ್‌ನವರು ಅದನ್ನು ಮಾಡಿದರೆ, ಆ ಕೇಸ್‌ಗಳು ಏನಾಗುತ್ತದೆ? That means, that case will continue there. ಇಲ್ಲವೆಂದರೆ, ಎಲ್ಲವೂ ಇಲ್ಲಿಯೇ ಬರುತ್ತದೆ. ಇಲ್ಲಿಂದ ಮತ್ತೆ they have to go to the High Court or exhaust what are the remedies that are available to them to try. So, are we not coming in the way of Code of Criminal Procedure? I am not a student of law. But, just my doubt is, ಅಲ್ಲಿ Code of Criminal Procedure ಅಡಿಯಲ್ಲಿ ನಡೆಯುತ್ತಿರುವಂತಹ ಕೇಸ್ ಅನ್ನು Trial Court ಗೆ authorise ಮಾಡಿದರೆ, ಆ ಕೇಸ್ ವರ್ಗಾವಣೆಯಾಗುತ್ತದೆಯೇ ಇಲ್ಲವೇ ಆ ಕೇಸ್ ಅಲ್ಲಿ ಮತ್ತೆ ನಡೆಯುತ್ತದೆಯೇ? ಆದ್ದರಿಂದ, ಎರಡು ಕಡೆ ನಡೆಯುವುದರ ಬಗ್ಗೆ ಸ್ವಲ್ಪ ಕ್ಲಾರಿಫಿಕೇಷನ್ ಮಾಡಬೇಕು.

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಎಷ್ಟು ವಿಶೇಷ ನ್ಯಾಯಾಲಯಗಳಿವೆ, ಎಲ್ಲಿ ವಿಶೇಷ ನ್ಯಾಯಾಲಯಗಳಿಲ್ಲ, ಅಲ್ಲಿ ಏನಾದರೂ ಯಾರನ್ನಾದರೂ designate ಮಾಡುತ್ತೀರಾ? ಏಕೆಂದರೆ, jurisdiction overlap ಆಗಬಹುದು. ತುಮಕೂರಿನಲ್ಲಿ ವಿಶೇಷ ನ್ಯಾಯಾಲಯ ಇಲ್ಲವೆಂದರೆ ಬೆಂಗಳೂರಿಗೆ ಬರಬೇಕಾಗುತ್ತದೆ, ಆಡಳಿತಾತ್ಮಕ ದೃಷ್ಟಿಯಿಂದ ತೊಂದರೆಯಾಗುವುದಿಲ್ಲವೇ? ವಿಶೇಷ ನ್ಯಾಯಾಲಯ ಇಲ್ಲದ ಕಡೆ ಬೇರೆ ನ್ಯಾಯಾಧೀಶರನ್ನು ವಿಶೇಷ ನ್ಯಾಯಾಧೀಶರಾಗಿ designate ಮಾಡುತ್ತೀರಾ? ಎನ್ನುವುದನ್ನು ತಿಳಿಸಬೇಕು.

**ಶ್ರೀ ಯು.ಬಿ. ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರಾರ ಹಿತಾಸಕ್ತಿ ಸಂರಕ್ಷಣೆ ( ತಿದ್ದುಪಡಿ) ವಿಧೇಯಕ, 2022 ಎನ್ನುವ ಒಂದು ಒಳ್ಳೆಯ ಬಿಲ್ ಅನ್ನು ತಂದಿದ್ದಾರೆ. ಇದಕ್ಕೆ ನಾವು ಸಾತ್ ಕೊಡುತ್ತೇವೆ. ಹಾಗೆಯೇ ಇದರ ಜೊತೆಗೆ concerns ಇದ್ದು, ಇದನ್ನು address ಮಾಡಬೇಕೆಂದು, ಇದರಲ್ಲಿಯೇ ಸೇರಿಸಬೇಕೆಂದು ಕೇಳಕೊಳ್ಳುತ್ತೇನೆ. ಏಕೆಂದರೆ, ಇದನ್ನು ನೀವು ಹಣಕಾಸು ಸಂಸ್ಥೆ ಎಂದು ಹೇಳುತ್ತೀರಿ, ಈ ಸೌಹಾರ್ದ ಸೊಸೈಟಿಗಳಗೆಲ್ಲಾ ಸರ್ಕಾರ ಲೈಸೆನ್ಸ್ ಕೊಡುತ್ತದೆ. ಈ ವಿಚಾರವಾಗಿ ನಾನು ಮೊನ್ನೆ ಮಾನ್ಯ ಸಹಕಾರಿ ಸಚಿವರ ಜೊತೆ ಮಾತನಾಡಿದಾಗ ಇದು ನಮ್ಮ ಕಂಟ್ರೋಲ್‌ಗೆ ಬರುವುದಿಲ್ಲವೆಂದು ಹೇಳುತ್ತಾರೆ. ರಾಜ್ಯದಲ್ಲಿ ಯಾರೇ ಹಣಕಾಸನ್ನು ವಸೂಲಿ ಮಾಡಲಿ, ಅದು ಚಿಟ್ ಫಂಡ್ ಆಗಲಿ, ಅವರಿಗೆ ಲೈಸೆನ್ಸ್ ಕೊಟ್ಟ ಮೇಲೆ ಅದು ನಿಮ್ಮ ಜವಾಬ್ದಾರಿ ಇರುತ್ತದೆ. ನೀವು ಕೈತೊಳೆದುಕೊಳ್ಳಲಿಕ್ಕೆ ಆಗುವುದಿಲ್ಲ. ಆಕಸ್ಮಾತ್ ಇಲ್ಲಿಯವರೆಗೆ ಇಲ್ಲದೇ ಹೋದರೆ, ಈ ಸೌಹಾರ್ದ ಸೊಸೈಟಿಗಳು ನಿಮ್ಮ ಕಂಟ್ರೋಲ್‌ಗೆ ಬರುವ ರೀತಿಯಲ್ಲಿ ಸೇರಿಸಿಕೊಳ್ಳಬೇಕೆಂದು ನಾನು ಕೇಳಕೊಳ್ಳುತ್ತೇನೆ.

ಎರಡನೆಯದಾಗಿ, ಈ ಠೇವಣಿದಾರರಾಗಲಿ, ಸಾಲ ತೆಗೆದುಕೊಳ್ಳುವವರಾಗಲಿ, ಇವರುಗಳಗೆ ಒಂದು Insurance Scheme ಮಾಡಿ. ಬೇಕಾದರೆ, ಅದಕ್ಕೆ ಒಂದು ರೂಪಾಯಿ, ಎರಡು ರೂಪಾಯಿ, ಐದು ರೂಪಾಯಿ, ಹತ್ತು ರೂಪಾಯಿಗಳಂತೆ ಏನು ಪ್ರೀಮಿಯಂ ಕಟ್ಟಬೇಕೋ ಆ ದುಡ್ಡನ್ನು ತೆಗೆದುಕೊಳ್ಳಿ. ಕೇಂದ್ರ ಸರ್ಕಾರದವರು 5 ಲಕ್ಷ ರೂಪಾಯಿಗಳನ್ನು ಕೊಡುವ ರೀತಿಯಲ್ಲಿ ಇಲ್ಲಿಯೂ ಸಹ ಸಹಕಾರಿ ಬ್ಯಾಂಕುಗಳಲ್ಲಿ ಕನಿಷ್ಟಪಕ್ಷ 1 ಲಕ್ಷ, 50,000 ರೂಪಾಯಿಗಳನ್ನಾದರೂ ಸಣ್ಣ ಠೇವಣಿದಾರರಿಗೆ ಸ್ವಲ್ಪಮಟ್ಟಿಗೆ ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಇದರಲ್ಲಿ ಸೇರಿಸಬೇಕೆಂದು ಕೇಳಕೊಳ್ಳುತ್ತೇನೆ. ಮತ್ತೆ ಇರುವಂತಹ ಕೇಸ್‌ಗಳನ್ನೆಲ್ಲಾ ಒಂದೇ ಕಡೆ ಹಾಕುತ್ತೀರಿ ಎಂದು ಹೇಳುತ್ತಿದ್ದೀರಿ. ಇದು ಒಳ್ಳೆಯ ವಿಚಾರ. ಒಂದು time bound ಮಾಡಬೇಕು. ಕಳೆದ ಎರಡು ವರ್ಷಗಳಿಂದ ನಾನು ಒಂದು ಬ್ಯಾಂಕ್ ಬಗ್ಗೆ ಮಾತನಾಡುತ್ತಿದ್ದೇನೆ. ಅಂದರೆ ಅದು ಶ್ರೀ ಗುರು ರಾಘವೇಂದ್ರ ಸಹಕಾರಿ

ಬ್ಯಾಂಕ್. ಈಗಾಗಲೇ ಎರಡು ವರ್ಷಗಳು ಕಳೆದಿದೆ. ಇದಕ್ಕೆ ಒಂದು time bound ಎಂದು ಹೇಳಿ, 3 ತಿಂಗಳು, 6 ತಿಂಗಳು, 1 ವರ್ಷ, 2 ವರ್ಷದಲ್ಲಿ ಈ ಕೇಸ್ ಮುಕ್ತಾಯವಾಗುವ ರೀತಿಯಲ್ಲಿ ಒಂದು time bound ಮಾಡುವಲ್ಲಿ ಒಂದು ನಿಯಮ ತರಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ, ಈ ಬಗ್ಗೆ ದೂರು ಕೊಡಲಿಕ್ಕೆ ಹೋದರೆ, ಅದಕ್ಕೆ ಬ್ಯಾಂಕ್‌ನವರೆ, ಸ್ಟೇ ತಂದಿರುತ್ತಾರೆ. ಇದಕ್ಕೆ ಸ್ಟೇ ಕೊಡದ ರೀತಿಯಲ್ಲಿ ಏನಾದರೂ ಕಾನೂನು ತನ್ನಿ. ನಾನು ಠೇವಣಿ ಇಟ್ಟಿದ್ದು, ನಿಮ್ಮ ಮೇಲೆ ದೂರು ಕೊಡಬೇಕೆಂದು ಹೇಳಿ ಪೋಲೀಸ್ ಸ್ಟೇಷನ್‌ಗೆ ಹೋದರೆ, ನಿಮ್ಮ ಮೇಲೆ ಸ್ಟೇ ಇದೆ, ಹೀಗಾಗಿ, ನಾನು ದೂರು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಾರೆ. ಪೋಲೀಸ್‌ನವರದ್ದು ಏನೂ ತಪ್ಪು ಇರುವುದಿಲ್ಲ, ಕೋರ್ಟ್ ಆರ್ಡರ್ ಇಟ್ಟು ಕೊಂಡಿರುತ್ತಾರೆ. ಆದರೆ, ಕೋರ್ಟ್‌ನವರು ಸ್ಟೇ ಕೊಡದ ರೀತಿಯಲ್ಲಿ ಅಥವಾ ಇದಕ್ಕೆ ಏನಾದರೂ ತಿದ್ದುಪಡಿ ತರಬೇಕಾದರೆ ತಂದು, ಸಮಗ್ರವಾಗಿ ಯಾರು ಯಾರು ಈ ರೀತಿಯಲ್ಲಿ ಮೋಸ ಮಾಡುತ್ತಾರೆಂದು ನೋಡಬೇಕು. ನಮ್ಮವರು ಒಬ್ಬರು ಹೇಳುತ್ತಿದ್ದರು ಪ್ರತಿದಿನ 100 ಕೋಟಿ ರೂಪಾಯಿಗಳು ನಷ್ಟ ಆಗುತ್ತಿದೆ. ಈ ಸಂಬಂಧ ನಿನ್ನೆ 2,000 ಕೋಟಿ ನಷ್ಟದ ಬಗ್ಗೆ ಒಂದು ಮೀಟಿಂಗ್ ಕರೆದಿದ್ದರು. ಅದು ಕಣ್ವ ಸೊಸೈಟಿಯವರು. ಆಗ ನಾನು ಈಗ ಬರಲಿಕ್ಕೆ ಆಗುವುದಿಲ್ಲ, ಶುಕ್ರವಾರದ ನಂತರ ಬರುತ್ತೇನೆಂದು ಹೇಳಿದೆ. ಅವರದ್ದು 2000 ಕೋಟಿ ದುಡ್ಡು ಹೋಗಿದೆ. ಈ ಸಂಬಂಧ ಯಾರು ಹೇಳುವವರಿಲ್ಲ, ಕೇಳುವವರಿಲ್ಲ. ಅದಕ್ಕೋಸ್ಕರ ಸರ್ಕಾರದವರು ಇದಕ್ಕೆ ಏನಾದರೊಂದು ನಿಯಂತ್ರಣ ಹಾಕಬೇಕು. ಅವರು ದುಡ್ಡು ವಸೂಲಿ ಮಾಡಲಿ, ಆದರೆ, ಅವರು ನಿಮ್ಮ ಕಂಟ್ರೋಲ್‌ನಲ್ಲಿ ಇರಬೇಕು. ಸೌಹಾರ್ದ ಸೊಸೈಟಿಯವರು ನಮ್ಮ ಕಂಟ್ರೋಲ್‌ಗೆ ಬರುವುದಿಲ್ಲವೆಂದು ಸಹಕಾರ ಸಚಿವರು ಹೇಳುತ್ತಾರೆ. ಇದು ತಪ್ಪು. ಈಗ ಹೇಗಿದ್ದರೂ ತಿದ್ದುಪಡಿ ತರುತ್ತಿದ್ದೀರಿ, ದಯವಿಟ್ಟು ಇದನ್ನು ಸೇರಿಸಿ ಎಂದು ತಮ್ಮನ್ನು ಕಳಕಳಿಯಿಂದ ಕೇಳುತ್ತೇನೆ.

**ಶ್ರೀ ಸವದಿ ಲಕ್ಷ್ಮಣ(ವಿಧಾನಸಭೆಯಿಂದ ಚುನಾಯಿತರಾದವರು):-**ಮಾನ್ಯ ಸಭಾಪತಿಯವರೆ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರಾರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ)

ವಿಧೇಯಕ, 2022 ಎನ್ನುವ ಒಂದು ಒಳ್ಳೆಯ ಬಿಲ್ ಅನ್ನು ತಂದಿದ್ದಾರೆ. ಇದಕ್ಕೆ ನಾನು ಬೆಂಬಲವನ್ನು ಕೊಡುತ್ತೇನೆ. ಈ ಠೇವಣಿದಾರಾರ ಹಿತರಕ್ಷಣೆ ಮಾಡುವಲ್ಲಿ ಈಗಾಗಲೇ 2004 ರಲ್ಲಿ ತಿದ್ದುಪಡಿಯನ್ನು ತರಲಾಗಿದ್ದು, ಅದಕ್ಕೆ ಇನ್ನಷ್ಟು ತಿದ್ದುಪಡಿಯನ್ನು ತಂದು, ಅವರ ಹಿತವನ್ನು ಕಾಪಾಡಬೇಕೆನ್ನುವ ಉದ್ದೇಶವನ್ನು ಇವರು ಹೊಂದಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಬಗ್ಗೆ ಹಿರಿಯ ಸದಸ್ಯರು ಪ್ರಶ್ನೆ ಮಾಡಿ ಅರ್ಬನ್ ಬ್ಯಾಂಕ್‌ನಲ್ಲಿ deposit ಮಾಡುತ್ತಾರೆ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲ deposit ಮಾಡುತ್ತಾರೆ. ರಿಸರ್ವ್ ಬ್ಯಾಂಕ್‌ನಿಂದ ಲೈಸೆನ್ಸ್ ಪಡೆದು ಕೊಂಡಿರತಕ್ಕಂತಹ ಅನೇಕ ಸಂಘ-ಸಂಸ್ಥೆಗಳಿರುತ್ತವೆ. ಅದಕ್ಕೆ ಒಂದು ಬಂಧನ ಇರುತ್ತದೆ. ಅದಕ್ಕೆ ಕಾನೂನು ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಈಗಾಗಲೇ ಮಾನ್ಯರು ಪ್ರಸ್ತಾಪ ಮಾಡಿದ ಹಾಗೆ ಸಹಕಾರದಲ್ಲಿ ಎರಡು ಕಾನೂನುಗಳು ಬರುತ್ತವೆ. ಒಂದು ಸೌಹಾರ್ದ ಮತ್ತೊಂದು ಸಹಕಾರ. ಇದರ ಬಗ್ಗೆ 2000 ನೇ ಇಸವಿಯಲ್ಲಿ ದೇಶದ ಮಟ್ಟದಲ್ಲಿ ಅಧ್ಯಯನವಾಗಿ ಅರ್ಧನಾರೀಶ್ವರ ಎಂದು ಹೇಳಿ, ಒಂದು ವರದಿಯನ್ನು ಕೊಡುತ್ತಾರೆ. ಈ ಸೌಹಾರ್ದ ಕಾನೂನನ್ನು ದೇಶದಲ್ಲಿ ಎಲ್ಲರೂ ತರಬೇಕು, ಅಲ್ಲಿ ಸ್ವಾಯತ್ತತೆ ಮತ್ತು ಸ್ವಾತಂತ್ರ ಇರಬೇಕೆನ್ನುವ ವಿಚಾರ ಇರುತ್ತದೆ. ಆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿಯೂ ಕೂಡ ಸೌಹಾರ್ದ ಕಾನೂನು ಜಾರಿಗೆ ಬಂದು, ಬಹುತೇಕ ಈಗ 2000ಕ್ಕೂ ಹೆಚ್ಚು ಸೌಹಾರ್ದ ಸಂಸ್ಥೆಗಳು ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಅತಿ ಹೆಚ್ಚು ಠೇವಣಿ ಇಟ್ಟಿರುವಂತಹ ಜನರಿಗೆ ತೊಂದರೆಯಾಗುತ್ತಿರುವುದು ಇಲ್ಲಿಯೇ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀ ಗುರು ರಾಘವೇಂದ್ರ ಸಂಸ್ಥೆಯ ಬಗ್ಗೆ ಪ್ರಸ್ತಾಪ ಮಾಡಿದರು. ಇದೇ ರೀತಿಯಲ್ಲಿ ಇನ್ನು ಬೆಳಕಿಗೆ ಬಾರದಿರುವ ಸಾವಿರಾರು ಸಂಸ್ಥೆಗಳಿವೆ. ಎಷ್ಟೋ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸನ್ನಿವೇಶಗಳನ್ನು ನಾವು ನೋಡುತ್ತಿರುತ್ತೇವೆ. ಇದರಲ್ಲಿ ಏನಾಗುತ್ತದೆ ಎಂದರೆ deposit ಮಾಡುತ್ತಾರೆ. Deposit ಮಾಡಿಸಿಕೊಳ್ಳುವುದಕ್ಕೆ ಅವರು ಕೆಲವು ಆಕರ್ಷಕ ಸ್ಕೀಮ್ ಮಾಡಿಕೊಳ್ಳುತ್ತಾರೆ. ಯಾರು deposit ಮಾಡುತ್ತಾರೆ. Deposit ತಂದು ಕೊಡುವವರಿಗೆ ಕಮಿಷನ್ ನಿಗದಿ ಮಾಡುತ್ತಾರೆ. ನೀನು 1 ಲಕ್ಷ ರೂಪಾಯಿಗಳನ್ನು

ತಂದು deposit ಮಾಡಿಸಿದರೆ ಏಜೆಂಟ್‌ಗೆ 5%, 10% ಕಮಿಷನ್ ಕೊಡುತ್ತಾರೆ. ಅದಕ್ಕೆ ಬಡ್ಡಿ ನಿಗದಿ ಮಾಡುವಾಗ ಎಲ್ಲಿ fix ಮಾಡುವಾಗ 14-15% ನಿಗದಿ ಮಾಡುತ್ತಾರೆ. ಆಗ ಜನರು ಏನು ಮಾಡುತ್ತಾರೆಂದರೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇಟ್ಟಿದ್ದಂತಹ deposit ಅನ್ನು ವಾಪಸ್ಸು ತೆಗೆದುಕೊಂಡು ಬಂದು ಇಂತಹ ಬ್ಯಾಂಕುಗಳಲ್ಲಿ ಇಡುತ್ತಾರೆ. ಇಂತಹ ಬ್ಯಾಂಕಿನಲ್ಲಿ ಇಟ್ಟಾಗ ಇವರು ಅತಿ ಹೆಚ್ಚು ಬಡ್ಡಿಯನ್ನು ಕೊಟ್ಟು deposit ಮಾಡಿಸಿಕೊಂಡಿರುವ ಇಂತಹ ಅನೇಕ ಸಂಸ್ಥೆಗಳು ರಿಯಲ್ ಎಸ್ಟೇಟ್‌ಗೆ ದುಡ್ಡು ಹಾಕುತ್ತಾರೆ. ಇಲ್ಲಿ ಒಂದು *Seven Hills* Vividhodhesha *Souharda* Co Operative Limited ಎಂದು ಹೇಳಿ ಕೋಲಾರ ಕಡೆ ಇರತಕ್ಕಂತಹ ಸೌಹಾರ್ದ ಬ್ಯಾಂಕು ಸೌಹಾರ್ದ ಕಾನೂನಿನಡಿಯಲ್ಲಿ ನೋಂದಣಿಯಾಗುತ್ತದೆ. ಕೋಲಾರದವರು ಎಲ್ಲಿಗೆ ಬರುತ್ತಾರೆಂದರೆ ಬೆಳಗಾವಿಯಿಂದ ಬಿಜಾಪುರದವರೆಗೆ ಬರುತ್ತಾರೆ. ಅವರ ಸ್ಕೀಂ ಹೇಗೆ ಇದೆ ಎಂದರೆ, ಗ್ರಾಮೀಣ ಪ್ರದೇಶದಲ್ಲಿ ಹಣ ಇರತಕ್ಕವರನ್ನು ಇವರ ಹತ್ತಿರ ಹಣ ಇದೆ ಎಂದು ಹೇಳಿ ಮೊದಲು ಹುಡುಕುತ್ತಾರೆ. ಅವರ ಕಡೆಯಿಂದ ನೀವು ಹಣವನ್ನು ತಂದು ಕೊಟ್ಟರೆ ನಿಮಗೆ 20% ಕಮಿಷನ್ ಕೊಡುತ್ತೇವೆಂದು ಹೇಳುತ್ತಾರೆ. ಆ ಕಮಿಷನ್ ತೆಗೆದುಕೊಂಡು ಇವರನ್ನು ಪ್ರತಿನಿತ್ಯ ಈ Life Insurance ನವರು ಬೆಳಗ್ಗೆ ಎದ್ದು ಚಹಾ ಕುಡಿಯುವುದಕ್ಕಿಂತ ಮುನ್ನವೇ ಮನೆಯಲ್ಲಿ ಬಂದು ಕುಳಿತಿರುತ್ತಾರೆ. ನಿನ್ನ ಗಂಡ ಸತ್ತರೆ ಇಷ್ಟು ಹಣ ಬರುತ್ತದೆ, ನಿಮ್ಮ ಮಕ್ಕಳು ಸತ್ತರೆ ಇಷ್ಟು ಹಣ ಬರುತ್ತದೆ, ನಿನ್ನ ಕೈಕಾಲು ಮುರಿದು ಹೋದರೆ ಇಷ್ಟು ಹಣ ಬರುತ್ತದೆ. ನಿನಗೆ ಏನಾದರೂ ಆಕ್ಸಿಡೆಂಟ್ ಆದರೆ ಇಷ್ಟು ಹಣ ಬರುತ್ತದೆ. ಎಂದು ಬೆಳಗ್ಗೆಯೇ ಬಂದು ಶುರು ಮಾಡಿರುತ್ತಾರೆ. ಇವರು ಏನು ಮಾಡುತ್ತಾರೆಂದರೆ ಯಾರ ಹತ್ತಿರ ಹಣ ಇರುತ್ತದೆ, 20% ಕಮಿಷನ್ ತೆಗೆದು ಕೊಳ್ಳತಕ್ಕಂತಹ ವ್ಯಕ್ತಿಗಳು ಇವರು ಏನು ಮಾಡುತ್ತಾರೆಂದರೆ. ಈ ಬ್ಯಾಂಕಿನಲ್ಲಿ ಡಿಪಾಸಿಟ್ ಇಟ್ಟರೆ ನಿನ್ನ ಮಕ್ಕಳ ಮದುವೆಗೆ 3 ವರ್ಷಗಳಲ್ಲಿ ನಿಮ್ಮ ಹಣ ಡಬಲ್ ಆಗುತ್ತದೆ, ನಿನ್ನ ಮಗನ ಶಿಕ್ಷಣಕ್ಕೆ 3-4 ವರ್ಷದಲ್ಲಿ ನಿಮ್ಮ ಹಣ ಡಬಲ್ ಆಗುತ್ತದೆ, ನಿನ್ನ ಮಗನನ್ನು ಅಮೇರಿಕಾಗೆ ಕಳುಹಿಸಬಹುದು.

(೯೦6) 19.09.2022 01.30 ಎಸ್‌ವಿ-ಜಿಆರ್

**ಶ್ರೀ ಲಕ್ಷ್ಮಣ ಸವದಿ (ಮುಂದು):-**

ನಿನ್ನ ಮಗನನ್ನು ಅಮೆರಿಕಾಗೆ ಕಳುಹಿಸಬಹುದು. ಅಲ್ಲಿಂದ ಚಂದ್ರಲೋಕವನ್ನೂ ನೋಡಿ ಬರಬಹುದು. ಈ ರೀತಿಯೆಲ್ಲಾ ಮನಸ್ಸಿನಲ್ಲಿ ಚಿತ್ತಿಸುತ್ತಾರೆ. ಈ ರೀತಿಯಾಗಿ ಚಿತ್ರಿಸಿ, ಹಣವನ್ನು ಅವರ ಕಡೆಯಿಂದ ಡೆಪಾಸಿಟ್ ಮಾಡಿಸಿಕೊಳ್ಳುವ ಸೆವೆನ್ ಹಿಲ್ಸ್‌ನಂತಹ ಅನೇಕ ಸಂಸ್ಥೆಗಳಿವೆ. ಅವರು ದುಡ್ಡನ್ನು ರಿಯಲ್ ಎಸ್ಟೇಟ್‌ನೊಳಗೆ ಹೂಡುತ್ತಾರೆ. ಕೋಲಾರ ಎಂದು ಹೇಳಿದ್ದಕ್ಕೆ ಮಾನ್ಯ ಆರೋಗ್ಯ ಸಚಿವರು ಅಪಾರ್ಥ ಮಾಡಿಕೊಳ್ಳಬಾರದು. ನಮ್ಮ ಜಿಲ್ಲೆಯಲ್ಲಿಯೂ ಸಾಕಷ್ಟು ಇವೆ. ಇಡೀ ರಾಜ್ಯದಲ್ಲಿಯೂ ಸಾಕಷ್ಟು ಇವೆ.

**ಡಾ:ಕೆ.ಗೋವಿಂದರಾಜ್:-** ಮಾನ್ಯ ಸವದಿಯವರೇ, ಇದಕ್ಕೆ ಬ್ಲೇಡ್ ಕಂಪನಿ ಎಂದು ಹೇಳುತ್ತಾರೆ.

**ಶ್ರೀ ಲಕ್ಷ್ಮಣ ಸವದಿ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಗೋವಿಂದರಾಜ್ ಅವರೇ, ನೀವು ಸುಧಾರಿಸಿದವರಾಗಿರುವುದರಿಂದ ಬ್ಲೇಡ್ ಕಂಪನಿ ಎಂದು ಹೇಳುತ್ತೀರಿ. ನಾವು *“ಬೋಳಿಸಿದವನ ತಲೆ ಕತ್ತರಿಸುವವರು”* ಎಂದು ಹೇಳುತ್ತೇವೆ. ಅಂದರೆ ಮೊದಲೇ ಅದೆಲ್ಲಾ ಕ್ಲೀನ್ ಆಗಿ ಬಿಟ್ಟಿರುತ್ತದೆ. ಅಂತಹ ತಲೆಯನ್ನೂ ಸಹ ಇವರು ಕತ್ತರಿಸುವವರು. ಇಂತಹ ಅನೇಕ ಸಂಸ್ಥಾಪಕರು ಹುಟ್ಟಿಕೊಂಡು ಇಡೀ ರಾಜ್ಯದಲ್ಲಿರತಕ್ಕಂತಹ ಜನರನ್ನು ಮೋಸ ಮಾಡಿ, ಅವರ ರಕ್ತವನ್ನು ಹೀರಿ ಜನರ ಕಡೆಯಿಂದ ಹಣ ಪಡೆದುಕೊಳ್ಳುತ್ತಾರೆ. ಮೋಸಕ್ಕೆ ಒಳಗಾದ ಎಷ್ಟೋ ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಮಾನ್ಯ ಕಾನೂನು ಸಚಿವರು ಇಲ್ಲಿದ್ದಾರೆ. ಒಬ್ಬ ಪ್ರಾಮಾಣಿಕ ಕಾನೂನು ಸಚಿವರು ಇಲ್ಲಿರುವುದರಿಂದ ನನ್ನ ವಿನಂತಿ ಏನೆಂದರೆ, ಅಪರಾಧಿಗಳು ಎಂದು ಯಾರನ್ನು ಗುರುತಿಸಲಾಗುತ್ತದೆಯೋ ಆ ಪ್ರಕರಣ ನಿಕಾಲೆ ಆಗುವವರೆಗೆ ಅವರಿಗೆ ಜಾಮೀನು ಸಿಗದಂತೆ ನೋಡಿಕೊಳ್ಳಬೇಕು. ನಮಗೆ ನೋಟಿಸ್ ಬರುವುದಕ್ಕಿಂತಲೂ ಮೊದಲೇ anticipatory bail ತಂದು ಕೊಡುವಂತಹ ವಕೀಲರಿದ್ದಾರೆ. ಈ ರೀತಿ ಸಿಗುವಂತಹ ವ್ಯವಸ್ಥೆಯೂ ಇದೆ. ಮಾನ್ಯ ಭೋಜೇಗೌಡರಂತಹ ವಕೀಲರಿದ್ದರೆ ಎಂತಹ ಪ್ರಕರಣದಲ್ಲಿ ಬೇಕಾದರೂ ಜಾಮೀನು ತಂದು

ಕೊಡುತ್ತಾರೆ. ಇವರೇನು ಹಗುರ ಅಲ್ಲ. ಎಲ್ಲದಕ್ಕೂ ಜಾಮೀನು ತಂದುಕೊಡುವಂತಹ ಸಾಮರ್ಥ್ಯ ಅವರಿಗಿದೆ.

ಆದ್ದರಿಂದ ನಾನು ಕಾನೂನು ಸಚಿವರಲ್ಲಿ ವಿನಂತಿಸುತ್ತೇನೆ. ಮೊದಲು ಯಾರು ಅಪರಾಧ ಮಾಡಿದ್ದಾರೆ ಎಂದು ತಿಳಿಯುತ್ತದೋ ಆಗ ಅಲ್ಲಿನ ಅಧ್ಯಕ್ಷರ ಮೇಲೆ, ನಿರ್ದೇಶಕರ ಮೇಲೆ ಮತ್ತು ಸಿ.ಇ.ಓ. ಮೇಲೆ ಈ ರೀತಿ entire body ಮೇಲೆ ಕ್ರಮವಾಗುವಂತಹ ಕಾನೂನು ಆಗಬೇಕು. ಕೇವಲ ಒಬ್ಬ ಛೇರ್ಮನ್, ಸಿ.ಇ.ಓ ಮೇಲೆ ಆದರೆ ಆಗುವುದಿಲ್ಲ. Entire Board ಅನ್ನು ಅಪರಾಧಿ ಸ್ಥಾನದಲ್ಲಿ ಕೂರಿಸಿದಾಗ ಮಾತ್ರವೇ ಇದನ್ನು ನಿಯಂತ್ರಣ ಮಾಡಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಹೆಚ್ಚು ಬಿಗಿಯಾದ ಕ್ರಮಗಳನ್ನು ಈ ಕಾನೂನಿನಲ್ಲಿ ಸೇರಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಭೋಜೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಸರ್ಕಾರ ಬಹಳ ಒಳ್ಳೆಯ ವಿಧೇಯಕವನ್ನು ತಂದಿರತಕ್ಕಂತಹ ಸಂದರ್ಭದಲ್ಲಿ ತುಂಬು ಹೃದಯದಿಂದ ಇದನ್ನು ಸ್ವಾಗತಿಸುತ್ತೇನೆ. ಯಾವುದೇ ವಿಧೇಯಕಗಳನ್ನು ತಂದಾಗ ನಿಯಮಗಳನ್ನು ರೂಪಿಸುವಂತಹ ಸಂದರ್ಭದಲ್ಲಿ ನಾವು ಚಾಪೆ ಕೆಳಗೆ ತೂರಿದರೆ ಅವರು ರಂಗೋಲಿ ಕೆಳಗೆ ತೂರುವಂತಹ ಕೆಲಸ ಸರ್ವೆಸಾಮಾನ್ಯವಾಗಿ ಆಗುತ್ತಿದೆ. ಕೋ–ಆಪರೇಟಿವ್ ಬ್ಯಾಂಕ್‌ಗಳಲ್ಲಿ ಎಷ್ಟೇ attraction ಮಾಡಿದರೂ ಕೂಡ ಠೇವಣಿ ಇಡಲು ಯಾರೂ ಮುಂದೆ ಬರುವುದಿಲ್ಲ. ಮಾನ್ಯ ಸವದಿಯವರು ಹೇಳಿದಂತೆ ಮಧ್ಯವರ್ತಿಗಳ ಸಹಕಾರದಿಂದ attraction ಬಹಳ ಇರುತ್ತದೆ. ಅಂತಹ ಸಮಯದಲ್ಲಿ ಜನರು interest ಗೆ ಮಾರು ಹೋಗುತ್ತಾರೆ. ಇಂತಹ ಠೇವಣಿಗಳನ್ನು ಇಟ್ಟವರು ಯಾರು? 30–40 ವರ್ಷಗಳ ಸೇವೆಯನ್ನು ಮಾಡಿ ನಿವೃತ್ತಿಯ ಸಂದರ್ಭದಲ್ಲಿ ಬಂದಂತಹ ಹಣವನ್ನು ಅವರ ಮುಂದಿನ ಜೀವನಕ್ಕಾಗಿ, ಮಕ್ಕಳ ಮದುವೆ ಈ ರೀತಿ ಬೇರೆ ಬೇರೆ ವಿಚಾರಗಳಿಗಾಗಿ ಹಣವನ್ನು ತೊಡಗಿಸಿದಂತಹವರು ತೊಂದರೆಗೆ ಒಳಗಾಗಿದ್ದಾರೆ. ಭಾರಿ ಹಣ ಇದೆ ಎನ್ನುವಂತಹವರಿಗೆ ಯಾರಿಗೂ ತೊಂದರೆಯಾಗಿಲ್ಲ.

ಗುರುರಾಘವೇಂದ್ರ ಬ್ಯಾಂಕ್‌ನ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಅದೇ ರೀತಿ ವಸಿಷ್ಠ ಬ್ಯಾಂಕ್‌ನ ಅಧ್ಯಕ್ಷರು ಮತ್ತು ಅವರು ಮಗ ಜೈಲಿನಲ್ಲಿದ್ದಾರೆ. ಅವರು ಜಾಮೀನಿಗೆ ಅರ್ಜಿ ಹಾಕಿದರೆ, ನಾಳೆಯ ಬೆಳಗ್ಗೆಯ ವೇಳೆಗೆ ಜಾಮೀನು ಸಿಗುತ್ತದೆ. ಆದರೆ ಅವರು ಜಾಮೀನು ತೆಗೆದುಕೊಂಡೇ ಇಲ್ಲ. ಹೊರಗೆ ಬಂದರೆ ಇನ್ನೂ ಡೇಂಜರ್ ಎಂದು ಹೇಳಿ ಒಳಗೆ ಇದ್ದಾರೆ. ಜೈಲಿನಲ್ಲಿ ಆರಾಮವಾಗಿ ಇದ್ದಾರೆ. ವೈದ್ಯನಾಥನ್ ವರದಿ ಬರುವುದಕ್ಕಿಂತಲೂ ಮೊದಲು ಕೋ-ಆಪರೇಟಿವ್ ಬ್ಯಾಂಕ್‌ಗಳ ಕಾರ್ಯದರ್ಶಿಯನ್ನು ಜವಾಬ್ದಾರಿ ಮಾಡಲಾಗುತ್ತಿತ್ತು. ವೈದ್ಯನಾಥನ್ ವರದಿ ಬಂದ ನಂತರ entire Board ಜವಾಬ್ದಾರಿಯಾಗುತ್ತದೆ. ಏನಾದರೂ misappropriation ಆದರೆ ಇಡೀ ಬೋರ್ಡ್‌ನಲ್ಲಿರತಕ್ಕಂತಹ ಎಲ್ಲರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತಾಗಿದೆ. ಬಹಳ ಮುಖ್ಯವಾಗಿ entire board ಅನ್ನು ಜವಾಬ್ದಾರಿ ಮಾಡಬೇಕಾಗುತ್ತದೆ. ಬೋರ್ಡ್ ಮೀಟಿಂಗ್‌ಗಳಿಗೆ ಹೋಗಿ ಉಪ್ಪಿಟ್ಟು, ಕಾಫಿ ಸೇವನೆ ಮಾಡಿ ಬಂದುಬಿಡುವುದಲ್ಲ. ಕಾಲಾನುಕಾಲಕ್ಕೆ misappropriation ನಂತಹ ವ್ಯವಸ್ಥೆಗಳು years together ನಡೆದು ಬಂದಂತಹ ಸಂದರ್ಭದಲ್ಲಿ ಕಡೆಯಲ್ಲಿ ಬೆಳಕಿಗೆ ಬರುತ್ತದೆ. All of a sudden ಇಪ್ಪತ್ನಾಲ್ಕು ಗಂಟೆಗಳಲ್ಲಿ ಇಂತಹ ಹಣಕಾಸಿನ ಅವ್ಯವಸ್ಥೆಗಳು ಆಗುವಂಥದ್ದಲ್ಲ. ರಿಸರ್ವ್ ಬ್ಯಾಂಕ್ ಆಡಿಟ್ ವರದಿಯನ್ನು ಪರಿಶೀಲನೆ ಮಾಡುತ್ತಿರುತ್ತದೆ. ಆಡಿಟರ್‌ಗಳು ಇವತ್ತು ಕೊಟ್ಟಿರುವಂತಹ ವರದಿಯನ್ನೇ ಇನ್ನೂ ಹತ್ತು ವರ್ಷ ಬಿಟ್ಟು ಕೊಡುತ್ತಿರುತ್ತಾರೆ. ಆಡಿಟರ್‌ಗೂ ಸಹ ತಿಳಿದಿರುತ್ತದೆ. Once in three months, Internal Audit ಮಾಡಬೇಕು. ಅದನ್ನು ಮಾಡಬೇಕಾದರೆ ಇಲ್ಲಿ ಏನಾಗುತ್ತಿದೆ ಎನ್ನುವ ವಿಚಾರ ತಿಳಿದಿರುವುದಿಲ್ಲವೇ? ಆ ಆಂತರಿಕ ಆಡಿಟ್ ವರದಿಯು ರಿಸರ್ವ್ ಬ್ಯಾಂಕ್‌ಗೆ ಹೋಗಿರುವುದಿಲ್ಲವೇ? ರಿಸರ್ವ್ ಬ್ಯಾಂಕ್‌ನಿಂದ ಮಾನ್ಯತೆ ಪಡೆದಿದೆ ಎಂದು ಬೋರ್ಡ್ ಹಾಕಿದರೆ ಸಾಕೇ? ದಯಮಾಡಿ ಕಾನೂನು ಸಚಿವರೇ ತಮಗೆ ಎಲ್ಲಾ ವಿಚಾರವೂ ತಿಳಿದಿದೆ. ಇದು rigorous ಆಗಬೇಕು. Non bailable warrant ಅಂತ ಎಷ್ಟು ದಿನ ಜೈಲಿನಲ್ಲಿಡುತ್ತಾರೆ? ಠೇವಣಿ ಇಟ್ಟ ಹಣದ ಭದ್ರತೆಯ ವಿಷಯವನ್ನು ಈ ವಿಧೇಯಕದಲ್ಲಿ ಬಹಳ ಗಂಭೀರವಾಗಿ ಪರಿಗಣಿಸಬೇಕು. ಇಂತಹ ಒಂದು ಸಂಸ್ಥೆಯಲ್ಲಿ ದುಡ್ಡು ಇಟ್ಟ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ನನಗೆ ಮೋಸ ಆಗುವುದಿಲ್ಲ ಎನ್ನುವ

confidence ಬರಬೇಕಲ್ಲವೆ? ನನ್ನ ಮುಂದಿನ ದಿನಗಳಲ್ಲಿ ನನಗೆ ಇದು ಉಪಯೋಗಕ್ಕೆ ಬರುತ್ತದೆ ಎನ್ನುವ 100% ವಿಶ್ವಾಸ ಮೂಡುವಂತಹ ಅಂಶಗಳನ್ನು ವಿಧೇಯಕದಲ್ಲಿ ತೋರಿಸಬೇಕಾಗುತ್ತದೆ. ಕಾನೂನು ಸಚಿವರು ಅದನ್ನು ವಿಚಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಟಿ.ಎ.ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಹಣಕಾಸು ಸಂಸ್ಥೆಗಳ ಠೇವಣಿ ಸಂರಕ್ಷಣಾ ಬಿಲ್ ಅನ್ನು ಸರ್ಕಾರ ತಂದಿದ್ದು, ಇದನ್ನು ನಾನು ಸ್ವಾಗತಿಸುತ್ತೇನೆ. ಜೊತೆಯಲ್ಲಿ ನಮ್ಮ ಕಾನೂನು ಸಚಿವರು ಬಹಳ ಪ್ರಾಮಾಣಿಕರು ಹಾಗೂ ಅನುಭವಸ್ಥರಿದ್ದಾರೆ. ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತಿದ್ದೇನೆ. ನಾನು ಕೂಡ ಒಂದು ಸಣ್ಣ ಸೊಸೈಟಿಯನ್ನು ಇಟ್ಟುಕೊಂಡಿದ್ದೇನೆ. ಅದರಲ್ಲಿ ಕೆಲವು ಕಹಿ ಘಟನೆಗಳು ನಡೆದಿವೆ.

ಒಬ್ಬ ಸರ್ಕಾರಿ ನೌಕರ ಬಂದು ನನ್ನ ತಾಯಿಗೆ ಹುಷಾರಿಲ್ಲ, ಆಸ್ಪತ್ರೆಗೆ ದಾಖಲು ಮಾಡಿದ್ದೇನೆ. ಐದು ಲಕ್ಷ ರೂ.ಗಳನ್ನು ಕೊಡುವಂತೆ ಕೇಳಿದ. ನಾನು ನಮ್ಮ ಬ್ಯಾಂಕ್ ಸಿಬ್ಬಂದಿಗೆ ಹಣವನ್ನು ಕೊಡಿ. ನಂತರ ಎಲ್ಲಾ ಪ್ರೊಸೀಜರ್‌ಗಳನ್ನು ಮಾಡಿಕೊಳ್ಳೋಣ ಎಂದು ಹೇಳಿದೆನು. ಅವನು ಮುಜರಾಯಿ ಇಲಾಖೆಯಲ್ಲಿ ಕೆಲಸ ಮಾಡುವಂತಹ ಸಿ ದರ್ಜೆ ನೌಕರ ಎಂದು ನಾನು ಭಾವಿಸುತ್ತೇನೆ. ಎರಡು ವರ್ಷಗಳಾಗಿದೆ. ಅವನು abscond ಆಗಿದ್ದಾನೆ. ಬಹಳ ಕಡೆ ಸಾಲ ಮಾಡಿದ್ದಾನಂತೆ, ಅದು ನನಗೂ ಕೂಡ ಗೊತ್ತಿರಲಿಲ್ಲ. ನಾವು ಪತ್ರವನ್ನು ಬರೆದರೂ ಎಲ್ಲಿಯೂ ಕೂಡ ಪತ್ತೆಯಾಗಿರುವುದಿಲ್ಲ. ನಾನು ಒಂದು ಸಣ್ಣ ಘಟನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆ ಹೇಳುತ್ತಿದ್ದೇನೆಂದರೆ, ಬಹಳ ಜನರು ಬಂದು ಠೇವಣಿಯನ್ನು ಇಡುತ್ತಾರೆ. ಠೇವಣಿಯ ಬಗ್ಗೆ ಆಕರ್ಷಕವಾದ ಜಾಹೀರಾತನ್ನೂ ಕೊಡುತ್ತಾರೆ. ಇಷ್ಟು ಬಡ್ಡಿ ಕೊಡುತ್ತೇವೆ, ದ್ವಿಗುಣವಾಗುತ್ತದೆ, ತ್ರಿಗುಣವಾಗುತ್ತದೆ ಎಂದು ಏನೇನೋ ಜಾಹೀರಾತುಗಳನ್ನು ಕೊಡುತ್ತಾರೆ. ಆದರೆ ಅಲ್ಲಿ ಹೋದ ಮೇಲೆ ವಾಸ್ತವಾಂಶ ಏನು ಎಂದು ತಿಳಿಯುತ್ತದೆ. ಇಲ್ಲಿ ನಾವು ನಂಬಿಕೆಗಳನ್ನು ಕಳೆದುಕೊಳ್ಳುತ್ತೇವೆ. ಯಾಮಾರುವವರು ಇರುವವರೆಗೂ ಯಾಮಾರಿಸುವವರು ಇದ್ದೇ ಇರುತ್ತಾರೆ.

ಮಾನ್ಯ ಭೋಜೇಗೌಡರು ತುಂಬಾ ಚೆನ್ನಾಗಿ ಹೇಳಿದರು. ಜಾಮೀನಿನಡಿಯಲ್ಲಿ ಹೊರ ಬಂದರೆ ಕಷ್ಟವಾಗುತ್ತದೆ, ಒಳಗೆ ತುಂಬಾ ಚೆನ್ನಾಗಿರಬಹುದು ಎಂದು ಹೇಳಿ ಅಲ್ಲಿಯೇ ಇರುವವರೂ ಇರುತ್ತಾರೆ. ಗುರು ರಾಘವೇಂದ್ರ ಬ್ಯಾಂಕ್ ನಮ್ಮ ಬಸವನಗುಡಿ ವ್ಯಾಪ್ತಿಯಲ್ಲಿಯೇ ಬರುತ್ತದೆ. ಮಾನ್ಯ ವೆಂಕಟೇಶ್ ಅವರು ಬಹಳಷ್ಟು ಚರ್ಚೆ ಮಾಡಿದ್ದಾರೆ. ಠೇವಣಿದಾರರಿಗೆ ಏನು ಕೊಟ್ಟೆವು? 5 ಕೋಟಿ, 10 ಕೋಟಿ ಈ ರೀತಿ ಇಟ್ಟಿರುವವರಿಗೂ ಕೇವಲ ರೂ.5 ಲಕ್ಷಗಳನ್ನು ಮಾತ್ರ ಕೊಡಲಾಗಿದೆ. ಸರ್ಕಾರ ಇಂತಹ ನಿಯಮಗಳಿಗೆ ತಿದ್ದುಪಡಿಯನ್ನು ತರಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಹೇಳಿದರು. ರೂ.100 ಠೇವಣಿ ಇಟ್ಟಾಗ ಇಂತಹ ಅವ್ಯವಹಾರಗಳು ನಡೆದಾಗ ಕನಿಷ್ಠ ಪಕ್ಷ ಶೇ.50 repayment ಅವರಿಗೆ ಹೋಗುವ ತರಹ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಬಹಳಷ್ಟು ಜನ ಹಿರಿಯ ನಾಗರೀಕರು ನಿವೃತ್ತಿಯ ಸಂದರ್ಭದಲ್ಲಿ ಬಂದಂತಹ ಹಣವನ್ನು ಠೇವಣಿ ಇಟ್ಟು ತಮ್ಮ ಜೀವನಕ್ಕಾಗಿ ಹಣ ಸಂಗ್ರಹ ಮಾಡಿ ಉಳಿತಾಯ ಮಾಡುತ್ತಾರೆ. ಅಂತಹವರಿಗೆ ಈ ರೀತಿಯ ಮೋಸವಾದಾಗ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದಕ್ಕೆ ಕೆಲವು ತಿದ್ದುಪಡಿಗಳನ್ನು ತಂದರೆ ಸಮಾಜಕ್ಕೆ ಒಳ್ಳೆಯ ಸಂದೇಶ ಹೋಗುತ್ತದೆ. ಯಾರೇ ತಪ್ಪು ಮಾಡಿದರೂ ಅವರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ:ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈ ಅಧಿವೇಶನದಲ್ಲಿ ಸರ್ಕಾರ ತಂದಿರುವಂತಹ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ತಿದ್ದುಪಡಿ ವಿಧೇಯಕ 2022 ಅನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಇಂದು ಜಾಗತಿಕ ಆರ್ಥಿಕ ದುಸ್ಥಿತಿಯ ಕಥೆಗಳನ್ನು ನೋಡುತ್ತಿದ್ದರೆ, ಭಾರತ ಒಳ್ಳೆಯ ರೀತಿಯಲ್ಲಿ ಸುಸ್ಥಿರವಾದಂತಹ ಆರ್ಥಿಕ ಸ್ಥಿತಿಯನ್ನು maintain ಮಾಡಿಕೊಂಡು ಬರುತ್ತಿದ್ದೇವೆ. ಇಂಗ್ಲೇಂಡನ್ನೂ ಹಿಂದಿಕ್ಕಿ 5ನೆಯ ಅತಿ ದೊಡ್ಡ ಆರ್ಥಿಕ ರಾಷ್ಟವಾಗಿರುವುದಕ್ಕೆ ನಾವೆಲ್ಲರೂ ಹೆಮ್ಮೆ ಪಡಬೇಕು.

ಮಾನ್ಯ ಸಭಾಪತಿಯವರೇ, ಅವಕಾಶ ಸಿಕ್ಕಾಗಲೆಲ್ಲಾ ಮಹಿಳೆಯರ ಬಗ್ಗೆ ಕೆಲವರು ಸದಭಿರುಚಿಯಿಂದ, ದುರಭಿರುಚಿಯಿಂದ ಉಲ್ಲೇಖವನ್ನು ಮಾಡುವುದನ್ನು ನೋಡಿದ್ದೇವೆ. ಉಳಿತಾಯ

ಸಂಸ್ಕೃತಿ ಎಂದು ಏನಾದರೂ ಬಂದಿದ್ದರೆ ಸಣ್ಣಪುಟ್ಟ ಕುಟುಂಬಗಳು, ಮಹಿಳೆಯರ ಸ್ತ್ರೀಶಕ್ತಿಗಳಿಂದ ಬಂದಿವೆ. ಇಂದು ಎಷ್ಟು ದೊಡ್ಡ ಉದ್ಯಮಗಳು ಹಣವನ್ನು ಖರ್ಚು ಮಾಡಬೇಕಾದರೂ, ರಾಷ್ಟ್ರದಲ್ಲಿ ಹಣಕಾಸು ಸಂಸ್ಥೆಗಳು ನಡೆಯಬೇಕಾದರೂ ಮನುಷ್ಯನಿಗೆ ಉಳಿತಾಯ ಮಾಡಬೇಕು. ಬ್ಯಾಂಕ್‌ಗಳಲ್ಲಿ ಅದನ್ನು ಸುರಕ್ಷಿತವಾಗಿ ಇಡಬೇಕು. ಅದು ಚಲಾವಣೆಯಾದಾಗ ಮಾತ್ರ ಈ ದೇಶದ ಆರ್ಥಿಕತೆ ಕ್ರಿಯಾಶೀಲವಾಗಿರಲು ಸಾಧ್ಯ.

**(...ಮುಂದು)**

**(907) 19-09-2022 (1.40) ಕೆಜಿ-ಎಂಡಿ**

**ಡಾ|| ತೇಜಸ್ವಿನಿ ಗೌಡ (ಮುಂದು):-**

ಮಾನ್ಯ ಸಭಾಪತಿಯವರೇ, ನಾವು ಠೇವಣಿ ಇಟ್ಟರೆ ನಮ್ಮ ದೇಶಕ್ಕೆ ಉಪಯೋಗವಾಗುತ್ತದೆ. ನಮ್ಮ ಬ್ಯಾಂಕಿಗೆ ಉಪಯೋಗವಾಗುತ್ತದೆ. ನನಗೆ ನನ್ನ ಕಷ್ಟಕಾಲದಲ್ಲಿ ಠೇವಣಿ ಹಣ ವಾಪಸ್ ಬರುತ್ತದೆ ಎಂಬ ನಂಬಿಕೆ ಇರುತ್ತದೆ. ಒಂದು ನ್ಯಾಯಬದ್ಧವಾಗಿರಬೇಕು. ಮಹಾತ್ಮ ಗಾಂಧೀಜಿಯವರು "ನಮಗೆ ಅಧರ್ಮದ ಹಣ ಬೇಡವೆಂದು" ಹೇಳಿದ್ದಾರೆ. ನಾವು ಠೇವಣಿ ಇಟ್ಟಂತಹ ಹಣ ನಮ್ಮ ಕಷ್ಟಕಾಲದಲ್ಲಿ ವಾಪಸ್ ಬರಲಿಲ್ಲವೆಂದರೆ ಹೇಗೆ? ನಮ್ಮ ಆರೋಗ್ಯ ಕೆಟ್ಟಾಗ ಹಣ ವಾಪಸ್ ಬರಲಿಲ್ಲವೆಂದರೆ ಹೇಗೆ? ಇಂತಹ ದುರುದ್ದೇಶದಿಂದ, ಕೆಟ್ಟ ಆಲೋಚನೆಗಳಿಂದ ಇಂತಹ ಸಂಸ್ಥೆಗಳ ಹಣವನ್ನು ಯಾರು ದುರುಪಯೋಗ ಮಾಡುತ್ತಾರೋ ಅಂತಹ ದುಷ್ಟರಿಗೆ ಶಿಕ್ಷೆಯಾಗಬೇಕು. ಠೇವಣಿದಾರರು ಠೇವಣಿ ಇಟ್ಟಂತಹ ಹಣವನ್ನು ಸುರಕ್ಷತೆಯಿಂದ ಕಾಪಾಡಿಕೊಳ್ಳಬೇಕೆಂಬ ಸದುದ್ದೇಶದಿಂದ ಹಾಗೂ ಜವಾಬ್ದಾರಿಯಿಂದ ಸಂರಕ್ಷಣೆ ಮಾಡುವುದಕ್ಕೆ ಸರ್ಕಾರ ಹೊರಟಿದೆ. ಸರ್ಕಾರ ಸಂರಕ್ಷಣೆಯನ್ನು ಮಾಡದಿದ್ದರೆ, ಮುಂದೆ ಅಪಾರ್ಥಗಳಾಗಿ, ಅಪನಂಬಿಕೆಗಳಿಂದ ಜನರು ಬ್ಯಾಂಕುಗಳಲ್ಲಿ ಹಣವನ್ನೇ ಇಡುವುದಿಲ್ಲ.

ಮಾನ್ಯ ಸಭಾಪತಿಯವರೇ, ಗ್ರಾಮಗಳಲ್ಲಿ ಜನರು ಚೀಟಿಗಳನ್ನು ಹಾಕುತ್ತಾರೆ. ಅದರಲ್ಲಿ ಅವರಿಗೆ ಹಣ ವಾಪಸ್ ಬರುತ್ತದೆಂಬ ಕುರುಡು ನಂಬಿಕೆ. ಎಷ್ಟೋ ಜನರು ಅಲ್ಲಿಯೂ ಸಹ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಈ ಕಾರಣದಿಂದ ಸರ್ಕಾರಗಳು ಒಳ್ಳೆಯ ರೀತಿಯಲ್ಲಿ ಸಂರಕ್ಷಣೆಯನ್ನು ಮಾಡಬೇಕಾಗುತ್ತದೆ. ಇಂತಹ ದುಷ್ಟರಿಗೆ, ಹಣವನ್ನು ದುರುಪಯೋಗ

ಮಾಡುವಂತಹವರಿಗೆ ಕಠಿಣವಾದ ಶಿಕ್ಷೆಯನ್ನು ಕೊಡುವಂತಹ ಬಿಗಿ ಕ್ರಮಗಳನ್ನು ಕೈಗೊಳ್ಳಬೇಕು. ಸರ್ಕಾರ ಠೇವಣಿದಾರರ ನಂಬಿಕೆಯನ್ನು ಉಳಿಸಬೇಕು ಮತ್ತು ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡಬೇಕೆಂದು ನಾನು ಮೊತ್ತೊಮ್ಮೆ ಈ ವಿಧೇಯಕವನ್ನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ.

**ಶ್ರೀ ಎಸ್.ಕೇಶವ ಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವ "ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2022 ಅನ್ನು ಸ್ವಾಗತ ಮಾಡುತ್ತೇನೆ. ಈ ವಿಧೇಯಕಕ್ಕೆ ಕೆಲವು ತಿದ್ದುಪಡಿಗಳನ್ನು ಸೇರಿಸಬಹುದೇ ಎಂದು ಮಾನ್ಯ ಕಾನೂನು ಸಚಿವರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಹಣಕಾಸು ಸಂಸ್ಥೆಗೆ rating ವ್ಯವಸ್ಥೆ ಬೇಕಾಗುತ್ತದೆ. ಸಾಮಾನ್ಯವಾಗಿ public sector ನಲ್ಲಿ ಇರುವಂಥವರಿಗೆ CRISIL (Credit Rating Information Services of India Limited) rating ನಲ್ಲಿ A, A++ rating ಕೊಡುತ್ತಾರೆ. ಹಾಗೆಯೇ, ಈ ಹಣಕಾಸು ಸಂಸ್ಥೆಗಳಿಗೂ rating ವ್ಯವಸ್ಥೆ ಅತ್ಯಂತ ಅವಶ್ಯಕವೆಂದು ನನಗೆ ಅನಿಸುತ್ತದೆ. ಅದೇರೀತಿ, ಠೇವಣಿ ಪಡೆಯುವಾಗ ಠೇವಣಿ ಪಡೆದಿರುವಂತಹ ಮೊತ್ತವನ್ನು ಯಾವುದರ ಮೇಲೆ ತೊಡಗಿಸುತ್ತಾರೆ ಎನ್ನುವುದನ್ನು ಬ್ಯಾಂಕಿನವರು ನಿಖರವಾಗಿ ಹೇಳಬೇಕು ಎನ್ನುವುದನ್ನು ಕಡ್ಡಾಯ ಮಾಡಬೇಕು. ಇದನ್ನು public scrutiny ಗೆ ಬಿಟ್ಟುಕೊಡಬೇಕು. ಅಂದರೆ, ಬ್ಯಾಂಕಿನ balance sheet ಗಳು ಏನಿವೆ, ಇವುಗಳನ್ನು ನಿಷ್ಪಕ್ಷಪಾತವಾಗಿ ಒಂದು ಸಂಸ್ಥೆ scrutiny ಮಾಡಬೇಕು. ಅದಕ್ಕೆ ಅವಕಾಶ ಕೊಡಬೇಕು. ಒಂದು Chattered Accountant Association ಗೆ ಮಾನ್ಯತೆ ಕೊಟ್ಟು ಇದನ್ನು scrutiny ಗೆ ಬಿಡಬೇಕೆಂದು ಹೇಳುತ್ತದೆ. ಮತ್ತೆ, ರೋಚಕ scheme ಗಳು ಅಂದರೆ, ಮೂರು ವರ್ಷಗಳಲ್ಲಿ double ಆಗುತ್ತದೆ, ಐದು ವರ್ಷಗಳಲ್ಲಿ double ಆಗುತ್ತದೆ ಎಂದು ಹೇಳುತ್ತಾರೆ. ಸರ್ಕಾರ 7-8 ವರ್ಷಗಳು ತೆಗೆದುಕೊಂಡಾಗ, 3 ಮತ್ತು 5 ವರ್ಷಗಳಲ್ಲಿ ಹೇಗೆ double ಆಗುತ್ತದೆ ಎನ್ನುವ ಬಗ್ಗೆ ವಿವರಣೆ ಕೊಡಬೇಕು ಎನ್ನುವುದನ್ನು ಸಹ ಮಾಡಬೇಕೆಂದು ಕೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಹಾಗೆಯೇ, ಅವರು ಠೇವಣಿ ಪಡೆದಂತಹ ಹಣವನ್ನು ಯಾವುದರ ಮೇಲೆ ತೊಡಗಿಸುತ್ತಾರೆ, ಎಷ್ಟು ಬಡ್ಡಿ ಕೊಡುವುದಕ್ಕೆ ಎನ್ನುವಂತಹ ವಿಷಯವನ್ನು ಸಹ ಹೊರಗಡೆ ತರಬೇಕು. ಇಷ್ಟು ಪಾರದರ್ಶಕತೆಗಳನ್ನು ಈ ವಿಧೇಯಕದಲ್ಲಿ ತರಬೇಕಾಗುತ್ತದೆ. ಅವರು

ಅವ್ಯವಹಾರಕ್ಕೆ ಒಳಗಾದ ನಂತರ ಅವರಿಗೆ ಶಿಕ್ಷೆ ಕೊಡುವುದಕ್ಕಿಂತ ಯಾರು ಠೇವಣಿ ಇಟ್ಟಿರುತ್ತಾರೆ ಅವರ ಹಣವನ್ನು ಪ್ರಾರಂಭಿಕ ಹಂತದಲ್ಲಿಯೇ ಸಂರಕ್ಷಣೆ ಮಾಡುವುದಕ್ಕೆ ಬರುತ್ತದೆ ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಇವುಗಳನ್ನು ಸೂಕ್ತ ತಿದ್ದುಪಡಿಗಳ ಮೂಲಕ ಸೇರಿಸಬೇಕೆಂದು ನಾನು ಮಾನ್ಯ ಕಾನೂನು ಸಚಿವರಲ್ಲಿ ವಿನಂತಿಯನ್ನು ಮಾಡುತ್ತೇನೆ,

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಎಲ್ಲಾ ಸದಸ್ಯರ ಅಭಿಪ್ರಾಯಗಳಿಗೆ ಏನಾದರೂ ಅಗತ್ಯ ಬಿದ್ದರೆ ಮೂಲ ಬಿಲ್‌ನಲ್ಲಿ ತಿದ್ದುಪಡಿ ತರುವುದಕ್ಕೆ ಪ್ರಯತ್ನ ಪಡುತ್ತೇವೆ. ಇವತ್ತು ನಮ್ಮ ಮುಂದೆ ಇರುವಂತಹ issue ಏನೆಂದರೆ, it's just a procedural aspect. ಹೇಗೆ ಅಪರಾಧಿಯನ್ನು trial ಮಾಡುವುದಕ್ಕೆ, speedy trial ಆಗುವುದಕ್ಕೆ, Special Court ಗೆ ಶಕ್ತಿ ಕೊಡುವುದಕ್ಕಾಗಿ ಅಷ್ಟೇ limited scope ಇಟ್ಟುಕೊಂಡು ಈ ಬಿಲ್ಲನ್ನು ತಂದಿದ್ದೇವೆ. ಹಾಗಾಗಿ, ಈ ವಿಧೇಯಕವನ್ನು ಪರ್ಯಾಲೋಚಿಸಿಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ "ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**<u>ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು</u>**

**<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>**

<u>ಖಂಡ 2 ರಿಂದ 4 ರವರೆಗೆ</u>

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ **2 ರಿಂದ 4 ರವರೆಗೆ ಎರಡೂ ಸೇರಿದಂತೆ** ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ. ಮಾಧುಸ್ವಾಮಿ(ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) (ಮುಖ್ಯ ಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

“ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷರಣೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಕರ್ನಾಟಕ ಭೂ–ಕಂದಾಯ (ತಿದ್ದುಪಡಿ) ವಿಧೇಯಕ, 2022**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) (ಕಂದಾಯ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) (ಕಂದಾಯ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಬಗುರ್ ಹುಕ್ಕುಂ ಸಾಗುವಳಿಯನ್ನು ಸಕ್ರಮ ಮಾಡುವುದಕ್ಕೆ ರಾಜ್ಯದಲ್ಲಿ ಕಾನೂನು ಇತ್ತು. Form 57 ಜಾರಿಯಲ್ಲಿತ್ತು. ಈಗ ಅನೇಕ ಕಾರಣಗಳಿಂದ ಒತ್ತಡ ಜಾಸ್ತಿಯಾಗಿದ್ದು, ಇನ್ನಷ್ಟು ಸಮಯವನ್ನು ಹೆಚ್ಚಿಗೆ ಮಾಡಿಕೊಡಿ, ಅರ್ಜಿ ಹಾಕುವವರು ಇನ್ನೂ ಉಳಿದಿದ್ದಾರೆಂದು ಮಾನ್ಯ ಶಾಸಕರಿಂದ ಮತ್ತು ಸಾರ್ವಜನಿಕ ವಲಯದಿಂದ ಒತ್ತಡ ಬಂದಿದ್ದರಿಂದ ಮೇ, 2022 ರಿಂದ ಒಂದು ವರ್ಷದವರೆಗೆ ಬಗುರ್ ಹುಕ್ಕುಂಗೆ ಮತ್ತೆ ಅರ್ಜಿ ಹಾಕುವುದಕ್ಕೆ ಅವಕಾಶ

ಕಲ್ಪಿಸಿ ಕೊಡುವುದಕ್ಕೆ ಈ ವಿಧೇಯಕವನ್ನು introduce ಮಾಡಿದ್ದೇವೆ. ಹಾಗಾಗಿ, ಈ ವಿಧೇಯಕವನ್ನು ದಯಮಾಡಿ ಪರ್ಯಾಲೋಚನೆ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಂದಿರುವಂತಹ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2022 ಅನ್ನು ಸ್ವಾಗತ ಮಾಡುತ್ತೇನೆ. ಇದೇ ಸಂದರ್ಭದಲ್ಲಿ ಕೆಲವು ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಈಗಾಗಲೇ ಮಾನ್ಯ ಕಂದಾಯ ಸಚಿವರು ವಿಧಾನಸಭೆಯಲ್ಲಿ ಸುಮಾರು 7,15,700 ಅರ್ಜಿಗಳು ಬಾಕಿ ಇವೆ ಎಂದು ಹೇಳಿದ್ದಾರೆ. ಮತ್ತೆ, Form 53 ನಲ್ಲಿ 1,12,545 ಮತ್ತು Form 50 ಇದರಲ್ಲಿ 6,302 ಅರ್ಜಿಗಳು ಬಾಕಿ ಇವೆ. ಇಷ್ಟು ಅರ್ಜಿಗಳು ಬಾಕಿ ಇರುವಂತಹ ಸಂದರ್ಭದಲ್ಲಿ ಈ ವಿಧೇಯಕವನ್ನು ತಂದಿದ್ದಾರೆ. ನಾವೆಲ್ಲರೂ ಈಗಾಗಲೇ ಬೆಂಗಳೂರಿನಲ್ಲಿ ಅಕ್ರಮ-ಸಕ್ರಮ ಮಾಡುವಂತಹ ವಿಚಾರದಲ್ಲಿ ಅನುಭವಿಸುತ್ತಿದ್ದೇವೆ. ಇದರಲ್ಲಿಯೂ ಸಹ ಸರ್ಕಾರಿ ಜಮೀನನ್ನು ಸಾಗುವಳಿ ಮಾಡುತ್ತಿದ್ದು, ಅದನ್ನು ಸಕ್ರಮಗೊಳಿಸುವಂತಹ ವಿಚಾರ ಇದೆ. ಕೆಲವು ಸದಸ್ಯರು ಹೇಳಿರುವಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ನಾನು ಹೇಳುವಂತಹ ವಿಷಯ ಇದಕ್ಕೆ ಸಂಬಂಧಪಟ್ಟಿಲ್ಲ, ಆದರೂ ಸಹ, ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ, ಅರಣ್ಯ ಕಾಯಿದೆ ಪ್ರಕಾರ, ಲಕ್ಷಾಂತರ ಜನ ಸಾಗುವಳಿ ಮಾಡುತ್ತಿದ್ದಾರೆ. ಅರಣ್ಯ ಕಾಯ್ದೆ ಬಂದ ನಂತರ ಶ್ರೀ ಕಸ್ತೂರಿ ರಂಗನ್‌ರವರ ವರದಿ ಬಂದ ನಂತರ ಲಕ್ಷಾಂತರ ಜನರ ತಲೆಯ ಮೇಲೆ ತೂಗುಗತ್ತಿ ಇದೆ. ಯಾವತ್ತು ಅವರನ್ನು ಖಾಲಿ ಮಾಡಿಸುತ್ತಾರೆಂದು, ಅದು unscientific ಇದೆ ಎಂದು ಎಲ್ಲರೂ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನನಗೆ ಶ್ರೀ ಕಸ್ತೂರಿ ರಂಗನ್‌ರವರ ಬಗ್ಗೆ ಬಹಳ ಗೌರವ ಇದೆ. ಏಕೆಂದರೆ, ಅವರು ನಮ್ಮ ಮನೆಯ ಪಕ್ಕದಲ್ಲಿ ಇದ್ದವರು. ಜೊತೆಗೆ ರಾಜ್ಯ ಸಭಾ ಸದಸ್ಯರಾಗಿದ್ದರು. ಅವರು satellite ನಿಂದ picture ತೆಗೆದು ಇದೆಲ್ಲಾ ಅರಣ್ಯ ಭೂಮಿ ಎಂದು ಹೇಳಿದ್ದರು. ಮಲೆನಾಡಿ ಕಡೆಗೆ ಹೋದರೆ ಅಥವಾ ಕರಾವಳಿ ಪ್ರದೇಶಕ್ಕೆ ಹೋದರೆ, ಅಲ್ಲಿ ಎಲ್ಲದಾರೂ ಎತ್ತರ ಪ್ರದೇಶಗಳಲ್ಲಿ ನಿಂತುಕೊಂಡು ನೋಡಿದರೆ ಅಲ್ಲಿ ಮನೆಗಳು ಕಾಣುವುದಿಲ್ಲ, ಎಲ್ಲಾ ಬರಿ ಗಿಡಮರಗಳು ಮಾತ್ರ ಕಾಣುತ್ತವೆ. ಹಾಗಾಗಿ, ಅದನ್ನೆಲ್ಲಾ ಅರಣ್ಯವೆಂದು ಮಾಡಿದ್ದಾರೆ. ಆದ್ದರಿಂದ, ಅಲ್ಲಿ

ನೂರಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಇರುವವರ ಸ್ಥಿತಿ ಯಾವ ರೀತಿ ಇದೆ ಎಂದರೆ, ಅವರು ಆ ಕಡೆಗೂ ಇಲ್ಲ, ಈ ಕಡೆಗೂ ಇಲ್ಲದಂತಾಗಿದೆ. ಯಾವ ಸಂದರ್ಭದಲ್ಲಿ ಬಂದು ಅಲ್ಲಿರುವವರನ್ನು ಖಾಲಿ ಮಾಡಿಸುತ್ತಾರೆಂದು ಗೊತ್ತಿಲ್ಲ. ಹಾಗಾಗಿ,ನಾವು ಅದರ ಬಗ್ಗೆಯೂ ಸಹ ಯೋಚನೆ ಮಾಡಬೇಕಾಗಿದೆ. ಕೆಲವು ಜಾಗಗಳಲ್ಲಿ ಗೋಮಾಳ ಜಾಗದಲ್ಲಿಯೂ ಸಹ ಅಕ್ರಮವಾಗಿ ಸಾಗುವಳಿ ನಡೆಯುತ್ತಿದೆ. ಕೆಲವು ಜಾಗದಲ್ಲಿ ಗೋಮಾಳ ಜಮೀನನ್ನು ಮಠಗಳಿಗೆ ಕೊಟ್ಟಿದೆ. ಸಂಸ್ಥೆಗಳಿಗೆ ಕೊಟ್ಟಿದೆ. ಇದನ್ನು ಸಕ್ರಮ ಮಾಡುವಂತಹ ಸಂದರ್ಭದಲ್ಲಿ ಸ್ವಲ್ಪ ಯೋಜನೆ ಮಾಡಬೇಕಾಗುತ್ತದೆ.

**(ಮುಂದು.,)**

**(908) 19-09-2022 (1.50) ಎಂ.ವಿ-ಎಂಡಿ**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):-**

ಕೆಲವು ಜಾಗಗಳಲ್ಲಿ ಗೋಮಾಳ ಜಾಗಗಳನ್ನು ಮಠಗಳಿಗೆ ಮತ್ತು ಸಂಘ-ಸಂಸ್ಥೆಗಳಿಗೆ ನೀಡಲಾಗಿದೆ. ಅವುಗಳನ್ನು ಸಕ್ರಮ ಮಾಡುವಾಗ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಈಗಾಗಲೇ ಕೆಲವರಿಗೆ ನೂರಾರು ಎಕರೆಗಳನ್ನು ನೀಡಲಾಗಿದೆ. ಈಗ ಗೋಮಾಳಗಳನ್ನು ಉಳಿಸಿಕೊಳ್ಳುವಂಥದ್ದು ಬಹಳ ಮುಖ್ಯ. ಏಕೆಂದರೆ, ಈ ಒಂದು ವಿಚಾರದಲ್ಲಿ ನಾವು

> *"If you continue to lose green cover for development and illegal encroachments, it will have an impact on a State. The 15th Commission has indicated in one of the guidelines that, loss of green cover will eventually reflect in the cut in grants to the states."*

ಇದು Times of India ದಲ್ಲಿ ಬಂದಿರುವಂತಹ article. ಆದುದರಿಂದ, ಈ ಗೋಮಾಳಗಳನ್ನು ಸಂಘ-ಸಂಸ್ಥೆಗಳಿಗೆ ಮತ್ತು ಮಠಗಳಿಗೆ ಕೊಡುವುದನ್ನು ನಿಲ್ಲಿಸುವುದು ಬಹಳ ಉತ್ತಮ. ಏಕೆಂದರೆ, ಗೋಮಾಳ, ಗೋಮಾಳವಾಗಿಯೇ ಇರಲಿ ಮತ್ತು ಅದು ಸರ್ಕಾರದ ಆಸ್ತಿಯಾಗಿಯೇ ಇರಲಿ. ಈ

ಸಂಘ-ಸಂಸ್ಥೆಗಳಿಗೆ ಏನು ನೀವು ಕೋಟ್ಯಂತರ ರೂಪಾಯಿ ಬೆಲೆ ಬಾಳುವಂಥದ್ದನ್ನು ಸಾವಿರಾರು ರೂಪಾಯಿಯಲ್ಲಿ ಕೊಟ್ಟಿರುವಂಥದ್ದು ಬಹಳ ಉದಾಹರಣೆ ಇದೆ. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದುದರಿಂದ ಈ ಅಕ್ರಮವನ್ನು ಸಕ್ರಮ ಮಾಡುವಂತಹ ನೆಪದಲ್ಲಿ, ಎಷ್ಟೆಲ್ಲಾ ಅಕ್ರಮ ನಡೆಯುತ್ತಿದೆ ಎಂದು ತಮಗೂ ಗೊತ್ತಿದೆ ನಮಗೂ ಗೊತ್ತಿದೆ. ಆದುದರಿಂದ ಇಂತಹ ವಿಚಾರಗಳು, ಸರ್ಕಾರಿ ಜಮೀನು ಗೋಮಾಳವೆಂದು ಉಳಿಸಿಕೊಳ್ಳಬೇಕು. ಏಕೆಂದರೆ, ಗೋವುಗಳ ಬಗ್ಗೆ ಬಹಳ ಗೌರವ ಇಟ್ಟುಕೊಂಡಿರುವ ಸರ್ಕಾರ. ಆದುದರಿಂದ ಅದಕ್ಕೆ ಅನುಕೂಲವಾಗಲಿ ಎಂದು ಗೋಮಾಳಗಳನ್ನು ಎಲ್ಲರೂ ಸಹ, ಅಲ್ಲಿ ಏನಾದರೂ ಸಾಗುವಳಿ ಮಾಡುತ್ತಿದ್ದರೆ ಪರವಾಗಿಲ್ಲ. ಆದರೆ, ದಯವಿಟ್ಟು ಸಂಘ-ಸಂಸ್ಥೆಗಳಿಗೆ ನೀಡುವುದನ್ನು ನಿಲ್ಲಿಸಲಿ ಎಂದು ಹೇಳುತ್ತಾ, ಏನು ಈ ಒಂದು ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ ಅದಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಕಾನೂನು ಸಚಿವರಿಗೆ ಈ ವಿಚಾರ ಬಹಳ ಚೆನ್ನಾಗಿ ಗೊತ್ತಿದೆ. ಅವರು ಸುಮಾರು ಎರಡು-ಮೂರು ಸಭೆಗಳನ್ನು ಸಹ ಮಾಡಿದ್ದಾರೆ. ಇದರಲ್ಲಿ ಬಹಳ ಗಂಭೀರವಾಗಿರುವಂಥದ್ದು ಏನೆಂದರೆ, ಈ extension ಅನ್ನು ಒಂದು ವರ್ಷಕ್ಕೆ ನೀಡಿದ್ದಾರೆ. ಅದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಬಹಳ ಜನ ಅರ್ಜಿ ಹಾಕದೇ ಒದ್ದಾಡುತ್ತಿದ್ದಾರೆ. ಅದಕ್ಕೆ ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಇಲ್ಲಿ ಸಾವಿರಾರು ಜನರು ಇದ್ದಾರೆ. ಇಲ್ಲಿ ಮಾತು ಎತ್ತಿದರೆ, ಅರಣ್ಯ ಭೂಮಿ ಎಂದು ಹೇಳುತ್ತಾರೆ. ಇಲ್ಲಿ ಅರಣ್ಯ ಭೂಮಿ ಮತ್ತು ಕಂದಾಯ ಭೂಮಿ ಯಾವುದೆಂದು ವಿಂಗಡಣೆ ಮಾಡಬೇಕು. ಅದಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳು ಇವತ್ತಿನವರೆಗೂ clear picture ನೀಡುತ್ತಿಲ್ಲ. ಈಗ ಗೋಮಾಳ ಜಾಗ ನೂರಕ್ಕೆ ನೂರರಷ್ಟು ಅವಶ್ಯಕತೆ ಇದೆ. ಈಗ ಊರುಗಳಲ್ಲಿ ನೂರಕ್ಕೆ ನೂರರಷ್ಟು ಸ್ಮಶಾನದ ಅವಶ್ಯಕತೆ ಇದೆ. ಊರಿಗೆ ಒಂದು ಸ್ಮಶಾನವನ್ನು ಕೊಡಲೇ ಬೇಕು. ಇವತ್ತು ಊರಿಗೊಂದು ಮತ್ತು ಜಾತಿಗೊಂದು ಸ್ಮಶಾನ ಬೇಕಾಗಿರುವಂತಹ ಪರಿಸ್ಥಿತಿ ಬಂದಿದೆ. ಈಗ ಊರಿಗೊಂದು ಸ್ಮಶಾನ ಇರಬೇಕಾಗುತ್ತದೆ. ಇಲ್ಲವಾದರೆ ಬಹಳ ತೊಂದರೆಯಾಗುತ್ತದೆ. ವಿಶೇಷವಾಗಿ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಬೇಕಾಗುತ್ತದೆ. ಈಗ 94(ಸಿ) ಕೊಟ್ಟು ಫಾರಂ ನಂ.57ರಲ್ಲಿ ಅದನ್ನು ಪರಿವರ್ತನೆ ಮಾಡಿಕೊಡುತ್ತೇವೆಂದು ಹೇಳಿದ್ದರು. ದಯಮಾಡಿ ಭೂ ಕಬಳಿಕೆ ಮತ್ತು ಒತ್ತುವರಿ, ಈ ಎರಡಕ್ಕೂ ಸಂಬಂಧಪಟ್ಟಂತೆ differentiation ಮಾಡಬೇಕಾಗುತ್ತದೆ. ಈಗ ಬೆಂಗಳೂರು ನಗರದಲ್ಲಿ ಇಂಚು

ಇಂಚಿಗೂ ಬೆಲೆ ಇದೆ. ಈಗ ನಮ್ಮ ಊರಿನಲ್ಲಿ ಯಾರೋ ಕುರಿ ಮತ್ತು ಕೋಳಿ ಸಾಕಿಕೊಂಡಿರುತ್ತಾರೆ. ದನಕರು ಕಟ್ಟಿಕೊಂಡಿರುತ್ತಾರೆ. ಗುಡಿಸಲು ಕಟ್ಟಿಕೊಂಡಿರುತ್ತಾರೆ. ಇವರು ಅವರನ್ನು ಸಹ ಭೂ ಕಬಳಿಕೆ ತಂದರು.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೆ, ಇದಕ್ಕೆ ತಿದ್ದುಪಡಿ ತಂದಿದ್ದೇವೆ. ಇವತ್ತು ಈ ವಿಧೇಯಕವನ್ನು ವಿಧಾನ ಸಭೆಯ ಮುಂದೆ place ಮಾಡಿದ್ದೇವೆ. ನಾಳೆ ಅಥವಾ ನಾಡಿದ್ದು ಬಂದಾಗ ಅದರ ಮೇಲೆ ಮಾತನಾಡುವುದು ಒಳ್ಳೆಯದು. ನಾವು ಅದಕ್ಕೆ ಸಂಬಂಧಪಟ್ಟಂತೆ ವಿಧೇಯಕವನ್ನು ತಂದಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈಗ ಜೀವನಕ್ಕೋಸ್ಕರ ಒತ್ತುವರಿ ಮಾಡಿರುವಂತಹ ಸಂದರ್ಭದಲ್ಲಿ ಇದಕ್ಕೆ extension ನೀಡಿದ್ದಾರೆ. ಆಗ ದಯಮಾಡಿ ಇದಕ್ಕೆ ಗಮನಹರಿಸಬೇಕಾಗುತ್ತದೆ. ಈಗ ಬೆಂಗಳೂರಿನಲ್ಲಿ ಸುಮಾರು 1400 ಕೆರೆಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಆದರೆ, ನಮ್ಮ ಊರುಗಳಲ್ಲಿ ಆ ರೀತಿ ಇಲ್ಲ. ನಮ್ಮ ಊರುಗಳಲ್ಲಿ ಜೀವನಕ್ಕೋಸ್ಕರ ಇರುವಂಥದ್ದು. ಆ ಜೀವನಕ್ಕೋಸ್ಕರ ಇರುವಂಥದ್ದರಲ್ಲಿ, ಮಾನ್ಯ ಕಸ್ತೂರಿ ರಂಗನ್ ವರದಿ ನಮ್ಮ ತಲೆಯ ಮೇಲೆ ಓಡಾಡುತ್ತಿದೆ. ಯಾವಾಗ ಏನು ಮಾಡುತ್ತಾರೋ ಎಂದು ಯಾರಿಗೂ ಗೊತ್ತಿಲ್ಲ. ಪಾಪ ಅವರೆಲ್ಲರೂ ಸಹ ಒದ್ದಾಡುತ್ತಿದ್ದಾರೆ. ಅದಕ್ಕೋಸ್ಕರ ಮೊನ್ನೆಯಿಂದ ಮಲೆನಾಡು ಪ್ರದೇಶದವರು ಧರಣಿ ಕುಳಿತುಕೊಂಡು, ತಾವು ಬರಬೇಕೆಂದು ಹೇಳುತ್ತಿದ್ದಾರೆ. ಆದುದರಿಂದ ಮಾನ್ಯ ಸಚಿವರು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಡಾ||ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಸರ್ಕಾರ ತಂದಿರತಕ್ಕಂಥ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸ್ವಾಗತಿಸುತ್ತಾ, ಇದು ಹೆಚ್ಚಿನ ಆರ್ಥಿಕ ಹೊರೆಯನ್ನು ಒಳಗೊಂಡಿರುವುದಿಲ್ಲವೆಂದು ಇದನ್ನು ಪರಿಗಣಿಸಬೇಕು. ಈ ವಿಧೇಯಕದ ಉದ್ದೇಶ ಸದುದ್ದೇಶದಿಂದ ಕೂಡಿದೆ. ಜೀವನಕ್ಕೆ ಬೇರೆ ದಾರಿಯಿಲ್ಲದೆ ಕೃಷಿಯನ್ನೇ ಆಧರಿಸಿ, ತಮ್ಮ ಜೀವನವನ್ನು ಸವೆಸುವುದಕ್ಕಾಗಿ, ಅತೀ ಬಡವರು ಮತ್ತು ಭೂ ರಹಿತರು ಕಾನೂನನ್ನು ಮೀರಿ ಸಾಗುವಳಿ ಮಾಡಿಕೊಂಡಿದ್ದಾರೆ. ಇವತ್ತಿನ ವಿಧೇಯಕದಲ್ಲಿ ಸಕ್ರಮ

ಮಾಡಿಕೊಳ್ಳುವುದಕ್ಕೆ ಅರ್ಜಿಗಳನ್ನು ಕರೆಯುವುದಕ್ಕೆ time extension ಅನ್ನು ತಂದಿದ್ದಾರೆ. ನನ್ನ ವಿನಂತಿ ಏನೆಂದರೆ, ಅನೇಕ ಸದಸ್ಯರು ವಿಧೇಯಕ ಮೇಲೆ ಮಾತನಾಡಿದ್ದಾರೆ. ಈಗ ಸಂವಿಧಾನ ಯಾವುದಕ್ಕೆ ಸಂರಕ್ಷಣೆ ನೀಡಿದೆ. ಅನೇಕ Articles ಮೂಲಕ ವನ್ಯಜೀವಿಗಳ ಸಂರಕ್ಷಣೆಗೆ ಸಂವಿಧಾನದ ಸಂರಕ್ಷಣೆ ಇದೆ. ಹಾಗೆಯೇ, human rights ಬಗ್ಗೆ ಹೇಳುವುದಾದರೆ, ಸ್ಮಶಾನ ಒಬ್ಬ ಮನುಷ್ಯ ತೀರಿಕೊಂಡ ಮೇಲೂ ಕೂಡ, ಅವನು ಘನತೆಯಿಂದ ಅಂತ್ಯಸಂಸ್ಕಾರಗೊಳ್ಳುವುದಕ್ಕೂ ಸಹ ಸಂವಿಧಾನದ ರಕ್ಷಣೆ ಇದೆ. ನೀರಿನ ಸೆಲೆಗಳು ಹಾಗೂ ಕೆರೆ-ಕುಂಟೆಗಳಿಗೆ ಸಂವಿಧಾನದ ರಕ್ಷಣೆ ಇದೆ. ಗೋಮಾಳ, ಹಸುಗಳ ತಳ, ಕುರಿಗಳ ಯೋಜನೆಗಳಿಗೆ ಕುರಿಗಳನ್ನು ನೀಡುತ್ತೇವೆ. ಆದರೆ, ಕುರಿಗಳನ್ನು ಮೇಯಿಸುವುದಕ್ಕೆ ಜಾಗವಿಲ್ಲ. ಸರ್ಕಾರಕ್ಕೆ ನನ್ನ ಕಳಕಳಿಯ ಮನವಿ ಏನೆಂದರೆ, ಸಂವಿಧಾನದ ರಕ್ಷಣೆ ಇರತಕ್ಕಂತಹ ಯಾವುದೇ ಹಕ್ಕುಗಳಿಗೆ ಬಾಧಿತವಾಗದಂತೆ, ಅರಣ್ಯಕ್ಕೆ, ವನ್ಯಜೀವಿಗಳಿಗೆ, ನೀರಿನ ಸೆಲೆಗಳಿಗೆ ಮತ್ತು ಗೋಮಾಳಗಳಿಗೆ, ಸ್ಮಶಾನಗಳಿಗೆ ಮತ್ತು ಗ್ರಾಮೀಣಾಭಿವೃದ್ಧಿಗೆ ಬೇಕಾದಂತಹ ರಸ್ತೆ, ಸಾರ್ವಜನಿಕ ಉದ್ದೇಶಗಳಿಗೆ ಬೇಕಾದಂತಹ, ಭೂಮಿಗೆ ಕೊರತೆ ಬಾರದಂತೆ ಸಕ್ರಮಗೊಳಿಸಬೇಕೆಂದು ನನ್ನ ಕಳಕಳಿಯಾಗಿದೆ. ಎರಡನೆಯದಾಗಿ, ಬೆಂಗಳೂರು ಗ್ರಾಮಾಂತರ ಮತ್ತು ಯಾವುದು ರಾಜಧಾನಿಗೆ ಹತ್ತಿರವಿದೆ ಅಥವಾ ದೊಡ್ಡ ದೊಡ್ಡ ಪಟ್ಟಣಗಳಿಗೆ ಹತ್ತಿರವಿದೆ, ಭೂ ಮಾಫಿಯಾ ದೀನ-ದಲಿತರ, ಭೂ ರಹಿತರ ಹೆಸರಿನಲ್ಲಿ ಭೂಮಿಯನ್ನು ಮಂಜೂರು ಮಾಡಿಸಿಕೊಂಡು, ಅದರ ಸಮಯಾವಕಾಶ ಮೀರಿದ ತಕ್ಷಣ ಮಾರಾಟ ಮಾಡುವಂತಹ ಒಂದು ವ್ಯವಸ್ಥಿತ ಜಾಲ ಕೂಡ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕುವಂತಹ ಕಠಿಣ ಕ್ರಮಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಇಂತಹ ಒಂದು ಸದುದ್ದೇಶದ ತಿದ್ದುಪಡಿ ವಿಧೇಯಕವನ್ನು ಜಾರಿಗೆ ತರಬೇಕೆಂದು ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. 01.01.2005 cut-of-date ಅಂದರೆ ನಿಗದಿಪಡಿಸಿದ ದಿನಾಂಕ, ಇದನ್ನು ಏನಾದರೂ ವಿಸ್ತರಣೆ ಮಾಡುತಾರೋ ಅಥವಾ ವಿಸ್ತರಣೆ ಆಗುವುದಿಲ್ಲವೋ ಎನ್ನುವಂಥದ್ದನ್ನು ತಿಳಿಸಬೇಕು. ಈ ರೀತಿ ನೀಡಿದರೆ ಇನ್ನು ಸುಮಾರು ಸಾವಿರಾರು ಮತ್ತು ಕೋಟ್ಯಂತರ ಅರ್ಜಿಗಳು ಬರುತ್ತವೆ. ದಯಮಾಡಿ ಮಾಡುವುದು ಬೇಡ ಎನ್ನುವುದು ನನ್ನ ಭಾವನೆಯಾಗಿದೆ. ಈಗ ಸುಮಾರು ಎರಡು ಲಕ್ಷ ಅರಣ್ಯ ಭೂಮಿ, deemed forest ನಲ್ಲಿರತಕ್ಕಂಥದ್ದನ್ನು regularize ಮಾಡುತ್ತೇವೆಂದು ಹೇಳುವಂಥದ್ದು ಇದೆ. ವಿಸ್ತರಣೆ ಮಾಡುವಂಥದ್ದು ಇದಕ್ಕೂ ಸಹ ಅನ್ವಯವಾಗುತ್ತದೆಯೇ ಎನ್ನುವುದನ್ನು ಸಹ ಸ್ಪಷ್ಟಪಡಿಸಲಿ. ಮಾನ್ಯ

ಸದಸ್ಯರು ಹೇಳಿದ ಹಾಗೆ, ಸ್ಮಶಾನ ಮತ್ತು ವಸತಿ ಯೋಜನೆಗಳಿಗೆ ಸಾಕಷ್ಟು ರೀತಿಯ ಜಮೀನು ಬೇಕಾಗುತ್ತದೆ. ಈಗ ಭೂಸ್ವಾಧೀನ ಮಾಡುವುದಕ್ಕೆ ಸಾಧ್ಯವಿಲ್ಲ. ತಾವು ದಯಮಾಡಿ regularize ಮಾಡಬೇಕಾದರೆ, ಅನಧಿಕೃತ ಸಾಗುವಳಿಯನ್ನು ಏನು regularize ಮಾಡುತ್ತಿದ್ದಾರೆ, ಅದನ್ನು ಮಾಡುವುದಕ್ಕಿಂತ ಮುಂಚೆ, ಸ್ಮಶಾನಕ್ಕೆ ಎಷ್ಟು ಜಾಗ ಬೇಕು ಮತ್ತು ವಸತಿ ಯೋಜನೆಗಳಿಗೆ ಎಷ್ಟು ಜಾಗ ಬೇಕು ಎಂದು ನಿಗಧಿ ಮಾಡಬೇಕೆಂದು ಬಿನಹ ಮಾಡುತ್ತೇನೆ. ಅದೇ ರೀತಿಯಲ್ಲಿ ಏನು ತಾಲ್ಲೂಕು ಅನಧಿಕೃತ ಸಾಗುವಳಿಯ ಸಮಿತಿಗಳಿವೆ, ಅವುಗಳ ರಚನೆಯಾಗಿಲ್ಲ. ಸುಮಾರು ಐದಾರು ವರ್ಷಗಳ ಹಿಂದೆ ಹಾಕಿರುವಂತಹ ಅರ್ಜಿಗಳು. ಅವುಗಳು ಹಾಗೆಯೇ ಉಳಿದುಕೊಂಡಿವೆ. ಆದಷ್ಟು ಬೇಗ ಆ ಸಮಿತಿಗಳ ರಚನೆಯಾಗಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಬಿನಹ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಮಾನ್ಯ ಕಾನೂನು ಸಚಿವರು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2022 ಅನ್ನು ಸದನದಲ್ಲಿ ಮಂಡಿಸಿದ್ದಾರೆ. ಹಾಗೆಯೇ ಅದಕ್ಕೆ ಅನುಮೋಧನೆಯನ್ನು ಸಹ ಕೋರಿದ್ದಾರೆ. ನಾನು ಕೂಡ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಏನು ಆ timebound 01.01.2005 ಇತ್ತು. ಅದನ್ನು ಏನಾದರೂ ವಿಸ್ತರಣೆ ಮಾಡುವುದಕ್ಕೆ ಅವಕಾಶವಿದೆಯೇ ಅಥವಾ ಅದರ ಬಗ್ಗೆ ಏನೆಂದು ಕೇಳುತ್ತಿದ್ದೇನೆ. ಫಾರಂ ನಂ.50 ಅನ್ನು 1992ರಲ್ಲಿ ಹಾಕಿದ್ದಾರೆ. ಈಗ ಅದಕ್ಕೆ ಸುಮಾರು 30 ವರ್ಷಗಳಾಗುತ್ತವೆ. ಫಾರಂ ನಂ.53ಕ್ಕೆ 1998ರಲ್ಲಿ ಅವಕಾಶ ನೀಡಿದ್ದಾರೆ. ಅದಕ್ಕೆ ಸುಮಾರು 24 ವರ್ಷವಾಗಿದೆ. ಇಷ್ಟು ಸುದೀರ್ಘ ಅವಕಾಶವಿದ್ದರೂ ಕೂಡ, ಈಗಲೂ ಕೂಡ ಫಾರಂ ನಂ.50 ಮತ್ತು ಫಾರಂ ನಂ.53ರಲ್ಲಿ ಬಹಳಷ್ಟು ಪ್ರಕರಣಗಳು ಬಾಕಿಯಿವೆ. ಈಗ ಏನು ಫಾರಂ ನಂ.57 ಹಾಕುವುದಕ್ಕೆ ಅವಕಾಶವಿತ್ತು ಹಾಗೆಯೇ ಮತ್ತೆ ಒಂದು ವರ್ಷ ವಿಸ್ತರಣೆಗೆ ಅವಕಾಶ ಮಾಡಿಕೊಡುವುದಕ್ಕೆ ಹೊರಟ್ಟಿದ್ದಾರೆ. ಈಗ ಫಾರಂ ನಂ.50 ಮತ್ತು ಫಾರಂ ನಂ.53 ಇವುಗಳನ್ನು ಇತ್ಯರ್ಥಪಡಿಸದೆ ಹೋದರೆ, ಬಹುಶಃ ಅಂತಹ ಅರ್ಜಿಗಳು repeat ಆಗುವಂತಹ ಸಾಧ್ಯತೆ ಇರುತ್ತದೆ. ಆದುದರಿಂದ ಈಗ ಫಾರಂ ನಂ.50 ಮತ್ತು ಫಾರಂ ನಂ.53 ಇವುಗಳ ಬಗ್ಗೆ ತಹಶೀಲ್ದಾರವರಿಂದ ವರದಿ ತರಿಸಿಕೊಂಡು ರದ್ದುಪಡಿಸಲಿ ಅಥವಾ ಅವುಗಳನ್ನು ಇತ್ಯರ್ಥಪಡಿಸಲಿ. ಈಗ ಹೊಸದಾಗಿ ಅರ್ಜಿ ಹಾಕುವುದಕ್ಕೆ ಅವಕಾಶವಿರುವುದರಿಂದ ಇದು overlap ಆಗುತ್ತದೆ.

ಹಾಗಾಗಿ ಅದನ್ನು ಮಾಡಿಕೊಡಬೇಕು. ಏನು ಸಮಿತಿಗಳನ್ನು ಮಾಡುತ್ತಾರೆ, ಆ ಸಮಿತಿಗಳಿಗೆ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಅದೇ ರೀತಿ ಸರ್ಕಾರದ ವತಿಯಿಂದ ಐದು ಜನರನ್ನು ನಾಮನಿರ್ದೇಶನ ಮಾಡುತ್ತಾರೆ. ಅದಕ್ಕೂ ಸಹ ನಮ್ಮದೇನೂ ತಕರಾರು ಇಲ್ಲ. ಆದರೆ, ಅದಕ್ಕೆ ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಹೇಳುತ್ತೇನೆ. ಅವರನ್ನು ಸಹ ಅಧ್ಯಕ್ಷರನ್ನಾಗಿ ಮಾಡಿದರೆ ಒಳ್ಳೆಯದಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸಹ ಅಧ್ಯಕ್ಷರನ್ನಾಗಿ ಮಾಡಿದ್ದಾರೆ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಇದರಿಂದ ವಿಧಾನ ಪರಿಷತ್ತಿನ ಸದಸ್ಯರು ಕೂಡ ತಮ್ಮ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಮಾನ್ಯ ಕಾನೂನು ಸಚಿವರು ಗಮನಹರಿಸಿ ತಿದ್ದುಪಡಿ ತರಬೇಕೆಂದು ಬಯಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮೂಡಿಗೇರೆ ತಾಲ್ಲೂಕಿನಲ್ಲಿ ಶಾಸಕರು ಇದ್ದರೂ ಸಹ ಹೋಬಳಿಗಳನ್ನು ವಿಂಗಡಿಸಿಕೊಂಡು ಶ್ರೀಮತಿ ಮೋಟಮ್ಮನವರು ಎರಡು ಹೋಬಳಿಗಳಿಗೆ ಅಧ್ಯಕ್ಷತೆ ವಹಿಸಿದ್ದರು. ಹಿಂದೆ ಈ ರೀತಿ ಮಾಡಿದ್ದಾರೆ. ವಿಧಾನ ಪರಿಷತ್ತಿನಲ್ಲಿ 75 ಜನ ಸದಸ್ಯರಿದ್ದೇವೆ. ಈಗ ನೋಡಲ್ ತಾಲ್ಲೂಕ್ ಅನ್ನು ಯಾರು ತೆಗೆದುಕೊಂಡಿದ್ದಾರೆ, ಆ ನೋಡಲ್ ತಾಲ್ಲೂಕಿನಲ್ಲಿ ಎರಡು ಹೋಬಳಿಗಳಿಗೆ ಅಧ್ಯಕ್ಷರನ್ನಾಗಿ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ. ಮಾನ್ಯ ಸದಸ್ಯರಾದ ಪ್ರಾಣೇಶ್‌ರವರು ಇಲ್ಲೆ ಇದ್ದಾರೆ. ಹಿಂದೆ ಶ್ರೀಮತಿ ಮೋಟಮ್ಮನವರು ಎರಡು ಹೋಬಳಿಗಳಿಗೆ ಅಧ್ಯಕ್ಷರಾಗಿದ್ದರು. ಹಾಗಾಗಿ ಈ ರೀತಿ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ. ಈಗ ಆರರಿಂದ ಎಂಟು ಹೋಬಳಿಗಳು ಇರುತ್ತವೆ. ಅದರಲ್ಲಿ ಎರಡು ಹೋಬಳಿಗಳನ್ನು ನೀಡಿದರೆ ಒಳ್ಳೆಯದು.

**ಶ್ರೀ ಟಿ.ಎ.ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಶಾಸಕರು ಅಧ್ಯಕ್ಷರಾಗಿಯೇ ಇರಲಿ. ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಅಧ್ಯಕ್ಷರನ್ನಾಗಿ ಮಾಡಲಿ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಈ ಸಮಿತಿಯನ್ನು ತಾಲ್ಲೂಕುವಾರು ಮಾಡದೇ, ವಿಧಾನಸಭಾ ಕ್ಷೇತ್ರವಾರು ಮಾಡಿದರೆ ಒಳ್ಳೆಯದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಈಗಲೂ ಅವಕಾಶವಿದೆ. ಅದಕ್ಕೆ ಅವರು ಬರೆದುಕೊಡಲಿ.

**( ಮುಂದು...)**

**(೯೦೯) 19.09.2022 02.00 LL-AK**

**ಶ್ರೀ ಜೆ.ಸಿ. ಮಾಧುಸ್ವಾಮಿ(ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)(ಮಾನ್ಯ ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮೊದಲನೆ ಮಾತಿಗೆ ಫಾರ್ಮ್ ನಂ.50 ಮತ್ತು 53 ನ್ನು ಮುಕ್ತಾಯ ಮಾಡದೇ, 57ನ್ನು ಪರಿಗಣಿಸಬಾರದೆಂದು ಕಟ್ಟುನಿಟ್ಟಾಗಿ ಸೂಚನೆಯನ್ನು ಕೊಟ್ಟಿದ್ದೇವೆ. ಅದರಿಂದಾಗಿ, ಅದು overlap ಆಗುವುದಿಲ್ಲ. ಫಾರ್ಮ್ ನಂ.57 ಪ್ರಸ್ತುತ ಚಾಲನೆಯಲ್ಲಿದೆ. ಹಾಗಾಗಿ, ಫಾರ್ಮ್ ನಂ.57ನಲ್ಲಿದ್ದಾಗ ಅದೇ ನಿಯಮದ ಕೆಳಗೆ ಯಾವುದೇ ಕಂಡೀಷನ್ ನ್ನು ಅದಲು ಬದಲು ಮಾಡದೇ ಅಥವಾ ತಿದ್ದುಪಡಿ ತರದೇ ಇನ್ನೊಂದು ವರ್ಷ ಅರ್ಜಿ ಹಾಕುವುದಕ್ಕೆ ಅವಕಾಶ ಕಲ್ಪಿಸಬೇಕು ಎನ್ನುವುದಷ್ಟೇ ಈ ವಿಧೇಯಕದಲ್ಲಿ ತಿದ್ದುಪಡಿಗೆ ತಂದಿರುವ ವಿಷಯ.

ಎರಡನೆಯದಾಗಿ, ಈಗಾಗಲೇ ಒರಿಜಿನಲ್ ಬಿಲ್‌ನಲ್ಲಿ ನಾವು ಕೆಲವನ್ನು ಹೇಳಿರುತ್ತೇವೆ. ಅದೇನೆಂದರೆ, ಬೆಂಗಳೂರು ನಗರ ಪ್ರದೇಶದಿಂದ 18 ಕಿಲೋ ಮೀಟರ್; ಬೇರೆ ನಗರ ಪ್ರದೇಶಗಳಿಂದ 10 ಕಿಲೋ ಮೀಟರ್; ಸಣ್ಣ-ಸಣ್ಣ ಪಟ್ಟಣ ಪಂಚಾಯಿತಿಗಳಿಂದ 5 ಕಿಲೋ ಮೀಟರ್; ಮುನಿಸಿಪಾಲಿಟಿಯಿಂದ 3 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಬಗರ್ ಹುಕುಂ ಯೋಜನೆಯಡಿಯಲ್ಲಿ ಭೂಮಿ ಮಂಜೂರು ಮಾಡುವುದಿಲ್ಲ, ಮಾಡಕೂಡದು ಎಂದು. ಜೊತೆಗೆ, ಬಗರ್ ಹುಕುಂ ಕಮಿಟಿಯಲ್ಲಿ ತಹಸೀಲ್ದಾರ್‌ರವರಿಗೆ ಅಂದರೆ, ಕಾರ್ಯದರ್ಶಿ ಯಾರು ಇರುತ್ತಾರೆ ಅವರಿಗೆ ಕಟ್ಟುನಿಟ್ಟಾದ ಸೂಚನೆಯನ್ನು ಕೊಟ್ಟಿರುತ್ತೇವೆ. ಅದರಂತೆ, ಇದು ಆಗಬೇಕಾದರೆ ಸಾರ್ವಜನಿಕ ವ್ಯವಸ್ಥೆಗೆ ಬೇಕಾಗಿರುವಷ್ಟು ಜಮೀನನ್ನು ಸಾಧ್ಯವಾದಷ್ಟು ಉಳಿಸಿ, ಅದು ಸ್ಮಶಾನ ಇರಬಹುದು, or any public purpose ಗೆ ಇರಬಹುದು, ಇದನ್ನು ಉಳಿಸಿಯೇ ಕೊಡಬೇಕು.

ಇದರ ಜೊತೆಗೆ, ಮುಂದೆ ಆಯಾ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾರಾದರೂ ದಾರಿ ಮಾಡಿಕೊಂಡು ಓಡಾಡುತ್ತಿದ್ದವರ ಹಿತರಕ್ಷಣೆ ಮಾಡಿ, ಜಮೀನನ್ನು ಮಂಜೂರು ಮಾಡಬೇಕೆಂದು ಒರಿಜಿನಲ್ ಕಾಯಿದೆಯಲ್ಲಿ ನಿಯಮಗಳನ್ನು ಮಾಡಿರುತ್ತೇವೆ. ಅದರಿಂದ ಯಾವುದೇ ಸಮಸ್ಯೆಗಳು ಇರುವುದಿಲ್ಲ. ಗೋಮಾಳಗಳನ್ನು ಕೊಡಬಾರದೆಂಬುದು ಸರ್ಕಾರ ಮತ್ತು ಕೋರ್ಟ್ ನೀತಿ. ಈ ವಿಷಯದಲ್ಲಿ ಕೋರ್ಟ್ ಸಹ, ಗೋಮಾಳಗಳನ್ನು ಮಂಜೂರು ಮಾಡಬಾರದೆಂದು ಬಹಳ heavy ಆಗಿ ಬಂದಿರುತ್ತದೆ. ಆದರೆ, ಅದರಲ್ಲಿ ಒಂದು relaxation ಕೊಟ್ಟಿರುತ್ತದೆ. ಅದೇನೆಂದರೆ, "However excess gomalas can be released". ಅದರ ಮುಂದಿನದನ್ನು ನಾನು ಹೇಳುವುದಿಲ್ಲ. ಹೆಚ್ಚುವರಿ ಗೋಮಾಳಗಳನ್ನು calculation ಮಾಡುವಾಗ Cattle Survey ಮಾಡುತ್ತೇವೆ. ಆದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವಂತಹ ಪ್ರದೇಶಗಳಲ್ಲಿ ರಾಸುಗಳು ಇರುವುದಿಲ್ಲ. Cattle Survey ಮಾಡಿ, ಇಷ್ಟು ರಾಸುವಿಗೆ ಇಷ್ಟು ಎಕರೆ ಗೋಮಾಳ ಮಾಡಬೇಕೆಂದು ಬರೆಯಬೇಕಾದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳದಂತಹ ಜಾಗದಲ್ಲಿ ಅಷ್ಟು ರಾಸುಗಳು ಇರುವುದಿಲ್ಲ. ಹಾಗಾಗಿ, ಸ್ವಲ್ಪ ರಿಲ್ಯಾಕ್ಸ್ ಮಾಡಿರುತ್ತೇವೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅಲ್ಲಿ cattle class ಇರುತ್ತದೆ.

**ಡಾ: ಕೆ. ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಆದರೆ, ಸ್ಮಶಾನಕ್ಕೆ ಸ್ವಲ್ಪ ಜಾಗವನ್ನು ಮೀಸಲಿಡಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಮಾನ್ಯ ಸಭಾಪತಿಯವರೇ, ನಾವು ಗೋಮಾಳವನ್ನು ಮಂಜೂರು ಮಾಡುತ್ತಿಲ್ಲ. ಮಾನ್ಯ ತಿಪ್ಪೇಸ್ವಾಮಿಯವರ ಪ್ರಶ್ನೆಗೆ ಉತ್ತರ ಹೇಳುವುದೇನೆಂದರೆ, ಡೀಮ್ಡ್ ಫಾರೆಸ್ಟ್ ನಮ್ಮ ರಾಜ್ಯದಲ್ಲಿ ಏನಿತ್ತು, ಅದರಲ್ಲಿ ೩ ಲಕ್ಷದ ೩೦ ಸಾವಿರ

ಹೆಕ್ಟೇರ್ ಮಾತ್ರ ಫಾರೆಸ್ಟ್ ನ್ನು ಅಟ್ರಾಕ್ಟ್ ಮಾಡುತ್ತದೆ. ಇನ್ನುಳಿದಿದ್ದು ಡೀಮ್ಡ್ ಫಾರೆಸ್ಟ್ ಅಲ್ಲ ಎಂದು ಈಗಾಗಲೇ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ನಾವು ಅಫಿಡೆವಿಟ್ ಹಾಕಿರುತ್ತೇವೆ. ಡೀಮ್ಡ್ ಫಾರೆಸ್ಟ್ ನೊಳಗೆ ಅಕಸ್ಮಾತ್ ಆಗಿ ಯಾರಾದರೂ ಬಗರ್ ಹುಕುಂ ಮಾಡಿದ್ದರೆ, ಅಕ್ರಮವಾಗಿ ಸಾಗುವಳಿ ಮಾಡುತ್ತಿರುವಂತಹ ಯಾರಾದರೂ ಬಡ ರೈತರಿದ್ದರೆ ಅವರಿಗೂ ಕೊಡಲಿಕ್ಕೆ ಮಂಜೂರು ಮಾಡಬಹುದು ಎಂದು ನಾವು ತೀರ್ಮಾನ ತೆಗೆದುಕೊಳ್ಳುತ್ತಿದ್ದೇವೆ. ಅದರಲ್ಲಿ ಈಗಾಗಲೇ ಒಂದನ್ನು ತೀರ್ಮಾನ ತೆಗೆದುಕೊಂಡಿದ್ದೇವೆ. Dwelling houses ಇದ್ದರೆ ನಿರ್ದಿಷ್ಟವಾಗಿ ಕೊಡಬಹುದು.

ಅದಲ್ಲದೇ, ಸೆಕ್ಷನ್ 3 ಮತ್ತು 4 ನಲ್ಲಿ 1978ನೇ ಇಸವಿಗಿಂತಲೂ ಯಾರಾದರೂ ಇದ್ದರೆ, even though it belongs to forest area; ಮಾನ್ಯ ತಿಪ್ಪೇಸ್ವಾಮಿಯವರು ಉಪ ವಿಭಾಗಾಧಿಕಾರಿಯಾಗಿದ್ದರಿಂದ ಅವರಿಗೆ ಈ ವಿಷಯ ಚೆನ್ನಾಗಿ ಗೊತ್ತಿರುತ್ತದೆ. The Assistant Commissioner's will be the authorities. ಆ ಜಮೀನನ್ನು ಕೊಡುವುದು ಅಥವಾ ಬಿಡುವುದನ್ನು ಅವರೇ ಪರಿಗಣಿಸಬಹುದೆಂದು ರೆವಿನ್ಯೂ ಕಾಯಿದೆಯಲ್ಲಿ ನಾವು ಸ್ಪಷ್ಟ ಮಾಡಿರುತ್ತೇವೆ. ಹಾಗಾಗಿ, ಬಗರ್ ಹುಕುಂ ನಲ್ಲಿ ಏನಾಗಿದೆ ಎಂದರೆ, ನಗರ ಪ್ರದೇಶದಲ್ಲಿ ಜಮೀನು ಮಂಜೂರು ಮಾಡಬಾರದೆಂಬ ಬಗ್ಗೆ ಬಹಳ ಸ್ಪಷ್ಟವಾಗಿದ್ದೇವೆ. ಊರು ಪಕ್ಕದಲ್ಲಿ ಬಂದು ಸಾರ್ವಜನಿಕ ಹಿತಾಸಕ್ತಿಗೆ ಬೇಕಾಗಿರುವುದು ಅಥವಾ ಕಾರ್ಯಕ್ರಮಗಳಿಗೆ ಬೇಕಾಗಿರುವ ಜಮೀನು ಇದ್ದರೆ, ಅದನ್ನು ಸಹ ನಿರ್ಬಂಧಿಸಿ ಎಂದು ಹೇಳಿರುತ್ತೇವೆ. ಅನಾವಶ್ಯಕವಾಗಿ, ಕೆಲವರು ತಲೆಮಾರುಗಳಿಂದ ಗೊತ್ತಿಲ್ಲದೇ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಬಂದಿರುವವರಿಗೆ ತೊಂದರೆ ಕೊಡುವುದು ಬೇಡವೆಂದು 4 ಎಕರೆ 38 ಗುಂಟೆಗಳಿಗೆ ಒಳಪಟ್ಟು ಅಂದರೆ, entire possession; ಅವರದ್ದು ಇರುವುದು ಮತ್ತು ನಾವು ಕೊಡುವುದು ಎರಡೂ ಸೇರಿ 4 ಎಕರೆ 38 ಗುಂಟೆಗೆ ಒಳಗೆ ಇರಬೇಕೆಂಬ ನಿಯಮಗಳನ್ನು ಪಾಲನೆ ಮಾಡಿಕೊಂಡು ಇವೊತ್ತಿನ ದಿವಸ ಜಮೀನನ್ನು ಮಂಜೂರು ಮಾಡುತ್ತಿದ್ದೇವೆ. ಹಾಗಾಗಿ, ಬಗರ್ ಹುಕುಂನಲ್ಲಿ ಬಹಳ ದುರುಪಯೋಗ ಆಗುವಂತಹ ಪ್ರಶ್ನೆ ಬರುವುದಿಲ್ಲ.

ಈ ಮಧ್ಯೆ "ಸೇಂದಿ ವನ" ಎಂದು ಇತ್ತು. ನಾವು ಮೊದಲನೆ ಬಗರ್ ಹುಕುಂ ಕಮಿಟಿ ಮಾಡಿದಾಗ ಸೇಂದಿ ವನ ಕೊಡಬಾರದು ಎಂದು ಇತ್ತು. ಆಮೇಲೆ ಅದನ್ನು ರಿಲ್ಯಾಕ್ಸ್ ಮಾಡಿದ್ದೇವೆ.

ನಾವು ಸೇಂದಿವನಗಳನ್ನು ಈಗ ಸ್ವಲ್ಪ liberal ಆಗಿ ಕೊಡುತ್ತಿದ್ದೇವೆ. ಮಾನ್ಯ ತಿಪ್ಪೇಸ್ವಾಮಿಯವರ ಮಾಹಿತಿಗೆ ಹೇಳುವುದೇನೆಂದರೆ, ಎಲ್ಲಾ ತಾಲ್ಲೂಕುಗಳಲ್ಲಿಯೂ ಸಹ ಬಗರ್ ಹುಕುಂ ಕಮಿಟಿಯನ್ನು ಮಾಡಲಾಗಿರುತ್ತದೆ. ಯಾವುದೂ ಬಾಕಿ ಇರುವುದಿಲ್ಲ. ಅದರಂತೆ, ಅವರು ಪ್ರೊಗ್ರೆಸ್‌ನಲ್ಲಿದ್ದಾರೆ. ಆದರೆ, ಸ್ವಲ್ಪ ಸರ್ವೆಯರ್‌ಗಳ ಕೊರತೆ ಇದ್ದು, ಅವರನ್ನು ಸಹ ಒದಗಿಸುವಂತಹ ಕೆಲಸ ಸಹ ಮಾಡಿ, ಆದಷ್ಟು ಬೇಗ ಕಡತಗಳನ್ನು ತಯಾರು ಮಾಡಿ ಎಂದು ಹೇಳುತ್ತಿದ್ದೇವೆ. ಡೀಮ್ಡ್ ಫಾರೆಸ್ಟ್ ನ್ನು ನಾವು ಈಗಾಗಲೇ ಅಫಿಡೆವಿಟ್ ಫೈಲ್ ಮಾಡಿ, ಗವರ್ನಮೆಂಟ್ ನೋಟಿಫಿಕೇಷನ್ ಇಶ್ಯೂ ಮಾಡಿದ್ದೇವೆ. It won't attract the characters of a forest. ಅದೆಲ್ಲಾ ರೆವಿನ್ಯೂ ಲ್ಯಾಂಡ್ ಎಂದು ಮಾಡಿದ್ದೇವೆ. ಅಲ್ಲಿ ಬೇರೆ ಯಾವುದೇ ಸಮಸ್ಯೆ ಇರುವುದಿಲ್ಲ. ಅದೇ ರೀತಿ ನಗರ ಪ್ರದೇಶಗಳಲ್ಲಿಯೂ ಸಹ ನಾವು ಬಹಳ ಸ್ಪಷ್ಟವಾಗಿದ್ದೇವೆ. ಅಂದರೆ, ಇಂತಿಷ್ಟು ಕಿಲೋಮೀಟರ್ ಗಿಂತ ಒಳಗೆ ಬಗರ್ ಹುಕುಂ ಯೋಜನೆಯಡಿಯಲ್ಲಿ ನಾವು ಜಮೀನು ಮಂಜೂರು ಮಾಡುವುದಿಲ್ಲವೆಂದು ಈಗಾಗಲೇ ಒರಿಜಿನಲ್ ಆಕ್ಟ್‌ನಲ್ಲಿ ಇರುವುದಿಲ್ಲವಾದ್ದರಿಂದ ಇದರಲ್ಲಿ ಯಾವುದೇ ಭಾದೆ ಇರುವುದಿಲ್ಲ. ಹಾಗಾಗಿ, ಇದನ್ನು ಪರ್ಯಾಲೋಚನೆ ಮಾಡಬೇಕೆಂದು ಕೋರುತ್ತೇನೆ.

**(ಗೊಂದಲ)**

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ಸದರಿ ಬಗರ್ ಹುಕುಂ ಕಮಿಟಿಯಲ್ಲಿ ಈಗಲೂ ಸಹ ಎಂ.ಎಲ್.ಸಿ.ಗಳನ್ನು ಸೇರ್ಪಡೆ ಮಾಡುವ ಅವಕಾಶ ಸರ್ಕಾರಕ್ಕಿರುತ್ತದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದು ಸರ್ಕಾರದ ಚಿಂತನೆಯಲ್ಲಿರುವುದಿಲ್ಲ. ಇಷ್ಟನ್ನು ಹೇಳಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ರಿಂದ 3 ರವೆರೆಗೆ

ಸಭಾಪತಿಯವರು:- ಪ್ರಸ್ತಾವ ಏನೆಂದರೆ,

"ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

ಸಭಾಪತಿಯವರು:- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ. ಮಾಧುಸ್ವಾಮಿ(ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)(ಮಾನ್ಯ ಕಂದಾಯ ಸಚಿವರ ಪರವಾಗಿ):-** ಮಾನ್ಯ

ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಸಭಾಪತಿಯವರು:- ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:-** ಈಗ ಸದನವನ್ನು 3 ಗಂಟೆ 15 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(910) 19-09-2022, 3.40, ಟಿಸಿಹೆಚ್-ವಿಕೆ** **(ಸಭಾಪತಿಯವರ ಉಪಸ್ಥಿತಿ)**

**(ಮಧ್ಯಾಹ್ನ 2 ಗಂಟೆ 06 ನಿಮಿಷಕ್ಕೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ತಾವು ನಿಯಮ 68 ರ ಮೇರೆಗೆ ಚರ್ಚೆ ಪ್ರಾರಂಭ ಮಾಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, Calling Attention ಸುಮಾರು ಐದಾರು ದಿವಸಗಳಿಂದ ಒಂದೇ ಸಮನೆ ಅಜೆಂಡಾದಲ್ಲಿ repeat ಆಗಿ ಬರುತ್ತಿದೆ. ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. . .

**ಡಾ.ವೈ.ಎ.ನಾರಾಯಣ ಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಂದಿರತಕ್ಕಂಥ ನಿಲುವಳಿ ಸೂಚನೆ ಮೇಲೆ ನಮ್ಮ ರಾಜ್ಯದಲ್ಲಿ ಆಗಿರತಕ್ಕಂಥ flood damage ಬಗ್ಗೆ ಸ್ವಲ್ಪ ಚರ್ಚೆಯಾಗಿದೆ. ಉತ್ತರ ಕೊಡುವುಕ್ಕೋಸ್ಕರ ಇವತ್ತು ಇನ್ನೂ ಸ್ವಲ್ಪ ಚರ್ಚೆ ಮಾಡಿ ಮುಗಿಸೋಣ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ನಮ್ಮ ಸದಸ್ಯರು ಬಹಳಷ್ಟು ಕಡಿಮೆ ಇದ್ದೇವೆ.

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಒಂದು ವಿಷಯವಾದರೂ ತಾರ್ಕಿಕ ಅಂತ್ಯಕ್ಕೆ ಬರಲಿ. ಮಾನ್ಯ ಸಲೀಂ ಅಹಮದ್ ರವರೇ, ತಾವೇಕೆ ಮಧ್ಯೆ ಬರುತ್ತಿದ್ದೀರಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಪ್ರಕಾಶ್ ಕೆ.ರಾಥೋಡ್, ಮಾನ್ಯ ಪಿ.ಆರ್.ರಮೇಶ್‌ರವರು ನಿಯಮ ೬೮ರ ಮೇಲಿನ ಚರ್ಚೆಯಲ್ಲಿ ಮಾತನಾಡಬೇಕಿದೆ.

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಉಳಿದ ಸದಸ್ಯರು ಮಾತನಾಡಿ ಮುಗಿಸಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಬೇರೆ ಯಾವ ಸದಸ್ಯರು ಮಾತನಾಡುವವರು ಇಲ್ಲ.

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮ್ಮ ಸದಸ್ಯರು ಮಾತನಾಡುತ್ತಾರೆ. ನಿಮ್ಮ ಸದಸ್ಯರುಗಳು ಮಾತನಾಡದೇ ಇರುವುದಕ್ಕೆ ಸಾಧ್ಯವೇ ಇಲ್ಲ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, Calling Attention ತೆಗೆದುಕೊಳ್ಳಿ.

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಿಮ್ಮ ಕಡೆಯವರು ಮಾತನಾಡದೇ ಇರುವುದಕ್ಕೆ ಸಾಧ್ಯವೇ ಇಲ್ಲ, ನಾವು ಮಾತನಾಡಿಸುತ್ತೇವೆ. ಆದರೆ ಇವತ್ತು ನನ್ನ request ಏನೆಂದರೆ, ತಾವು ಮಂಗಳವಾರವೇ ಅದನ್ನು ತಂದಿದ್ದೀರಿ; ಅದರ ಬಗ್ಗೆ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಈಗಾಗಲೇ ಅದರ ಬಗ್ಗೆ ಚರ್ಚೆಯಾಗಿದೆ.

ಶ್ರೀ ಕೆ.ಎ.ತಿಪ್ಪೇಸ್ವಾಮಿ:– ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, Calling Attention ತೆಗೆದುಕೊಳ್ಳಿ.

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್‌ರವರೇ, ತೆಗೆದುಕೊಳ್ಳುತ್ತೇನೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, Calling Attention ತೆಗೆದುಕೊಳ್ಳಿ. ನಾವು ನಿಯಮ–೬೮ ರ ಮೇಲೆ ಚರ್ಚೆ ಪ್ರಾರಂಭ ಮಾಡಿದ ನಂತರ ಅದು ಮುಗಿಯುವುದೇ ಇಲ್ಲ. ನೀವು ನಿಯಮ ೬೮ರ ಮೇಲೆ ಚರ್ಚೆ ತೆಗೆದುಕೊಂಡ ಮೇಲೆ ಗಮನ ಸೆಳೆಯುವ ಸೂಚನೆಯನ್ನು ಯಾವಾಗ ತೆಗೆದುಕೊಳ್ಳುವುದಕ್ಕೆ ಬರುತ್ತದೆ?

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರದೇ ಆ subject.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ನಾವು ನಿಯಮ ೬೮ರ ಮೇಲೆ ಚರ್ಚೆ ಪ್ರಾರಂಭ ಮಾಡಿದ ಮೇಲೆ ಇಡೀ ದಿನ ಅದಕ್ಕೆ ಸಮಯ ಆಗುತ್ತದೆ. ಹಾಗಾಗಿ, ತಾವು ಯಾವಾಗ ತೆಗೆದುಕೊಳ್ಳುತ್ತೀರಿ ಹೇಳಿ. ಅದನ್ನು ಏನಾದರೂ ಮಧ್ಯೆ ನಿಲ್ಲಿಸಿ ತೆಗೆದುಕೊಳ್ಳುತ್ತೀರಾ?

**(ಗೊಂದಲ)**

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಲೀಂ ಅಹಮದ್ ರವರೇ, ನಿಯಮ ೬೮ರ ಮೇಲೆ ಚರ್ಚೆ ಪ್ರಾರಂಭ ಮಾಡಿದ್ದೇ ನೀವು. ನಿಯಮ ೬೮ರ ಮೇಲೆ ಚರ್ಚೆ ಮುಗಿಸಿ, ಆಮೇಲೆ ಅದನ್ನು ನೋಡೋಣ.

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ನಿಯಮ ೬೮ರ ಮೇರೆಗೆ ಮುಂದುವರೆದ ಚರ್ಚೆ. ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ಮಾತನಾಡಿ.

## ೧೦.ನಿಯಮ ೬೮ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ

ವಿಷಯ:– ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹ ಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿಹೋಗಿದ್ದು, ಕೆರೆ ಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಬಗ್ಗೆ.

----

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈಗಾಗಲೇ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ವಿಶೇಷಗಳನ್ನು ಸದನಕ್ಕೆ ಮುಟ್ಟಿಸಿದ್ದಾರೆ. ಸದನದ ಮುಖಾಂತರ ಹೊರಗಡೆಗೂ ಕೂಡ ಈ ವಿಚಾರವನ್ನು ಮುಟ್ಟಿಸಿರತಕ್ಕಂಥದ್ದು ತಮಗೆಲ್ಲರಿಗೂ ಗೊತ್ತಿದೆ. ಸಾಮಾನ್ಯವಾಗಿ ಜೂನ್ ತಿಂಗಳಿನಲ್ಲಿ ಮಳೆಗಾಲ ಪ್ರಾರಂಭವಾಗಿ ಮಳೆಯಾಗುತ್ತಿತ್ತು. ಆದರೆ ಈಗ ಮಳೆಗಾಲ, ಚಳಿಗಾಲ ಎಂಬ ವ್ಯತ್ಯಾಸವೇ ಇಲ್ಲ. ಇಡೀ ವರ್ಷ ಧಾರಾಕಾರವಾಗಿ ಎಗ್ಗಿಲ್ಲದೆ ಸುರಿದ ಮಳೆಯಿಂದಾಗಿ ಜನಜೀವನ ಇಡೀ ರಾಜ್ಯದಾದ್ಯಂತ ತತ್ತರಿಸಿ ಹೋಗಿದೆ. ಅದು ಮಲೆನಾಡು ಜಿಲ್ಲೆ, ಕರಾವಳಿ ಮತ್ತು ಬಯಲು ಪ್ರದೇಶ ಎಂದೇನಿಲ್ಲ. ಈ

ಎಲ್ಲಾ ಭಾಗಗಳಲ್ಲೂ ಮಳೆಯಿಂದ ಆದಂತಹ ಹಾನಿಯ ವಿಚಾರದಲ್ಲಿ ಪರಿಹಾರ ಕೊಡುವಲ್ಲಿ ಸೆಂಟ್ರಲ್ ಟೀಂ ಕೂಡ ಬಂದು ವಿಶ್ಲೇಷಣೆ ಮಾಡಿ ಸಾವಿರಾರು ಕೋಟಿಗಳ ನಷ್ಟ ಆಗಿರತಕ್ಕಂಥ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದೆ. ಮನೆ ಬಿದ್ದುಹೋಗಿರತಕ್ಕಂಥದ್ದು, ಸಂಪೂರ್ಣವಾಗಿ ಮನೆಗೆ ಹಾನಿಯಾಗಿರತಕ್ಕಂಥದ್ದು, ಭಾಗಶಃ ಹಾನಿಯಾಗಿರತಕ್ಕಂಥದ್ದು ಮತ್ತು ಶೇ.25 ಭಾಗ ಹಾನಿಯಾಗಿರತಕ್ಕಂಥದ್ದನ್ನು ತಾವೇ ಉತ್ತರ ಕೂಡ ಕೊಟ್ಟಿದ್ದೀರಿ. ಅಷ್ಟು ಬಿಟ್ಟರೆ, ಪರಿಹಾರ ಕಾರ್ಯ ಬೇರೆ ಯಾವುದರಲ್ಲೂ ಕೂಡ ಗುಣಾತ್ಮಕವಾಗಿ ನಡೆದಿಲ್ಲ. ಉದಾಹರಣೆಗೆ ನಮ್ಮಲ್ಲಿ ರಸ್ತೆಗಳಿರಬಹುದು, ಸೇತುವೆಗಳಿರಬಹುದು, ಗುಡ್ಡಕುಸಿತ ಇರಬಹುದು ಅದು ಎಗ್ಗಿಲ್ಲದೇ ಆಗಿದೆ. 2018, 2019 ಮತ್ತು 2020ನೇ ಸಾಲಿನಲ್ಲಿ continuously ನಾವು ಮೂರು ವರ್ಷಗಳು ಆಗಿದೆಯೆಂದು ಹೇಳಬೇಕಾಗುತ್ತದೆ. ಕಳೆದ ಬಾರಿ ಮಳೆ ಹಾನಿಯಾದಂತಹ ಸಂದರ್ಭದಲ್ಲಿ ನಾನು ಅನೇಕ ಕೆಡಿಪಿ ಮೀಟಿಂಗ್‌ಗಳಲ್ಲೂ ಕೂಡ ಚರ್ಚೆ ಮಾಡಿದ್ದೇವೆ. ಆಸ್ತಿಗೆ ಹಾನಿಯಾದಂಥ ಸಂದರ್ಭಗಳಲ್ಲಿ ಭಾಗಶಃ ಪರಿಹಾರ ಕೊಟ್ಟಿದ್ದಾರೆ. ಗುಡ್ಡ ಕುಸಿತದಿಂದ ತೋಟಗಳು, ಜಮೀನಿಗಳನ್ನು ಕಳೆದುಕೊಂಡಂಥವರು ಬಹಳ ಜನ ಇದ್ದಾರೆ. ಈ ಕಡೆ ಮಳೆ ಬಂದರೆ ಆಸ್ತಿ ಡ್ರೈ ಆದ ನಂತರ, ಆ ಆಸ್ತಿ ಅಲ್ಲೇ ಇರುತ್ತದೆ. ಆದರೆ ಅಲ್ಲಿ ಇಡೀ ತೋಟವೇ ಮುಳುಗಿ ಹೋಗಿದೆ. ನಿಮಗೆಲ್ಲಾ ಗೊತ್ತಿರುವಂತೆ ಕಳಸ ಭಾಗದಲ್ಲಿ ಒಬ್ಬರು ಶ್ರೀ ಜೋಯಿಸ್‌ರವರ ಕುಟುಂಬವೇ ಸಂಪೂರ್ಣವಾಗಿ ಗುಡ್ಡ ಕುಸಿದು ಮನೆ ಸಹಿತ ನಾಪತ್ತೆಯಾಗಿದೆ. ಅವರ ಬಾಡಿ ಕೂಡ ಸಿಗಲಿಲ್ಲ. ಫಾರಿನ್‌ನಲ್ಲಿದ್ದ ಅವರ ಮಕ್ಕಳೆಲ್ಲಾ ಬಂದು ಹುಡುಕಿ ವರ್ಷಾನುಗಟ್ಟಲೆ ಇದ್ದು ವಾಪಸ್ಸು ಹೋಗಿದ್ದಾರೆ. ಅವರ ಕುಟುಂಬವೇ ಸರ್ವ ನಾಶವಾಯಿತು. ಮಾನ್ಯ ಪ್ರಾಣೇಶ್.ಎಂ.ಕೆ.ರವರು ಇವತ್ತು ಸದನದಲ್ಲಿ ಇಲ್ಲ. ಸರ್ಕಾರದವರು ಲಿಸ್ಟ್ ಮಾಡಿದ್ದಾರೆ. ಇವತ್ತಿಗೂ ಕೂಡ ಮೂಡಿಗೆರೆ ಭಾಗದಲ್ಲಿ ಮನೆಗಳು, ಆಸ್ತಿ ಮತ್ತು ತೋಟಗಳನ್ನು ಕಳೆದುಕೊಂಡಿದ್ದಾರೆ. ಆದರೆ ಇವತ್ತಿಗೂ ಕೂಡ ಅವರಿಗೆ ಬೇರೆ ಕಡೆ ಜಾಗವನ್ನು ಗುರುತು ಮಾಡಿಕೊಡಲು ಆಗಿಲ್ಲ. ಮಾನ್ಯ ಗೃಹ ಸಚಿವರಾದ ಆರಗ ಜ್ಞಾನೇಂದ್ರ ರವರು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು. ಅವರ ಅಧ್ಯಕ್ಷತೆಯಲ್ಲೂ ಕೂಡ ನಾವು ಕೆಡಿಪಿ ಮೀಟಿಂಗ್‌ಗಳನ್ನು ಅಟೆಂಡ್ ಮಾಡಿದ್ದೇವೆ. ಈಗಲೂ ಕೂಡ ಜಾಗ ಗುರುತಿಸುತ್ತಿದ್ದೇವೆಂದು ಜಿಲ್ಲಾಧಿಕಾರಿಯವರು ಹೇಳುತ್ತಾರೆ. ಕೆಲವು ಬಾರಿ ಏನಾಗುತ್ತದೆಂದರೆ,

ಅನೇಕ ವರ್ಷಗಳ ಸಂಬಂಧ, ಆ ಜಾಗದ ಸಂಬಂಧ ಇರುತ್ತದೆ. ಆ ಜಾಗದ ಅಕ್ಕಪಕ್ಕ ಎಲ್ಲೋ ಒಂದು ಕಡೆ ಕೊಡತಕ್ಕಂಥ ವ್ಯವಸ್ಥೆ ಆಗಬೇಕು. ಅಲ್ಲಿ ಮನೆಗಳಿವೆ, ಆದರೆ ತೋಟಗಳಿಲ್ಲ. ತೋಟಗಳಿವೆ, ಆದರೆ ಮನೆಗಳು ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಜಾಗಗಳನ್ನು ಗುರುತು ಮಾಡಿಕೊಟ್ಟಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ಕಳೆದ ಎರಡು ವರ್ಷಗಳಲ್ಲಿ ಆದಂತಹ ಅನಾಹುತದಲ್ಲಿ ಇವತ್ತಿಗೂ ಕೂಡ ಅವರಿಗೆ ಜಾಗ ಸಿಕ್ಕಿಲ್ಲವೆಂದು ಲಿಸ್ಟ್ ಕೂಡ ಇದೆ. ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಂದ ಮಾಹಿತಿ ತರಿಸಿಕೊಂಡರೆ ಸರ್ಕಾರಕ್ಕೆ ಗೊತ್ತಾಗುತ್ತದೆ. ಬಹಳಷ್ಟು ಜನ ಮನೆ ಕಳೆದುಕೊಂಡಿದ್ದಾರೆ. ಈಗಲೂ ಕೂಡ ಕೊಡುತ್ತೇವೆಂದು ಹೇಳುತ್ತಿದ್ದಾರೆ. 'ಮಳೆಯ ಆರ್ಭಟಕ್ಕೆ ನೆಲ ಕಚ್ಚಿದ ಕಾಫಿ' ಇದು ಪತ್ರಿಕೆಗಳಲ್ಲಿ ವರದಿಯಾಗಿರುವುದು ಮಾತ್ರವಲ್ಲದೇ ಇದು ಅಕ್ಷರಶಃ ಸತ್ಯ. ಕಳೆದ ಎರಡ್ಮೂರು ವರ್ಷಗಳಿಂದ all commercial crops completely ಇಲ್ಲ. ಅದು ಕಾಫಿ ಇರಬಹುದು, ಏಲಕ್ಕಿ ಇರಬಹುದು, ಮೆಣಸು ಇರಬಹುದು ಮತ್ತು ಬಾಳೆ ಬೆಳೆ ಕಂಪ್ಲೀಟ್ ಏನೂ ಉಳಿದಿಲ್ಲ. ಕಾಫಿ ಪ್ಲಾಂಟ್‌ನವರು ಉಳಿದಿದ್ದಾರೆ ಅಷ್ಟೇ. ಒಂದು ಕಾಲದಲ್ಲಿ ಕಾಫಿ ಪ್ಲಾಂಟರ್‌ಗಳೆಂದರೆ, ಅವರು ಆಗರ್ಭ ಶ್ರೀಮಂತರು. ಈಗ ತಾವೆಲ್ಲಾ ಏನು 'ಕಾಫಿ ಪ್ಲಾಂಟರ್' ಎಂದು ಏನು ಕರೆಯುತ್ತಿದ್ದೀರಿ. ಆ ಶ್ರೀಮಂತಿಕೆ ಇವತ್ತಿನ ದಿವಸ ಸರ್ವನಾಶವಾಗಿದೆ. ಇವತ್ತಿನ ದಿವಸ ಸಕಲೇಶಪುರ, ಚಿಕ್ಕಮಗಳೂರು ಮತ್ತು ಕೊಡಗು ಭಾಗದ ಕಾಫಿ ಬೆಳೆಗಾರರು ಬಹಳ ತತ್ತರಿಸಿ ಹೋಗಿದ್ದಾರೆ. ಸುಮಾರು ೨೦,೦೦೦ ಹೆಕ್ಟೇರ್ ಪ್ರದೇಶದಲ್ಲಿ ಚಿಕ್ಕಮಗಳೂರು ತಾಲ್ಲೂಕು ಒಂದರಲ್ಲೇ ಕಾಫಿ ನಷ್ಟ ಆಗಿದೆ. ಆಲೂರು ಒಂದರಲ್ಲೇ 12,೦೦೦ ಹೆಕ್ಟೇರ್ ಪ್ರದೇಶ ಕಾಫಿ ಬೆಳೆ ಹಾನಿಯಾಗಿದೆ. ಕೊಡಗಿನಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ಅಲ್ಲಿ ಇದ್ದವರಿಗೆ ಕಳೆದ ಮೂರ್ನಾಲ್ಕು ದಶಕಗಳಿಂದ ಇಂತಹ ಒಂದು ಅನಾಹುತ ಯಾರೂ ಕೂಡ ಕಂಡು ಕೇಳರಿಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ಕಾಲದಲ್ಲಿ ಕಾಫಿ ಬೆಳೆ ಸರ್ಕಾರಕ್ಕೆ highest revenue ತಂದು ಕೊಡುತ್ತಿತ್ತು. ಆದರೆ ಇವತ್ತಿನ ದಿವಸ ಅದು ಒಂದು ರೀತಿ ಕನಸಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ವಜ್ರ–ವೈಡೂರ್ಯಗಳನ್ನು ಬಳ್ಳದಲ್ಲಿ ಅಳೆಯುತ್ತಿದ್ದರೆಂದು ನಾವು ಪಾಠದಲ್ಲಿ ಓದಿದ್ದೇವೆ. ಆದರೆ ಇವತ್ತಿನ ದಿವಸ ಆ ರೀತಿ ರಾಗಿ–ಜೋಳವನ್ನೂ ಕೂಡ ಅಳೆಯುವಂತಿಲ್ಲ. ಆ ಪರಿಸ್ಥಿತಿ ಇದೆ. ನಾವು ಆ ಭಾಗದಿಂದಲೇ ಬಂದವರು. ಆದರೆ ಆ ರೀತಿ ವೈಭವ

ಇದ್ದಂತಹ ಪೆಪ್ಪರ್, ಕಾಫಿ, ಕಿತ್ತಳೆ ಹಣ್ಣುಗಳನ್ನು ಬೆಳೆಯುತ್ತಿದ್ದರು. ಈಗ ಆ ಬೆಳೆಗಳೆಲ್ಲಾ complete ಸರ್ವ ನಾಶವಾಗಿದೆ. ಇವತ್ತಿನ ದಿವಸ ನಾವು ಕೇಳುವುದಿಷ್ಟೇ, ಸರ್ಕಾರ ಕಣ್ತೆರೆದು ನೋಡಬೇಕಿದೆ. ಬ್ರೆಜಿಲ್‌ನಲ್ಲಿ highest ಕಾಫಿ ಬೆಳೆಯುತ್ತಾರೆ. ಅದು international crop. ಅದು international market ಕೊಟ್ಟಿರತಕ್ಕಂಥದ್ದು. ಇವತ್ತಿನ ದಿವಸ ತರಿಸಿಕೊಂಡು ನೋಡಿ. irrespective of ಹೆಕ್ಟೇರ್‌ಗೆ ಸೀಮಿತ ಮಾಡದೇ ಶೇ.4 ಬಡ್ಡಿ ದರದಲ್ಲಿ ಅಲ್ಲಿನ ಕಾಫಿ ಬೇಳೆಗಾರರಿಗೆ ಕೊಡುತ್ತಿದ್ದಾರೆ. ಆದರೆ ನಮ್ಮಲ್ಲಿ ಶೇ.10.5 ರಿಂದ ಶೇ.11 ಬಡ್ಡಿದರದಲ್ಲಿ ಸಿಗುತ್ತಿದೆ. ಬಡ್ಡಿ ದರದಲ್ಲಿ ಅವರಿಗೆ ಸ್ವಲ್ಪ ರಿಯಾಯಿತಿಯನ್ನು ಕೊಡಬೇಕಾಗುತ್ತದೆ. ಏಕೆಂದರೆ ಶೇ.95 ರಷ್ಟು ಕಾಫಿ ಬೆಳೆಗಾರರು ಸಾಲದ ಸುಳಿಯಲ್ಲಿ ಸಿಲುಕಿದ್ದಾರೆ. ಇವತ್ತಿನ ದಿವಸ ಕೋ-ಅಪರೇಟಿವ್ ಬ್ಯಾಂಕ್, ನ್ಯಾಷನಲೈಜ್ಡ್ ಬ್ಯಾಕಿನಲ್ಲಿ ಸಂಪೂರ್ಣವಾಗಿ ಮಿನಿಮ್ ಶೇ.40 NPA (Non-Performing Asset). ಈ ಶೇ.40 NPA ತೆಗೆಯಬೇಕು. ಅಲ್ಲಿಂದ ಆಚೆ ಬರಬೇಕಾಗಿದೆ.

**(ಮುಂದು...)**

**(911)19.9.2022/3.50/ಎಂ.ಎಂ-ಬಿ.ಎನ್.ಎಸ್**

**ಶ್ರೀ ಎಸ್.ಎಲ್. ಭೋಜೇಗೌಡ(ಮುಂದು):-**

ಅವರು ಅದರಿಂದ ಆಚೆ ಬರಬೇಕಾಗಿದೆ. ಅವರು ಆ ಸಾಲದ ಸುಳಿಯಿಂದ ಆಚೆ ಬಂದು ಮತ್ತೊಮ್ಮೆ ಕಾಫಿ ಕೃಷಿ ಮಾಡಬೇಕಾಗಿದೆ. ಮೊನ್ನೆ ದಿವಸ ಬಂದ ಮಳೆಗೆ; ಕಾಫಿ ಬೆಳೆ ಹೋದರೂ ಪೆಪ್ಪರ್‌ನಲ್ಲಿ ಏನಾದರೂ ಸಿಗುತ್ತದೆ ಎಂದುಕೊಂಡಿದ್ದರು. ಆದರೆ ಧಾರಾಕಾರ ಸುರಿದ ಮಳೆಯಲ್ಲಿ ಪೆಪ್ಪರ್ ಏನೂ ಉಳಿದಿಲ್ಲ. ಇದು ಮಾನ್ಯ ಗೃಹಸಚಿವರಿಗೆ ಗೊತ್ತಿದೆ. ನಮ್ಮ ಅಡಿಕೆ ತೋಟದಲ್ಲೆಲ್ಲಾ ಪೆಪ್ಪರ್ ಅನ್ನು ಬೆಳೆಯುತ್ತಿದ್ದಾರೆ. ನಮ್ಮಲ್ಲೂ ಇದನ್ನು ಬಹಳ ಬೆಳೆಯುತ್ತಿದ್ದಾರೆ. ಈಗ ಪೆಪ್ಪರ್ ಕೂಡ ಉಳಿದಿಲ್ಲ. ಇನ್ನು ಬೇರೆ internal crops ಯಾವುದೂ ಉಳಿದಿಲ್ಲ. ಒಂದು ಕಾಲದಲ್ಲಿ ಬಹಳ ತೊಂದರೆಯಾದಂತಹ ಅನೇಕ ಸಂದರ್ಭಗಳು ಕಾಫಿ ಬೆಳೆಗಾರರಿಗೆ ಹಾಗೂ ಬೇರೆ ಬೇರೆ ಬೆಳೆಗಾರರಿಗೆ

ಬಂದಿದೆ. ಅಂತಹ ಸಂದರ್ಭದಲ್ಲಿ ಸಿಲ್ವರ್ ಮರವನ್ನು ಮಾರಿ 5-6 ವರ್ಷ ಜೀವನ ಮಾಡಿದ್ದಾರೆ. ಇವತ್ತು ಆ ಸಿಲ್ವರ್ ಮರಕ್ಕೂ ಕೂಡ ಬೆಲೆ ಇಲ್ಲ. ಈ ಪರಿಸ್ಥಿತಿ ನಿರ್ಮಾಣವಾದರೆ ಕೃಷಿ ಬದುಕನ್ನೇ ಅವಲಂಬಿಸಿರುವ ಸಂದರ್ಭದಲ್ಲಿ ಅವರ ಪಾಡು ಏನಾಗಿರಬಹುದು ಎನ್ನುವುದನ್ನು ನಾವು ಊಹಿಸುವುದಕ್ಕೂ ಸಾಧ್ಯವಿಲ್ಲ. ಆ ರೀತಿ ಆಗಿದೆ. ಒಂದು ಕಡೆ ಕಾಫಿ ಬೆಳೆಗಾರರ ಪರಿಸ್ಥಿತಿ ಈ ರೀತಿಯಾಗಿದ್ದರೆ, ಇನ್ನೊಂದು ಕಡೆ ಬಯಲು ಭಾಗಕ್ಕೆ ಬಂದರೆ horticulture crop ಸಂಪೂರ್ಣವಾಗಿ ಧ್ವಂಸವಾಗಿದೆ. Dr. K. Sudhakar hails from Kolar district. ಕೋಲಾರ ಜಿಲ್ಲೆಯಲ್ಲಿ highest tomato crop, ಬೇರೆ ಬೇರೆ ತೋಟಗಾರಿಕೆ ಬೆಳೆಗಳನ್ನು; ಮಾವು ಬೆಳೆಯುವಂತಹ ಜಿಲ್ಲೆ ಚಿಕ್ಕಬಳ್ಳಾಪುರ ಜಿಲ್ಲೆ. ಈ ಮಳೆಗೆ ಅಲ್ಲಿ ಕೂಡ ಏನೂ ಉಳಿದಿಲ್ಲ. ಅಂದರೆ ನಮ್ಮ ಪರಿಸ್ಥಿತಿ ಏನಾಗಿರಬಹುದು? ಈ ಸಲದ ಸರಾಸರಿ ಮಳೆಯನ್ನು ತೆಗೆದರೆ ನಮಗೆ ಒಂದು ದಿನಕ್ಕೆ ಬೀಳುವಂತಹ ಮಳೆ ಇಲ್ಲಿ ಒಂದು ತಿಂಗಳು ಬೀಳುತ್ತದೆ. ಹಾಗಾಗಿ ತೋಟಗಾರಿಕೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. Agriculture crop, ಬೇಳೆಕಾಳುಗಳು ಯಾವುದೂ ಉಳಿದಿಲ್ಲ. ಭತ್ತದ ಬೆಳೆಗೆ ಈಗ ನಾಟಿಯನ್ನು ಪ್ರಾರಂಭ ಮಾಡುತ್ತಿದ್ದಾರೆ. ಆ ಗದ್ದೆಯನ್ನು ಕ್ಲೀನ್ ಮಾಡುವುದಕ್ಕೆ ಪರಿಸ್ಥಿತಿ ಏನಾಗಿದೆಯೆಂದರೆ, ಪ್ರವಾಹ ಬಂದು ಗದ್ದೆಯೆಲ್ಲಾ ಮರಳಿನಿಂದ ಆವೃತವಾಗಿದೆ. ಆ ಗದ್ದೆಯನ್ನು ಕ್ಲೀನ್ ಮಾಡಬೇಕು. ಕ್ಲೀನ್ ಮಾಡುವುದಕ್ಕೆ ಅವರ ಕೈಯಲ್ಲಿ ತಾಕತ್ತಿಲ್ಲ. ಭತ್ತ ಬೆಳೆಯುವುದು ಮರೆತು ಹೋಗಿದೆ. ಎಲ್ಲಿಯವರೆಗೆ ನಮ್ಮ ಮಕ್ಕಳಿಗೆ, ಯುವ ಪೀಳಿಗೆಗೆ ಕೃಷಿ ಲಾಭದಾಯಕ ಎಂದು ತೋರಿಸಿಕೊಡುವುದಕ್ಕಾಗುವುದಿಲ್ಲವೋ ಅಲ್ಲಿಯವರೆಗೆ ಕೃಷಿಕರ ಮುಂದಿನ ಜೀವನ ಬಹಳ ಕಷ್ಟವಿದೆ. ಮಾನ್ಯ ಗೃಹ ಸಚಿವರು ಹೇಳಲಿ. ಅವರ ಮನೆಯ ಸುತ್ತ ಮುತ್ತ ಸಾವಿರಾರು ಎಕರೆಯಲ್ಲಿ ಭತ್ತ ಬೆಳೆಯುತ್ತಿದ್ದುದರಿಂದ ಆ ಭಾಗವನ್ನು ಭತ್ತದ ಕಣಜವೆಂದೇ ಹೇಳಬಹುದು. ಭತ್ತದ ಗದ್ದೆಗಳನ್ನು ನೋಡಿದರೆ ಹಸಿರು ಹುಲ್ಲನ್ನು ಹಾಸಿದಂತಿರುತ್ತಿತ್ತು. ಇವತ್ತು ಅವರ ಮನೆಯ ಸುತ್ತ-ಮುತ್ತ ಯಾರಾದರೂ ಭತ್ತವನ್ನು ಬೆಳೆಯುತ್ತಾರೆಯೇ ಕೇಳಿ; ಬೆಳೆಯುವುದಕ್ಕಾಗುತ್ತಿಲ್ಲ. ಮನೆಗಾದರೂ ಬೆಳೆಯುತ್ತಿದ್ದರು, ಅದನ್ನೂ ಬಿಟ್ಟುಬಿಟ್ಟರು. ಹಣ ಕೊಟ್ಟರೆ ಭತ್ತ ಅಥವಾ ಅಕ್ಕಿಯೇ ಸಿಗುತ್ತದೆ, ಅದನ್ನೇ ತೆಗೆದುಕೊಳ್ಳೋಣ ಎಂದು ಬೆಳೆಯುವುದನ್ನೆ ಬಿಟ್ಟರು. Food grains

problem ಈ ರೀತಿ severe ಆಗಿದೆ. ನಮ್ಮ ಕೃಷಿ ಅಧಿಕಾರಿಗಳಿಗೆ ಮೀಟಿಂಗ್‌ನಲ್ಲಿ ಕುಳಿತುಕೊಂಡಾಗ, 'please tell me as to what is the exact loss' ಎಂದರೆ, 'ನಾವಿನ್ನೂ ಫೀಲ್ಡ್‌ಗೆ ಹೋಗಿಲ್ಲ, ಹೋಗುತ್ತಿದ್ದೇವೆ' ಎಂದು ಹೇಳುತ್ತಾರೆ. ಆಗ ನಾನು ಹೇಳಿದೆ; ಅಲ್ಲಿ ಮಾನ್ಯ ಸಚಿವರಾದ ಭೈರತಿ ಬಸವರಾಜ್ ಮತ್ತು ಜಿಲ್ಲಾಧಿಕಾರಿಗಳೆಲ್ಲಾ ಇದ್ದರು. ಇಷ್ಟು ಅನಾಹುತವಾಗಿದೆ, ಜನಜೀವನ ಅಸ್ತವ್ಯಸ್ತವಾಗಿದೆ, ಇಷ್ಟು ಅಸ್ತವ್ಯಸ್ತವಾಗಿರುವಂತಹ ಸಂದರ್ಭದಲ್ಲಿ ನಿಮ್ಮಿಂದ 'total loss' ಎಷ್ಟು ಎಂದು ನಿಮಗೆ ಹೇಳುವುದಕ್ಕೆ ಬರುವುದಿಲ್ಲವಲ್ಲಾ, ಬಾಯಿ ಬಿಟ್ಟು 'total loss' ಎಷ್ಟು ಎಂದು ಹೇಳಬೇಕಲ್ಲವೇ. ನಿಮ್ಮಿಂದ ಅದನ್ನು ಭರಿಸುವುದಕ್ಕಾಗುವುದಿಲ್ಲ. ನಾನು ಈ ಸರ್ಕಾರ ಎಂದು ಹೇಳುವುದಿಲ್ಲ. ಯಾವುದೇ ಸರ್ಕಾರ ಇದ್ದರೂ ಸಹ ಇಂತಹ calamity ಯಲ್ಲಿ ಜನರ ರಕ್ಷಣೆಯನ್ನು ಎಷ್ಟು ಮಾಡಬಹುದೋ ಅಷ್ಟನ್ನು ಮಾಡುವುದನ್ನು ಬಿಟ್ಟರೆ ಸಂಪೂರ್ಣವಾಗಿ ಮಾಡುವುದಕ್ಕೆ ಆಗುವುದಿಲ್ಲ. ಆ ರೀತಿಯ calamity ಯಿಂದ ಪ್ರಕೃತಿ ನಮ್ಮ ಮೇಲೆ ಮುನಿಸಿಕೊಂಡು ಇವತ್ತು ಅಷ್ಟೊಂದು ಅಧ್ವಾನವಾಗಿದೆ. ನಾವು ಅವರಿಗೆ ಮತ್ತೆ ಶಕ್ತಿಯನ್ನು ತುಂಬಬೇಕಲ್ಲವೇ? "ರೈತರು ನಮ್ಮ ಜೀವಾಳ" ಎನ್ನುತ್ತೇವೆ. "ರೈತ ಸತ್ತರೆ ಈ ದೇಶ ಉಳಿಯುವುದಿಲ್ಲ" ಎಂದು ಹೇಳುತ್ತೇವೆ. ಏನು ಮಾಡಬೇಕೆಂದು ಹೇಳಿ. ಈ ರೈತರಿಗೆ ಮತ್ತೆ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕಲ್ಲವೆ. "ನೀವು ಹೆದರಬೇಡಿ, ನಿಮ್ಮ ಜೊತೆ ನಾವಿದ್ದೇವೆ" ಎಂದು ತೋರಿಸಿಕೊಳ್ಳುವ ಕೆಲಸ ಇವತ್ತು ಸರ್ಕಾರದಿಂದ ಅನಿವಾರ್ಯವಾಗಿ ಆಗಬೇಕಾಗಿದೆ. ಅದು ಕಾಫಿ ಬೆಳೆಗಾರರಿರಲಿ; ಅಡಿಕೆ ಬೆಳೆಗಾರರು ಉತ್ತಮವಾಗಿದ್ದಾರೆ. ನಾನು ಎಲ್ಲರನ್ನೂ ಸಂತೆಗೆ ಹೋಗಿ ಎಣ್ಣೆ ಬಾಟಲಿಯನ್ನು ಹೊಡೆದುಕೊಂಡವರೂ ಒಂದೇ, ತೆಂಗಿನಕಾಯಿ ಹೊಡೆದುಕೊಂಡವನೂ ಒಂದೇ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಅಡಿಕೆ ಬೆಳೆಗಾರರು ಇದ್ದಾರೆ, ನಾನೂ ಸಹ ಅಡಿಕೆ ಬೆಳೆಗಾರನಿದ್ದೇನೆ. ಸಂತೆಗೆ ಯಾರೋ ಹೋಗಿದ್ದರಂತೆ, ಸಂತೆಗೆ ಹೋಗಿ ಎಣ್ಣೆ ತೆಗೆದುಕೊಂಡು ಬರುತ್ತಿದ್ದರಂತೆ ಆಗ ಬಾಟಲಿ ಬಿದ್ದು ಒಡೆದು ಹೋಗಿದೆ. ಅವನು ಬಾಯಿ ಬಡಿದುಕೊಳ್ಳುತ್ತಿದ್ದಾನೆ. ಇನ್ನೊಬ್ಬ ಪಕ್ಕದಲ್ಲಿ ತೆಂಗಿನಕಾಯಿ ತೆಗೆದುಕೊಂಡು ಬಂದವನು

ತೆಂಗಿನಕಾಯಿ ಬಿತ್ತು ಎಂದು ಅವನೂ ಬಾಯಿ ಬಡಿದುಕೊಂಡನಂತೆ. ಆ ಪರಿಸ್ಥಿತಿ ಇದೆ. ಅಡಿಕೆ ಬೆಳೆಗಾರರನ್ನು ಹೊರತುಪಡಿಸಿ ಬಾಕಿ ಎಲ್ಲಾ ಬೆಳೆಗಾರರೂ ಬಹಳ ಸಂಕಷ್ಟದಲ್ಲಿದ್ದಾರೆ.

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಯಾವುದಕ್ಕೆ ಬೆಲೆ ಅತ್ಯಂತ ಜಾಸ್ತಿಯಾಗುತ್ತದೆಯೋ ಅದು ಶಾಪ ಏನಿದೆಯೋ ಗೊತ್ತಿಲ್ಲ. ಅದೆಲ್ಲದಕ್ಕೂ ರೋಗವೋ ಅಥವಾ ಇನ್ನೊಂದೋ ಬಂದು ಹಾಳಾಗಿ ಹೋಗುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಡಿಕೆಗೆ ರೇಟ್ ಜಾಸ್ತಿ ಇದೆ. ಆದರೆ ಎಲೆಚುಕ್ಕೆ ರೋಗ ಬಂದು ತೋಟ-ತೋಟಗಳೇ ಸಾಯುತ್ತಿವೆ. ಅವರ ಕಡೆ yellow leaf disease ಬಂದಿದೆ. ಅದು ಅಡಿಕೆ ಬೆಳೆಗೆ ಶಾಪ. ಈ ಪರಿಸ್ಥಿತಿ ಆಗುತ್ತಿದೆ. ಕೃಷಿಗೂ ಮತ್ತು ಬೆಲೆಗೂ ಅದೇನು ಸಾಮ್ಯತೆ ಇದೆಯೋ ಗೊತ್ತಿಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುವುದು ಸರಿಯಾಗಿದೆ.

**ಡಾ: ತೇಜಸ್ವಿನಿ ಗೌಡ:-** ಅಡಿಕೆ ಬೆಳೆಗಾರರು ತೊಂದರೆಯಲ್ಲಿದ್ದಾರೆ ಎಂದು ಮಾನ್ಯ ಗೃಹ ಸಚಿವರು ಗಮನ ಸೆಳೆದಿದ್ದಾರೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ನಾವು ಎಲ್ಲರನ್ನೂ ಒಂದು ಮಾಡುವುದಕ್ಕೆ ಆಗುವುದಿಲ್ಲ. ಚನ್ನಗಿರಿ, ದಾವಣಗೆರೆ ಭಾಗ, ತುಮಕೂರು ಭಾಗ, ನಮ್ಮ ಕಡೂರು ತಾಲ್ಲೂಕಿನಲ್ಲಿ, ತರೀಕೆರೆ ತಾಲ್ಲೂಕಿನಲ್ಲಿ, ಶಿವಮೊಗ್ಗ ಭಾಗ, ತೀರ್ಥಹಳ್ಳಿಯಿಂದ ಸ್ವಲ್ಪ ಈಚೆಗೆ, ಶಿವಮೊಗ್ಗ ಸುತ್ತ ಮುತ್ತ ಇರುವಂತಹ ಭಾಗಗಳಲ್ಲಿ ಅಡಿಕೆ ಬೆಳೆಗಾರರು ಬಹಳ ಚೆನ್ನಾಗಿದ್ದಾರೆ. ಇಲ್ಲವೆಂದು ಹೇಳುವುದಿಲ್ಲ. ಕೊಪ್ಪ, ಎನ್.ಆರ್. ಪುರ, ಶೃಂಗೇರಿಯಲ್ಲಿ ಹಳದಿ ಎಲೆ ರೋಗ ಬಂದು ಅವರು ಅಡಿಕೆಯನ್ನು ವಾಪಸ್ replant ಮಾಡುತ್ತಿದ್ದಾರೆ. Central team ಎಲ್ಲಾ ಬಂದು ಇಂತಹದ್ದನ್ನು ಮಾಡಬೇಕು, ತೆಗೆಯಬೇಕು ಎಂದರೆ ಅದು ಸಾಧ್ಯವೇ? ಅಡಿಕೆ ಬೇರು ತೆಗೆಯಬೇಕಾದರೆ ಒಂದು ಎಕರೆಗೆ ಕಡಿಮೆ ಎಂದರೂ ಒಂದು ಲಕ್ಷ ರೂಪಾಯಿಗಳು ಬೇಕು. ಅದನ್ನು ಕ್ಲೀನ್ ಮಾಡಿ ಇನ್ನೊಂದು ಪರ್ಯಾಯ ಬೆಳೆ ಬೆಳೆಯಬೇಕೆಂದರೆ ಅಷ್ಟು ಖರ್ಚಾಗುತ್ತದೆ. ಅದು ಕೂಡ ದುರ್ಲಭವಾಗಿದೆ. ಈ ಪರಿಸ್ಥಿತಿಯಲ್ಲಿ

ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇಡೀ ರಾಜ್ಯದಲ್ಲಿ 11 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬೆಳೆ ಹೋಗಿದೆ ಎಂದು ನೀವು estimate ಮಾಡಿದ್ದೀರಿ. ಅದು ಅಕ್ಷರಶಃ ಸತ್ಯ. ತರಕಾರಿ ಬೆಲೆ ಇನ್ನು ಸ್ವಲ್ಪ ದಿವಸಕ್ಕೆ ಗಗನಕ್ಕೆ ಹೋಗುತ್ತದೆ ನೋಡಿ. ಮಾರುಕಟ್ಟೆಗೆ ತರಕಾರಿಗಳು ಸರಿಯಾದ ರೀತಿಯಲ್ಲಿ ಬರಬೇಕಾದರೆ ಇನ್ನೂ 3-4 ತಿಂಗಳುಗಳು ಬೇಕು. ಈಗ ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇನ್ನು ದವಸ ಧಾನ್ಯಗಳಲ್ಲಿ ತೊಗರಿ ಬೆಳೆಯಿಂದ ಹಿಡಿದು ಯಾವ ಬೆಳೆಯೂ ಉಳಿದುಕೊಂಡಿಲ್ಲ. ಹತ್ತಿ ಬೆಳೆ ಸಂಪೂರ್ಣವಾಗಿ ಹೋಗಿದೆ. ಈ ಪರಿಸ್ಥಿತಿಯಲ್ಲಿ ನೀವು ವಿಶ್ಲೇಷಣೆ ಮಾಡಿ ಇಷ್ಟು ನಷ್ಟವಾಗಿದೆ, ಇಷ್ಟು ನಷ್ಟವನ್ನು ಕೊಡಿ ಎಂದು ಸರ್ಕಾರಕ್ಕೆ ಕೇಳಿದರೆ practically it is impossible. ಸಾಧ್ಯವೇ ಇಲ್ಲ. ನಾನು ಮೊನ್ನೆ ದಿವಸ ಮೀಟಿಂಗ್‌ನಲ್ಲಿ ಕೂಡ ಹೇಳಿದೆ. ಒಂದು ರಸ್ತೆ ಹಾಳಾಗುತ್ತದೆ. ಕಳಪೆ ಕಾಮಗಾರಿ ಮಾಡಿದಾಗ ಇಂತಹ ಮಳೆಗಾಲದಲ್ಲಿ ರಸ್ತೆ ಹಾಳಾಗುತ್ತದೆ. ಬ್ರಿಡ್ಜ್ ಕೂಡ ಕೊಚ್ಚಿ ಹೋಗಿದೆ. ಇಂತಹ ಕಡೆ ಗುಡ್ಡ ಕುಸಿಯುತ್ತದೆ. ಕಳೆದ ವರ್ಷ ಯಾವ ಜಾಗದಲ್ಲಿ ಗುಡ್ಡ ಕುಸಿಯಿತೋ; ಕಳಸ, ಜಯಪುರ ರಸ್ತೆಯಲ್ಲಿ ರಸ್ತೆ ಚೆನ್ನಾಗಿದೆ, ಕಳಸ-ಮಾಗುಂಡಿ ರಸ್ತೆಯಲ್ಲಿ ಕಳೆದ ವರ್ಷ ಏನು ಗುಡ್ಡ ಕುಸಿದಿತ್ತೋ, ಅದೇ ಜಾಗದಲ್ಲಿ ಪುನಃ ಗುಡ್ಡ ಕುಸಿಯುತ್ತದೆ ಎಂದರೆ, ನಮ್ಮ ಇಂಜಿನಿಯರುಗಳು ಏನು ಮಾಡುತ್ತಿದ್ದಾರೆ? ಬೇರೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಅದಕ್ಕೇನಾದರೂ ಒಂದು permanent source ಮಾಡಬೇಕಲ್ಲವೇ? ಪ್ರತಿ ವರ್ಷ ನೀವು ಇದೇ ಪರಿಹಾರ ಕೊಡುವ ಕೆಲಸವನ್ನು ಮಾಡುವುದೇ? ಈ ವರ್ಷ ಈ ರೀತಿಯ ಮಳೆಗಾಲ ಬಂದಿದೆ. ಮಳೆಗಾಲದಲ್ಲಿ ಈ ಭಾಗದಲ್ಲಿ ಈ ರೀತಿ ಗುಡ್ಡ ಕುಸಿದಿದೆ. ಇದಕ್ಕೇನಾದರೂ ಒಂದು ವ್ಯವಸ್ಥೆ ಮಾಡಬೇಕಲ್ಲವೇ? ಆ ಕೆಲಸವನ್ನು ತುರ್ತಾಗಿ ಮಾಡಬೇಕಾಗಿದೆ. ಅದಕ್ಕೆ permanent source ಆಗಿ ಏನಾದರೂ ಮಾಡಬೇಕಾಗಿದೆ. ಇದರ ಜೊತೆಗೆ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ, ನಾನು ಅನೇಕ ಸಲ ಮಾತನಾಡಿದ್ದೇನೆ, ಅಕೇಶಿಯಾ ಮತ್ತು ನೀಲಗಿರಿ ಮರಗಳನ್ನು ನಮ್ಮ ಮಲೆನಾಡಿನಲ್ಲಿ ಇಡೀ ಜಾಗದಲ್ಲಿ ಪೂರ್ತಿಯಾಗಿ ಹಾಕಿದ್ದಾರೆ. ಇವರ ಮನೆ ಹಾಳಾಗಿ ಹೋಗಲಿ, ಆ ಅರಣ್ಯ ಅಧಿಕಾರಿಗಳಿಗೆ ಏನಾಗಿದೆಯೋ ಗೊತ್ತಿಲ್ಲ. ನಾನು ಇಂತಹ ಮಾತನ್ನು ಹೇಳಿದ್ದಕ್ಕೆ ಬೇಜಾರಾಗಬೇಡಿ. ನಾನು ಬಹಳ ನೊಂದು ಹೇಳುತ್ತಿದ್ದೇನೆ. ಎಲ್ಲಾದರೂ ಉಂಟೇ? ಅಕೇಶಿಯಾ

ಮತ್ತು ನೀಲಗಿರಿ ಮರಗಳನ್ನು ಅಲ್ಲಿ ಹಾಕಬಹುದೇ? ಯಥೇಚ್ಛವಾಗಿ ಮಳೆಯಾಗುವಂತಹ ಜಾಗದಲ್ಲಿ ಒಳ್ಳೆಯ perennial ಮರಗಳನ್ನು, ಬೆಳೆಗಳನ್ನು ಹಾಕಬೇಕಲ್ಲವೇ? ಎಲ್ಲಿಯವರೆಗೆ ಆಗಿದೆ ಎಂದರೆ, ಆಗುಂಬೆ ಘಾಟ್ ಇರಬಹುದು, ಶಿರಾಡಿ ಘಾಟ್ ಇರಬಹುದು, ಚಾರ್ಮಡಿ ಘಾಟ್ ಇರಬಹುದು ಅಲ್ಲೆಲ್ಲಾ ಮಂಗಗಳು ರಸ್ತೆಯಲ್ಲಿ ಬಂದು ಕುಳಿತುಕೊಳ್ಳುತ್ತವೆ. ದೇವಸ್ಥಾನಕ್ಕೆ ಹೋಗಿ ಬಂದವರು ಹಣ್ಣು ಕಾಯಿಗಳನ್ನು ತಿನ್ನುವುದಕ್ಕೆ ಹಾಕುತ್ತಾರೆ ಎಂದು ಕಟ್ಟೆಯ ಮೇಲೆ ಬಂದು ಕುಳಿತುಕೊಳ್ಳುತ್ತವೆ. ಪ್ರಾಣಿ ಪಕ್ಷಿಗಳಿಗೆ ತಿನ್ನುವುದಕ್ಕೆ ಆಹಾರ ಇಲ್ಲದಂತಹ ಪರಿಸ್ಥಿತಿ ಆಗಿದೆ. ಇದಕ್ಕೇನಾದರೂ ಹಣ್ಣಿನ ಗಿಡಗಳನ್ನು ಬೆಳೆಯಬೇಕೆಂದು ಯೋಜನೆ ಮಾಡಬೇಕು. ಅಕೇಶಿಯಾ ಮತ್ತು ನೀಲಗಿರಿ ಬೆಳೆಗಳನ್ನು ಸಂಪೂರ್ಣವಾಗಿ ತೆಗೆಯಬೇಕು. ಈ ರಾಜ್ಯದಲ್ಲಿ ಅದನ್ನು ನಿರ್ಮೂಲನೆ ಮಾಡಬೇಕೆಂದು ಸರ್ಕಾರ ಹೇಳಿ ಈಗಾಗಲೇ 4-5 ವರ್ಷವಾಯಿತು. ಇವತ್ತಿನವರೆಗೆ ಅದರ ಬಗ್ಗೆ ಮನಸ್ಸು ಮಾಡಿಲ್ಲ. ಇದು ಒಂದು ಮುಖ್ಯ ಕಾರಣವಾಗಿದೆ. ಹಣ್ಣಿನ ಗಿಡಗಳನ್ನು ಮತ್ತು ಬೆಲೆಬಾಳುವಂತಹ ಗಿಡಗಳನ್ನು ಬೆಳೆಸುವಂತಹ ಕೆಲಸ ಅರಣ್ಯ ಇಲಾಖೆಯಿಂದ ಆಗಬೇಕು. ಈ ವರ್ಷ 10 ಕೋಟಿ ಗಿಡಗಳನ್ನು ನೆಟ್ಟಿದ್ದೇವೆ ಎಂದು ಹೇಳುತ್ತಾರೆ. ಎಲ್ಲಿ ನೆಟ್ಟಿದ್ದಾರೆ? ಎಲ್ಲಿ ಬೆಳೆದಿದ್ದಾರೆ? ಪ್ರತಿ ವರ್ಷ 10 ಕೋಟಿ ಗಿಡಗಳನ್ನು ನೆಟ್ಟರೆ ಏನಾಗುತ್ತದೆ? ಜನಸಂಖ್ಯೆಗಿಂತ ಮರಗಳೇ ಜಾಸ್ತಿ ಇರಬೇಕಾಗಿತ್ತು. ಆದರೆ, ಎಲ್ಲಿ ಬೆಳೆದಿದ್ದಾರೆ ಎಂಬುದನ್ನು ತೋರಿಸಿ! ಕಳೆದ ವರ್ಷ ಏನನ್ನು ಬೆಳೆಯಲಾಗಿದೆ? ಅಕೌಂಟ್ ಮಾತ್ರ ಇದೆ. ದಯಮಾಡಿ ಪರಿಸರವನ್ನು ಉಳಿಸುವಂತಹ ಕೆಲಸ ಆಗಬೇಕಾಗಿದೆ.

ಇನ್ನೊಂದು ಹೇಳುವುದಾದರೆ, ಬೆಂಗಳೂರು ನಮಗೆ ಅಷ್ಟೊಂದು ಸಂಬಂಧ ಇಲ್ಲದಿದ್ದರೂ ಕೂಡ; ನನಗೆ ಬೆಂಗಳೂರಿನಲ್ಲಿ ಮನೆ ಇದೆ. ಸಂಬಂಧ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಬೆಂಗಳೂರಿನಲ್ಲಿ ಆದಂತಹ ಅನಾಹುತಗಳನ್ನು ನಾನು ದೂರದರ್ಶನದಲ್ಲಿ ಮತ್ತು ಅತ್ಯಂತ ಹತ್ತಿರದಲ್ಲಿ ಕೂಡ ನೋಡಿದ್ದೇನೆ.

**(ಮುಂದು...)**

(912) 19-09-2022 KH-BNS 4-00

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):-**

ಹಾಗಾಗಿ ಈ ರಾಜಕಾಲುವೆ ಒತ್ತುವರಿ ವಿಚಾರದಲ್ಲಿ ಪ್ರತಿ ವರ್ಷ ಮಾತನಾಡುತ್ತೇವೆ. ಪ್ರತಿ ವರ್ಷ ಮಾತನಾಡಿದಂತಹ ಸಂದರ್ಭದಲ್ಲಿ ಇದಕ್ಕೆ ಏನು ಪರಿಹಾರವನ್ನು ನಮ್ಮ ಅಧಿಕಾರಿಗಳು ಕಂಡುಹಿಡಿದಿದ್ದಾರೆ ಹೇಳಿ. 2013-14 ರಿಂದ 2021ನೇ ಇಸವಿಯವರೆಗೆ ಸಂಪೂರ್ಣವಾಗಿ ಏನೇನಾಗಿದೆ ಎನ್ನುವ ವಿಚಾರವನ್ನು ಸಿಎಜಿ ವರದಿ ಕೊಟ್ಟಿದೆ. ಈ ವರದಿಯಲ್ಲಿ "ವರದಿಯನ್ನು ಪಾಲಿಸದ ಬಿಬಿಎಂಪಿ" ಎಂದು ಕೊಟ್ಟಿದ್ದಾರೆ. ಈ ವರದಿಯ ಮೇಲೆ ಯಾವ ಅಧಿಕಾರಿಯ ಮೇಲೆ ಸರ್ಕಾರ ಕ್ರಮ ಮಾಡಿದೆ ಎಂದು ಹೇಳಿ ನೋಡೋಣ. 1800ನೇ ಇಸವಿಯಲ್ಲಿ 1452 ಕೆರೆಗಳು ಇದ್ದವು ಎಂದು ರೆಕಾರ್ಡ್‌ನಲ್ಲಿ ಇದೆ. ಮಾನ್ಯ ಕೆಂಪೇಗೌಡರವರ ಕಾಲದಲ್ಲಿ ಈ ಕೆರೆಗಳು ಇದ್ದಂತಹ ಸಂದರ್ಭದಲ್ಲಿ ಇವತ್ತು 215 ಕೆರೆಗಳು ಉಳಿದುಕೊಂಡಿವೆ. ಉಳಿದ ಕೆರೆಗಳು ಯಾವುದು ಇಲ್ಲ ಎಂದು ಹೇಳಲಾಗಿದೆ. ಇದು ನಾನು ಹೇಳಿರುವುದು ಅಲ್ಲ. It is a report from CAG (Comptroller and Auditor General of India) ಇಲ್ಲಿ ಇದೆ. ಈಗ ನೋಡಿ, ಈ ವರದಿಯಲ್ಲಿ ಏನು ಹೇಳುತ್ತಿದ್ದಾರೆ ಎಂದರೆ, 1452 ಕೆರೆಗಳಿಗೆ ಇದ್ದಂತಹ ನೀರಿನ ಸಂಗ್ರಹಣಾ ಸಾಮರ್ಥ್ಯ ಇದ್ದದ್ದು ಸುಮಾರು 35 ಟಿಎಂಸಿ ನೀರು. ಇವತ್ತು ಕೆಆರ್‌ಎಸ್‌ನಲ್ಲಿ 49 ಟಿಎಂಸಿ ನೀರಿನ ಸಂಗ್ರಹಣಾ ಸಾಮರ್ಥ್ಯ ಇದೆ. 35 ಟಿಎಂಸಿ ನೀರು ಆ ಕೆರೆಗಳಲ್ಲಿ ಸಂಗ್ರಹಣಾ ಮಾಡಿದ್ದರೆ ಇವತ್ತು ನಮಗೆ ಕೆಆರ್‌ಎಸ್ ನೀರು ಬೇಕಾಗಿರಲಿಲ್ಲ, ಯಾವುದೂ ಬೇಕಾಗಿರಲಿಲ್ಲ. ಒಂದು ಕಾಲದಲ್ಲಿ ತಿಪ್ಪಗೊಂಡನ ಹಳ್ಳಿಯ ಜಲಾಶಯ ತುಂಬಿದ್ದರೆ ಬೆಂಗಳೂರಿನಲ್ಲಿ ಅಷ್ಟೊಂದು ಹರ್ಷೋದ್ಗಾರ ಇರುತ್ತಿತ್ತು. ಸುಮಾರು 35 ಟಿಎಂಸಿ ನೀರಿನ ಸಂಗ್ರಹಣಾ ಸಾಮರ್ಥ್ಯ ಎಂದು ಹೇಳಿದರೆ ಎಷ್ಟು ಕೋಟಿ ಮಂದಿಗೆ ಕುಡಿಯುವ ನೀರು ಕೊಡಬಹುದಿತ್ತು. ಇವತ್ತು ಏನಿದೆ, totally 2.5 TMC water storage capacity ಬೆಂಗಳೂರಿನಲ್ಲಿ ಉಳಿದಿರುವಂತಹ ಕೆರೆಗಳದ್ದಾಗಿದೆ. ಇದು ನನ್ನದಲ್ಲ. ಈ ವರದಿ ಹೇಳಿರುವಂತಹದ್ದು. Supreme audit Institution, ಕೇಂದ್ರ ಸರ್ಕಾರದ ಲೋಕಸಭೆಯಲ್ಲಿರುವಂತಹ ಆಯಾ ರಾಜ್ಯಗಳ ಎಲ್ಲಾ ಹಣಕಾಸಿನ ಪರಿಸ್ಥಿತಿಯನ್ನು ಕಾಲಕಾಲಕ್ಕೆ ಕೊಡುವಂತಹದ್ದು. it is a Constitutional Body. It has given the report that, 1452 ಕೆರೆಗಳಲ್ಲಿ ಇಷ್ಟು ವ್ಯತ್ಯಾಸ ಆಗಿದೆ. ಈ ವ್ಯತ್ಯಾಸ ಆಗಿದೆ ಎನ್ನುವ ವಿಚಾರವನ್ನು ಕೊಡುವಂತಹ ಸಂದರ್ಭದಲ್ಲಿ ಇವತ್ತು

"ರಾಜ ಕಾಲುವೆ ನಿರ್ವಹಣೆ ಕುರಿತಂತೆ ಸಿಎಜಿ ವರದಿಯಲ್ಲಿ ಕೊಟ್ಟಿರುವಂತಹ ಸಲಹೆಗಳು ನನ್ನ ಗಮನಕ್ಕೆ ಬಂದಿದೆ. ವರದಿಯಲ್ಲಿರುವಂತಹ ಕ್ರಮ ಕೈಗೊಳ್ಳಲಾಗುತ್ತದೆ. ಪ್ರವಾಹ ತಡೆಗೆ ರಾಜಕಾಲುವೆ ಒತ್ತುವರಿ ತೆರವು, ಹೂಳು ತೆಗೆಯುವುದು, ಮಳೆ ನೀರು ಕಾಲುವೆ ವಿಭಾಗಗಳಲ್ಲಿ ಸುಧಾರಣೆ ಕ್ರಮ ಕೈಗೊಳ್ಳಲಾಗುವುದು" ಎಂದು ಶ್ರೀ ತುಷಾರ್ ಗಿರಿನಾಥ್‌ರವರು ಹೇಳಿಕೆ ಹೇಳಿರುವಂತಹದ್ದು. ಸುಮಾರು 3452 ಕೋಟಿ ರೂಪಾಯಿಗಳನ್ನು ವ್ಯಯ ಮಾಡಿದರೂ ಕೂಡ ಪರಿಹಾರ ಆಗಿಲ್ಲ ಎಂದು ಹೇಳುತ್ತಾರೆ. ಈ ಪರಿಸ್ಥಿತಿಯಾದರೆ ಇಲ್ಲಿಯವರೆಗೆ ಸುಮಾರು 3452 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಲ್ಲಿಯವರೆಗೂ ಪರಿಹಾರ ಪರಿಸ್ಥಿತಿ ಈ ಮಟ್ಟದಲ್ಲಿದೆ. ಇದನ್ನು ನಾವು ಹೇಳಿರುವಂತಹದ್ದು ಅಲ್ಲ. "*...revealed that Bengaluru witnessed large scale encroachment of lakes/drains and depletion of natural drainage systems. The changes in land use such as decrease in vegetation cover and open spaces and increase in built up area resulted in loss of inter-connectivity between water bodies impacting effective recharge of ground water and increase in runoff of storm water. A study by the Indian Institute of Science states that the city (covering an area of 741 sq km) had 1,452 water bodies with a total storage capacity of 35 TMC during early 1800s. By 2016, the number of water bodies in the same area reduced to 194 with a storage capacity of 5 TMC. The current storage capacity which has further declined due to siltation is merely 1.2 TMC (2016). Out of 210 lakes under the jurisdiction of BBMP as at the end of December 2020, 18 lakes with a total area of 254 Acres and 17 guntas were identified as disused lakes.....*" ಇದು ನನ್ನದಲ್ಲ ಸ್ವಾಮಿ. ಸಿಎಜಿಯವರು ಕೊಟ್ಟಿರುವಂತಹ, supreme audit Institution, Constitutional Body ಕೊಟ್ಟಿರುವಂತಹ ಒಂದು ವರದಿಯನ್ನು ನಾನು ಓದಿದ್ದೇನೆ. ಈ ವರದಿಯ ಮೇಲೆ ನಮ್ಮ ಅಧಿಕಾರಿಗಳು ಕೆಲಸ ಮಾಡಲಿಲ್ಲವೆಂದು ಹೇಳಿದರೆ ಏಕೆ ದೂರು ಕೊಡಬೇಕು. ಇವತ್ತು ಅವರು encroach ಮಾಡಿದ್ದಾರೆ, ಇವರು encroach ಮಾಡಿದ್ದಾರೆ ಎಂದು ಊರೆಲ್ಲಾ ಮಾತನಾಡುತ್ತಾರೆ. ಯಾರು ಎಷ್ಟು ಪ್ರಭಾವಿಗಳಾಗಿದ್ದರೆ ಏನೂ ಸ್ವಾಮಿ. ರಾಜಕಾಲುವೆ ಬಗ್ಗೆ ಹೇಳಿದ್ದಾರೆ. ಇದಾಯಿತು. ನೆನ್ನೆ, ಮೊನ್ನೆ ಮೂರು ದಿವಸ ಜೆಸಿಬಿ, ಹಿಟಾಚಿಗಳು

ಹಾರಾಡಿ ಬಿಟ್ಟವು. ಈಗ ಮಳೆ ನಿಲ್ಲಿತಲ್ಲವೇ, ಜೆಸಿಬಿ ಎಲ್ಲಿ ಇದ್ದಾವೋ, ಹಿಟಾಚಿಗಳು ಎಲ್ಲಿ ಇದ್ದಾವೋ, ನಮ್ಮ ಅಧಿಕಾರಿ ವರ್ಗದವರು ಎಲ್ಲಿ ಇದ್ದಾರೋ, ನಾಚಿಕೆಯಾಗಬೇಕು ಸರ್. ದಯಮಾಡಿ, ರಾಜಕೀಯ ಮಾಡುವವರು ರಾಜಕೀಯ ಮಾಡುತ್ತಾರೆ. ಇಲ್ಲಿ ಎಲ್ಲಾ ಪಕ್ಷದವರು ಇದ್ದೇವೆ. ತಮ್ಮ ಅಧಿಕಾರಿಗಳಿಗೆ ಏನು? ತಾವು ರಾಜೀನಾಮೆ ಕೊಟ್ಟು ವಿಧಾನಸಭಾ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಿ, ಆಗ ನೋಡೋಣ. ತಮ್ಮ ಕೆಲಸ ಮಾಡುವುದಕ್ಕೆ ಯಾರು ಅಡ್ಡಿಪಡಿಸುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು 3-4 ಬಾರಿ ಮಳೆಯಲ್ಲಿ ಹೋಗಿ ಬೆಳಗ್ಗೆ ರಾತ್ರಿ ಎನ್ನದೇ ಟೂರ್ ಮಾಡಿಲ್ಲವೇ, ಹಾಗಿದ್ದರೆ ತಮಗೆ 2626 ಜಾಗಗಳನ್ನು ಅಧಿಕಾರಿಗಳು ಗುರುತು ಮಾಡಿದ್ದಾರಲ್ಲವೇ, ಈ ಜಾಗಗಳನ್ನು ಒತ್ತುವರಿ ತೆರವು ಮಾಡಬೇಕೆಂದು ಅಧಿಕಾರಿಗಳಿಗೆ ರಾತ್ರೋರಾತ್ರಿ 2626 ಜಾಗ ಒತ್ತುವರಿಯಾಗಿದೆ ಎಂದು ಗೊತ್ತಾಯಿತೇ. ನಾನು ಒತ್ತುವರಿ ಮಾಡಿದ್ದೇನೆ. ಮಾನ್ಯ ಗೋಪಾಲಣ್ಣ ಒತ್ತುವರಿ ಮಾಡಿದ್ದಾರೆ, ಅವರು ಮಾಡಿದ್ದಾರೆ, ಇವರು ಮಾಡಿದ್ದಾರೆ ಎಂದು ತಮಗೆ ನೆನ್ನೆ, ಮೊನ್ನೆ ಗೊತ್ತಾಯಿತೇ. 2626 ಜಾಗವನ್ನು ಸುಮಾರು 5-6 ವರ್ಷಗಳಿಂದ ಅಧಿಕಾರಿಗಳು ಗುರುತು ಮಾಡಿ ಇಟ್ಟಿದ್ದಾರೆಯಲ್ಲವೇ? ಇಲ್ಲಿ ತೆಗೆದ ನೀರು ಎಲ್ಲಿಗೆ ಹೋಗುತ್ತದೆ? ಇಲ್ಲಿ ಅರ್ಧ ನೀರು ತೆಗೆದರೆ ಮತ್ತೆ ಅರ್ಧ ನೀರು ಎಲ್ಲಿಗೆ ಹೋಗಬೇಕು? ಸುಮಾರು 35 ಟಿ.ಎಂ.ಸಿ., ನೀರು ಹರಿದು ನಿಂತರೆ, ಅದು ಬಿಲ್ಡಿಂಗ್‌ಗೆ ಹೋಗದೆ ಇನ್ನೆಲ್ಲಿಗೆ ಹೋಗುತ್ತದೆ. ಲೀವಿಂಗ್ ರೂಂಗೂ ಬರುತ್ತದೆ, ಬೆಡ್‌ರೂಂಗೂ ಬರುತ್ತದೆ, ಮನೆ ಒಳಗೂ ಬರುತ್ತದೆ. ನೀರು ಹೋಗುವುದಕ್ಕೆ ಜಾಗ ಬೇಕಲ್ಲವೇ ಸ್ವಾಮಿ. ಆ ನೀರು ಹೋಗುವ ಜಾಗವನ್ನೆಲ್ಲಾ ಅಡ್ಡಿ ಮಾಡಿ ಇಟ್ಟಿದ್ದಾರೆಯಲ್ಲವೇ? ಯಾರು ಎಷ್ಟು ಪ್ರಭಾವಿಯಾದರೂ ನಿಮಗೇನೂ ಕೆಲಸ? ಬಿಬಿಎಂಪಿ ಗುರುತು ಮಾಡಿದೆ. ನಿಮ್ಮ ಅಧಿಕಾರಿಗಳು ಗುರುತು ಮಾಡಿದ್ದಾರೆ. ನಿಮ್ಮ ಅಧಿಕಾರಿಗಳ ವರ್ಗ ಗುರುತು ಮಾಡಿದ್ದಾರೆ. ಸುಮಾರು 5-6 ವರ್ಷಗಳಿಂದ ಗುರುತು ಮಾಡಿದ ಜಾಗದಲ್ಲಿರುವ ನೀರು ಆಚೆಗೆ ಹೋಗುವುದಕ್ಕೆ ಜಾಗ ಮಾಡಬೇಕಲ್ಲವೇ? ಇವರು ಈ ಕೆಲಸ ಮಾಡಿದ್ದಾರೆಯೇ, ಮತ್ತೇಕೆ ಇವರು ದೂರುತ್ತಾರೆ? ಪಾಪ, ಅವರು ಎಲ್ಲೆಲ್ಲಿಯೋ ಮನೆಗಳನ್ನು ತೆಗೆದುಕೊಂಡು ಏನೇನೋ ಮಾಡಿ ಮನೆಗಳನ್ನು ಕಟ್ಟಿರುವಂತಹವರ ಪರಿಸ್ಥಿತಿಯಲ್ಲಿ ಅವರ ಪರಿಸ್ಥಿತಿ ಏನಾಗಬೇಕು? ಅಂತಹ ಜಾಗಗಳು ಕೆರೆಗಳ ಜಾಗವಾಗಿದ್ದವು. ಆ ಜಾಗಗಳಿಗೆಲ್ಲಾ ನಾವು ಲೈಸೆನ್ಸ್ ಕೊಟ್ಟಿದ್ದೇವೆಯೇ? ಕೆಲಸ ಮಾಡುವಂತಹ ಬಿಡಿಎ ಇರಬಹುದು, ಬಿಬಿಎಂಪಿ ಇರಬಹುದು, ಇದೇ ಅಧಿಕಾರಿಗಳಲ್ಲವೇ ಕೊಟ್ಟಿರುವುದು. ಸುಮ್ಮಸುಮ್ಮನೆ ಅವರು ಮನೆಗಳನ್ನು ಕಟ್ಟಿಬಿಡುತ್ತಾರೆಯೇ? ಆ ಪ್ರಭಾವಿಗಳೆಲ್ಲಾ ಕಟ್ಟಿರುವ ಮನೆಗಳನ್ನು ಕೊಟ್ಟು ಹೋದರು. ಇವತ್ತು ಅನುಭವಿಸುತ್ತಿರುವವರು ಯಾರು? ಈ ಪರಿಸ್ಥಿತಿಗೆ ಯಾವಾಗ ಸ್ವಾಮಿ

ಕೊನೆಯಾಡುವುದು? ನಾನು ಆದಷ್ಟು ಬೇಗ ಮಾತನಾಡಿ ಮುಗಿಸುತ್ತೇನೆ. ನನಗೇನೂ ತೊಂದರೆ ಇಲ್ಲ. I don't want to waste the most precious time of this House. But, it is a burning issue. When are we going to solve this burning issue? ಇದನ್ನು ಹೇಗೆ ಪರಿಹಾರ ಮಾಡಬೇಕೆಂದು ಹೇಳಿ. ಇವತ್ತು ಜೆಸಿಬಿ ನಿಂತು ಹೋಗಿದೆಯಲ್ಲವೇ? ಏಕೆ ಕೆಲಸ ಮುಗಿದು ಹೋಯಿತೆ? ಇವತ್ತು ಏಕೆ ಜೆಸಿಬಿ ಕೆಲಸ ಮಾಡುತ್ತಿಲ್ಲ? ಇವರು ಒಬ್ಬರೇ ಒಬ್ಬರು ಪ್ರಭಾವಿಗಳ ಮನೆಯನ್ನು ಏನಾದರೂ ಒಡೆದು ಹಾಕಿದ್ದಾರೆಯೇ? ನಾನು ನೋಡುತ್ತಿದ್ದೇನೆ. ಕಾಂಪೌಂಡ್ ಒಡೆಯುತ್ತಾರೆ. ಗೋಡೆ ಒಡೆಯುತ್ತಾರೆ. ಅವರು ಆಚೆ ಬರುತ್ತಾರೆ. ಏಕೆ ತಾಕತ್ತು ಇಲ್ಲವೇ? ಸರ್ಕಾರ ಅಡ್ಡಿ ಬಂದಿದ್ದರೆ ಹೇಳಿ. ಸರ್ಕಾರ ಅಡ್ಡಿ ಬಂದಿದ್ದರೆ ನೋಡೋಣ. ಮಾನ್ಯ ಮುಖ್ಯಮಂತ್ರಿಗಳು ಅಡ್ಡಿ ಬಂದಿದ್ದಾರೆಯೇ, ಬೆಂಗಳೂರಿನಲ್ಲಿರುವಂತಹ ಎಂಎಲ್‌ಎಗಳು ಅಡ್ಡಿ ಬಂದಿದ್ದಾರೆಯೇ? ಇದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. Come with clear picture. ಇವತ್ತು ಅಧಿಕಾರಿಗಳಿಗೆ ಯಾರು ಅಡ್ಡಿ ಮಾಡಿಲ್ಲ. ಹಾಗಾದರೆ, ಇದು ಎಲ್ಲಿಯವರೆಗೂ ಇರುತ್ತದೆ? ಅವರ ಗೋಳನ್ನು ನೋಡುತ್ತಿದ್ದರೆ ಎಂತಹವರ ಕರಳು ಹಿಂಡಿ ಬರುತ್ತದೆ. ಯಾವ ಪಾಪಿ-ಪರದೇಶಿಗಳ ಮನೆಯನ್ನು ಒಡೆದಿದ್ದಾರೆ. ಒಳ್ಳೆಯವರಾರದ್ದು ಮನೆ ಒಡೆದಿಲ್ಲ. ಗೋಳಾಡುತ್ತಾರೆ, ಬಾಯಿ ಬಡಿದುಕೊಳ್ಳುತ್ತಾರೆ. ಹಾಗಾದರೆ ಅವರಿಗೆ ಯಾರು ದಿಕ್ಕಿಲ್ಲವೇ? ಹೌದು ರೀ, ಅವರ ಮನೆ ಒಡೆಯಬೇಕಾದರೆ ಜೆಸಿಬಿ ಹೋಗಬಾರದು. ಜೆಸಿಬಿ ಹೋಗುವುದಕ್ಕೆ ತಾಕತ್ತು ಇದ್ದ ಮಗ ಜೆಸಿಬಿ ಹೇಗೆ ತರುತ್ತೀಯಾ ನೋಡುತ್ತೀನಿ ಎಂದು ಹೇಳುತ್ತಾರೆ. ಅವರಿಗೆ ಹೇಳುವವರೂ-ಕೇಳುವವರು ಯಾರು ಇಲ್ಲ, ಅಪ್ಪ ಇಲ್ಲ, ಅವ್ವ ಇಲ್ಲ ಅಂತಹವರ ಮನೆ ಒಡೆದಿದ್ದಾರೆ. ಹಾಗೆ ತಾನೇ ಒಡೆದಿರುವುದು. ಇವರು ಒಳ್ಳೆಯವರ ಮನೆ ಒಡೆದಿದ್ದಾರೆಯೇ? ಹಾಗಾದರೆ ತಮ್ಮ ಹತ್ತಿರ ಪಟ್ಟಿ ಇಲ್ಲವೇ? ನಾನು ಬೇಕಾದರೆ ಪಟ್ಟಿಯನ್ನು ಕೊಡುತ್ತೇನೆ. ಯಾರ್ಯಾರದ್ದು ಏನೇನು ಇದೆ ಎಂದು ಪಟ್ಟಿ ಇಟ್ಟಿದ್ದೇನೆ. ತಮಗೆ ಎಷ್ಟು ಜನರದ್ದು ಪಟ್ಟಿ ಬೇಕು ಹೇಳಿ. ನನ್ನ ಹತ್ತಿರ ಪ್ರಭಾವಿಗಳದ್ದು ಪಟ್ಟಿ ಇದೆ. ಒಳ್ಳೆ ಮನೆ ಅಲ್ಲ. ದುಡ್ಡು ಇರುವವರು ಕಟ್ಟಿದ್ದಾರೆ.

**(ಮುಂದು...)**

**(913)19-09-2022(04-10)bsd-ks**

**ಶ್ರೀ ಎಸ್.ಎಲ್. ಭೋಜೇಗೌಡ (ಮುಂದು)**

list of VVIPs (Very Very Important Persons),,, Bagmane Tech Park. The founder of Bagmane Tech Park is from my native.

**ಸಭಾಪತಿಯವರು:-** ಮಾನ್ಯ ಸದಸ್ಯರೇ, 30 ನಿಮಿಷ ಆಯಿತು.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, 30 ನಿಮಿಷ ಅಲ್ಲದಿದ್ದರೆ 30 ದಿವಸ ಆಗಲಿ, ಇದಕ್ಕೊಂದು ಅಂತ್ಯ ಕಾಣಿಸಬೇಕಲ್ಲವೇ? ಈ House ನಿಂದ ಅಂತ್ಯ ಕಾಣಿಸಲಿ. ದೇವರ ಆಣೆಗೂ ನಾನು ಒಪ್ಪುತ್ತೇನೆ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, 30 ದಿವಸ ಚರ್ಚೆ ಮಾಡಲು ಮಾನ್ಯ ಭೋಜೇಗೌಡರು ರಾಜರು ಆಗಬೇಕಾಗುತ್ತದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ issue solve ಆದರೇ, at least... Bagmane Tech Park, Columbia Asia Hospital, New Horizon College, Diya School, Prestige Groups, Salarpuria, Nalapad, RMZ, Eco-space, Adarsha, Gopalan, Wipro, Purva paradise and so on ಇವರೆಲ್ಲರೂ ಯಾರು? ಇದನ್ನು CAG (Comptroller and Auditor General) report ನಲ್ಲಿ ಹಿಂದೆ 2,626 ಪ್ರಕರಣಗಳಲ್ಲಿ ರಾಜಕಾಲುವೆ ಒತ್ತುವರಿ ಎಂದು identify ಮಾಡಿರುವುದರಲ್ಲಿ ಬಂದಿರುವ ಲಿಸ್ಟ್ ಆಗಿದೆ. ಇದು ನಿನ್ನೆ ಮೊನ್ನೆ ಬಂದಿಲ್ಲ. ಈ ಪ್ರಭಾವಿಗಳನ್ನು ಒಂದು ಇಂಚು ಮುಟ್ಟಿಲ್ಲ. ಹಾಗಾದರೆ ರೂ.3,400 ಕೋಟಿ ಏತಕ್ಕಾಗಿ ಖರ್ಚು ಮಾಡಿದ್ದಾರೆ? ಆ ಹಣ ಎಲ್ಲಿ ಹೋಗಿದೆ? ಈಗ ಖರ್ಚು ಮಾಡಿರುವ ಹಣದ ಲೆಕ್ಕ ಇಲ್ಲ. ಅವರು ಬಿಟ್ಟು ಸುಡುಗಾಡಿಗೆ ಬೇಕಾದರೆ ಹೋಗಲಿ, ಇಲ್ಲಿ ಎಲ್ಲರನ್ನು ಹಾಳು ಮಾಡಿದ ಮೇಲೆ ಏನು ಉಳಿದಿದೆ, ಅವರು ಹೋಗಲಿ, ಇಂತಹ ಒಂದು grave mistake

ಮಾಡಿದ್ದು, it is a burning issue. ಆ ಕುಟುಂಬಗಳ ಪರಿಸ್ಥಿತಿ ಏನು? ಹಾಗಾದರೆ ಅವರ building ಗಳನ್ನು ಒಡೆದು ಹಾಕಲಿ, ಮಾನ್ಯ ಸಚಿವರು ಈ ವಿಚಾರ ಹೇಳಬೇಕು, 2,626 ಪ್ರಕರಣಗಳಲ್ಲಿ ರಾಜಕಾಲುವೆ ಒತ್ತುವರಿ ಆಗಿರುವುದನ್ನು identify ಮಾಡಿರುವ ಜಾಗಗಳನ್ನು ಖುಲ್ಲಾ ಮಾಡುವ ತನಕ ಬೆಂಗಳೂರಿನಲ್ಲಿ JCB ಕೆಲಸ ನಿಲ್ಲುವುದಿಲ್ಲ ಎಂದು ಸರ್ಕಾರ ತೀರ್ಮಾನ ಮಾಡಲಿ, ಅವರು ಎಷ್ಟೇ ಪ್ರಭಾವಿಗಳಾಗಿರಬಹುದು, ಇದಕ್ಕೆ ಹೈಕೋರ್ಟ್ ಅಡ್ಡ ಬಂದಿದೆಯೇ? ಹಾಗಿದ್ದರೆ ಹೈಕೋರ್ಟ್‌ಗೂ convince ಮಾಡಲಿ, ಈ ಪರಿಸ್ಥಿತಿ ever long issue ಆಗಿದ್ದು, ಇದಕ್ಕೊಂದು ಅಂತ್ಯ ಹಾಡಬೇಕಾಗಿದೆ. ಅಧಿಕಾರಿಗಳು legal ಆಗಿ ಮಾಡಿರುವ ಜಾಗಗಳನ್ನು identify ಮಾಡಿದ್ದು, ಈ ಕೆಲಸ ಮುಗಿಸುತ್ತೇವೆ ಎಂದು ಹೇಳಿದರೆ ಹೈಕೋರ್ಟ್ ಅಥವಾ ಯಾರು ಕೇಳುವುದಿಲ್ಲ? ಎಲ್ಲರೂ ಕೇಳುತ್ತಾರೆ. ಆದ್ದರಿಂದ ಇದರ ಬಗ್ಗೆ ಗಂಭೀರವಾಗಿ ಗಮನ ತೆಗೆದುಕೊಂಡು ಕೆಲಸ ಮುಗಿಸಬೇಕು. ಜೊತೆಗೆ horticultural crops and food grains ನ ನಷ್ಟ ಆಗಿದೆ. ಮಾನ್ಯ ನರೇಂದ್ರ ಮೋದಿರವರು ರೈತರ ಆದಾಯ ದ್ವಿಗುಣವಾಗುವ ಬಗ್ಗೆ ಹೇಳಿದ್ದು, ಇಂತಹ ಪರಿಸ್ಥಿತಿಯಲ್ಲಿ ಹೇಗೆ ಆದಾಯ ದ್ವಿಗುಣವಾಗುತ್ತದೋ ದೇವರಿಗೆ ಗೊತ್ತು. ದ್ವಿಗುಣವಾಗದಿದ್ದರೂ ವಾಪಸ್ಸು agriculture ಗೆ ಬಂದು ಉಳಿಯುತ್ತೇವೆ, ಕೆಲಸ ಮಾಡುತ್ತೇವೆ, ನಾಡಿಗೆ ಮತ್ತೆ ಊಟ ಕೊಡುತ್ತೇವೆ ಎನ್ನುವಂತೆ ಪ್ರತಿಯೊಬ್ಬ ರೈತರಿಗೆ ಧೈರ್ಯ ತುಂಬುವ ಕೆಲಸ ಸರ್ಕಾರದಿಂದ ಆಗಲಿ ಎಂದು ತಮ್ಮ ಮೂಲಕ ವಿನಂತಿಸುತ್ತೇನೆ.

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇದುವರೆಗೂ ಮಾನ್ಯ ಭೋಜೇಗೌಡರು ಬೆಂಗಳೂರಿನ ಅನೇಕ ಸಮಸ್ಯೆಗಳ ಬಗ್ಗೆ ಗಮನ ಸೆಳೆದಿದ್ದು, ನಾನೂ ಕೂಡ ಆ ಭಾಗದಲ್ಲಿ ವಾಸವಿರುವವನಾಗಿದ್ದೇನೆ ಮತ್ತು ಅಲ್ಲಿನ ಸಮಸ್ಯೆಗಳ ಬಗ್ಗೆ firsthand information ಇರುವವನಾಗಿದ್ದೇನೆ. ವಿಶೇಷವಾಗಿ ಬೆಂಗಳೂರಿನ ಮಹದೇವಪುರ ಭಾಗದಲ್ಲಿ ಹೆಚ್ಚಿನ ತೊಂದರೆಯಾಗಿದ್ದು, ಅಲ್ಲಿರುವ ಸಮಸ್ಯೆಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಣೆ ಮಾಡಬೇಕಾಗಿದೆ ಹಾಗೂ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಅನೇಕ ತಪ್ಪು ನಿರ್ಧಾರಗಳಿಂದ ಆ ಭಾಗದಲ್ಲಿ ದೊಡ್ಡ ದೊಡ್ಡ tech park ಗಳಿರಬಹುದು, builders

ಗಳಿರಬಹುದು, ಅವರು violation ಮಾಡಿ ಕಟ್ಟಿರುವ ದೃಷ್ಟಿಯಿಂದ ಅಲ್ಲಿನ ಸಮಸ್ಯೆಗಳು ಉದ್ಭವವಾಗಿದೆ. ಕಳೆದ 50 ವರ್ಷಗಳಿಂದ ಇಷ್ಟು ದೊಡ್ಡ ಮಳೆ ಬಂದಿರಲಿಲ್ಲ, ವಿಶೇಷವಾಗಿ ಬೆಳ್ಳಂದೂರಿನ ಭಾಗದಿಂದ ಹಿಡಿದು ವರ್ತೂರಿನ ಭಾಗದಲ್ಲಿ ಎಲ್ಲ tech park ಗಳಿವೆ. ಬೆಂಗಳೂರಿನಲ್ಲಿ ಶೇಕಡ 60 ರಷ್ಟು catchment area ಇದೆ. ಈ ಕಡೆ ಶಿವಾಜಿನಗರ ಮತ್ತು ಆ ಕಡೆ ಜಯನಗರ, city market ನ ಎಲ್ಲಾ ನೀರು ಬೆಳ್ಳಂದೂರಿನ ಒಂದು ಭಾಗಕ್ಕೆ ಬರುತ್ತದೆ. ಅದರ ಪಕ್ಕದಲ್ಲಿರುವ ಅನೇಕ ಕೆರೆಗಳು ಮೊಟ್ಟಮೊದಲ ಬಾರಿಗೆ fill ಆಗಿವೆ. ಅವೆಲ್ಲವೂ ಮೊದಲು ಗದ್ದೆಗಳಾಗಿದ್ದು, ಆ ಗದ್ದೆಗಳಲ್ಲಿ ಇವತ್ತು tech park and apartments ಗಳನ್ನು ಕಟ್ಟಲಾಗಿದೆ. ಇದಲ್ಲದೇ unauthorized construction ಕೂಡ ಆಗಿದೆ. ಅದೇರೀತಿ ರಾಜಕಾಲುವೆಗಳನ್ನು ಮುಚ್ಚಿರುವುದೂ ನಡೆದಿದೆ. ಮೊದಲು ಎರಡು ದಿನ ಎಲ್ಲಾ ರಾಜಕಾಲುವೆಗಳನ್ನು ತೆರವು ಮಾಡುವ ಬಗ್ಗೆ ಒಳ್ಳೆಯ statement ಕೊಟ್ಟು, ಅನೇಕ ಕಡೆ ಕೇವಲ ಮನೆಗಳನ್ನು target ಮಾಡಿ ಒಡೆದರು. ಯಾವುದೇ ದೊಡ್ಡ company ಗಳ ಮೇಲೆ ಹೋಗಲಿಲ್ಲ. ಒಂದು ಸಮಸ್ಯೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾದ್ದೆಂದರೆ ರಾಜಕಾಲುವೆಗಳನ್ನು ತೆರವು ಮಾಡಿದರೂ ಇಷ್ಟು ದೊಡ್ಡ ಮಟ್ಟದ ಮಳೆ ಬಂದಾಗ ನೀರು ಹೊರಗೆ ಬರುವ ವ್ಯವಸ್ಥೆ ಆಗುತ್ತದೆ. ಉದಾಹರಣೆಗೆ ನಾನು HSR layout ನಲ್ಲಿ ವಾಸ ಮಾಡುತ್ತಿದ್ದು, ಕಳೆದ 2-3 ವರ್ಷಗಳಿಂದ ಸಣ್ಣ ಮಳೆ ಬಂದರೂ ಎಲ್ಲಾ ಮನೆಗಳು ತುಂಬಿಕೊಳ್ಳುತ್ತಿದ್ದವು. ಅದಕ್ಕೆ ಪರ್ಯಾಯವಾಗಿ ಯೋಚನೆ ಮಾಡಿ ಎರಡು ರಸ್ತೆಗಳನ್ನು ಆಯ್ಕೆ ಮಾಡಿಕೊಂಡು ರಸ್ತೆ ಕೆಳಗೆ ಸುಮಾರು 1 ಕಿ.ಮೀ ನೀರು ಹರಿಯುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಈ ಬಾರಿ ನಮ್ಮ ಮನೆ ಮಾತ್ರವಲ್ಲದೇ ಒಂದೇ ಒಂದು ಮನೆಗೂ ನೀರು ನುಗ್ಗಲಿಲ್ಲ. ಆ ರೀತಿ ಪರ್ಯಾಯವಾಗಿ ಆಲೋಚನೆ ಮಾಡಬೇಕೆ ಹೊರತು ಕೇವಲ ಯಾವುದೋ ನಾಲ್ಕಾರು ಮನೆಗಳನ್ನು ಒಡೆಯುವುದು, tech park ಗಳನ್ನು ನಿಲ್ಲಿಸಿಬಿಡುವುದು, ಪ್ರಭಾವ ಬಂದಾಗ ಸುಮ್ಮನಿರುವ ಕೆಲಸಗಳೆಲ್ಲವೂ ಆಗಿವೆ. ಸಮಸ್ಯೆ ಮತ್ತು ತಪ್ಪುಗಳೂ ಆಗಿವೆ. Layout plan ಕೊಟ್ಟು, ಮನೆ ಕಟ್ಟುವುದಕ್ಕೆ plan sanction ಮಾಡುತ್ತಾರೆ. ಇಷ್ಟೆಲ್ಲಾ ಮಾಡಿದ್ದರೂ ಅವರ ಮನೆಗಳನ್ನು ನೇರವಾಗಿ ಒಡೆಯುತ್ತಾರೆ. ಒಂದು ವಿಪರ್ಯಾಸವೆಂದರೆ ನಾನು ಪತ್ರಿಕೆಯಲ್ಲಿ ನೋಡಿದಂತೆ ಸುಮಾರು 50

ವರ್ಷಗಳಿಂದ ವಾಸ ಇರುವವನಿಗೆ ರಾಜಕಾಲುವೆ ಮೇಲೆ ಮನೆ ಬರುತ್ತದೆ ನಿನ್ನೆ ನೋಟೀಸ್ ಕೊಟ್ಟಿದ್ದಾರೆ. ಆತನಿಗೆ ಹೈಕೋರ್ಟ್‌ನಲ್ಲಿ stay ಕೊಟ್ಟಿದ್ದಾರೆ. ಅಂದರೆ ಒಂದು ಬಾರಿ nature of the land complete ಆಗಿ ಬದಲಾವಣೆಯಾಗಿರುವಾಗ ರಾಜಕಾಲುವೆ ನಿರ್ದಿಷ್ಟವಾಗಿ ಇಂತಹ ಕಡೆ ಬರುತ್ತದೆ ಎಂದು ಗುರುತಿಸುವುದು ಬಹಳ ಕಷ್ಟ. ಇವತ್ತಿನ technology use ಮಾಡಿಕೊಂಡು ನೂರಾರು ಅಡಿ ಕೆಳಗೆ ಮೆಟ್ರೋ ಮಾಡುತ್ತೇವೆ. ವಿಶೇಷವಾಗಿ ಬೆಳ್ಳಂದೂರು ಕೆರೆಯಿಂದ ವರ್ತೂರು ಕೆರೆಯವರೆಗೆ tech park ಗಳಿದ್ದು, ಅಂತಹ ಕಡೆಗಳಲ್ಲಿ alternative ಆಗಿ ಚಿಂತನೆ ಮಾಡಬೇಕು. ಕೇವಲ ಜನರ ತೋರಿಕೆಗೆ ಮಾಡಬಾರದು. ಮೆಟ್ರೋಗಾಗಿ 100 ಮೀಟರ್ ಕೆಳಗೆ tunnel ಮಾಡಿಕೊಂಡು ಓಡಿಸುತ್ತಿರುವಾಗ ನೀರು ಸರಾಗವಾಗಿ ಹರಿಯಲು ಆಲೋಚನೆ ಮಾಡಬಾರದೇ? ಈ ರೀತಿ ಆಲೋಚನೆಗಳನ್ನು ಮಾಡಬೇಕು. Plan sanction ಗೆ approve ಮಾಡಿಕೊಟ್ಟಿರುವ ಅಧಿಕಾರಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದನ್ನೂ ಕೂಡ alternative ಆಗಿ ಆಲೋಚನೆ ಮಾಡಬೇಕು. ಕೋರಮಂಗಲದಲ್ಲಿ Sony world ನಿಂದ ಸರ್ಜಾಪುರದವರೆಗಿನ ನಾಲ್ಕನೆಯ ಬ್ಲಾಕ್‌ನಲ್ಲಿ ಸಣ್ಣ ಮಳೆ ಬಂದರೆ ತುಂಬಿ ಹೋಗುತ್ತಿತ್ತು. ಇದರ ಬಗ್ಗೆ ಬಿಬಿಎಂಪಿ ಕ್ರಮ ತೆಗೆದುಕೊಂಡು ಒಂದೇ ರಸ್ತೆಯಲ್ಲಿನ ಕೆಳಗೆ ಮೋರಿ ಮಾಡಿ ದೊಡ್ಡ ನೀರು ಸರಾಗವಾಗಿ ಹರಿಯುತ್ತಿದ್ದು, ಈ ಬಾರಿ ಹೆಚ್ಚು ಮಳೆ ಬಂದರೂ ಒಂದು ಮನೆ ಕೂಡ ತುಂಬಲಿಲ್ಲ. ಇಷ್ಟು ಒಳ್ಳೆಯ ವ್ಯವಸ್ಥೆ, technology ಇರುವಾಗ alternative ಆಗಿ ಆಲೋಚನೆ ಮಾಡಬೇಕು, ಕೇವಲ ದೂಷಿಸುತ್ತಾ ಕೂರಬಾರದು, solution ಅನ್ನು ಕಂಡು ಹಿಡಿಯಬೇಕು, ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕಾಗುತ್ತದೆ. ಒತ್ತುವರಿಯಾಗಿರುವಲ್ಲಿ unauthorized construction ಅನ್ನು ತೆಗೆಯಬೇಕು. ಅದನ್ನು ಬಿಟ್ಟು, plan sanction ಮಾಡಿ, ಅವರೇ authorize ಆಗಿ ಕಟ್ಟಲು ಅನುಮತಿ ಕೊಟ್ಟು ನಂತರ ಕೇವಲ ಒಂಟಿ ಮತ್ತು ಮಧ್ಯಮ ವರ್ಗದವರ ಮನೆಗಳನ್ನು ಕೆಡವಿ, ದೊಡ್ಡ ದೊಡ್ಡ apartment ಗಳನ್ನು ಬಿಡುವುದು ಅತ್ಯಂತ ಅಮಾನುಷವಾಗಿದೆ. ಈಗಾಗಲೇ ಕಟ್ಟಿರುವ tech park ಗಳಿಗೆ alternative ಆಗಿ ಸಮಸ್ಯೆಗಳನ್ನು ಪರಿಹಾರ ಮಾಡಬೇಕಾದರೆ ಅವರ ಹತ್ತಿರವೇ ಹಣ collection ಮಾಡಿ ಮಾಡಲಿ. ಸರ್ಕಾರ ಮಾಡಲು ಆಗದಿದ್ದರೆ, ಅದಕ್ಕೆ ಅವಶ್ಯಕವಾದ

technology ಇರುವುದರಿಂದ, ಅದನ್ನು ಉಪಯೋಗಿಸಿಕೊಂಡು ಒಂದು ಕೆರೆಯಿಂದ ಇನ್ನೊಂದು ಕೆರೆಗೆ connectivity ಮಾಡುವ ವ್ಯವಸ್ಥೆ ಇದೆ. ಈ tech park ಗಳು ಯಾವುದನ್ನೂ ಮಾಡದೇ, ಎಲ್ಲವನ್ನು builders ಗಳು ಮಾಡಿದ್ದಾರೆ. Software company ಗಳು ಕೇವಲ ಬಾಡಿಗೆಗೆ ಇವೆ. ಇದನ್ನು builders ಗಳು ಮಾಡಿದ್ದು, ಅವರಿಂದ fine ಕಲೆಕ್ಟ್ ಮಾಡಿ, ಬೇಕಾದಂತಹ alternative ವ್ಯವಸ್ಥೆ ಮಾಡಲು ಯೋಚನೆ ಮಾಡುವ ವ್ಯವಸ್ಥೆ ಮಾಡಬೇಕು. ಇದನ್ನು ಗಂಭೀರವಾಗಿ ತೆಗೆದುಕೊಂಡು ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯಬೇಕು. ಕೇವಲ ಅವರಿವರನ್ನು ದೂಷಿಸದೇ, ಸಮಸ್ಯೆಗೆ ಶಾಶ್ವತ ಪರಿಹಾರ ಕೊಡುವ ಅನೇಕ ಸಂಸ್ಥೆಗಳಿವೆ. ಅವರು ಸರ್ಕಾರಕ್ಕೆ approach ಮಾಡಿದ್ದು, alternative ಆಗಿ ಸಮಸ್ಯೆ ಪರಿಹಾರ ಮಾಡುವ ವ್ಯವಸ್ಥೆ ಇದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಗಮನಹರಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಳೆ ಮತ್ತು ನೆರೆಹಾವಳಿ ವಿಚಾರದ ಬಗ್ಗೆ ಚರ್ಚೆ ಮಾಡುವಾಗ ಬಹಳ ದುಃಖದ ಸಂಗತಿ ಏನೆಂದರೆ, ಮೊದಲು ಬೆಂಗಳೂರು ನಗರದ ಬಗ್ಗೆ ಮಾತನಾಡುವಾಗ ಬೆಂಗಳೂರನ್ನು 'Brand Bengaluru' ಎಂದು ಕರೆಯುತ್ತೇವೆ. ಇಡೀ ವಿಶ್ವದಲ್ಲಿ ಅತೀ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ ಮಳೆ ಅವಾಂತರಗಳ ಬಗ್ಗೆ ಇಡೀ ವಿಶ್ವವೇ ಮಾತನಾಡುತ್ತಿರುವಾಗ ತಲೆ ತಗ್ಗಿಸುವ ಹಾಗೂ ಭಾರತಕ್ಕೆ ಕಪ್ಪು ಚುಕ್ಕೆ ರೀತಿಯಲ್ಲಿ ಬೆಂಗಳೂರು ನಗರದಲ್ಲಿ ಆಗಿರುವ ಅವಾಂತರಗಳ ಬಗ್ಗೆ ಹೇಳಲಿಚ್ಛಿಸುತ್ತೇನೆ.

**(ಮುಂದು)**

**(914) 19.09.2022 4.20 ಹೆಚ್‌ವಿ:ಕೆಎಸ್**

**ಶ್ರೀ ಎಂ. ನಾಗರಾಜು (ಮುಂದುವರಿದದ್ದು);-**

ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಸುರಿದ ಮಳೆಯಿಂದಾಗಿ ಆಗಿರುವಂತಹ ಅವಾಂತರಗಳ ಬಗ್ಗೆ ಮಾನ್ಯ ಎಸ್.ಎಲ್.ಭೋಜೇಗೌಡರು ಮತ್ತು ಶ್ರೀ ಹೆಚ್.ಎಸ್.ಗೋಪಿನಾಥ್ ಇವರುಗಳು ಹಲವಾರು ವಿಚಾರಗಳನ್ನು ಮೆಲುಕು ಹಾಕಿದ್ದಾರೆ. ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರಂ ವರಗೆ ಇರುವಂತಹ ಸುಮಾರು 17 ಕಿಲೋಮೀಟರ್ ರಸ್ತೆಯ ಸ್ಥಿತಿಯನ್ನು ನೋಡಿ ಅಲ್ಲಿರುವಂತಹ ಕಂಪನಿಗಳು ಮತ್ತು ನಾಗರಿಕರು "ನಮಗೆ ಪ್ರತ್ಯೇಕವಾಗಿರುವ ಪಾಲಿಕೆಯನ್ನು ಕೊಡಿ" ಎಂದು ಕೇಳುತ್ತಿದ್ದಾರೆ. ಇದನ್ನು ನೋಡಿದರೆ ಬಿ.ಬಿ.ಎಂ.ಪಿ. ಸರಿಯಾಗಿ ಕೆಲಸ ಮಾಡುತ್ತಿಲ್ಲವೆನ್ನುವುದು ಜನರ ಅರಿವಿಗೆ ಬಂದಿದೆ ಎಂದು ನಾನು ಭಾವಿಸಿದ್ದೇನೆ. ಈ 17 ಕಿಲೋಮೀಟರ್ ರಸ್ತೆಯಲ್ಲಿರುವ ಕಂಪನಿಗಳು ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು "ನಾವು ಇಲ್ಲಿ ಸುರಕ್ಷಿತವಾಗಿಲ್ಲ; ನಮ್ಮ ಕಂಪನಿಗಳಿಗೆ ಒಂದು ದಿನಕ್ಕೆ 250 ಕೋಟಿ ರೂಪಾಯಿಗಳಿಗೂ ಹೆಚ್ಚಿನ ನಷ್ಟವುಂಟಾಗುತ್ತಿದೆ. ನಾವು ಹೇಗೆ ಕೆಲಸ ಮಾಡಬೇಕು?" ಎಂದು ಕೇಳಿದ್ದಾರೆ. ಆದರೆ, ರಾಜ್ಯ ಸರ್ಕಾರ ಬಿ.ಬಿ.ಎಂ.ಪಿ. ಕಡೆಗೆ ಕೈ ತೋರಿಸಿ, "ಬಿ.ಬಿ.ಎಂ.ಪಿ.ಗೆ ಸುಮಾರು 8-10 ಸಾವಿರ ಕೋಟಿ ರೂಪಾಯಿಗಳಷ್ಟು ಆಯವ್ಯಯವನ್ನು ಕೊಟ್ಟಿದ್ದೇವೆ. ಬೆಂಗಳೂರು ನಗರವನ್ನು ವಿಶ್ವದಲ್ಲಿಯೇ ಉತ್ತಮವಾಗಿರುವ ನಗರವನ್ನಾಗಿ ಮಾಡುತ್ತೇವೆ" ಎನ್ನುವ ಆಶ್ವಾಸನೆಗಳನ್ನು ನೀಡುತ್ತಿರುವ ಸಂದರ್ಭದಲ್ಲಿ, ಒಂದು ಭಾರಿ ಮಳೆ ಬಂದ ಕೂಡಲೇ ಬೆಂಗಳೂರು ನಗರದಲ್ಲಿರುವ ಐ.ಟಿ., ಬಿ.ಟಿ. ಕಂಪನಿಗಳು "ಬೇರೆ ಕಡೆಗೆ ಹೋಗುತ್ತೇವೆ" ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ ಎನ್ನುವ ಮಾತನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಎಸ್.ಎಂ.ಕೃಷ್ಣಾರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಬೆಂಗಳೂರು ನಗರವನ್ನು ವಿಶ್ವದಲ್ಲಿಯೇ ವಿಶ್ವಮಾನ್ಯ ನಗರವನ್ನಾಗಿ ಮಾಡುವುದಕ್ಕೆ ಅವರು ಕೊಟ್ಟ ಕೊಡುಗೆಗಳನ್ನು ನಾವು ಒಮ್ಮೆ ಮೆಲುಕು ಹಾಕಬೇಕಾಗಿದೆ. ಬೆಂಗಳೂರು ನಗರವನ್ನು ಸಿಲಿಕಾನ್ ಸಿಟಿಯನ್ನಾಗಿ ಮಾರ್ಪಡಿಸಿರುವ ಕೀರ್ತಿ ಅಂದಿನ ಸರ್ಕಾರಕ್ಕೆ ಸಲ್ಲುತ್ತದೆ. ಇಂತಹ ನಗರದಲ್ಲಿ ಒಂದು ಭಾರಿ ಮಳೆ ಬಿದ್ದ ಕೂಡಲೇ

ಕಂಪನಿಗಳು ಬೆಂಗಳೂರು ಬಿಟ್ಟು ಹೋಗುತ್ತೇವೆಂದು ಹೇಳುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎನ್ನುವುದರ ಬಗ್ಗೆ ರಾಜ್ಯ ಸರ್ಕಾರ serious ಆಗಿ ಆಲೋಚನೆ ಮಾಡಬೇಕಾಗುತ್ತದೆ ಎನ್ನುವ ಮನವಿಯನ್ನು ನಾನು ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಬಿ.ಬಿ.ಎಂ.ಪಿ. ತನ್ನ ಕರ್ತವ್ಯ ನಿರ್ವಹಿಸುವುದನ್ನು ಬಿಟ್ಟು ಕೇವಲ ತೆರಿಗೆ ಸಂಗ್ರಹ ಮಾಡುವ ಒಂದು ಕಾರ್ಪೋರೇಶನ್ ಆಗಿ ಪರಿವರ್ತನೆ ಹೊಂದಿದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಬಿ.ಬಿ.ಎಂ.ಪಿ. ಆಸ್ತಿ ತೆರಿಗೆ ಸಂಗ್ರಹ ಮಾಡುವುದು ಮತ್ತು ಪ್ಲಾನ್‌ಗೆ ಅನುಮೋದನೆ ನೀಡುವ ಕೆಲಸಕ್ಕೆ ಅಷ್ಟೇ ಸೀಮಿತವಾಗಿದೆ. ಅದನ್ನು ಹೊರತುಪಡಿಸಿ ಈ ರಾಜ್ಯದ ಉನ್ನತ್ತೀಕರಣಕ್ಕಾಗಿ ಏನು ಕೆಲಸ ಮಾಡುತ್ತಿವೆ ಎನ್ನುವ ಪ್ರಶ್ನೆಯನ್ನು ಕೇಳಬೇಕಾಗಿದೆ. ಕಳೆದ 4 ತಿಂಗಳುಗಳಿಂದ ಹಲವಾರು ಬಾರಿ ರಾಜ್ಯದ ಹೈಕೋರ್ಟ್‌ನ ಜಡ್ಜ್‌ಗಳು ಬಿ.ಬಿ.ಎಂ.ಪಿ. ಆಯುಕ್ತರಿಗೆ ನೋಟೀಸ್ ಕೊಟ್ಟು ಕರೆದು, ಛೀಮಾರಿ ಹಾಕಿರುವುದನ್ನು ನಾವು ಕಂಡಿದ್ದೇವೆ. ಹೈಕೋರ್ಟ್‌ನವರು ಯಾವ ಹಂತಕ್ಕೆ ಹೋಗಿದ್ದಾರೆಂದರೆ, "ಈ ನಗರದ ರಸ್ತೆಗಳು ಸರಿ ಹೋಗಬೇಕಾದರೆ, ಇಲ್ಲಿಗೆ ದೇಶದ ಪ್ರಧಾನಮಂತ್ರಿಗಳು ಬರಬೇಕು ಅಥವಾ ರಾಷ್ಟ್ರಪತಿಗಳು ಬರಬೇಕು ಆಗ ಮಾತ್ರ ರಸ್ತೆಗಳು ಸರಿ ಹೋಗುತ್ತವೆ" ಎನ್ನುವ ವಿಚಾರವನ್ನು ಹೇಳಿರುವುದು ನಮ್ಮ ಗಮನಕ್ಕೆ ಬಂದಿದೆ. ಮಳೆಗೂ ಮೊದಲು ಪ್ರತಿದಿನ ರಸ್ತೆಯಲ್ಲಿರುವ ಗುಂಡಿಗಳ ಬಗ್ಗೆ ಹೈಕೋರ್ಟ್‌ನಲ್ಲಿ ಚರ್ಚೆಯಾಗುತ್ತಿತ್ತು. ಜನರು ಅಪಘಾತಕ್ಕಿಂತ ಹೆಚ್ಚಾಗಿ ರಸ್ತೆಯ ಗುಂಡಿಗಳಿಂದಾಗಿ ಪ್ರಾಣ ಕಳೆದುಕೊಳ್ಳುತ್ತಿರುವುದನ್ನು ನೋಡಿದಾಗ, ಬೆಂಗಳೂರು ನಗರದ ಕಾಮಗಾರಿಗಳು ಯಾವ ಮಟ್ಟದಲ್ಲಿ ನಡೆಯುತ್ತಿವೆ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಉತ್ತಮ ಗುಣಮಟ್ಟದ ಕಾಮಗಾರಿಗಳು ನಡೆಯದೇ ಇರುವುದಕ್ಕೆ ಬಿ.ಬಿ.ಎಂ.ಪಿ.ಯಲ್ಲಿರುವ ಭ್ರಷ್ಟಾಚಾರವೇ ಕಾರಣವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಆ ಕಾರಣಕ್ಕಾಗಿ ಗುತ್ತಿಗೆದಾರರ ಅಸೋಸಿಯೇಶನ್‌ನವರು 40% commission ಬಗ್ಗೆ ಉಲ್ಲೇಖ ಮಾಡಿದ್ದಾರೆ. ನಮ್ಮ ಆಡಳಿತ ಪಕ್ಷದ ಮಿತ್ರರಿಗೆ 40% commission ಎಂದು ಹೇಳಿದರೆ ಅವರಿಗೆ ಬೇಸರವಾಗಬಹುದು. ಪ್ರತಿದಿನ ಅನೇಕ ಜನ ಸಹೋದರ ಸಹೋದರಿಯರು ರಸ್ತೆಯಲ್ಲಿರುವ ಗುಂಡಿಗಳಿಗೆ ಬಿದ್ದು ಸಾಯುತ್ತಿದ್ದಾರೆ ಎನ್ನುವ ವಿಚಾರವನ್ನು ಹೈಕೋರ್ಟ್

ಖಂಡಿಸುತ್ತಿದೆ. ಗುತ್ತಿಗೆದಾರರ ಅಸೋಸಿಯೇಶನ್‌ನ ಅಧ್ಯಕ್ಷರು ದೂರದರ್ಶನದಲ್ಲಿ, 'We are ready to face any challenges, we have paid money' ಎಂದು ಹೇಳುವಾಗ, ಇದಕ್ಕಿಂತ prima-facie ಬೇರೇನು ಬೇಕು? ಇಲ್ಲಿ ಕೆಲಸ ನಡೆಯುತ್ತಿಲ್ಲ ಕಮೀಶನ್ ನಡೆಯುತ್ತಿದೆ ಎನ್ನುವುದು ತಲೆ ತಗ್ಗಿಸುವಂತಹ ವಿಚಾರವಾಗಿದೆ. ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರಂನವರೆಗೆ ಇರುವಂತಹ ರಸ್ತೆಯಲ್ಲಿ ಮಳೆ ಬಿದ್ದಂತಹ ಸಂದರ್ಭದಲ್ಲಿ ಜನರು ಬೋಟ್‌ಗಳಲ್ಲಿ ಸಂಚಾರ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

ಸನ್ಮಾನ್ಯ ಸಭಾಪತಿಯವರೇ, ದೇಶ-ವಿದೇಶಗಳಲ್ಲಿರುವ ಹಲವಾರು ಯುವಕ-ಯುವತಿಯರಿಗೆ ಕೆಲಸವನ್ನು ಕೊಡುತ್ತಿರುವ ಕಂಪನಿಗಳು ಇವತ್ತು ಬೀದಿ ಪಾಲಾಗಿವೆ ಮತ್ತು ಪರ್ಯಾಯ ಸ್ಥಳವನ್ನು ನೋಡಿಕೊಳ್ಳುತ್ತಿವೆ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಕೇವಲ ಈ ರಸ್ತೆಗಳು ಮಾತ್ರವಲ್ಲ, ಬೆಂಗಳೂರು ನಗರದಲ್ಲಿರುವ ಹಲವಾರು ರಾಜಕಾಲುವೆಗಳು ಒತ್ತುವರಿಯಾಗಿರುವ ವಿಚಾರ ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ, ನಮ್ಮ ಸರ್ಕಾರದ ಗಮನಕ್ಕೂ ಬಂದಿತ್ತು. ಮಾನ್ಯ ಎ.ಟಿ.ರಾಮಸ್ವಾಮಿಯವರು ಸುಮಾರು 12 ಸಾವಿರ ಎಕರೆಯಷ್ಟು ಜಮೀನು ಒತ್ತುವರಿಯಾಗಿದೆ ಎಂದು ಗುರುತಿಸಿದ್ದರು. ಅದರಲ್ಲಿ 11680 ಎಕರೆ ಜಮೀನನ್ನು ಹಿಂದಕ್ಕೆ ಪಡೆದುಕೊಂಡಿರುವುದು ಮಾನ್ಯ ಸಿದ್ದರಾಮಯ್ಯನವರ ಕಾಲದಲ್ಲಿ ಎನ್ನುವ ವಿಚಾರವನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಉಳಿದಿರುವ 600-700 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವಂತಹ ಕೆಲಸವನ್ನು ತದನಂತರ ಬಂದಂತಹ ಸರ್ಕಾರಗಳು ಮಾಡಲಿಲ್ಲ, ಇದೂ ಸಹ ಬೆಂಗಳೂರಿನ ಇಂದಿನ ಸ್ಥಿತಿಗೆ ಒಂದು ಕಾರಣವಾಗಿದೆಯೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ರಾಜ ಕಾಲುವೆಗಳ ಮೇಲೆ ಮನೆಗಳನ್ನು ಕಟ್ಟಿಕೊಂಡಿರುವುದರ ಬಗ್ಗೆ ಮಾನ್ಯ ಗೋಪಿನಾಥ್‌ರವರು ಬಹಳಷ್ಟು ಬೆಳಕನ್ನು ಚೆಲ್ಲಿದ್ದಾರೆ. ಅವರ ಮಾತುಗಳನ್ನು ನಾನು

ಒಪ್ಪುತ್ತೇನೆ. ಆರ್ಥಿಕವಾಗಿ ಹಿಂದುಳಿದವರು ಮತ್ತು ಮಧ್ಯಮವರ್ಗದವರನ್ನು ಟಾರ್ಗೆಟ್ ಮಾಡುವುದಕ್ಕೆ ಬದಲಾಗಿ ಪತ್ರಿಕೆಗಳಿಗೆ show ಕೊಡುವುದಕ್ಕಾಗಿ ಬುಲ್ಡೋಜರ್ ತೆಗೆದುಕೊಂಡು ಹೋಗಿ ನಾಲ್ಕು ಕಾಪೌಂಡ್‌ಗಳನ್ನು ಒಡೆದು ಹಾಕಿ ಬರುವುದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ಬಿ.ಬಿ.ಎಂ.ಪಿ. ಅಥವಾ ಅಧಿಕಾರದಲ್ಲಿರುವ ಸರ್ಕಾರಕ್ಕೆ ಜವಾಬ್ದಾರಿ ಎನ್ನುವುದು ಇದ್ದರೆ, ಯಾವುದೇ ಪಕ್ಷದ ನಾಯಕರು, ಶ್ರೀಮಂತರು ಅಥವಾ ಬಡವರು ಯಾರೇ ರಾಜಕಾಲುವೆಯನ್ನು ಒತ್ತುವರಿ ಮಾಡಿದ್ದರೂ ಅದನ್ನು ತೆರವುಗೊಳಿಸುವಂತಹ ಕೆಲಸವನ್ನು ಮಾಡಬೇಕೆಂದು ನಾನು ಆಗ್ರಹಪಡಿಸುತ್ತಿದ್ದೇನೆ.

**ಶ್ರೀ ಕೆ.ಗೋಪಾಲಯ್ಯ(ಅಬಕಾರಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಕಳೆದ ಮೂರು ವರ್ಷಗಳಿಂದ ಈ ಒತ್ತುವರಿ ನಡೆದಿಲ್ಲ. ಸುಮಾರು 10-15 ವರ್ಷಗಳ ಹಿಂದೆಯೇ ರಾಜಕಾಲುವೆಗಳನ್ನು ಒತ್ತುವರಿ ಮಾಡಿಕೊಂಡು ಕಟ್ಟಿರುವಂತಹ ಕಟ್ಟಡಗಳು ಅವು. ರಾಜಕಾಲುವೆಯ ಮೇಲೆ ಯಾರು ಕಟ್ಟಡಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ ಅವುಗಳನ್ನು ತೆರವುಗೊಳಿಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆಯೆಂದು ಮಾನ್ಯ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಮಾತನಾಡುತ್ತಾ ಹೇಳಿದ್ದಾರೆ. ಸುಮಾರು 79 ವರ್ಷಗಳಾದ ಮೇಲೆ ಬೆಂಗಳೂರಿನಲ್ಲಿ ಈ ಪ್ರಮಾಣದಲ್ಲಿ ಮಳೆಯಾಗಿದೆ. ಯಾವುದೋ ಒಂದು ಸರ್ಕಾರದ ಮೇಲೆ ಆಪಾದನೆ ಮಾಡುವುದಲ್ಲ. ನಾವೆಲ್ಲರೂ ಇದರ ಸದಸ್ಯರಾಗಿದ್ದೇವೆ.

**ಡಾ॥ ಕೆ.ಗೋವಿಂದರಾಜ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ಮೇಲೆ ಆಪಾದನೆ ಮಾಡುತ್ತಿಲ್ಲ.

**ಶ್ರೀ ಎಂ.ನಾಗರಾಜು:-** ಸನ್ಮಾನ್ಯ ಸಭಾಪತಿಯವರೇ, ನಾನು ಆಪಾದನೆ ಮಾಡುತ್ತಿಲ್ಲ. I have a right to question the Ruling Government. Hon'ble Minister (Sri K. Gopalaiah) is the helm of affairs. ಅವರು ಅಧಿಕಾರದಲ್ಲಿದ್ದಾಗ, ಅವರು

ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾವು ಅಧಿಕಾರಕ್ಕೆ ಬಂದರೇ, ನಾವು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವೆ. ಜವಾಬ್ದಾರಿಯಿಂದ ಉತ್ತರವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಕೆ.ಗೋಪಾಲಯ್ಯ:-** ಸನ್ಮಾನ್ಯ ಸಭಾಪತಿಯವರೇ, ನಾವು ಮಾಡುತ್ತೇವೆ ಎನ್ನುವ ಮಾತು ಕೊಡುತ್ತಿದ್ದೇನೆ. ಬಲಿಷ್ಠರು ಯಾರೇ ಇರಲಿ, ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ. ಮಾನ್ಯ ಸದಸ್ಯರು ನನ್ನ ಮಾತುಗಳನ್ನು ಸ್ವಲ್ಪ ಸಮಾಧಾನದಿಂದ ಕೇಳಬೇಕಾಗಿದೆ.

**ಶ್ರೀ ಎಂ.ನಾಗರಾಜು:-** ಸನ್ಮಾನ್ಯ ಸಭಾಪತಿಯವರೇ, ಅವರು ಮಾಡುತ್ತೇವೆ...... ಮಾಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಆದರೆ, ಏತಕ್ಕೋಸ್ಕರ ಮಾಡಲಿಲ್ಲವೆನ್ನುವುದು ನಮ್ಮ ಪ್ರಶ್ನೆಯಾಗಿದೆ. ಬೆಂಗಳೂರು ನಗರದ ನಾಗರಿಕರು ಕೇಳುತ್ತಿರುವ ಪ್ರಶ್ನೆಯನ್ನು ನಾನು ಇಲ್ಲಿ, ಅವರು ಅಧಿಕಾರದಲ್ಲಿ ಇರುವುದರಿಂದ ಉಲ್ಲೇಖ ಮಾಡುತ್ತಿದ್ದೇನೆ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, 40% ಎಂದು ಹೇಳಿದ್ದಾರೆ, ಶೇಕಡಾ 85 ಪರ್ಸೆಂಟ್ ಆಗಿದೆಯೆಂದು ಸನ್ಮಾನ್ಯ ರಾಜೀವ್‌ಗಾಂಧಿಯವರು ಹೇಳಿದ್ದರು. ಅದನ್ನು ಇದರ ಜೊತೆಯಲ್ಲಿ ಹೇಳಿದರೆ ಚೆನ್ನಾಗಿರುತ್ತದೆಂದು ಅವರು ನೆನಪು ಮಾಡುತ್ತಿದ್ದಾರೆ.

**ಶ್ರೀ ಕೆ.ಗೋಪಾಲಯ್ಯ:-** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದಲ್ಲಿದ್ದಾರೆಂದು ಅವರು ಏನು ಹೇಳಿದರೂ ಒಪ್ಪುವುದಕ್ಕೆ ನಾವು ಸಿದ್ಧರಿಲ್ಲ. ಬೆಂಗಳೂರು ನಗರದಲ್ಲಿ ಸುಮಾರು 70-80 ವರ್ಷಗಳ ನಂತರ ಇಷ್ಟೊಂದು ಪ್ರಮಾಣದಲ್ಲಿ ಮಳೆಯಾಗಿದೆ. ಕೇವಲ ಬೆಂಗಳೂರು ಮಾತ್ರವಲ್ಲ ಇಡೀ ರಾಜ್ಯದ ಎಲ್ಲ ಕೆರೆಕಟ್ಟೆಗಳು ತುಂಬಿರುವುದು ಇತಿಹಾಸದಲ್ಲಿ ಇದೇ ಪ್ರಥಮವಾಗಿದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕಳೆದ 40 ವರ್ಷಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲದೇ ಇರುವಂತಹ ಪರಿಸ್ಥಿತಿ ಉದ್ಭವವಾಗಿತ್ತು. ಇವತ್ತು ಸರ್ಕಾರ ಕೆ.ಆರ್.ಎಸ್.ನಿಂದ ಮತ್ತು ಹೇಮಾವತಿ ನದಿಯಿಂದ ನೀರು

ಬಿಡುತ್ತೇವೆಂದರೆ, ಜನರು ನಮಗೆ ನೀರು ಬೇಡವೆಂದು ಹೇಳುವಂತಹ ಪರಿಸ್ಥಿತಿ ಒದಗಿ ಬಂದಿರುವುದು ಸ್ವಾತಂತ್ರ್ಯ ಬಂದ ಮೇಲೆ ಇದೇ ಮೊದಲನೆಯ ಬಾರಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಎಲ್ಲರೂ ಕಾರಣರಾಗಿದ್ದೇವೆ. ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಬಹಳ ದೊಡ್ಡ ಪ್ರಮಾಣದಲ್ಲಿ ನಷ್ಟವುಂಟಾಗಿದೆ. ರಾಜ ಕಾಲುವೆಯನ್ನು ಒತ್ತುವರಿ ಮಾಡಿಕೊಂಡಿರುವವರು ಎಷ್ಟೇ ಬಲಿಷ್ಠ ವ್ಯಕ್ತಿಯಾಗಿರಲಿ ಅಥವಾ ರಾಜಕೀಯ ವ್ಯಕ್ತಿಯಾಗಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಸರ್ಕಾರದ ಬಳಿ village map ಇದೆ. ಅದರಲ್ಲಿ ಎಲ್ಲಿ ಹಳ್ಳ ಹೋಗಬೇಕು ಮತ್ತು ಎಲ್ಲಿ ಮೋರಿ ಹೋಗಬೇಕೆನ್ನುವುದು ಇದೆ. ಈ ದಿನ ಮಾನ್ಯ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಹೇಳಿರುವಂತೆ ರಾಜಕಾಲುವೆಗಳ ಮೇಲೆ ಕಟ್ಟಿರುವಂತಹ ಕಟ್ಟಡಗಳನ್ನು ತೆರವುಗೊಳಿಸುವುದು ಪುನಃ ಅದೇ ಜಾಗದಲ್ಲಿ ರಾಜಕಾಲುವೆಯನ್ನು ನಿರ್ಮಾಣ ಮಾಡುವಂತಹ ಕೆಲಸವನ್ನು ಮಾಡಲಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೋಪಾಲಯ್ಯನವರು ಬೆಂಗಳೂರಿನವರಾಗಿದ್ದಾರೆ. ಅವರು ಬಹಳ ವಿವರವಾಗಿ ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಮಹದೇವಪುರ ಮತ್ತು ಬೊಮ್ಮನಹಳ್ಳಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರವಾಹವುಂಟಾಗಿದೆ. ಆ ಕ್ಷೇತ್ರದ ಶಾಸಕರು ಯಾರು? ಮಾನ್ಯ ಸಚಿವರು ಯಾವ ಪಕ್ಷಕ್ಕೆ ಸೇರಿದ್ದಾರೆ. ಅದೇ ಪಕ್ಷದ ಶಾಸಕರು ಅಲ್ಲಿದ್ದಾರೆ. ಈ ರೀತಿ ಅವ್ಯವಹಾರ ನಡೆಯುತ್ತಿದ್ದರೆ ಅವರು ವಿರೋಧ ಪಕ್ಷದಲ್ಲಿ ಇದ್ದಾಗ ಉಲ್ಲೇಖ ಮಾಡಬಹುದಾಗಿತ್ತು. ಇವತ್ತು ಸುಮ್ಮನೆ, ಆ ಕಾಲದಲ್ಲಿ ಆಗಿತ್ತು; ಈ ಕಾಲದಲ್ಲಿ ಆಗಿತ್ತು ಎಂದು ಹೇಳುತ್ತಿದ್ದಾರೆ. ಅದೆಲ್ಲ ಹಳೆ ಕಾಲದ ಕಥೆ ಆಯಿತು. ಈಗ ಅದು ಬೇಕಿರದ ವಿಚಾರವಾಗಿದೆ. ಮಾನ್ಯ ಗೋಪಾಲಯ್ಯನವರು ಮಹಾಲಕ್ಷ್ಮಿ ಲೇಔಟ್‌ನ ಶಾಸಕರಾಗಿದ್ದಾರೆ. ಕಮಲಾನಗರ ಇಡೀ ಏಷ್ಯಾದಲ್ಲಿಯೇ ಅತೀ ದೊಡ್ಡ slum ಆಗಿತ್ತು. ಈಗ ಅದನ್ನು ಉತ್ತಮ ಬಡಾವಣೆಯನ್ನಾಗಿ ಪರಿವರ್ತಿಸಿದ್ದಾರೆ. ಆ ರೀತಿ ಅಲ್ಲಿಯೂ ಮಾಡಬಹುದಾಗಿತ್ತು. ಬೆಂಗಳೂರು ನಗರದಲ್ಲಿ ಹುಟ್ಟಿ ಬೆಳೆದ ನಮಗೆ ಅದರ ನೋವು ಗೊತ್ತಿದೆ. ಆದ್ದರಿಂದ ಆ ಸರ್ಕಾರ ತಪ್ಪು ಮಾಡಿದೆ, ಈ ಸರ್ಕಾರ ತಪ್ಪು ಮಾಡಿದೆ ಎಂದು ಹೇಳುವುದು ಬೇಡ. ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಬೆಂಗಳೂರು ಮಹಾನಗರ ಪಾಲಿಕೆಯನ್ನು ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು

ಒಬ್ಬನೇ ಒಬ್ಬ ಅಧಿಕಾರಿಯನ್ನು ತೆಗೆಯುವುದಕ್ಕೆ ಸಾಧ್ಯವಾಗುವುದಿಲ್ಲ. ವಿರೋಧ ಪಕ್ಷದಲ್ಲಿರುವವರು ನಾವು ಪ್ರಶ್ನೆ ಮಾಡುತ್ತಿದ್ದೇವೆ. ನಮ್ಮ ಪ್ರಶ್ನೆಗೆ ಸಾಧ್ಯವಾದರೇ ಅವರು ಉತ್ತರ ಕೊಡಲಿ. ನಮ್ಮ ಕಾಲದಲ್ಲಿ ಆಗಿದೆ ಎಂದು ಅವರು ಹೇಳಿದರೆ, ನಾನು ಕಥೆಯನ್ನು ಎಷ್ಟು ಬೇಕಾದರು ಹೇಳುತ್ತೇನೆ ಯಾವ ಪಕ್ಷದವರು ಅಧಿಕಾರದಲ್ಲಿ ಇದ್ದಾಗ ಬೆಂಗಳೂರಿನಲ್ಲಿ ಏನೇನು ಆಯಿತು ಎನ್ನುವುದರ ಬಗ್ಗೆ ಸಂಪೂರ್ಣವಾದ ವಿವರವನ್ನು ಕೊಡುತ್ತೇನೆ. ಸುಮಾರು 1700 ಕೋಟಿ ರೂಪಾಯಿಗಳಷ್ಟು ಕೆಲಸ ಆಗದೇ ಬಿಲ್ ತೆಗೆದುಕೊಂಡಿರುವ ಬಗ್ಗೆ ನಾನು ಸುಪ್ರೀಂ ಕೋರ್ಟ್‌ಗೂ ಹೋಗಿದ್ದೇನೆ. ಇದರ ಬಗ್ಗೆ ಬೇಕಾದರೇ ಮಾತನಾಡೋಣ. ಆದರೆ, ಈಗ ಬೇಡ. ಹೊಸ ಸದಸ್ಯರು ಮಾತನಾಡುತ್ತಿದ್ದಾರೆ. ಮಾನ್ಯ ಸಚಿವರು ಹಿರಿಯರಿದ್ದಾರೆ, ಆದ್ದರಿಂದ ಅವರಿಗೆ ಮಾತನಾಡಲು ಒಂದೆರಡು ನಿಮಿಷಗಳ ಕಾಲ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಂ.ನಾಗರಾಜು:-** ಸನ್ಮಾನ್ಯ ಸಭಾಪತಿಯವರೇ, ನಾನು ಮತ್ತೊಂದು ವಿಚಾರವನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಜುಲೈ ತಿಂಗಳಿನಲ್ಲಿ Indian Meteorological Departmentನವರು ಆಗಸ್ಟ್-ಸೆಪ್ಟೆಂಬರ್ ತಿಂಗಳುಗಳಲ್ಲಿ ಬೆಂಗಳೂರು ನಗರದಲ್ಲಿ ಹೆಚ್ಚು ಮಳೆಯಾಗುತ್ತದೆ ಎಂದು ಹೇಳಿರುತ್ತಾರೆ. ಅವರು ಮುನ್ಸೂಚನೆಯನ್ನು ಕೊಟ್ಟಿದ್ದರೂ ಸಹ ಸರ್ಕಾರ ಏತಕ್ಕೋಸ್ಕರ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಿಲ್ಲವೆನ್ನುವುದು ನನ್ನ ಪ್ರಶ್ನೆಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಬೊಮ್ಮನಹಳ್ಳಿ, ಕೆ.ಆರ್.ಪುರಂ ಮತ್ತು ಮಹದೇವಪುರಗಳಲ್ಲಿ ಹೆಚ್ಚು ಹಾನಿಯಾಗಿದೆ. ಈ ಕ್ಷೇತ್ರದಲ್ಲಿ ಮೂರ್ನಾಲ್ಕು ಬಾರಿ ಶಾಸಕರಾಗಿ ಆಯ್ಕೆಗೊಂಡು ಬಂದಿರುವವರು ಯಾವುದೇ ಪಕ್ಷದ ಸರ್ಕಾರವಿರಲಿ, ಇಂತಹ ವಿಚಾರಗಳನ್ನು ರಾಜ್ಯ ಸರ್ಕಾರದ ಗಮನಕ್ಕೆ ತರಬೇಕಾಗಿತ್ತು. ಈ ನಿಟ್ಟಿನಲ್ಲಿ ಕ್ರಮಗಳನ್ನು ತೆಗೆದುಕೊಳ್ಳದಿರುವುದನ್ನು ನೋಡಿದರೆ, ಅವರು ಯಾವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತಿದೆ. ನಾನು ವೈಯಕ್ತಿಕವಾಗಿ ಆಪಾದನೆಗಳನ್ನು ಮಾಡುತ್ತಿಲ್ಲ. ಆಗಿರುವಂತಹ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದೇನೆ. ಯಾರೋ ಒಬ್ಬ ಮಹಿಳೆ ತನ್ನ ಸಮಸ್ಯೆಯನ್ನು ತೆಗೆದುಕೊಂಡು ಬಂದಾಗ, ಆ ಶಾಸಕರು ಯಾವ ರೀತಿಯಲ್ಲಿ ವರ್ತಿಸಿದ್ದರು ಎನ್ನುವುದನ್ನು ನಾವು ಮಾಧ್ಯಮಗಳಲ್ಲಿ ನೋಡಿದಾಗ ನಮಗೇ ನಾಚಿಕೆಯಾಗುತ್ತಿತ್ತು.

ಸರಿ ಇದ್ದರೆ ಅದರ ಬಗ್ಗೆ ಗಮನಹರಿಸಬೇಕಾಗಿತ್ತು ಸರಿ ಇಲ್ಲದಿದ್ದರೆ, " ಇದು ಕಾನೂನುಬದ್ಧವಾಗಿಲ್ಲ, ಆಗುವುದಿಲ್ಲಮ್ಮ" ಎಂದು ಹೇಳಬೇಕಾಗಿತ್ತು. ಆದರೆ, ಮಾನ್ಯ ಶಾಸಕರು ಯಾವ ರೀತಿಯಲ್ಲಿ ವರ್ತಿಸಿದರು ಎನ್ನುವುದನ್ನು ನಾವು ಟ್ವಿಟರ್‌ಗಳಲ್ಲಿ ನೋಡಿದ್ದೇವೆ. ಈ ರೀತಿ ನಡೆದುಕೊಳ್ಳುವುದನ್ನು ಸರ್ಕಾರವೆಂದು ಹೇಳುತ್ತಾರೆಯೇ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವೆಲ್ಲರನ್ನು inclusive ತೆಗೆದುಕೊಂಡು ಹೋಗಬೇಕಾಗುತ್ತದೆ. ಆಡಳಿತ ಪಕ್ಷದವರು ವಿರೋಧ ಪಕ್ಷದವರಲ್ಲಿ ಸಲಹೆ ಸೂಚನೆಗಳನ್ನು ಕೇಳಿದರೆ ನಾವು ಕೊಡುವುದಕ್ಕೆ ಸಿದ್ಧರಿದ್ದೇವೆ.

**ಸಭಾಪತಿಯವರು:-** ಮಾನ್ಯ ನಾಗರಾಜ್‌ರವರೇ, come to the matter. ವಿಷಯದ ಮೇಲೆ ಮಾತನಾಡಿ.

**ಶ್ರೀ ಎಂ.ನಾಗರಾಜು:-** ಸನ್ಮಾನ್ಯ ಸಭಾಪತಿಯವರೆ, ಒಂದು ನಿಮಿಷ, I will complete it. ಇದರ ಜೊತಗೆ, ಐ.ಟಿ. ಕಾರಿಡಾರ್‌ಗಳು, ಬೆಳ್ಳಂದೂರು, ವರ್ತೂರು, ಸರ್ಜಾಪುರ ರೋಡ್. ಏರ್‌ಪೋರ್ಟ್ ರೋಡ್, ಕೆ.ಆರ್.ಪುರಂ, ಸಿಲ್ಕ್ ಬೋರ್ಡ್ ಇರಬಹುದು ಮತ್ತು ಎಲ್ಲ ಕಡೆಗಳಲ್ಲಿ ಇರುವಂತಹ ಕಂಪನಿಗಳು ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತಿವೆ. ಅವರು ಮಾಡಿರುವಂತಹ ತಪ್ಪಾದರು ಏನು? ಜಿ.ಎಸ್.ಟಿ. (Goods and Services Tax) ಕಟ್ಟಿರುವುದು, ಆದಾಯ ತೆರಿಗೆ ಕಟ್ಟಿರುವುದು, ಆಸ್ತಿ ತೆರಿಗೆಯನ್ನು ಕಟ್ಟಿರುವುದು ಮತ್ತು wealth tax ಕಟ್ಟಿರುವುದು ಅವರ ತಪ್ಪೇ?

**(ಮುಂದುವರಿದಿದೆ)**

(915) 19.9.2022 4.30 ಪಿಕೆ:ಜಿಆರ್

**ಶ್ರೀ ಎಂ.ನಾಗರಾಜು (ಮುಂದು)**

ವಿದೇಶದಿಂದ ಬಂಡವಾಳ ತಂದು ಇಲ್ಲಿ ಹಾಕಿದ್ದು ತಪ್ಪೇ? ಕಂಪನಿಗಳಿಗೆ ಟ್ರಾಕ್ಟರ್ ಮೂಲಕ ಹೋಗಬೇಕಾಗುತ್ತದೆ ಎಂದರೆ ನಾವು ಯಾವರೀತಿ ಬ್ರಾಂಡ್ ಬೆಂಗಳೂರನ್ನು ಕಟ್ಟುವುದಕ್ಕೆ

ಹೊರಟಿದ್ದೇವೆ ಎಂದು ಕೇಳಬೇಕಾಗುತ್ತದೆ. ನಮ್ಮ ರಾಜ್ಯದ ಹಿರಿಯ ನಾಯಕರಾಗಿದ್ದಂತಹ ಮಾನ್ಯ ಎಸ್.ಎಂ. ಕೃಷ್ಣಾರವರು 4 ತಿಂಗಳ ಹಿಂದೆ ರಾಜ್ಯ ಸರ್ಕಾರಕ್ಕೆ ಒಂದು ಕಾಗದವನ್ನು ಬರೆದಿದ್ದಾರೆ. ಬ್ರಾಂಡ್ ಬೆಂಗಳೂರನ್ನು ನೀವು ಉಳಿಸಿಕೊಳ್ಳಬೇಕು ಎಂದು ಮನವಿ ಮಾಡಿದಾಗ ಸರ್ಕಾರ ಅದರ ಬಗ್ಗೆ ಕ್ಯಾರೇ ಎನ್ನಲಿಲ್ಲ ಎಂದರೆ ಯಾವರೀತಿ ಸರ್ಕಾರ ನಡೆಯುತ್ತಿದೆ ಎಂಬುದನ್ನು ಕೇಳಬೇಕಾಗುತ್ತದೆ. ಉಡಾಫೆ ಉತ್ತರ ಕೊಡುವುದನ್ನು ಬಿಡಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ನಾನು ಇನ್ನೆರಡು ನಿಮಿಷ ತೆಗೆದುಕೊಳ್ಳುತ್ತೇನೆ. ನಾನು ಕೇವಲ ಐ.ಟಿ.,-ಬಿ.ಟಿ., ಕಾಮಗಾರಿಗೆ ಸಂಬಂಧಪಟ್ಟ ವಿಚಾರಗಳನ್ನು ಮಾತ್ರ ಮಾತನಾಡುತ್ತಿಲ್ಲ. ಮನೆ-ಅಪಾರ್ಟ್‌ಮೆಂಟ್‌ಗಳಲ್ಲಿ 5 ಅಡಿ ನೀರು ನಿಂತಿದ್ದ ಉದಾಹರಣೆಗಳೂ ಇವೆ. ನಾನೊಂದು ಉದಾಹರಣೆ ಹೇಳುತ್ತೇನೆ. ನಾನು ಬಿ.ಎಂ.ಟಿ.ಸಿ., ಅಧ್ಯಕ್ಷನಾಗಿದ್ದಾಗ ಶಾಂತಿ ನಗರ ಮುಳುಗಡೆ ಆಗುವ ಸ್ಥಿತಿ ಬಂತು. ಆಗ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸಚಿವರಾಗಿದ್ದ ಮಾನ್ಯ ಜಾರ್ಜ್ ಅವರನ್ನು ಕರೆಸಿ, ಅಲ್ಲಿನ ಸಮಸ್ಯೆಯನ್ನು ಅವರ ಗಮನಕ್ಕೆ ತಂದು ಅಲ್ಲಿ ಸೂಕ್ತ ರೀತಿಯಲ್ಲಿ ಕೆಲಸ ಮಾಡಿಸಿದೆವು. ಆದ್ದರಿಂದ ಈ ಸಲ ಅಲ್ಲಿ ಮಳೆ ನೀರಿನಿಂದ ಯಾವುದೇ ರೀತಿ ಸಮಸ್ಯೆಯಾಗಲಿಲ್ಲ. ಅಲ್ಲಿದ್ದ ನಾಲೆಯ ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡಿಸಿದ್ದರಿಂದ ಮುಳುಗಡೆಯ ಸಮಸ್ಯೆ ಬರಲಿಲ್ಲ. ಸರ್ಕಾರಕ್ಕೆ ಬದ್ಧತೆ ಇದ್ದಿದ್ದೇಯಾದರೆ, ಪಾರದರ್ಶಕತೆ ಇದ್ದಿದ್ದರೆ, ಕಮಿಟ್‌ಮೆಂಟ್ ಇದ್ದಿದ್ದರೆ ಖಂಡಿತವಾಗಿ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳುತ್ತಿದ್ದರು; ಹವಾಮಾನ ಇಲಾಖೆಯವರು ಕೊಟ್ಟಿದ್ದ ಎಲ್ಲಾ ಅಲರ್ಟ್ ವಾರೆಂಟ್‌ಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದರು. ಆದರೆ ಸರ್ಕಾರ ಹಾಗೆ ಮಾಡಲಿಲ್ಲ. ಬಿ.ಬಿ.ಎಂ.ಪಿ., ಯಲ್ಲಿ ಇರುವ ಅಧಿಕಾರಿಗಳ ಪರಾಮರ್ಶೆ ನಡೆಸಬೇಕಾಗುತ್ತದೆ; ಪ್ರಾಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳನ್ನು ಅಲ್ಲಿಗೆ ಕೊಡಬೇಕಾಗುತ್ತದೆ. B.B.M.P., should not become only tax collection centre. It should deliver civil amenities too.

**Mr.CHAIRMAN:-** Please conclude.

**ಶ್ರೀ ಎಂ.ನಾಗರಾಜ್:-** ಮಾನ್ಯ ಸಭಾಪತಿಯವರೇ, ಈ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕಳೆದ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಬಿದ್ದ ಮಳೆಯಿಂದ ಸುಮಾರು 27 ಜಿಲ್ಲೆಗಳು ಪ್ರವಾಹ ಪೀಡಿತವಾಗಿವೆ. ಸುಮಾರು ನೂರರಿಂದ ನೂರ ಆರು ಜನ ಮೃತಪಟ್ಟಿದ್ದಾರೆ. 187 ಗ್ರಾಮಗಳು ಪ್ರವಾಹ ಮತ್ತು ನೆರೆಪೀಡಿತವಾಗಿವೆ. ಇದರಲ್ಲಿ ಸುಮಾರು 23,794 ಮನೆಗಳು ಜಖಂಗೊಂಡಿವೆ. ಸುಮಾರು 5.8 ಲಕ್ಷ ಹೆಕ್ಟೇರ್‌ನಲ್ಲಿದ್ದ ಅಗಾಧವಾದ ಬೆಳೆ ಹಾನಿಯಾಗಿದೆ. ಸುಮಾರು 22,734 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ, ರಾಷ್ಟ್ರ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ, ಗ್ರಾಮೀಣ ರಸ್ತೆ ಹೀಗೆ ಇವೆಲ್ಲವೂ ಹಾಳಾಗಿವೆ. ಈಗ ಅವು ಸಂಚಾರಕ್ಕೆ ಯೋಗ್ಯವಾಗಿಲ್ಲ. ಕೇಂದ್ರ ಸರ್ಕಾರ ನಿಗದಿ ಮಾಡಿರುವ, ಪರಿಹಾರ ಕೊಡುವಂತಹ ಮಾರ್ಗಸೂಚಿಗಳು 2015ರಲ್ಲಿ ಬಂದಿದ್ದಾಗಿದೆ. 2015ರಿಂದ ಇದುವರೆಗೂ ಅದರ ಗೈಡ್‌ಲೈನ್ಸ್ ಮಾಡಿಫೈ ಆಗಲಿಲ್ಲ. 2 ಹೆಕ್ಟೇರ್‌ಗೆ ಒಳಪಟ್ಟು ಯಾರು ಜಮೀನು ಹೊಂದಿದ್ದಾರೋ ಅವರಿಗೆ ಮಾತ್ರ ಬೆಳೆ ಪರಿಹಾರ ಕೊಡಬೇಕು ಎನ್ನುವ ಸರ್ಕಾರದ ಒಂದು ಷರತ್ತು ಏನಿದೆಯೋ, ಇದರಿಂದ ಕೆಲವರಿಗೆ ಅನುಕೂಲವಾಗುತ್ತದೆ. ಆದರೂ ಮಧ್ಯಮ ವರ್ಗದವರಿಗೆ ಈ ಸವಲತ್ತು ಕೊಡಬೇಕು; ಕನಿಷ್ಠ 5 ಹೆಕ್ಟೇರ್ ಜಮೀನು ಹೊಂದಿದ್ದು ಬೆಳೆ ಹಾನಿಯಾಗಿರುವವರಿಗೂ ಪರಿಹಾರ ಕೊಡಬೇಕಾಗುತ್ತದೆ ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇದಲ್ಲದೇ, 27 ಜಿಲ್ಲೆಗಳಲ್ಲಿ ಕೆರೆ-ಕಟ್ಟೆಗಳು ಒಡೆದು; ತೊರೆಗಳು, ಕೆರೆಗಳು ಉಕ್ಕಿ ಹರಿದು, ಸಾಕಷ್ಟು ಜಮೀನುಗಳ ಮೇಲೆ ನೆರೆಯಿಂದ ಬಂದ debris ತುಂಬಿದೆ. ಸಾಧಾರಣವಾಗಿ ರೈತರು ಇಂತಹ ಜಾಗದಲ್ಲಿ ಕೃಷಿ ಕೆಲಸ ಮಾಡಬೇಕು ಎಂದರೆ ತಾವೇ ನಿಂತು ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರ ಇದಕ್ಕೆ ವಿಶೇಷವಾಗಿ ಸಹಾಯ ಧನ ಕೊಡಬೇಕು, Tippers, Tractors ಗಳನ್ನು ಮುಫತ್ ಆಗಿ ಒದಗಿಸಿಕೊಡಬೇಕು ಅಥವಾ ಡೀಸೆಲ್ ಕೊಡುವುದನ್ನೋ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಕೇಂದ್ರ ಸರ್ಕಾರ ಕೊಡತಕ್ಕಂಥ tied fund ಏನಿದೆ, ಅದೇ ಸಾಕಾಗುವುದಿಲ್ಲ. ನಿಜವಾಗಿ ಹೇಳುವುದಾದರೆ, ಕಳೆದ 5 ವರ್ಷದಿಂದ ರೈತ ಮಳೆಯಿಂದ ಸೊರಗಿ ಹೋಗಿದ್ದಾನೆ, ಮಲಗಿಕೊಂಡು ಬಿಟ್ಟಿದ್ದಾನೆ. ಅವನಿಗೆ ಏನಾದರೂ ಸಹಾಯ ಮಾಡಬೇಕು ಎಂದರೆ, ಕೇಂದ್ರದ ಪರಿಹಾರವನ್ನು ಬಿಟ್ಟು, ಪ್ರತ್ಯೇಕವಾಗಿ ನಿಮ್ಮದೇ ಆದ ಪರಿಹಾರವನ್ನು ಕೊಡುವ ಕೆಲಸ ಮಾಡಿ. ಸೆಂಟ್ರಲ್ ಟೀಮ್ ಬಂದು ಅಧ್ಯಯನ ಮಾಡಿ ಅವರು ಕೊಡುವಂತಹ ವರದಿಗೆ ದಯವಿಟ್ಟು ಕಾಯುವುದಕ್ಕೆ ಹೋಗಬೇಡಿ. ಸರ್ಕಾರ ಏನು ಕೊಡಬೇಕು ಎಂದಿದೆಯೋ ಅದನ್ನು ಜನ ಬೀದಿ ಮೇಲೆ ಇದ್ದಾಗಲೇ ಕೊಡಬೇಕು. ಆಗ ಸರ್ಕಾರವನ್ನು ಗೌರವಿಸುತ್ತಾರೆ; ಸರ್ಕಾರಕ್ಕೆ ಒಳ್ಳೆಯ ಗೌರವ ಬರುತ್ತದೆ. 3-6 ತಿಂಗಳಾದ ಮೇಲೆ ಕೊಟ್ಟರೆ ಏನೂ ಉಪಯೋಗ ಆಗುವುದಿಲ್ಲ. ಇದು ನನ್ನ ಕಳಕಳಿಯ ಮನವಿಯಾಗಿದೆ. ಯಾವುದೇ ರೀತಿಯಲ್ಲೂ ಸೆಂಟ್ರಲ್ ಟೀಮ್‌ನ ವರದಿಗೆ ಕಾಯಬೇಡಿ. ಯಾರು ನಿರಾಶ್ರಿತರಿದ್ದಾರೋ, ಸಂತ್ರಸ್ತರಿದ್ದಾರೋ ಅವರಿಗೆ ಪರಿಹಾರ ಕೊಡಬೇಕು.

ಕಳೆದ 5 ವರ್ಷಗಳಿಂದ ಸತತವಾಗಿ ರಾಜ್ಯದಲ್ಲಿ ಮಳೆ ಆಗುತ್ತಲೇ ಇದೆ. ಒಂದು ಅಂದಾಜಿನ ಪ್ರಕಾರ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗೆ ಒಟ್ಟಾರೆ ಇದುವರೆಗೂ ಸುಮಾರು ರೂ. 5 ಲಕ್ಷ ಕೋಟಿಗಳಷ್ಟು ಹಾನಿಯಾಗಿರಬಹುದು. ಇದನ್ನು ಕೇವಲ ರಾಜ್ಯ ಸರ್ಕಾರವೇ ನಿಭಾಯಿಸುವುದು ಬಹಳ ಕಷ್ಟ. ಕನಿಷ್ಠ ಈ ವರ್ಷದ ನೆರೆ ಹಾವಳಿ, ಹಾನಿಯನ್ನು natural calamity ಎಂದು ಘೋಷಣೆ ಮಾಡಬೇಕು. ಏಕೆಂದರೆ, ಇದು severest of the severe ಆಗಿದೆ. ಇದನ್ನು ಘೋಷಣೆ ಮಾಡಿದರೆ ಕೇಂದ್ರ ಸರ್ಕಾರ ಬೇರೆ ಬೇರೆ ಯೋಜನೆಯ ಸಲುವಾಗಿ ತನ್ನಲ್ಲಿರುವ ಆರ್ಥಿಕ ನೆರವನ್ನು ರಾಜ್ಯ ಸರ್ಕಾರಕ್ಕೆ ಕೊಡಬಹುದು. ಇದರಿಂದ ರಾಜ್ಯ ಸರ್ಕಾರ ತನ್ನದೇ ಆದ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಿ, ಸಾರ್ವಜನಿಕ ಮೂಲ ಸೌಕರ್ಯಗಳಿಗೋಸ್ಕರ ರೆಸ್ಟೋರ್ ಮಾಡಬಹುದು; ಪುನಶ್ಚೇತನಗೊಳಿಸಬಹುದು. ಈ ದೃಷ್ಟಿಯಲ್ಲಿ ಸರ್ಕಾರ ಈ ಬಗ್ಗೆ ಆಲೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಮಳೆಯ ಕಾರಣದಿಂದ ಯಾವ ಮನೆಯಲ್ಲಿ 2-3 ದಿವಸಗಳಿಂದ ನೀರು ನಿಂತಿದೆಯೋ ಅಂತಹ ಮನೆಗಳನ್ನು ಪೂರ್ಣ ಜಖಂಗೊಂಡಿದೆ ಎಂದು ಭಾವಿಸಿ ಗರಿಷ್ಠ

ಪರಿಹಾರ ಕೊಡಬೇಕು. ಯಾವ ತಾಲ್ಲೂಕುಗಳು ಮಳೆಯಿಂದ ಬಾಧಿತವಾಗಿವೆಯೋ ಅಂತಹ ತಾಲ್ಲೂಕುಗಳನ್ನು ನೆರೆ ಪೀಡಿತ ತಾಲ್ಲೂಕುಗಳು ಎಂದು ಘೋಷಣೆ ಮಾಡಿದರೆ, ಅಲ್ಲಿನ ಜನ ಮಾಡಿರುವ ಸಾಲ, ಕಂದಾಯವನ್ನು ಮಾಫಿ ಮಾಡಬಹುದು. ಎಲ್ಲವನ್ನೂ ಬರಿದು ಮಾಡಿಕೊಂಡಿರುವ ರೈತರಿಗೆ ಬ್ಯಾಂಕ್ ಮುಖೇನ ಬಡ್ಡಿರಹಿತ ಸಾಲ ಕೊಟ್ಟರೆ ಅವರು ಪುನಃ ತಮ್ಮ ಜೀವನವನ್ನು ಕಟ್ಟಿಕೊಳ್ಳುತ್ತಾರೆ. ಕಳೆದ 5 ವರ್ಷಗಳಿಂದ ರೈತ ನೊಂದಿದ್ದಾನೆ. ಅವನ ತಾಳ್ಮೆಯನ್ನು ಯಾವುದೇ ರೀತಿಯಲ್ಲೂ ಪರೀಕ್ಷಿಸಬಾರದು.

ಇನ್ನು ಶಾಲಾ ಕಟ್ಟಡಗಳಿಗೆ ಸಂಬಂಧಪಟ್ಟಂತೆ ಮಾತನಾಡುವುದಾದರೆ, ಪ್ರತಿ ವರ್ಷ ಬರುವ ಮಳೆಗಳಿಂದ ಶಾಲಾ ಕಟ್ಟಡಗಳು ಕುಸಿಯುವುದನ್ನು ನೋಡುತ್ತೇವೆ, ಎಷ್ಟೋ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿವೆ. ಅಂಗನವಾಡಿ ಕಟ್ಟಡಗಳಂತೂ ಬಿದ್ದೇ ಹೋಗಿವೆ. ನಾವು ಕೊಡುವಂತಹ 2 ಲಕ್ಷ ರೂಪಾಯಿಗಳ ಪರಿಹಾರ ಗೋಡೆ ಕಟ್ಟುವುದಕ್ಕಾಗಲಿ ಅಥವಾ ಛಾವಣಿ ಹಾಕುವುದಕ್ಕಾಗಲಿ ಸಾಕಾಗುವುದಿಲ್ಲ. ಇದರ ಬಗ್ಗೆ ವಿಶೇಷ ಕಾರ್ಯಕ್ರಮ ತರಬೇಕು. ಈಗಲೇ ಸರ್ಕಾರ, ಅದರಲ್ಲೂ ಶಿಕ್ಷಣ ಇಲಾಖೆ, ಎಲ್ಲಿ ಮಕ್ಕಳು ಓದುವುದಕ್ಕಾಗುವುದಿಲ್ಲವೋ, ಎಲ್ಲಿ ಅಂಗನವಾಡಿ ಮಕ್ಕಳು ಇರುವುದಕ್ಕೆ ಸಾಧ್ಯವಿಲ್ಲವೋ ಅವುಗಳನ್ನು ಗುರುತಿಸಿ ಅನ್‌ಸೇಫ್ ಎಂದು ಡಿಕ್ಲೇರ್ ಮಾಡಿ ಅಲ್ಲಿ ಶಾಲೆಗಳನ್ನು ನಡೆಸದ ಹಾಗೆ ನಿಗಾ ವಹಿಸಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಕೇಂಪೇಗೌಡರು ಕಟ್ಟಿಸಿದಂತಹ, ಉದ್ಯಾನ ನಗರಿ, ಕೆರೆಗಳ ನಗರ, City of gardens and lakes ಎಂದು ಬೆಂಗಳೂರನ್ನು ಏನು ಕರೆಯುತ್ತೇವೆಯೋ ಅಲ್ಲಿ, ಮಾನ್ಯ ಭೋಜೇಗೌಡರು ಹೇಳಿದ ಹಾಗೆ, ಲಕ್ಷ್ಮಣರಾವ್ ಕಮಿಟಿ ರಿಪೋರ್ಟ್ ಪ್ರಕಾರ ಮತ್ತು ಮಾನ್ಯ ಕೋಳಿವಾಡ ಅವರ ನೇತೃತ್ವದಲ್ಲಿದ್ದ ಸದನ ಸಮಿತಿಯ ವರದಿ ಪ್ರಕಾರ ಕೇವಲ 285 ಕೆರೆಗಳು ಮಾತ್ರ ಇವೆ.

**(ಮುಂದು . . .)**

**(916) 19-09-2022 4.40 ಡಿಎಸ್-ಜಿಆರ್**

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ಮುಂದು):-**

ಬೆಂಗಳೂರಿನಲ್ಲಿ ಪ್ರಮುಖವಾಗಿರುವಂಥ 3 ಕಣಿವೆಗಳಿವೆ. ಹೆಬ್ಬಾಳ ಕಣಿವೆ, ಕೋರಮಂಗಲ ಚಲ್ಲಘಟ್ಟ ಕಣಿವೆ, ವೃಷಭಾವತಿ ಕಣಿವೆ ಎನ್ನತಕ್ಕಂಥದ್ದು. ಇವುಗಳಲ್ಲಿ ಬೆಳ್ಳಂದೂರು ಕೆರೆ, ವರ್ತೂರು ಕೆರೆ, ಹಲಸೂರು ಕೆರೆ, ಸ್ಯಾಂಕಿಟ್ಯಾಂಕ್, ಮಡಿವಾಳ ಕೆರೆ, ದೊಡ್ಡಾನೆಕುಂದಿ, ನಾಗಾವಾರ, ಪುಟ್ಟೇನಹಳ್ಳಿ, ಜಕ್ಕೂರು ಪ್ರಮುಖವಾಗಿರುವಂಥದ್ದು. 741 ಕಿಲೋಮೀಟರ್ ಉದ್ದದ ಮಳೆ ಪ್ರವಾಹವನ್ನು ನಿಭಾಯಿಸುವಂತಹ ಅಂದರೆ, Storm Water Drains ಪ್ರಮುಖವಾಗಿರುವಂಥದ್ದು ಇದೆ. ಅದೇ ರೀತಿಯಾಗಿ 1,500 ಮೀಟರ್ ಉದ್ದದ ದ್ವಿತೀಯ ವರ್ಗದ ಕಾಲುವೆಗಳಿವೆ. ಇವುಗಳಲ್ಲಿ ಸುಮಾರು 2,626 ಕಡೆ ಇದನ್ನು ಒತ್ತುವರಿ ಮಾಡಿದ್ದಾರೆ. ಇದುವರೆವಿಗೂ ಕೇವಲ 627 ಮಾತ್ರ ಒತ್ತುವರಿ ಆಗಿರುವಂಥದ್ದನ್ನು ತೆರವುಗೊಳಿಸಿದ್ದಾರೆ. ಇನ್ನು ಸುಮಾರು 2,000 ಕಡೆಗಳಲ್ಲಿ ಒತ್ತುವರಿಯಾಗಿರುವಂತಹ ರಾಜಕಾಲುವೆಗಳನ್ನು ತೆರವುಗೊಳಿಸಬೇಕಾಗಿದೆ. ಕಾರ್ಯಾಚರಣೆ ನಡೆಯುತ್ತಿತ್ತು. ಕೆಲವು ಕಾರಣಗಳಿಂದ ಕಾರ್ಯಾಚರಣೆ ನಿಂತು ಹೋಗಿದೆ. ಯಾವುದೇ ಕಾರಣಕ್ಕೂ ಇದನ್ನು ನಿಲ್ಲಿಸಬಾರದು. ಇದಕ್ಕೆ ಪರಿಹಾರ ಏನಿದೆ? ನಮ್ಮ ನೀರಾವರಿ ಸಚಿವರು ಇಲ್ಲೇ ಇದ್ದಾರೆ. ಈ ಕಾಲುವೆಗಳಲ್ಲಿ ಹೂಳು ಎತ್ತಬೇಕು. ಅವುಗಳನ್ನು remodel ಮಾಡಬೇಕು. ನಾಲೆಗಳನ್ನು, ಕಾಲುವೆಗಳನ್ನು modernisation ಮಾಡುತ್ತಾರೆ. ಅದೇ ರೀತಿ ಮಾಡಿದರೆ ಬಹುಶಃ ಬೆಂಗಳೂರಿನಲ್ಲಿ ಎಷ್ಟೇ ಮಳೆಯಾದರೂ ಕೂಡ, ಏಕೆಂದರೆ ಸುಮಾರು 2,000-3,000 ಮೀಟರ್‌ನಷ್ಟು ಸಮುದ್ರ ಎತ್ತರವಾಗಿರುವಂಥದ್ದು. ಇಂತಹ ಪ್ರವಾಹ ಆಗಲಾರದು. ಈ ದೃಷ್ಟಿಯಿಂದ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, ಇತ್ತೀಚಿನ ದಿನಗಳಲ್ಲಿ ನಾವು ನೋಡಿದ್ದೇವೆ. ಬೆಂಗಳೂರು ನಗರದ ಬಗ್ಗೆ ಸಾಕಷ್ಟು ಕಾಮೆಂಟ್‌ಗಳು ಬರುತ್ತಿವೆ. ಅದರಲ್ಲೂ ಕೂಡ ಪತ್ರಿಕೆಗಳಲ್ಲಿ ಇತ್ತೀಚೆಗೆ ನೋಡಿದ್ದೇವೆ. ಮೊನ್ನೆ "When India's 'IT Capital' went under' ಎಂದು 'The Hindu' ಪತ್ರಿಕೆಯಲ್ಲಿ ಬಂದಿದೆ. ಈ ರೀತಿಯಲ್ಲಿ ಬರತಕ್ಕಂಥ ಕಾಮೆಂಟ್‌ಗಳಿಂದ ಏನಾಗುತ್ತದೆಂದರೆ ರಾಜ್ಯಕ್ಕೆ, ಬೆಂಗಳೂರಿಗೆ ಬರತಕ್ಕಂಥ ಯಾರು entrepreneurs, ಎಂ.ಎನ್.ಸಿ.,

ಕಂಪನಿಗಳಿವೆ ಅವರು ಬರುವುದಿಲ್ಲ. ಸಾಕಷ್ಟು ಕೆಟ್ಟ ರೀತಿಯಲ್ಲಿ ಬರೆಯುತ್ತಿದ್ದಾರೆ. ಇದರಿಂದ ನೆರೆ ರಾಜ್ಯಗಳಾದ ತೆಲಂಗಾಣ, ಮಹಾರಾಷ್ಟ್ರ, ಪೂನಾಕ್ಕೆ ಆಹ್ವಾನ ಕೊಟ್ಟ ಹಾಗೆ ಆಗುತ್ತದೆ. ಈ ದೃಷ್ಟಿಯಿಂದ ಸರ್ಕಾರಕ್ಕೆ ನನ್ನ ಕಳಕಳಿ ಏನೆಂದರೆ, ಉನ್ನತ ಮಟ್ಟದ ಅಧಿಕಾರಿಗಳ ಸಭೆಯನ್ನು ಮಾಡಬೇಕಾಗುತ್ತದೆ. ಕೇವಲ ಮಳೆಗಾಲದಲ್ಲಿ ಅಲ್ಲ, ನೆರೆ ಬಂದ ಸಮಯದಲ್ಲಿ ಅಲ್ಲ. ಯಾವಾಗಲೂ ನಿಯತಕಾಲಿಕವಾಗಿ ಸಭೆಯನ್ನು ನಡೆಸುಂತಹ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ಪತ್ರಿಕೆಯಲ್ಲಿ 'From Silicon City to Sinking City' ಎಂದು ಆರ್ಟಿಕಲ್ ಬಂದಿದೆ. ಈ ರೀತಿಯಾದಂತಹ ವ್ಯಾಖ್ಯಾನಗಳು ಬರುವುದರಿಂದ ಏನು ಬೆಂಗಳೂರು ನಗರಕ್ಕೆ ಘನತೆ ಇತ್ತು, ಬೆಂಗಳೂರು ನಗರವನ್ನು ನಾಡಪ್ರಭು ಕೆಂಪೇಗೌಡರು ಕಟ್ಟಿದರು ಎನ್ನುವ ವ್ಯಾಖ್ಯಾನ ಏನಿತ್ತು ಅದಕ್ಕೆ ಎಲ್ಲೋ ಒಂದು ಕಡೆ ಧಕ್ಕೆಯಾಗುತ್ತಿದೆ. ಇದನ್ನು ಸರ್ಕಾರ ಗಮನಹರಿಸಬೇಕು, ಮುತುರ್ವಜಿ ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನಾವೆಲ್ಲರೂ ಕೂಡ ಇಲ್ಲೇ ಇದ್ದೇವೆ. ಬಿ.ಬಿ.ಎಂ.ಪಿ., ಚುನಾವಣೆಯಾಗಿ ವಾರ್ಡ್‌ಗಳಲ್ಲಿ ಕಾರ್ಪೋರೇಟ್ ಇದ್ದರೆ ಇಷ್ಟು ಸಮಸ್ಯೆಗಳಾಗುತ್ತಿರಲಿಲ್ಲವೇನೋ? ಜನಪ್ರತಿನಿಧಿಗಳು ಇದ್ದಾಗ ಯಾರು ಬಾಧಿತರಾಗಿದ್ದಾರೆ ಅವರಿಗೆ ಊಟ, ವಸತಿಗಳನ್ನು ಕೊಡುತ್ತಿದ್ದರೇನೋ? ಸರ್ಕಾರ ಚುನಾವಣೆ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಬಯಸುತ್ತಿದ್ದೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆಗತಕ್ಕಂಥ ಕಾಲುಸಂಕಗಳ ಬಗ್ಗೆ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಕಾಂಗ್ರೆಸ್ ಮತ್ತು ಜನತಾದಳ ಸಮ್ಮಿಶ್ರ ಸರ್ಕಾರ ಇದ್ದಾಗ ನಾವು ಕಾಲುಸಂಕಗಳ ಸರ್ವೆಯನ್ನು ಮಾಡಿಸಿದ್ದೆವು. ನಮ್ಮ ಪಶ್ಚಿಮಘಟ್ಟ ಮತ್ತು ಕಡಲ ತೀರದಲ್ಲಿ ಇರತಕ್ಕಂಥ ಜಿಲ್ಲೆಗಳಲ್ಲಿ ಒಟ್ಟು 1,314 ಕಾಲುಸಂಕಗಳಿವೆ. ಇವುಗಳಿಗೆ ಡಿಸೈನ್ ಕೂಡ ಮಾಡಿಸಿದ್ದೆವು. ಯಾವುದು 5 ಮೀಟರ್ ಅಗಲ ಇದೆ, ಯಾವುದು 10 ಮೀಟರ್ ಇದೆ, ಯಾವುದು 100, 150 ಅಥವಾ 500 ಅಡಿ ಇದೆ, ಏನೇನು ಮಾಡಬೇಕು ಎನ್ನತಕ್ಕಂಥದ್ದು. ಸುಮಾರು 185 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇದನ್ನು ಕಟ್ಟಬೇಕೆಂದು ಮಾಡಿ ಅದಕ್ಕೆ ಜಾಲಸಂಪರ್ಕ ಸೇತುವೆ ಎಂದು ನಾಮಕರಣ ಮಾಡಿದ್ದೇವೆ. ಇತ್ತೀಚೆಗೆ ದಿನಗಳಲ್ಲಿ ಅದನ್ನು ಬದಲಾವಣೆ ಮಾಡಿದ್ದಾರೆ. ಇರಲಿ,

ತೊಂದರೆ ಏನು ಇಲ್ಲ. ನಮಗೆ ಒಟ್ಟಾರೆ ಆಗಬೇಕು. ಆ ಸಮಯದಲ್ಲಿ ಒಂದೆರಡು ಮಕ್ಕಳು ಕೊಚ್ಚಿ ಹೋಗಿದ್ದರು. ಈ ಸಲ ಕೂಡ ಸುಮಾರು 3-4 ಮಕ್ಕಳು ಕೊಚ್ಚಿ ಹೋಗಿದ್ದಾರೆ. ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ 'ಜೀವ ಹಿಂಡುತ್ತಿರುವ ಮುರಿದ ಕಾಲುಸಂಕಗಳು' ಎಂದು ಬಂದಿದೆ. ಮತ್ತೊಂದು ದಿನಪತ್ರಿಕೆಯಲ್ಲಿ 'ದಿಮ್ಮಿ ಮೇಲೆ ಅಪಾಯದ ನಡಿಗೆ' ಎಂದು ವಿಜಯವಾಣಿ ಪತ್ರಿಕೆಯಲ್ಲಿ ಬಂದಿದೆ. ಈ ದೃಷ್ಟಿಯಲ್ಲಿ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಕನಿಷ್ಠ ಪಕ್ಷ 1-2 ವರ್ಷದಲ್ಲಾದರೂ ಕೂಡ ಯಾವುದನ್ನು ಮೊಟ್ಟ ಮೊದಲನೆಯದಾಗಿ ಮಾಡಬೇಕು ಎನ್ನತಕ್ಕಂಥದ್ದನ್ನು ಕ್ರಿಯಾ ಯೋಜನೆಯನ್ನು ತಯಾರು ಮಾಡಬೇಕು.

ಕೊನೆಯದಾಗಿ, ಬೆಂಗಳೂರು-ಮೈಸೂರು ರಸ್ತೆಗೆ ಸಂಬಂಧಪಟ್ಟ ಹಾಗೆ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ ಸುಮಾರು 117.1 ಕಿಲೋಮೀಟರ್ ಉದ್ದ ಇರತಕ್ಕಂಥ ರಸ್ತೆ. ಇದನ್ನು ದಶಪಥದ ರಸ್ತೆ ಎನ್ನುತ್ತಾರೆ. ಅಂದರೆ, 6 ಮಧ್ಯದಲ್ಲಿ median ಹೋಗತಕ್ಕಂಥ ರಸ್ತೆಗಳು, 4 ಆ ಕಡೆ ಈ ಕಡೆ ಸರ್ವಿಸ್ ರಸ್ತೆಗಳು ಇರತಕ್ಕಂಥದ್ದು. ಇದು access control, ಅಂದರೆ, ನಿಯಂತ್ರಣ ಮಾಡಿರತಕ್ಕಂಥದ್ದು. ಈ ಬೆಂಗಳೂರು-ಮೈಸೂರು ರಸ್ತೆ ಉದ್ದಕ್ಕೂ ಬಿಡದಿ, ರಾಮನಗರ, ಚೆನ್ನಪಟ್ಟಣ, ಮಂಡ್ಯ ಮತ್ತು ಶ್ರೀರಂಗಪಟ್ಟಣಕ್ಕೆ 5 ಬೈಪಾಸ್ ರಸ್ತೆಗಳನ್ನು ಮಾಡಿದ್ದಾರೆ. ಆದರೆ ಈ ಬೈಪಾಸ್ ರಸ್ತೆಗಳನ್ನು ಮಾಡಿದರೂ ಕೂಡ ಈ ಟೌನ್‌ಗಳಲ್ಲಿ ಹಾದು ಹೋಗುವಂಥದ್ದು ಬಿಡದಿ ಟೌನ್, ರಾಮನಗರ, ಚೆನ್ನಪಟ್ಟಣ, ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣಕ್ಕೆ ಹೋಗತಕ್ಕಂಥ ಹಳೇ ನ್ಯಾಷನಲ್ ಹೈವೇ ಇದೆ, ಅದನ್ನು ಇದುವರೆವಿಗೂ ಕೂಡ ಯಾರು ನಿರ್ವಹಣೆ ಮಾಡಲಲ್ಲ. 2-3 ರೀತಿಯಲ್ಲಿ ಈ ರಸ್ತೆಗಳನ್ನು ಗುತ್ತಿಗೆದಾರರು, ಈಗಿನ ನ್ಯಾಷನಲ್ ಹೈವೇ ಮಾಡತಕ್ಕಂಥವರು ಉಪಯೋಗ ಮಾಡುತ್ತಿದ್ದಾರೆ. ಟಿಪ್ಪರ್ ಹೊಡೆಯುತ್ತಾರೆ, ಜೆಲ್ಲಿ ಹೊಡೆಯುತ್ತಾರೆ, ಸಿಮೆಂಟ್ ಹೊಡೆಯುತ್ತಾರೆ, ಯಾರು ಕೂಡ ನಿರ್ವಹಣೆ ಮಾಡುತ್ತಿಲ್ಲ. ಬೈಪಾಸ್ ರಸ್ತೆ 5 ಮಾಡಿದ್ದಾರೆ. Embankment ಮಾಡಿದ್ದಾರೆ. Underpass construction ಮಾಡಿದ್ದಾರೆ. ಆದರೆ ವೃಷಭಾವತಿ, ಜಯಮಂಗಲಿ, ಶಿಂಷಾ, ಈ ನದಿಗಳಿಂದ ನೀರು ತರತಕ್ಕಂಥ ಹಳ್ಳಕೊಳ್ಳಗಳವೆಯೋ ಅದಕ್ಕೆ ಅಡ್ಡವಾಗಿ ಕಟ್ಟಿದ್ದಾರೆ. ಅರ್ಕಾವತಿಗೆ ಅಡ್ಡವಾಗಿ

ಕಟ್ಟಿದ್ದಾರೆ. ನೀರು ಸರಾಗವಾಗಿ ಹೋಗುವುದಿಲ್ಲ. Unscientific way of construction. ಯಾರೂ ಕೂಡ ಇದನ್ನು ನೋಡಲಿಲ್ಲ. ಎರಡೂ ಕಡೆ ಸರ್ವಿಸ್ ರಸ್ತೆಯನ್ನು ಮಾಡಿದ್ದಾರೆ. ಡ್ರೈನೇಜ್‌ಗಳನ್ನು ಮಾಡಿಲ್ಲ. ನೀರು ಸರಾಗವಾಗಿ ಹರಿದು ಹೋಗುವುದಿಲ್ಲ. ಇತ್ತೀಚೆಗೆ ಸಂಗನಬಸವನ ದೊಡ್ಡಿಯಲ್ಲಿ ಕೆರೆ ಹೊಡೆದು ದೊಡ್ಡ ಅನಾಹುತ ಆಯಿತು. ಅದೇ ತಾಲ್ಲೂಕಿನವರಾದ ಮಾನ್ಯ ಸಿ.ಎಂ.ಲಿಂಗಪ್ಪನವರು ಇದ್ದಾರೆ. ರಾಮನಗರದಲ್ಲಿ ಏನಾಯಿತು ಎಂಬುದನ್ನು ಮಾನ್ಯ ಎಸ್.ರವಿಯವರು ತುಂಬಾ ಚೆನ್ನಾಗಿ ಹೇಳಿದ್ದಾರೆ. ಅಲ್ಲಿ ಎರಡೂವರೆ–ಮೂರು ಗಂಟೆ ರಾತ್ರಿ ಆಗಿದ್ದರೆ 500–600 ಜನರು ಕೊಚ್ಚಿಕೊಂಡು ಹೋಗುತ್ತಿದ್ದರು. ಅದೇರೀತಿ ಮದ್ದೂರಿನಲ್ಲಿ ಬೂಕನಕೆರೆ ಹೊಡೆದು ಹೋಯಿತು. ಇವೆಲ್ಲವನ್ನು ಸರಿಯಾದ ರೀತಿಯಲ್ಲಿ ನೋಡತಕ್ಕಂಥದ್ದನ್ನು ಮಾಡಬೇಕು. ಶ್ರೀ ನಿತಿನ್ ಗಡ್ಕರಿಯವರು ಬಂದಾಗ, ಹೌದು, ಇದು ಸರಿಯಿಲ್ಲ, ಎಲ್ಲೋ ಒಂದು ಡಿಸೈನ್ ಡಿಫೆಕ್ಟ್ ಇದೆ ಎಂದು ಹೇಳಿದರು. ಇದನ್ನು ಪರಿಶೀಲನೆ ಮಾಡಬೇಕು. ಯಾರು ನೊಂದ ಸಂತ್ರಸ್ತರಿದ್ದಾರೆ, ಮೊಟ್ಟ ಮೊದಲನೆಯದಾಗಿ ರೈತರಿಗೆ, ಯಾರು ಮನೆಯನ್ನು ಕಳೆದುಕೊಂಡಿದ್ದಾರೆ, ಅವರಿಗೆ ಬೆಳೆ ಪರಿಹಾರ, ಮನೆ ಪರಿಹಾರವನ್ನು ಕೊಡಿ. ಅವರಿಗೆ ಕಾಯಿಸಬೇಡಿ. ನಿಜವಾಗಿಯೂ ಅವರ ಶಾಪ ಒಳ್ಳೆಯದಾಗುವುದಿಲ್ಲ, ಅವರಿಗೊಬ್ಬರಿಗೆ ಶಾಪ ತಟ್ಟುವುದಿಲ್ಲ, ನಮಗೂ ತಟ್ಟುತ್ತದೆ. ಆ ದೃಷ್ಟಿಯಿಂದ ನಾನು ಕಳಕಳಿಯಿಂದ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ. ಎಲ್ಲರಿಗೂ ಸರ್ಕಾರ ಪರಿಹಾರವನ್ನು ತುರ್ತಾಗಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಎಸ್.ನವೀನ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇತ್ತೀಚೆಗೆ ಸುರಿದ ಮಳೆಗೆ ಇತಿಹಾಸದಲ್ಲಿ ಹಿಂದೆಂದು ಕಾಣದಂತಹ ಹಾನಿಯಾಗಿರುವಂತಹ ಜಿಲ್ಲೆ ನಾನು ಪ್ರತಿನಿಧಿಸುವಂತಹ ಚಿತ್ರದುರ್ಗ ಜಿಲ್ಲೆ. ಅಲ್ಲಿ ಮೈಸೂರಿನ ಮಹಾರಾಜರು ಕಟ್ಟಿರುವಂತಹ ವಾಣಿವಿಲಾಸ್ ಸಾಗರ 88 ವರ್ಷಗಳ ನಂತರ ಮೊನ್ನೆ ಬಂದಂತಹ ಮಳೆಗೆ ಅದರ ಗರಿಷ್ಟ ಮಟ್ಟ 130 ಅಡಿಗಳನ್ನು ದಾಟಿ 135 ಅಡಿಗಳವರೆಗೆ ನೀರು ತುಂಬಿದೆ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಬರುವಂತಹ 4 ತಾಲ್ಲೂಕುಗಳು ಅದು ಹೊಸದುರ್ಗ ತಾಲ್ಲೂಕು, ಹಿರಿಯೂರು, ಚೆಳ್ಳಕೆರೆ ಮತ್ತು ಮೊಳಕಾಲ್ಮೂರು. **(ಮುಂದು....)**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(917) 4:50 19/09/2022 ಎಸ್‌ಪಿಆರ್/ಎಂಡಿ**

**ಶ್ರೀ ಕೆ.ಎಸ್.ನವೀನ್(ಮುಂದು):-**

ಭಾಗಶಃ ಚಿತ್ರದುರ್ಗವನ್ನೊಳಗೊಂಡಂತೆ, ಈ ನಾಲ್ಕು ತಾಲ್ಲೂಕುಗಳಲ್ಲಿರುವ ಎಲ್ಲಾ ಕೆರೆ-ಕಟ್ಟೆಗಳು, ಕಾಲುವೆಗಳು ಎಲ್ಲವೂ ಸಹ ಭರ್ತಿಗೊಂಡು, ಅಲ್ಲಿನ ಜನಜೀವನ ಸಂಪೂರ್ಣವಾಗಿ ಅಸ್ತವ್ಯಸ್ಥವಾಗಿರುವುದಲ್ಲದೇ, ಲಕ್ಷಾಂತರ ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯೂ ಸಹ ಆಗಿದೆ. ಒಂದು ಕಡೆ ಜನಜೀವನ ಅಸ್ತವ್ಯಸ್ಥಗೊಂಡು, ರೈತರ ಹೊಲಗಳಿಗೆ ಸಾಕಷ್ಟು ತೊಂದರೆಯಾಗಿದ್ದರೆ, ಮತ್ತೊಂದು ಕಡೆ ಜನರ ಬದುಕೇ ದುಸ್ತರವಾಗಿದೆ. ನಾನು ನಿನ್ನೆಯ ದಿನ, ಅಲ್ಲಿನ ಹಿಂಡಿದೇವರ ಹಟ್ಟಿ ಎನ್ನುವ ಒಂದು ಕುಗ್ರಾಮಕ್ಕೆ ಭೇಟಿ ನೀಡಿದ್ದೆನು. ಇದು ವಾಣಿವಿಲಾಸ ಸಾಗರದ ಹಿನ್ನೀರಿನ ಪ್ರದೇಶದಲ್ಲಿನ ಒಂದು ಸಣ್ಣ ಗ್ರಾಮವಾಗಿದೆ. ಇದಕ್ಕೆ ನಾನು ನಿನ್ನೆಯ ದಿನ ರಾತ್ರಿ ಭೇಟಿ ನೀಡಿದ ಸಂದರ್ಭದಲ್ಲಿ ಒಂದು ಅತ್ಯಂತ ಹೃದಯವಿದ್ರಾವಕ ಮತ್ತು ಹೃದಯ ಹಿಂಡುವ ಘಟನೆ ಜರುಗಿದ ಮನೆಗೆ ಹೋಗುವ ಅವಕಾಶವು ನನಗೆ ದೊರೆಯಿತು. ಅಲ್ಲಿನ 13 ವರ್ಷದ ಬಾಲಕ, ಏಳನೇ ತರಗತಿಯಲ್ಲಿ ಓದುತ್ತಿದ್ದ ಮಲ್ಲೇಶ ಎಂಬ ಹೆಸರಿನ ಬಾಲಕ. ಈತನು ಅತ್ಯಂತ ಚೂಟಿಯಾಗಿದ್ದು, ಮನೆಯ ಹಾಗೂ ಶಾಲೆಯಲ್ಲಿನ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದನು. ಈತನು ಮನೆಯಲ್ಲಿನ ಪ್ರತಿಯೊಂದು ಕೆಲಸವನ್ನು ಮಾಡುತ್ತಿದ್ದನು. ಇಂತಹ ಬಾಲಕನು ಅಂದಿನ ಬೆಳಗ್ಗೆ ಕುರಿಗಳನ್ನು ಮೇಯಿಸುವ ಸಲುವಾಗಿ ಒಂದಿಷ್ಟು ಕುರಿಗಳನ್ನು ಕರೆದುಕೊಂಡು ಹೋದ ಸಂದರ್ಭದಲ್ಲಿ, ಅಲ್ಲಿಯೇ ಪಕ್ಕದಲ್ಲಿ ಹರಿಯುತ್ತಿದ್ದ ಪ್ರವಾಹದ ಹಳ್ಳಕ್ಕೆ ಆತನು ಸಿಕ್ಕಿಬಿದ್ದು, ನೀರಿನಲ್ಲಿ ಮುಳುಗಿ ಹೋಗುತ್ತಾನೆ. ಆತನು ನೀರಿನಲ್ಲಿ ಮುಳುಗಿದ ಮೂರು ದಿನಗಳ ನಂತರ, ಅಂದರೆ, ನಿನ್ನೆಯ ಬೆಳಗ್ಗೆ ಅವನ ಮೃತ ದೇಹವು ಪತ್ತೆಯಾಯಿತು. ಆ ಬಾಲಕನ ಕುಟುಂಬದ ಪರಿಸ್ಥಿತಿ ಹೇಗಿದೆ ಎಂದರೆ, ಆ ಬಾಲಕನು ಅವರ ತಂದೆ-ತಾಯಿಗಳಿಗೆ ಮೂರು ಜನ ಹೆಣ್ಣು ಮಕ್ಕಳು ಹುಟ್ಟಿದ ಮೇಲೆ ಹುಟ್ಟಿದವನಾಗಿದ್ದನು. ಅವನಿಗಿಂತ ಮುಂಚೆ ಹುಟ್ಟಿದ ಮೂರು ಹೆಣ್ಣುಮಕ್ಕಳಿಗೆ ಕಣ್ಣು ಕಾಣುವುದಿಲ್ಲ; ಆ ಬಾಲಕನ ಮನೆಯೂ ಸಹ ಸರಿಯಾಗಿಲ್ಲ. ಹೀಗಾಗಿ ಆ ಬಾಲಕನು ಅವನ ಮನೆಯಲ್ಲಿನ ಎಲ್ಲಾ ಕೆಲಸಗಳನ್ನು ಬೆಳಗ್ಗೆ ಮಾಡಿಕೊಟ್ಟು, ನಂತರದಲ್ಲಿ ಶಾಲೆಗೆ ಹೋಗುತ್ತಿದ್ದನು. ಶಾಲೆಗೆ ಹೋಗುವ ಮುನ್ನ ಕುರಿಗಳನ್ನು ಮೇವಿಗಾಗಿ ಬಿಟ್ಟು ಬರುವ

ಸಂದರ್ಭದಲ್ಲಿ ಈ ದುರ್ಘಟನೆಯು ಸಂಭವಿಸಿತ್ತು. ನಿನ್ನೆಯ ದಿನ ನಾನು ಆ ಮನೆಗೆ ಹೋದ ಸಂದರ್ಭದಲ್ಲಿ, ಖಂಡಿತವಾಗಿಯೂ ಸಹ ಆ ದೇವರು ಇಷ್ಟು ಕ್ರೂರಿಯಾಗಿರುವುದಕ್ಕೆ ಸಾಧ್ಯವೇ ಎಂಬ ರೀತಿಯಲ್ಲಿ ನನಗೆ ಭಾವನೆಯಾಯಿತು.

ಅಲ್ಲಿಯೇ ಪಕ್ಕದಲ್ಲಿರುವ ಗುಡ್ಡದ ಒಂದು ಭಾಗದ ಮೇಲೆ, ಸುಮಾರು 50 ಕುರಿಗಾಹಿ ಕುಟುಂಬಗಳು ಇವೆ. ಮಳೆ ಪ್ರಾರಂಭಗೊಂಡು, ನೀರಿನ ಹರಿವು ಹೆಚ್ಚಾದ ನಂತರವೂ ಸಹ ಅವರುಗಳು ಗುಡ್ಡದಿಂದ ಮನೆಗೆ ಹಿಂದಿರುಗಲು ಸಾಧ್ಯವೇ ಆಗಿರುವುದಿಲ್ಲ. ಏಕೆಂದರೆ, ಆ ಗುಡ್ಡಕ್ಕೆ ಸಂಪರ್ಕ ಕಲ್ಪಿಸುವ ಇರುವ ಒಂದೇ ಒಂದು ರಸ್ತೆಯೂ ಸಹ ನೀರಿನಲ್ಲಿ ಕೊಚ್ಚಿಕೊಂಡು ಹೋಗಿರುತ್ತದೆ. ಇವತ್ತಿನ ದಿವಸ ಆ ಕುರಿಗಾಹಿ ಕುಟುಂಬಗಳು ತಮ್ಮ ಸ್ವಗ್ರಾಮಕ್ಕೆ ಮರಳಲು ಸಾಧ್ಯವೇ ಆಗಿರುವುದಿಲ್ಲ. ಇವರುಗಳು 15-20 ದಿನಗಳಿಂದ ಆ ಗುಡ್ಡದ ಮೇಲೆ ತಮ್ಮ ಕುರಿಗಳ ಸಮೇತ ವಾಸಿಸುತ್ತಿದ್ದಾರೆ. ಇವರುಗಳಿಗೆ ಕೇವಲ ಒಂದೇ ಒಂದು ಬಾರಿ ದೋಣಿಯಲ್ಲಿ ಅವರಿಗೆ ಅವಶ್ಯಕವಾದ ಆಹಾರ ಸಾಮಗ್ರಿಗಳನ್ನು ತಲುಪಿಸುವ ಕೆಲಸಗಳು ಆಗಿವೆ. ಇದನ್ನು ಹೊರತುಪಡಿಸಿದರೆ, ನಿನ್ನೆಯ ತನಕವೂ ಸಹ ಅವರಿಗೆ ಒಂದು ಟಾರ್ಪಾಲ್ ವ್ಯವಸ್ಥೆಯನ್ನು ಮಾಡಿರಲಿಲ್ಲ. ಆ ಕುಟುಂಬಗಳು ತಮ್ಮಗಳ ಮನೆಗಳಿಗೆ ಹಿಂದಿರುಗಲು ರಸ್ತೆಯ ವ್ಯವಸ್ಥೆಯೂ ಸಹ ಅಲ್ಲಿರುವುದಿಲ್ಲ. ಹೀಗೆ ಆ ಭಾಗದಲ್ಲಿನ ಸುಮಾರು 27 ಹಳ್ಳಿಗಳು ಜಲಾವೃತಗೊಂಡಿವೆ. ಅಲ್ಲಿನ ಅರೆಹಳ್ಳಿ ಎಂಬ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯೇ ಇಲ್ಲ. ಆ ಗ್ರಾಮದ ಶಾಲೆ, ಆಸ್ಪತ್ರೆ, ಎಲ್ಲವೂ ಸಹ ಸಂಪೂರ್ಣವಾಗಿ ಜಲಾವೃತಗೊಂಡಿವೆ. ಕಳೆದ 15 ದಿನಗಳಿಂದ ಮಳೆಯಿಂದಾದ ಪರಿಸ್ಥಿತಿಯನ್ನು ಜನಪ್ರತಿನಿಧಿಗಳಾದ ನಾವು ಆ ಗ್ರಾಮಗಳಿಗೆ ಭೇಟಿ ನೀಡದ ಸಂದರ್ಭದಲ್ಲಿ ಅಲ್ಲಿನವರು ನಮಗೆ ಘೇರಾವ್‌ನ್ನು ಹಾಕಿ, ಅವರುಗಳ ಆಕ್ರೋಶವನ್ನು ತೋಡಿಕೊಂಡ ಸಂದರ್ಭದಲ್ಲಿ,... ರಾಜಕಾರಣಿಗಳಾದ ನಾವು ದಪ್ಪ ಚರ್ಮವನ್ನು ಹೊಂದಿದ್ದು, ನಾವುಗಳು ಪದೇ ಪದೇ ಅಲ್ಲಿಗೆ ಭೇಟಿ ನೀಡುತ್ತೇವೆ. ಆದರೆ, ಅಧಿಕಾರಿಗಳಿಗೆ ಸ್ವಲ್ಪವೂ ಸಹ ಅಲ್ಲಿನ ಜನರ ಕಷ್ಟಗಳಿಗೆ ಸ್ಪಂದಿಸಬೇಕು ಎನ್ನುವ ಮಾನಸಿಕತೆ ಇಲ್ಲ. ಆ ಕುಟುಂಬಗಳಿಗೆ ಯಾವುದೇ ಇಲಾಖೆ ವತಿಯಿಂದಲೂ ಸಹ ಏನು ಮತ್ತು ಎಷ್ಟು ಪರಿಹಾರಗಳನ್ನು ಕೊಡಬೇಕು ಎನ್ನುವುದನ್ನೂ ಸಹ

ಇಲ್ಲಿಯವರೆವಿಗೂ ಮಾಡುವುದಕ್ಕಾಗಿರುವುದಿಲ್ಲ. ನಾನು ಮತ್ತು ಹೊಸದುರ್ಗ ಶಾಸಕರಾದ ಗೂಳಿಹಟ್ಟಿ ಶೇಖರ್‌ರವರು ಕೆ.ಡಿ.ಪಿ.(Karnataka Development Programme) ಸಭೆಗಳನ್ನು ಮಾಡಿದೆವು. ಆಗ ಅಲ್ಲಿನ ಅನೇಕ ಅಧಿಕಾರಿಗಳಿಗೆ ಅಲ್ಲಿನ ಬೆಳೆ ನಾಶ ಎಷ್ಟು ಆಗಿದೆ ಎನ್ನುವ ಮಾಹಿತಿಯೂ ಸಹ ಅವರಿಗೆ ಇರಲಿಲ್ಲ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ವಿನಂತಿಸಿಕೊಳ್ಳುವುದೇನೆಂದರೆ, ಸಹಾನುಭೂತಿಯಿಂದ ಮೊದಲು ಜನರ ಕಷ್ಟಗಳಿಗೆ ಸ್ಪಂದಿಸುವ ಕೆಲಸಗಳನ್ನು ಅಧಿಕಾರಿಗಳು ಮಾಡಬೇಕು. ಸರ್ಕಾರವು ಯಾವುದೇ ಪರಿಹಾರಗಳನ್ನು ನೀಡಿದರೂ ಸಹ ಅದು ಅಧಿಕಾರಿಗಳ ಹಾಗೂ ಸರ್ಕಾರದ ಬ್ಯಾಂಕ್ ಖಾತೆಗಳಲ್ಲಿ ಇರಬಾರದು; ಅದು ಜನರಿಗೆ ವಿತರಣೆಯಾಗಬೇಕು ಮತ್ತು ಪ್ರತಿದಿನವೂ ಸಹ ಮೇಲ್ದರ್ಜೆಯ ಒಬ್ಬ ಅಧಿಕಾರಿ ಅಂದರೆ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿ ಅಂತಹ ಗ್ರಾಮಗಳಿಗೆ ಭೇಟಿ ನೀಡುವ ಕೆಲಸವನ್ನು ಮಾಡಬೇಕು. ಸಂಕಷ್ಟದಲ್ಲಿರುವ ಜನರ ಬದುಕನ್ನು, ಸಾವಿರಾರು ಹೆಕ್ಟೇರ್‌ಗಳಷ್ಟು ಪ್ರದೇಶವು ನೀರಿನಲ್ಲಿ ಮುಳುಗಿ ಹೋಗಿದ್ದು, ಅವರುಗಳು ಬೆಳೆದ ಈ ವರ್ಷದ ಬೆಳೆಯು ಕೈಗೆ ಸಿಗದೇ ಹೋಯಿತು. ಆದರೂ ಸಹ ಅವರುಗಳ ಕಣ್ಣೀರುಗಳನ್ನು ಒರೆಸುವ ಕೆಲಸಗಳನ್ನು ನಾವುಗಳೆಲ್ಲರೂ ಸಹ ಅತ್ಯಂತ ಜವಾಬ್ದಾರಿಯಿಂದ ಮಾಡಬೇಕು. ಇದು ಸರ್ಕಾರದ ಮತ್ತು ಅಧಿಕಾರಿಗಳ ಕರ್ತವ್ಯವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೆಚ್ಚಿನ ಪ್ರಮಾಣದಲ್ಲಿ ಮಳೆಯು ಬರುತ್ತದೆ ಎಂಬ ಮುನ್ಸೂಚನೆಯು 5-6 ದಿನಗಳ ಮುಂಚೆಯೇ ಇರುತ್ತದೆ. ಆದರೆ, ಇದಕ್ಕೆ ಪ್ರತಿಯಾಗಿ ಯಾವುದೇ ತಯಾರಿಗಳನ್ನು ಮಾಡಿಕೊಳ್ಳುವುದಿಲ್ಲ. Low lying areas ದಲ್ಲಿ ಎಷ್ಟು ಮನೆಗಳಿವೆ, ಅವರುಗಳನ್ನು ಹೇಗೆ ಬೇರೆ ಕಡೆಗೆ ತೆಗೆದುಕೊಂಡು ಹೋಗಬೇಕು ಎನ್ನುವ ಬಗ್ಗೆ ಯಾವುದೇ ಪೂರ್ವ ನಿಯೋಜಿತ ಕೆಲಸಗಳನ್ನು ಮಾಡಿರುವುದಿಲ್ಲ. ಇತಿಹಾಸದಲ್ಲಿಯೇ ಮೊದಲನೇ ಬಾರಿಗೆ ನಮ್ಮ ಜಿಲ್ಲೆಗಳಲ್ಲಿ ಪ್ರವಾಹದ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ, ಸರ್ಕಾರಕ್ಕೆ ಮತ್ತು ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಹಾನಿಯುಂಟಾದ ಪ್ರದೇಶಗಳಿಗೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಭೇಟಿ ನೀಡುವುದರ ಮೂಲಕ ಆ ಭಾಗದ ಜನರ ಕಣ್ಣೀರನ್ನು ಒರೆಸುವ ಕೆಲಸಗಳನ್ನು ಮಾಡಬೇಕು. ನಾನು ಈಗಾಗಲೇ ಪ್ರಸ್ತಾಪಿಸಿದ ಮೃತ ಬಾಲಕನೇ ಆ ಮನೆಗೆ ಇದ್ದ ಒಂದು ಆಧಾರ ಸ್ಥಂಭವಾಗಿದ್ದನು. ಹೀಗಾಗಿ ಈತನ ಕುಟುಂಬಕ್ಕೆ

ಸರ್ಕಾರವು ಅತೀ ಹೆಚ್ಚಿನ ಪರಿಹಾರವನ್ನು ಘೋಷಿಸುವ ಕೆಲಸವನ್ನು ಸರ್ಕಾರವು ಮಾಡಬೇಕೆಂದು ನಾನು ಈ ಸದನದ ಮೂಲಕ ವಿನಂತಿಸುತ್ತೇನೆ.

ಬೆಂಗಳೂರು ಮಹಾನಗರಕ್ಕೆ ಸಂಬಂಧಪಟ್ಟಂತೆ ಒಂದೆರೆಡು ಅಂಶಗಳನ್ನು ಸದನದ ಗಮನಕ್ಕೆ ತರುವ ಪ್ರಯತ್ನವನ್ನು ಮಾಡುತ್ತೇನೆ. ಬೆಂಗಳೂರು ನಗರದಲ್ಲಿ ಕಳೆದ ಅನೇಕ ವರ್ಷಗಳಿಂದ ಎಂದೂ ಕಾಣದ ಪ್ರಮಾಣದಲ್ಲಿ ಮಳೆ ಬಂದ ಸಂದರ್ಭದಲ್ಲಿ... ಬೆಂಗಳೂರು ನಗರದ ಮಹದೇವಪುರ, ಸರ್ಜಾಪುರ ರಸ್ತೆ, ಬೊಮ್ಮನಹಳ್ಳಿ ಭಾಗಗಳಲ್ಲಿ ಇವತ್ತಿನ ದಿವಸ ಅತೀ ಹೆಚ್ಚಿನ ಪ್ರಮಾಣದಲ್ಲಿ ನೀರು ಶೇಖರಣೆಯಾಗಲು ಪ್ರಮುಖ ಕಾರಣವೇನೆಂದರೆ, ಆ ಭಾಗದ ಎಲ್ಲಾ ಕಡೆಗಳಲ್ಲಿ ಕಾಂಕ್ರೀಟ್ ರಸ್ತೆಗಳನ್ನು ಮಾಡಿ, ಎಲ್ಲಾ ಕಟ್ಟಡಗಳಲ್ಲಿ ಪೇವರ್ಸ್‌ನ್ನು ಹಾಕಿದ್ದಾರೆ. ಹೀಗಾಗಿ ಅಲ್ಲಿ ಒಂದೇ ಒಂದು ಮಳೆಯ ಹನಿಯು ಭೂಮಿಯಲ್ಲಿ ಇಂಗುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಹೀಗಾಗಿ ಅಲ್ಲಿನ ಅಷ್ಟೊಂದು ಪ್ರಮಾಣ ನೀರು ಎಲ್ಲಿಗೆ ಹೋಗುತ್ತದೆ? ಧಾರಾಕಾರವಾಗಿ ಸುರಿದ ಮಳೆಯ ನೀರಿಗೆ ಶೇಖರಣೆಯಾಗಲು ಎಲ್ಲಿ ಅವಕಾಶ ದೊರೆಯುತ್ತದೆಯೋ ಅಂತಹ ಜಾಗಗಳನ್ನು ನೀರು ಪತ್ತೆ ಮಾಡಿ ಅಲ್ಲಿಗೆ ಹೋಗಿ, ಅಲ್ಲಿನದ್ದನ್ನು ಮುಳುಗಿಸುವ ಕೆಲಸವನ್ನು ನೀರು ಮಾಡುತ್ತದೆ. ಹೀಗಾಗಿ ನಾನು ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಯಾರು ಯಾರು ಬಿಲ್ಡರ್‌ಗಳು, ಈ ರೀತಿಯ ಬೃಹತ್ ಕಟ್ಟಡಗಳನ್ನು ನಿರ್ಮಿಸಿದರೋ, ಅಂತಹ ಸಂದರ್ಭದಲ್ಲಿ ಅವರ ಪ್ಲ್ಯಾನ್‌ಗಳಿಗೆ ಅನುಮತಿಯನ್ನು ನೀಡಿದ ಅಧಿಕಾರಿಗಳನ್ನು ಹಾಗೂ ಈ ರೀತಿಯ ಕಟ್ಟಡಗಳನ್ನು ನಿರ್ಮಿಸಿದ ಬಿಲ್ಡರ್‌ಗಳನ್ನು ಕಪ್ಪು ಪಟ್ಟಿಗೆ ದಯಮಾಡಿ ಸೇರಿಸಿ, ಆ ಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟ ಮಾಡಬೇಕು. ಯಾರೂ ಸಹ ಅಂತಹವರುಗಳ ಮೂಲಕ ಯಾವುದೇ ವ್ಯವಹಾರಗಳನ್ನು ಮಾಡಬಾರದು ಎಂಬುದಾಗಿ ತಿಳಿಯಪಡಿಸಬೇಕು. ಇದರ ಜೊತೆಗೆ, ಆ ಸಂದರ್ಭದಲ್ಲಿ ಕಟ್ಟಡಗಳನ್ನು ನಿರ್ಮಿಸಿದ ಗುತ್ತಿಗೆದಾರರನ್ನೂ ಸಹ ಕಪ್ಪು ಪಟ್ಟಿಗೆ ಸೇರಿಸಬೇಕು. ಏಕೆಂದರೆ, ಯಾವುದೇ ಬಿಲ್ಡರ್ ಏನು ಬೇಕಾದರೂ ನಿರ್ಮಿಸಿ ಎಂದು ಹೇಳುತ್ತಾರೆ. ಆದರೆ, ಅವನು ಹೇಳಿದಂತೆಯೇ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ರಾಜಕಾಲುವೆ, ನಾಲೆಗಳ ಪಕ್ಕದಲ್ಲಿನ site plan approval ಗೆ

ಬಂದಿದೆ ಎಂದರೆ, ಇದು ಅಧಿಕಾರಿಗಳಿಗೆ ಒಂದು ರೀತಿಯ ಹಬ್ಬವಿದ್ದಂತೆ. ಬಫರ್ ಝೋನ್ ಬೇಕು, ಆ ಝೋನ್ ಬೇಕು, ಈ ಝೋನ್ ಬೇಕು ಎಂದು ಹೇಳಿ, ಬಫರ್ ಝೋನ್‌ನಿಂದಾಗಿ ಅವನ pocket zone ನ್ನು ಜಾಸ್ತಿ ಮಾಡುವ ಕೆಲಸಗಳನ್ನು ಬಿ.ಬಿ.ಎಂ.ಪಿ.ಯಲ್ಲಿದ್ದ ಅಧಕಾರಿಗಳು ಮಾಡಿದ್ದಾರೆ, ಹೊರತು ಈ ನೆಲದ ಕಾನೂನಿಗೆ, ಬಿ.ಬಿ.ಎಂ.ಪಿ. ಯ ಬೈಲಾಗಳಿಗೆ ಯಾವುದೇ ರೀತಿಯ ಗೌರವವನ್ನು ನೀಡುವ ಕೆಲಸಗಳನ್ನು ಯಾರೂ ಸಹ ಮಾಡಿಲ್ಲ. ಈಗ್ಗೆ 10-15 ವರ್ಷಗಳ ಹಿಂದೆ, ಬೆಂಗಳೂರು ನಗರವು ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಬೆಳೆದ ಸಂದರ್ಭದಲ್ಲಿ ಕಾನೂನಿಗೆ ಗೌರವ ಕೊಡುವ ಕೆಲಸಗಳನ್ನು ಮಾಡುವ ಪ್ರಯತ್ನಗಳನ್ನು ಯಾರೂ ಸಹ ಮಾಡಿಲ್ಲ. ಇವತ್ತಿನ ದಿವಸ ನಾವು ಬೆಂಗಳೂರು ನಗರವನ್ನು ದೂಷಣೆ ಮಾಡುವುದು ಅಲ್ಲ. ಬೆಂಗಳೂರು ನಗರವನ್ನು ಇಂತಹ ಪರಿಸ್ಥಿತಿಗೆ ತಂದ ಅಧಿಕಾರಿಗಳನ್ನು ನಾವು ದೂಷಣೆ ಮಾಡುವಂತಹದ್ದು. ಹೀಗಾಗಿ ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ವಿನಂತಿಸಿಕೊಳ್ಳುವುದೇನೆಂದರೆ,

**ಡಾ|| ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಕೇವಲ ಒಂದು ನಿಮಿಷ ಅವಕಾಶವನ್ನು ನೀಡಿ. ಸದಸ್ಯರ ಮಾತುಗಳಿಗೆ ಪೂರಕವಾಗಿ ಹೇಳುತ್ತೇನೆ.

**ಸಭಾಪತಿಯವರು:-** ಸದಸ್ಯರು ಅವರ ಮಾತುಗಳನ್ನು ಪೂರ್ಣಗೊಳಿಸಲಿ.

**ಡಾ||ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಸದಸ್ಯರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಪೂರ್ಣಗೊಳಿಸುತ್ತೇನೆ. ಇಂತಹ ಪರಿಸ್ಥಿತಿಗೆ ಕಾರಣರಾದ ಅಧಿಕಾರಿಗಳನ್ನು ಪಟ್ಟಿ ಮಾಡಿ, ಅವರುಗಳ ವಿರುದ್ಧ ಸೂಕ್ತ ಕ್ರಮಗಳನ್ನು ಜರುಗಿಸುವ ಕೆಲಸಗಳನ್ನು ಮಾಡಬೇಕು. ಇದರ ಜೊತೆಗೆ,

ಸದಸ್ಯರುಗಳಾದ ಶ್ರೀ ಹೆಚ್.ಎಸ್.ಗೋಪಿನಾಥ್ ಮತ್ತು ಶ್ರೀ ಎಸ್.ಎಲ್.ಭೋಜೇಗೌಡ ರವರುಗಳು ಮಾತನಾಡುವ ಸಂದರ್ಭದಲ್ಲಿ ಈಗಾಗಲೇ ಪ್ರಸ್ತಾಪಿಸಿದಂತೆ, "ಬ್ರ್ಯಾಂಡ್ ಬೆಂಗಳೂರು"ನ್ನು ನಾವು ಕಾಪಾಡಲೇ ಬೇಕಾಗಿದೆ. ನಮ್ಮ ರಾಜ್ಯದ ಬಂಡವಾಳಕ್ಕೆ "ಬ್ರ್ಯಾಂಡ್ ಬೆಂಗಳೂರು" ತುಂಬಾ ಅನಿವಾರ್ಯವಾಗಿದೆ. ಇಡೀ ಹೊರ ಜಗತ್ತಿಗೆ ನಾವು ನಮ್ಮ ಬೆಂಗಳೂರು ನಗರದಲ್ಲಿ ಏನೋ ಆಗಿ ಹೋಗಿದೆ ಎಂದು ಕೆಟ್ಟ ರೀತಿಯಲ್ಲಿ ತೋರಿಸದ ರೀತಿಯಲ್ಲಿ ... ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಕೋಟ್ಯಾಂತರ ರೂಪಾಯಿಗಳ ಮೌಲ್ಯದ ಹೊಸ ಕಂಪೆನಿಗಳ ಮೂಲಕ ಜನರಿಗೆ ಉದ್ಯೋಗಾವಕಾಶಗಳು ದೊರೆಯುತ್ತವೆ. ಹೀಗಾಗಿ ನಾವು ಬೆಂಗಳೂರು ನಗರದ ಹೆಸರನ್ನು ಉಳಿಸಬೇಕಾಗಿದೆ. ಹೀಗಾಗಿ ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾರು ಕಾನೂನಿನ ವಿರುದ್ಧ ಹೋಗುತ್ತಾರೋ, ಅವರು ಎಂತಹವರೇ ಆಗಿದ್ದರೂ ಸಹ, ಅವರ ವಿರುದ್ಧ ಕಠಿಣ ಕ್ರಮಗಳನ್ನು ಜರುಗಿಸುವ ಕೆಲಸಗಳನ್ನು ಮಾಡಬೇಕು. ಯಾವ ಬಿಲ್ಡರ್ ಕಾನೂನನ್ನು ಉಲ್ಲಂಘಿಸುತ್ತಾರೋ, ಯಾವ ಗುತ್ತಿಗೆದಾರರ ಅಕ್ರಮವಾಗಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದಾರೋ ಅವರ ಹೆಸರುಗಳನ್ನು ಬಹಿರಂಗಪಡಿಸಬೇಕು. ಇದರ ಜೊತೆಗೆ, ಇಂತಹ plan sanction ನ್ನು ಅನುಮೋದಿಸಿದ ಅಧಿಕಾರಿಗಳು ಯಾರು ಎಂಬುದನ್ನೂ ಸಹ ಬಹಿರಂಗಪಡಿಸಬೇಕು. ಸರ್ಕಾರವು ಯಾವುದೇ ಮುಜುಗರಕ್ಕೊಳಗಾಗದೇ, ಮಾಹಿತಿ ಬಹಿರಂಗಪಡಿಸುವ ಕೆಲಸವನ್ನು ಮಾಡಬೇಕು.

**(ಮುಂದು...)**

**(918) 19-09-2022/5-00/ಬಿಕೆಪಿ-ಎಂಡಿ**

**ಶ್ರೀ ಕೆ.ಎಸ್.ನವೀನ್(ಮುಂದು)**

ಹಾಗೂ ಈ ಒಂದು ಅವ್ಯವಸ್ಥೆಗೆ ಕಾರಣರಾದವರನ್ನು ಸಾರ್ವಜನಿಕರ ಮುಂದೆ ನಾವು ಬಯಲು ಮಾಡುವಂತಹ ಕೆಲಸವನ್ನು ಮಾಡಬೇಕೆನ್ನುವ ವಿನಂತಿಯನ್ನು ಮಾಡಿ ಮತ್ತು ಯಾರೆಲ್ಲರೂ ನೊಂದಿದ್ದಾರೆ, ಅಂತಹವರಿಗೆ ಸೂಕ್ತವಾದ ಪರಿಹಾರವನ್ನು ಕೊಡುವ ಜೊತೆ ಜೊತೆಗೆ ಮುಂದೆ ಇದೇ ರೀತಿಯಾದಂತಹ ಪರಿಸ್ಥಿತಿ ನಮ್ಮ ರಾಜ್ಯಕ್ಕೆ, ನಮ್ಮ ರಾಜಧಾನಿ ಬೆಂಗಳೂರಿಗೆ ಬಾರದೇ

ಇರುವ ರೀತಿಯಲ್ಲಿ ಸರ್ಕಾರ ಮತ್ತು ಜನ ಪ್ರತಿನಿಧಿಗಳು ಸೇರಿದಂತೆ ಎಲ್ಲರೂ ಇದರ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಇದೇ ರೀತಿಯ ಮಳೆಯು ಮುಂದೆ ಸಹ ಬರಬಹುದು. ಹವಮಾನ ವೈಪರೀತ್ಯಾ ಕಾರಣ ಇದೇ ರೀತಿಯಾದಂತಹ ಮಳೆ ಮುಂದೆಯು ಬರಬಹುದು. ಹಾಗಾಗಿ, ನಾವು ಮುಂಜಾಗ್ರತೆ ಕ್ರಮವಾಗಿ ನಮಗೆ ಏನೆಲ್ಲಾ ಬೇಕೋ ಅದನ್ನೆಲ್ಲಾ ಸಿದ್ದಪಡಿಸುವಂತಹ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಸದನವನ್ನು ನಾಳೆ ಬೆಳಗ್ಗೆ 11-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 5 ಗಂಟೆ 2 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 20ನೇ ಸೆಪ್ಟೆಂಬರ್ ಮಾಹೆ 2022ರ ಮಂಗಳವಾರದಂದು ಬೆಳಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು.)**

**<><><>**